THE BOOK WAS DRENCHED

UNIVERSAL
LIBRARY
OU_198383
UNIVERSAL
LIBRARY

**OSMANIA UNIVERSITY LIBRARY**

Call No K922 K895 Accession No K2545

Author ಸ್ವಾಮಿ ಶಾರದಾನಂದ

Title ರಾಮಕೃಷ್ಣ ಲೀಲಾಪ್ರಸಂಗ 1923

This book should be returned on or before the date last marked below

ಶ್ರೀ

# ಶ್ರೀ ರಾಮಕೃಷ್ಣ ಲೀಲಾಪ್ರಸಂಗ

## ಪೂರ್ವಕಥೆ ಮತ್ತು ಬಾಲ್ಯ ಜೀವನ

(ಶ್ರೀ ಸ್ವಾಮಿ ಶಾರದಾನಂದ ವಿರಚಿತ ವಂಗ ಗ್ರಂಥದ ಪರಿವರ್ತನ)

ಟಿ. ಎಸ್ ವೆಂಕಣ್ಣಯ್ಯ, ಎಂ ಎ,

ಬೆಂಗಳೂರು

ಫೀನಿಕ್ಸ್ ಪ್ರಿಂಟಿಂಗ್ ಹೌಸಿನಲ್ಲಿ ಮುದ್ರಿಸಲ್ಪಟ್ಟಿತು.

(ಕ್ರಯ ೧ ರೂ.)

Checked 1965

CHECKED. 1951

CHECKED 1958

Checked 1969

# ಉಪೋದ್ಘಾತ

ಈಶ್ವರ ಕೃಪೆಯಿಂದ ಶ್ರೀರಾಮಕೃಷ್ಣದೇವನ ಬಾಲ್ಯ ಜೀವನದ ಸವಿಸ್ತಾರವಾದ ವಿವರಣವು ಪ್ರಕಾಶಿತವಾಯಿತು. ಅನೇಕರ ಬಾಯಿಂದ ಆತನ ಆ ಕಾಲದ ಸಂಗತಿಗಳನ್ನು ಅಸಂಬದ್ಧವಾಗಿ ಕೇಳಿ ನಮ್ಮ ಮನಸ್ಸಿನಲ್ಲಿ ಯಾವ ಚಿತ್ರವು ಅಂಕಿತವಾಯಿತೋ ಅದರ ಪರಿಚಯವನ್ನು ಪಾಠಕರಿಗೆ ಉಂಟುಮಾಡಿ ಕೊಡಲು ಪ್ರಯತ್ನಿಸಿದ್ದೇವೆ ಶ್ರೀ ರಾಮಕೃಷ್ಣದೇವನ ಅಕ್ಕನ ಮಗ ಹೃದಯರಾಮ ಮುಖ್ಯೋಪಾಧ್ಯಾಯ, ಅಣ್ಣನ ಮಗ ರಾಮಲಾಲ ಚಟ್ಟೋಪಾಧ್ಯಾಯ ಮೊದಲಾದವರು ನಮಗೆ ಸಂಗತಿಗಳ ಕಾಲವನ್ನು ನಿರೂಪಿಸುವುದರಲ್ಲಿ ಸಾಧ್ಯವಾದ ಮಟ್ಟಿಗೆ ಸಹಾಯಮಾಡಿದರೂ ಕೆಲಕೆಲವು ಸ್ಥಳಗಳಲ್ಲಿ ಅದರಲ್ಲಿ ವ್ಯತ್ಯಾಸವಿರಬಹುದಾದ ಸಂಭವವಿತ್ತು ಏಕೆಂದರೆ ಅವರು ನಮಗೆ ಶ್ರೀ ರಾಮಕೃಷ್ಣದೇವನ ತಂದೆ ಅಣ್ಣ ಮೊದಲಾದವರ ಜನ್ಮಪತ್ರಿಕೆಗಳನ್ನು ಕೊಡಲು ಸಮರ್ಥರಾಗಿರಲಿಲ್ಲ, "ಶ್ರೀರಾಮಕೃಷ್ಣದೇವನು ಹುಟ್ಟುವ ಕಾಲದಲ್ಲಿ ಆತನ ತಂದೆಗೆ ಸುಮಾರು ೬೧, ೬೨ ವರ್ಷ ವಯಸ್ಸಾಗಿತ್ತು", "ಆತನ ಅಣ್ಣ ರಾಮಕುಮಾರನು ಆತನಿಗಿಂತಲೂ ೩೧, ೩೨ ವರ್ಷ ದೊಡ್ಡವನಾಗಿದ್ದನು"—ಈ ರೀತಿಯಾಗಿ ಸಮಯ ನಿರೂಪಣ ಮಾಡಿ ಹೇಳುತ್ತಿದ್ದರು

ಶ್ರೀ ರಾಮಕೃಷ್ಣದೇವನ ಜನನ ಸಂಬಂಧವಾಗಿ ನಾವು ಬರೆದಿರುವ ವರ್ಷ ಮಾಸ ದಿನಗಳಲ್ಲಿ ವ್ಯತ್ಯಾಸವಾಗುವುದಕ್ಕೂ ಅವಕಾಶವಿಲ್ಲವೆಂಬುದನ್ನು ಪಾಠಕರು "ಮಹಾಪುರುಷನ ಜನ್ಮಕಥೆ" ಎಂಬ ಈ ಗ್ರಂಥದ ಪಂಚಮಾಧ್ಯಾಯವನ್ನು ಓದಿ ನಿಸ್ಸಂಶಯವಾಗಿ ತಿಳಿದುಕೊಳ್ಳಬಹುದು ಆತನ ಮಾತುಗಳಿಂದಲೇ ನಾವು ಆ ಕಾಲವನ್ನು ನಿರೂಪಿಸುವುದಕ್ಕೆ ಸಮರ್ಥರಾಗಿರುವುದರಿಂದ ಈ ವಿಷಯದಲ್ಲಿ ಆತನೇ ಸರ್ವರ ಕೃತಜ್ಞತೆಗೂ ಪಾತ್ರನಾಗಿದ್ದಾನೆ ಈ ಗ್ರಂಥದಲ್ಲಿರುವ ಅನೇಕ ಸಂಗತಿಗಳನ್ನು ನಾವು ಆತನ ಬಾಯಿಂದಲೇ ಕೇಳಿದ್ದೆವು ಶ್ರೀ ರಾಮಕೃಷ್ಣ ಲೀಲಾಪ್ರಸಂಗವನ್ನು ಬರೆಯುವುದಕ್ಕೆ ಆರಂಭ ಮಾಡಿದಾಗ ನಾವು ಆತನ ಬಾಲ್ಯ ಯೌವನಗಳ ಸಂಗತಿಗಳನ್ನು ಇಷ್ಟು ವಿಶದವಾಗಿಯೂ ಸಂಬದವಾಗಿಯೂ ಬರೆಯಬಲ್ಲೆವೆಂದು ನಂಬಿರಲಿಲ್ಲ. ಆದಕಾರಣ ಮೂಕನನ್ನು ವಾಗ್ಮಿಯಾಗುವಂತೆಯೂ ಕುಂಟನನ್ನು ಪರ್ವತವನ್ನು ಲಂಘನ ಮಾಡುವಂತೆಯೂ ಮಾಡಲು ಸಮರ್ಥನಾದ ಜಗದೀಶನ ಕೃಪೆಯಿಂದಲೇ ಅದು ಸಾಧ್ಯವಾಯಿತೆಂದು ಭಾವಿಸಿ ನಾವು ಆತನಿಗೆ ಪುನಃ ಪುನಃ ಪ್ರಣಾಮ ಮಾಡುತ್ತೇವೆ ಪಾಠಕರು ಈ ಗ್ರಂಥವನ್ನು ಓದಿದ ಮೇಲೆ "ಸಾಧಕಭಾವ" "ಗುರುಭಾವ" ಗ್ರಂಥಗಳನ್ನು ಓದಿದರೆ ಶ್ರೀ ರಾಮಕೃಷ್ಣನ ಜನ್ಮಕಾಲದಿಂದ ಕ್ರಿ. ಶ ೧೮೮೧ ರ ವರೆಗಿನ ಆತನ ಜೀವನ ಚರಿತ್ರವು ಧಾರಾವಹವಾಗಿ ಬರೆಯಲ್ಪಟ್ಟಿರುವುದನ್ನು ನೋಡಬಹುದು

ಇತಿ,

**ಶಾರದಾನಂದ.**

# ಪೀಠಿಕೆ.

'ಶ್ರೀ ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆಯ' ಉಪೋದ್ಘಾತದಲ್ಲಿ ತಕ್ಕ ಪ್ರೋತ್ಸಾಹದೊರೆತರೆ 'ರಾಮಕೃಷ್ಣ ಲೀಲಾಪ್ರಸಂಗ,' 'ಕಥಾಮೃತ,' "ಸ್ವಾಮಿ ಶಿಷ್ಯಸಂವಾದ," ಆಚಾರ್ಯರ ಜೀವನಚರಿತ್ರೆಗಳೇ ಮುಂತಾದ ಧಾರ್ಮಿಕ ಗ್ರಂಥಗಳನ್ನು ಭಾಷಾಂತರಮಾಡಿ ಮಾಸಪತ್ರಿಕೆಯ ರೂಪದಲ್ಲಿ ಕನ್ನಡಿಗರಿಗೆ ಒಪ್ಪಿಸುವೆವೆಂದು ಸೂಚಿಸಿದ್ದೆವು ಪರಮಹಂಸರ ಚರಿತ್ರೆಯನ್ನು ಓದಿದವರಲ್ಲಿ ಕೆಲವರು ಮೇಲೆ ಕಂಡ ಮಾಸಪತ್ರಿಕೆಯು ಹೊರಡುವ ವಿಚಾರದಲ್ಲಿ ಬಹಳ ವಾಗಿ ಕುತೂಹಲವನ್ನು ತೋರಿಸಿದ್ದಾರೆ ಇವರಂತೆ ಇನ್ನೂ ಅನೇಕರಿಗೆ ಇದೇ ವಿಧವಾದ ಕುತೂಹಲವಿರಬಹುದೆಂದು ಊಹಿಸಿ, ಆ ಕೆಲಸವನ್ನು ಸಾಧ್ಯ ವಾದಷ್ಟು ಬೇಗ ಆರಂಭಿಸಬೇಕೆಂದು ಉದ್ದೇಶಿಸಿರುತ್ತೇವೆ ಎಂಬದಾಗಿ ಒಂದು ವರುಷಕ್ಕೆ ಹಿಂದೆಯೇ ಪ್ರಕಟನಾಪತ್ರದ ಮೂಲಕ ತಿಳಿಸಿದ್ದೆವು ಆದರೆ ಅನೇಕ ಕಾರಣಗಳಿಂದ ಕಾರ್ಯವನ್ನು ಒಡನೆಯೇ ಕೈಕೊಳ್ಳಲು ಸಾಧ್ಯವಾಗದೆ ಹೋದುದಕ್ಕಾಗಿ ವಿಷಾದಿಸುತ್ತೇವೆ ಅದೇ ಪ್ರಕಟನಾಪತ್ರದಲ್ಲಿ ಪತ್ರಿಕೆಯನ್ನು ಎರಡುತಿಂಗಳಿಗೊಂದು ಸಂಚಿಕೆಯಂತೆ ಪ್ರಕಟಿಸಬೇಕೆಂದಿದ್ದೇವೆಂದು ಸೂಚಿಸಿದ್ದ ಉದ್ದೇಶವನ್ನನುಸರಿಸಿ ಈಗ ಆ ದ್ವೈಮಾಸಿಕ ಪತ್ರಿಕೆಯ ಮೊದಲನೆಯ ಸಂಚಿಕೆ ಯನ್ನು ಶ್ರೀ ರಾಮಕೃಷ್ಣ ಪರಮಹಂಸರ ಜಯಂತ್ಯುತ್ಸವಕಾಲಕ್ಕೆ ಹೊರಡಿಸ ಲಾಗಿದೆ ಇದರಲ್ಲಿ ಶ್ರೀ ಶರಚ್ಚಂದ್ರ ಚಕ್ರವರ್ತಿಯವರ 'ಸ್ವಾಮಿ ಶಿಷ್ಯಸಂವಾದ,' ಸ್ವಾಮಿ ಶಾರದಾನಂದರವರ 'ಶ್ರೀ ರಾಮಕೃಷ್ಣ ಲೀಲಾಪ್ರಸಂಗ,' ಇವೆರಡು ಗ್ರಂಥಗಳ ಭಾಷಾಂತರವನ್ನು ಪ್ರಾರಂಭಿಸಿದೆ ಇವುಗಳಲ್ಲಿ ಮೊದಲನೆಯದ ರಿಂದ ಭರತಖಂಡಕ್ಕೆ ಸಂಬಂಧಪಟ್ಟ ಧಾರ್ಮಿಕ, ಸಾಮಾಜಿಕ ಮುಂತಾದ ನಾನಾ ವಿಚಾರಗಳ ವಿಷಯದಲ್ಲಿ ಸ್ವಾಮಿ ವಿವೇಕಾನಂದರವರಿಂದ ಉಕ್ತವಾದ ಅಭಿಪ್ರಾಯಗಳೂ, ಎರಡನೆಯದರಿಂದ ಪರಮಹಂಸರ ಧಾರ್ಮಿಕ ಜೀವನ, ಉಚ್ಚಾದರ್ಶ, ಸದ್ಬೋಧನೆ ಮುಂತಾದುವುಗಳೂ ಸ್ಪಷ್ಟವಾಗಿ ಗೊತ್ತಾಗುತ್ತವೆ.

'ಸ್ವಾಮಿ ಶಿಷ್ಯಸಂವಾದ' ದ ಪರಿವರ್ತನಕಾರರು, ಮೈಸೂರು ಓರಿಯಂಟಲ್ ಲೈಬ್ರೆರಿಯ ಕನ್ನಡ ಸ್ಪೆಷಲಿಸ್ಟ್ ಮ॥ ರಾ॥ ಎ ಆರ್. ಕೃಷ್ಣಶಾಸ್ತ್ರಿ, ಎಂ ಎ ಅವರು, 'ಶ್ರೀ ರಾಮಕೃಷ್ಣ ಲೀಲಾಪ್ರಸಂಗ' ದ ಪರಿವರ್ತನಕಾರರು, ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಅಧ್ಯಾಪಕರಾದ ಮ॥ ರಾ॥ ಟಿ ಎಸ್. ವೆಂಕಣ್ಣಯ್ಯ, ಎಂ ಎ ಅವರು, ಎಂಬ ವಿಷಯವನ್ನು ವಾಚಕರಿಗೆ ತಿಳಿಸಲು ನಮಗೆ ಸಂತೋಷವು.

ನಾವು ಪತ್ರಿಕಾರೂಪದಲ್ಲಿ ಗ್ರಂಥಗಳನ್ನು ಪ್ರಕಟಿಸುತ್ತಿರುವುದರಿಂದ ಪ್ರತಿಯೊಂದು ಸಂಚಿಕೆಯಲ್ಲಿಯೂ ಅಧ್ಯಾಯವು ಮುಗಿಯುವಕಡೆ ನಿಲ್ಲಿಸುವುದು ಆವಶ್ಯಕವು. ಆದಕಾರಣ, ಅಧ್ಯಾಯಗಳ ದೈರ್ಘ್ಯಾನುಸಾರವಾಗಿ ಪುಟಗಳ ಸಂಖ್ಯೆ ಕೆಲವು ಸಂಚಿಕೆಗಳಲ್ಲಿ ಹೆಚ್ಚಾಗಿಯೂ, ಇನ್ನು ಕೆಲವುಗಳಲ್ಲಿ ಕಡಮೆಯಾಗಿಯೂ ಇರುವುದು.

ಸಂಚಿಕೆಗಳನ್ನು ಕೂಡಿಟ್ಟು ಭಾಷಾಂತರ ಮುಗಿದಮೇಲೆ ಅವುಗಳನ್ನು ರಟ್ಟುಕಟ್ಟಿಸಿದರೆ ಅಮೂಲ್ಯವಾದ ಪುಸ್ತಕಗಳಾಗುವುವು. ಪತ್ರಿಕೆಯು ಸಕಲರಿಂದಲೂ ಗ್ರಾಹ್ಯವಾಗಬೇಕೆಂಬ ಉದ್ದೇಶವನ್ನು ಮುಂದಿಟ್ಟುಕೊಂಡು, ಚಂದಾ ಕಡಮೆಯಾದಷ್ಟು ಒಳ್ಳೆಯದೆಂದು ಭಾವಿಸಿ, ಅದನ್ನು ಮೂರು ರೂಪಾಯಿಗಳೆಂದು ಗೊತ್ತುಮಾಡಿರುತ್ತದೆ ಬಿಡಿ ಸಂಚಿಕೆಯ ಕ್ರಯ ೧೦ ಆಣೆ ಆದುದರಿಂದ ಕನ್ನಡಿಗರೆಲ್ಲರೂ ಈ ಪತ್ರಿಕೆಗೆ ಚಂದಾದಾರರಾಗಿ ನಾವು ಕೈಕೊಂಡಿರುವ ಕಾರ್ಯವನ್ನು ಸಫಲಗೊಳಿಸಬೇಕೆಂಬುದು ನಮ್ಮ ವಿನಯಪೂರ್ವಕ ವಿಜ್ಞಾಪನೆ.

೨ನೆಯ ಮಾರ್ಚಿ, ೧೯೨೨
ಬೆಂಗಳೂರು.

ಎ೯. ವೆಂಕಟೇಶಯ್ಯಂಗಾರ್



ಶ್ರೀ ರಾಮಕೃಷ್ಣ ಪರಮಹಂಸರು.

ಶ್ರೀ

# ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

## ಪೂರ್ವಕಥೆ ಮತ್ತು ಬಾಲ್ಯ ಜೀವನ

### ಅವತರಣಿಕೆ

ಧರ್ಮವೇ ಭಾರತೀಯರ ಸರ್ವಸ್ವ

ಭರತಖಂಡದ ಮತ್ತು ಇತರ ದೇಶಗಳ ಆಧ್ಯಾತ್ಮಿಕ ಭಾವ, ವಿಶ್ವಾಸಗಳನ್ನು ತೂಲನಮಾಡಿ ನೋಡಿದರೆ, ಅವುಗಳಿಗೆ ವಿಶೇಷ ಪ್ರಭೇದವಿರುವುದೆಂದು ಗೊತ್ತಾಗುತ್ತದೆ. ಈಶ್ವರ, ಆತ್ಮ, ಪರಕಾಲ ಮುಂತಾದ ಇಂದ್ರಿಯಾತೀತವಾದ ವಸ್ತುಗಳು ಪರಮಸತ್ಯವೆಂಬ ಜ್ಞಾನದಿಂದ ಅವುಗಳನ್ನು ಪ್ರತ್ಯಕ್ಷಮಾಡಿಕೊಳ್ಳಲು ಅತಿ ಪ್ರಾಚೀನ ಕಾಲದಿಂದಲೂ ಭಾರತೀಯರು ತಮ್ಮ ಸರ್ವಸ್ವವನ್ನೂ ಉಪಯೋಗಿಸಿ, ಈ ವಿಧವಾದ ಸಾಕ್ಷಾತ್ಕಾರ ಅಥವಾ ಉಪಲಬ್ಧಿಯನ್ನೇ ವ್ಯಕ್ತಿಗತ ಮತ್ತು ಜಾತಿಗತ ಸ್ವಾರ್ಥದ ಚರಮ ಉದ್ದೇಶವೆಂದು ಸಿದ್ಧಾಂತಮಾಡಿದ್ದಾರೆ. ಅವರ ಸಮಸ್ತ ಪ್ರಯತ್ನವೂ ಒಂದು ಅಪೂರ್ವವಾದ ಆಧ್ಯಾತ್ಮಿಕತೆಯಿಂದ ರಂಜಿತವಾಗಿದೆ.

ಹೀಗಿರುವುದಕ್ಕೆ ಕಾರಣ, ಮಹಾಪುರುಷರು ನಿಯಮಿತವಾಗಿ ಜನ್ಮಗ್ರಹಣ ಮಾಡುವುದು.

ಇಂದ್ರಿಯಾತೀತ ವಿಷಯಗಳಲ್ಲಿ ಈ ವಿಧವಾದ ಏಕಾಗ್ರ ಅನುರಾಗವೆಲ್ಲಿಂದಬಂತು ಎಂದು ಅದರ ಮೂಲವನ್ನು ಅನ್ವೇಷಣ ಮಾಡಿದರೆ, ದಿವ್ಯಗುಣ ವಿಶಿಷ್ಟರಾದ ಮತ್ತು ಪ್ರತ್ಯಕ್ಷಾನುಭವ ಶಾಲಿಗಳಾದ ಮಹಾಪುರುಷರು ಈ ದೇಶದಲ್ಲಿ ನಿಯತವಾಗಿ ಜನ್ಮಗ್ರಹಣಮಾಡುತ್ತ ಬಂದಿರುವುದೇ ಮುಖ್ಯವಾದ ಕಾರಣವೆಂದು ತಿಳಿಯಬರುತ್ತದೆ. ಆ ಮಹಾಪುರುಷರ ವಿಚಿತ್ರ ದರ್ಶನ, ಅಸಾಧಾರಣ ಶಕ್ತಿ ಪ್ರಕಾಶ— ಇವುಗಳನ್ನು ಸರ್ವದಾ ಪ್ರತ್ಯಕ್ಷವಾಗಿ

ನೋಡಿಯೂ ಆಲೋಚನೆ ಮಾಡಿಯೂ ಭಾರತೀಯರು ಈ ವಿಷಯಗಳಲ್ಲಿ ದೃಢ ವಿಶ್ವಾಸವುಳ್ಳವರೂ ಅನುರಾಗಸಂಪನ್ನರೂ ಆಗಿದ್ದಾರೆ. ಭಾರತದ ಜಾತೀಯ ಜೀವನವು ಈರೀತಿಯಾಗಿ ಬಹು ಪ್ರಾಚೀನಕಾಲದಿಂದಲೂ ಆಧ್ಯಾತ್ಮಿಕತೆಯ ದೃಢಭಿತ್ತಿಯಮೇಲೆ ಸಂಸ್ಥಾಪಿತವಾಗಿ, ಪ್ರತ್ಯಕ್ಷ ಧರ್ಮಲಾಭ ರೂಪವಾದ ಲಕ್ಷ್ಯದಲ್ಲಿ ದೃಷ್ಟಿಯನ್ನು ಸ್ಥಿರವಾಗಿ ಇಟ್ಟು, ಅಪೂರ್ವವಾದ ಮತ್ತು ನವೀನವಾದ ಸಮಾಜವನ್ನೂ, ಸಾಮಾಜಿಕ ಪದ್ಧತಿಗಳನ್ನೂ ಸೃಷ್ಟಿ ಮಾಡಿತು. ಜಾತಿಯೂ, ಸಮಾಜದ ಪ್ರತ್ಯೇಕ ವ್ಯಕ್ತಿಯೂ ತನ್ನ ಸ್ವಾಭಾವಿಕವಾದ ಗುಣಕ್ಕನುಸಾರವಾಗಿ ದಿನಚರಿಯ ಕೆಲಸಕಾರ್ಯಗಳನ್ನು ಮಾಡುತ್ತ ಕ್ರಮಶಃ ಉನ್ನತಿಯನ್ನು ಹೊಂದಿ, ಕೊನೆಗೆ ಧರ್ಮ ಲಾಭ ಅಥವಾ ಈಶ್ವರ ಸಾಕ್ಷಾತ್ಕಾರವನ್ನು ಸಾಧಿಸಬೇಕೆಂಬುವುದರ ಕಡೆಗೆ ಲಕ್ಷ್ಯವಿಟ್ಟುಕೊಂಡೇ ಭಾರತೀಯ ಸಮಾಜವು ನಿಯಮಗಳನ್ನೂ ಪದ್ಧತಿಗಳನ್ನೂ ನಿರ್ಮಾಣಮಾಡಿತು. ವಂಶಪಾರಂಪರ್ಯವಾಗಿ ಬಹುಕಾಲ ಈ ನಿಯಮಗಳನ್ನು ಪಾಲನಮಾಡುತ್ತಾ ಬಂದು ಭರತಖಂಡದಲ್ಲಿ ಧರ್ಮಭಾವಗಳು ಈಗಲೂ ಎಷ್ಟು ಸಚೇತನವಾಗಿರುವುವೆಂದರೆ, ತಪಸ್ಸು, ಸಂಯಮ, ತೀವ್ರ ವ್ಯಾಕುಲತೆಗಳ ಸಹಾಯದಿಂದ ಪ್ರತಿಯೊಬ್ಬ ಮನುಷ್ಯನೂ ಜಗತ್ಕಾರಣನಾದ ಈಶ್ವರನನ್ನು ಪ್ರತ್ಯಕ್ಷಮಾಡಿಕೊಳ್ಳಬಹುದೆಂದೂ ಮತ್ತು ಈಶ್ವರನೊಂದಿಗೆ ನಿತ್ಯಯುಕ್ತರಾಗಿರಬಹುದೆಂದೂ ಭಾರತೀಯರು ಈಗಲೂ ದೃಢವಾದ ನಂಬಿಕೆಯನ್ನಿಟ್ಟಿದ್ದಾರೆ.

ಭಾರತೀಯ ಧರ್ಮವು ಈಶ್ವರನ ಪ್ರತ್ಯಕ್ಷ ದರ್ಶನದ ಮೇಲೆ ಪ್ರತಿಷ್ಠಿತವಾಗಿದೆ, ಇದಕ್ಕೆ ಪ್ರಮಾಣ

ಭಗವಂತನ ಪ್ರತ್ಯಕ್ಷ ದರ್ಶನ ಲಾಭದ ಮೇಲೆಯೇ ಭಾರತೀಯ ಧರ್ಮವು ಪ್ರತಿಷ್ಠಿತವಾಗಿದೆ ಎಂಬುದನ್ನು ಸುಲಭವಾಗಿ ತಿಳಿದುಕೊಳ್ಳಬಹುದು ಧರ್ಮಸ್ಥಾಪಕರಾದ ಆಚಾರ್ಯರನ್ನು ವೈದಿಕ ಯುಗದಿಂದ ಪ್ರತಿಯೊಂದು ಕಾಲದಲ್ಲಿಯೂ ನಾವು ಹೇಗೆ ನಿರ್ದೇಶಿಸಿರುವೆವೆಂಬುದನ್ನು ಪರ್ಯಾಲೋಚಿಸಿದರೆ ಈ ವಿಷಯವು ಹೃದಯಂಗಮವಾಗಿ ಗೊತ್ತಾಗುತ್ತದೆ. ನಾವು ಅವರನ್ನು ಋಷಿ, ಆಪ್ತ, ಅಧಿಕಾರಿ, ಪ್ರಕೃತೀಲೀನ ಪುರುಷ ಇತ್ಯಾದಿಯಾಗಿ ನಿರ್ದೇಶಿಸಿರುತ್ತೇವೆ. ಅತೀಂದ್ರಿಯ ವಸ್ತುವಿನ ಸಾಕ್ಷಾತ್ಕಾರವನ್ನು ಪಡೆದು ಅಸಾಧಾರಣ ಶಕ್ತಿ ಪರಿಚಯವನ್ನು ತೋರಿಸಿರುವುದರಿಂದಲೇ ಅವರು ಈ ಹೆಸರುಗಳಿಂದ ನಿರ್ದಿಷ್ಟರಾದುದು ಎಂಬುದರಲ್ಲಿ ಸಂದೇಹವಿಲ್ಲ. ವೈದಿಕ ಯುಗದ ಋಷಿಗಳಿಂದ ಆರಂಭಮಾಡಿ ಪೌರಾಣಿಕ

ಯುಗದ ಅವತಾರ ಪುರುಷರವರೆಗೂ ಪ್ರತಿಯೊಬ್ಬರ ವಿಷಯದಲ್ಲಿಯೂ ಈ ಮಾತನ್ನು ಸಮಭಾವದಿಂದ ಹೇಳಬಹುದು.

ಭರತಖಂಡದಲ್ಲಿ ಅವತಾರವಿಶ್ವಾಸಕ್ಕೆ ಕಾರಣ, ಮತ್ತು ಅದರ ರೀತಿ

ಸಾಂಖ್ಯದರ್ಶನದಲ್ಲಿ ಹೇಳಿರುವ "ಕಲ್ಪ ನಿಯಾಮಕ ಈಶ್ವರ"

ವೈದಿಕ ಯುಗದಲ್ಲಿ ಯಾರು "ಋಷಿ" ಎಂದು ನಿರ್ದಿಷ್ಟನಾಗಿದ್ದನೋ ಆತನೇ ಕೆಲಕಾಲಾನಂತರ ಪೌರಾಣಿಕ ಯುಗದಲ್ಲಿ ಈಶ್ವರಾವತಾರವೆಂದು ಪರಿಗಣಿತನಾದನು ಎಂಬುದನ್ನು ತಿಳಿಯುವುದಕ್ಕೆ ವಿಳಂಬವಾಗುವುದಿಲ್ಲ ವೈದಿಕ ಯುಗದವರಿಗೆ ಇಂದ್ರಿಯಾತೀತವಾದ ವಸ್ತುಗಳನ್ನು ನೋಡಲು ಸಮರ್ಥರಾದವರನ್ನು ತಿಳಿಯತಕ್ಕ ಶಕ್ತಿ ಇದ್ದರೂ ಆ ಸಾಮರ್ಥ್ಯದಲ್ಲಿ ಒಬ್ಬರಿಗೊಬ್ಬರಿಗಿರುವ ತಾರತಮ್ಯವನ್ನರಿಯುವ ಶಕ್ತಿ ಇರಲಿಲ್ಲವಾದುದರಿಂದ ಅವರು ಪ್ರತಿಯೊಬ್ಬನನ್ನೂ "ಋಷಿ"ಯೆಂಬ ಒಂದೇ ಹೆಸರಿನಿಂದ ಕರೆಯುತ್ತಿದ್ದರು ಆದರೆ ಕಾಲಕ್ರಮದಲ್ಲಿ ಮನುಷ್ಯನ ಬುದ್ಧಿಯೂ ತೂಲನಾಶಕ್ತಿಯೂ ಹೆಚ್ಚಿದ ಹಾಗೆಲ್ಲಾ ಋಷಿಗಳೆಲ್ಲರೂ ಸಮಾನ ಶಕ್ತಿ ಸಂಪನ್ನರಲ್ಲವೆಂದೂ, ಅವರಲ್ಲಿ ಕೆಲವರು ಸೂರ್ಯನಂತೆಯೂ, ಕೆಲವರು ಚಂದ್ರನಂತೆಯೂ, ಕಲವರು ಉಜ್ವಲವಾದ ನಕ್ಷತ್ರದಂತೆಯೂ, ಮತ್ತೆ ಕೆಲವರು ಸಾಮಾನ್ಯವಾದ ನಕ್ಷತ್ರದಂತೆಯೂ ದೀಪ್ತಿಯುಳ್ಳವರಾಗಿ ಆಧ್ಯಾತ್ಮಿಕ ಜಗತ್ತಿನಲ್ಲಿ ಕಾಂತಿಯನ್ನು ಬೀರುತ್ತಾರೆಂದೂ ಅವರಿಗೆ ಗೊತ್ತಾಗಲಾರಂಭವಾಯಿತು. ಆಗ ಋಷಿಗಳನ್ನು ಶ್ರೇಣೀಬದ್ಧರನ್ನಾಗಿ ಮಾಡುವ ಪ್ರಯತ್ನಕ್ಕೆ ಆರಂಭವಾಯಿತು ಅವರಲ್ಲಿ ಕೆಲವರು ಆಧ್ಯಾತ್ಮಿಕ ಶಕ್ತಿಯನ್ನು ಪ್ರಕಾಶಪಡಿಸುವುದರಲ್ಲಿ ವಿಶೇಷ ಸಮರ್ಥರೆಂದು ಅಥವಾ ಆಶಕ್ತಿಗೆ ವಿಶೇಷವಾಗಿ ಅಧಿಕಾರಿಗಳೆಂದು ಸಿದ್ಧಾಂತವಾಯಿತು ಹೀಗೆ ದಾರ್ಶನಿಕ ಯುಗದಲ್ಲಿ ಒಬ್ಬೊಬ್ಬ ಋಷಿಯು "ಅಧಿಕಾರಿಕ ಪುರುಷ" ಎಂಬ ಹೆಸರನ್ನು ಪಡೆದನು. ಈಶ್ವರನ ಅಸ್ತಿತ್ವದಲ್ಲಿಯೇ ನಂಬಿಕೆಯನ್ನಿಡದಿದ್ದ ಸಾಂಖ್ಯ ಮತಾವಲಂಬಿಗಳು ಆಚಾರ್ಯ ಕಪಿಲನವರೆಗಿನ ಮಹಾ ಪುರುಷರ ಅಸ್ತಿತ್ವದಲ್ಲಿ ಮಾತ್ರ ಅಪನಂಬಿಕೆಯನ್ನು ತೋರಿಸಿಲಾರದವರಾಗಿದ್ದರು ಏಕೆಂದರೆ ಯಾರೇ ಆಗಲಿ, ಪ್ರತ್ಯಕ್ಷವಾದದ್ದನ್ನು ನಂಬದಿರುವುದು ಹೇಗೆ? ಆದುದರಿಂದ ಭಗವಾನ್ ಕಪಿಲರ ಮತ್ತು ಅವರ ಮಾರ್ಗಾವಲಂಬಿಗಳಾದ ಆಚಾರ್ಯರ ಗ್ರಂಥಗಳಲ್ಲಿ "ಅಧಿಕಾರಿ ಪುರುಷ"ರೆಲ್ಲರಿಗೂ "ಪ್ರಕೃತಿಲೀನ"ರೆಂಬ ಹೆಸರು ಕೊಟ್ಟಿರುವುದಾಗಿ ಕಂಡು

ಬರುತ್ತದೆ. ಅಸಾಧಾರಣ ಶಕ್ತಿಶಾಲಿಗಳಾದ ಇಂಥ ಪುರುಷರ ಉತ್ಪತ್ತಿಗೆ ಕಾರಣವನ್ನು ನಿರ್ಣಯಿಸಲು ಪ್ರಯತ್ನಮಾಡಿ ಅವರು ಹೀಗೆ ಹೇಳುತ್ತಾರೆ—

ಈ ತೆರದ ಮಹಾಪುರುಷರು ಪವಿತ್ರತೆ, ಸಂಯಮ ಮೊದಲಾದ ಗುಣಗಳಿಂದ ಭೂಷಿತರಾಗಿ ಪೂರ್ಣಜ್ಞಾನವನ್ನು ಹೊಂದಲು ಸಮರ್ಥರಾದರೂ, ಅವರ ಮನಸ್ಸಿನಲ್ಲಿ ಲೋಕ ಕಲ್ಯಾಣ ಸಾಧನದ ವಾಸನೆಯು ಪ್ರಬಲವಾಗಿ ನೆಲೆಸಿರುವುದರಿಂದ, ಅವರು ಅನಂತಮಹಿಮಾಯುಕ್ತವಾದ ಸ್ವಸ್ವರೂಪಗಳಲ್ಲಿ ಕೆಲಕಾಲ ಲೀನರಾಗಲಾಗುವುದಿಲ್ಲ ಆ ವಾಸನಾಬಲದಿಂದ ಸರ್ವಶಕ್ತಿಮಯಿಯಾದ ಪ್ರಕೃತಿಯ ಅಂಗದಲ್ಲಿ ಲೀನರಾಗಿ, ಪ್ರಕೃತಿಯ ಶಕ್ತಿಯನ್ನು ತಮ್ಮ ಶಕ್ತಿರೂಪದಲ್ಲಿ ಪ್ರಕಟಪಡಿಸುತ್ತಾರೆ ಹೀಗೆ ಷಡೈಶ್ವರ್ಯ ಸಂಪನ್ನರಾಗಿ ಒಂದು ಕಲ್ಪದ ಪರ್ಯಂತವೂ ಸಂಪೂರ್ಣವಾಗಿ ಲೋಕಕಲ್ಯಾಣಮಾಡಿ ಕೊನೆಗೆ ಸ್ವಸ್ವರೂಪವನ್ನು ಪಡೆಯುತ್ತಾರೆ.

ಪ್ರಕೃತಿಲೀನ ಪುರುಷರಲ್ಲಿ ಶಕ್ತಿಯ ತಾರತಮ್ಯಾನುಸಾರವಾಗಿ ಸಾಂಖ್ಯಾಚಾರ್ಯರು "ಕಲ್ಪನಿಯಾಮಕ ಈಶ್ವರ," "ಈಶ್ವರ ಕೋಟಿ" ಎಂಬ ಎರಡು ಶ್ರೇಣಿಗಳನ್ನು ನಿರ್ದೇಶಿಸುತ್ತಾರೆ.

**ಭಕ್ತಿಯುಗದ ವಿರಾಟ ಅಸ್ತಿತ್ವವಂತನಾದ ಈಶ್ವರ**

ದಾರ್ಶನಿಕಯುಗವು ಮುಗಿದಮೇಲೆ ಪೌರಾಣಿಕ ಯುಗವು ಆರಂಭವಾಗಿ ವಿಶೇಷ ಪ್ರಾಬಲ್ಯಕ್ಕೆ ಬಂತು. ವೇದಾಂತದ ಗಂಭೀರವಾದ ಸಿಂಹಗರ್ಜನೆಯಿಂದ ಭಾರತೀಯರು ಸಮಸ್ತ ವ್ಯಕ್ತಿಗಳ ಸಮಷ್ಟೀಭೂತವಾದ ವಿರಾಟ್‌ವ್ಯಕ್ತಿತ್ವವಂತನಾದ ಈಶ್ವರನಲ್ಲಿ ವಿಶ್ವಾಸವುಳ್ಳವರಾಗಿ ಅನನ್ಯಭಕ್ತಿಯ ಸಹಾಯವೊಂದರಿಂದಲೇ ಆತನ ಉಪಾಸನೆಯನ್ನು ಮಾಡಿ ಜ್ಞಾನ ಮತ್ತು ಯೋಗಗಳ ಪೂರ್ಣತೆಯನ್ನು ಪಡೆಯಬಹುದೆಂಬ ವಿಷಯದಲ್ಲಿ ಶ್ರದ್ಧೆಯುಳ್ಳವರಾದರು. ಆದುದರಿಂದ ಸಾಂಖ್ಯದರ್ಶನೋಕ್ತ "ಕಲ್ಪನಿಯಾಮಕ ಈಶ್ವರ"ನನ್ನು ಆಗ ನಿತ್ಯ ಶುದ್ಧ ಬುದ್ಧ ಮುಕ್ತಸ್ವಭಾವ ವಿಶಿಷ್ಟನಾದ ಮತ್ತು ವಿರಾಟ್ ವ್ಯಕ್ತಿತ್ವವಂತನಾದ ಈಶ್ವರನ ಆಂಶಿಕ ಅಥವಾ ಪೂರ್ಣಪ್ರಕಾಶದಿಂದ ಪರಿಣತನನ್ನಾಗಿ ಭಾವಿಸಲು ವಿಳಂಬವಾಗಲಿಲ್ಲ. ಈರೀತಿಯಾಗಿ ಪೌರಾಣಿಕಯುಗದಲ್ಲಿ ಅವತಾರವಿಶ್ವಾಸವು ಉತ್ಪತ್ತಿಯಾಯಿತು, ವೈದಿಕಯುಗದ ಸರ್ವಗುಣೋಪೇತರಾದ ಋಷಿಗಳಿಗೆ ಈಶ್ವರಾವತಾರತ್ವವು ಕೊಡಲ್ಪಟ್ಟಿತು. ಹೀಗಿರುವುದ

ರಿಂದ, ಅಸಾಧಾರಣವಾದ ಆಧ್ಯಾತ್ಮಿಕಶಕ್ತಿಯನ್ನು ಹೊಂದಿದ ಮಹಾಪುರುಷರ ಆವಿರ್ಭಾವದರ್ಶನದಿಂದಲೇ ಭಾರತೀಯರು ಕಾಲಕ್ರಮವಾಗಿ ಈಶ್ವರಾವತಾರತ್ವದಲ್ಲಿ ವಿಶ್ವಾಸ ಉಳ್ಳವರಾದರೆಂದೂ, ಅಂತಹ ಮಹಾಪುರುಷರ ಅತೀಂದ್ರಿಯದರ್ಶನ, ಅನುಭವಾದಿಗಳ ಮೇಲೆಯೇ ಭಾರತೀಯ ಧರ್ಮದ ಸುದೃಢವಾದ ಸೌಧವು ಕ್ರಮಕ್ರಮವಾಗಿ ಎದ್ದು ತುಷಾರಮಂಡಿತ ಹಿಮಾಚಲದಂತೆ ಗಗನಸ್ಪರ್ಶಿಯಾಯಿತೆಂದೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಮನುಷ್ಯಜೀವನದ ಸರ್ವೋಚ್ಚ ಉದ್ದೇಶವನ್ನು ಸಾಧಿಸಿ ಜ್ಞಾನವನ್ನು ಹೊಂದಿದವರಾದುದರಿಂದ ಇಂಥಾ ಮಹಾಪುರುಷರನ್ನು "ಆಪ್ತ"ರೆಂದು ನಿರ್ದೇಶಿಸಿ, ಅವರ ಮಾತುಗಳಲ್ಲಿ ಜ್ಞಾನದ ಪರಾಕಾಷ್ಠೆಯನ್ನು ನೋಡಿ ಅವನ್ನು "ವೇದ"ವೆಂದು ಕರೆದರು.

ಗುರೂಪಾಸನೆಯು ಅವತಾರವಿಶ್ವಾಸದ ಮತ್ತೊಂದುಕಾರಣ

ಋಷಿಗಳೆಲ್ಲರನ್ನೂ ಈಶ್ವರಾವತಾರರೆಂದು ಪರಿಗಣಿಸುವುದಕ್ಕೆ ಇರುವ ಮತ್ತೊಂದು ಪ್ರಧಾನಕಾರಣ, ಗುರೂಪಾಸನೆ ವೇದ ಉಪನಿಷತ್ತುಗಳ ಕಾಲದಿಂದಲೂ ಭಾರತೀಯರು ಜ್ಞಾನದಾತರಾದ ಗುರುಗಳನ್ನು ವಿಶೇಷ ಶ್ರದ್ಧೆಯಿಂದ ಉಪಾಸನೆ ಮಾಡುತ್ತಿದ್ದರು ಮಾನವನಲ್ಲಿ ಅತೀಂದ್ರಿಯವಾದ ಈಶ್ವರೀ ಶಕ್ತಿಯು ಆವಿರ್ಭಾವವಾಗದಿದ್ದರೆ, ಅವರೆಂದಿಗೂ ಗುರುಪದವಿಯನ್ನು ಹೊಂದಲು ಸಮರ್ಥರಾಗುತ್ತಿರಲಿಲ್ಲವೆಂದು ಆ ಉಪಾಸನೆಯೇ ಕಾಲಕ್ರಮದಲ್ಲಿ ಅವರಿಗೆ ಬೋಧಿಸಿತು. ಸಾಮಾನ್ಯ ಮಾನವ ಜೀವನದ ಸ್ವಾರ್ಥಪರತೆಯನ್ನೂ, ಯಥಾರ್ಥ ಗುರುಗಳ ಅಹೇತುಕ ಕರುಣೆ, ಲೋಕಹಿತಾಚರಣೆಗಳನ್ನೂ ಹೋಲಿಸಿ ನೋಡಿ ಅವರನ್ನು ಮೊದಲು ಮೊದಲು ಬೇರೆಯೊಂದು ಉಚ್ಚಶ್ರೇಣಿಯ ಮಾನವರೆಂದು ಪೂಜೆ ಮಾಡುತ್ತಿದ್ದರು ಅನಂತರದಲ್ಲಿ ಆಸ್ತಿಕ್ಯ, ಶ್ರದ್ಧೆ, ಭಕ್ತಿ ಇವುಗಳು ಅವರ ಮನಸ್ಸಿನಲ್ಲಿ ಘನೀಭೂತವಾಗಿ, ಯಥಾರ್ಥಗುರುಗಳ ಅಲೌಕಿಕವಾದ ಶಕ್ತಿಯ ಪ್ರಕಾಶವನ್ನು ಪ್ರತ್ಯಕ್ಷವಾಗಿ ನೋಡಿದಷ್ಟು ಆ ಮಹಾಪುರುಷರ ದೇವತ್ವದಲ್ಲಿ ಅವರಿಗೆ ದೃಢವಿಶ್ವಾಸವು ಬೆಳೆಯಿತು ಭವರೋಗದಿಂದ ಮುಕ್ತರಾಗುವುದಕ್ಕಾಗಿ ಅವರು ಎಷ್ಟೋ ದಿನಗಳಿಂದ ಕರುಣಾಪೂರ್ಣನಾದ ದಕ್ಷಿಣಾಮೂರ್ತಿಯ ಹತ್ತಿರ, "ರುದ್ರಯತ್ತೇ ದಕ್ಷಿಣಮುಖಂ ತೇನಮಾಂ ಪಾಹಿನಿತ್ಯಂ" ಎಂದು ಸಹಾಯವನ್ನು ಪ್ರಾರ್ಥಿಸುತ್ತಿದ್ದರು, ಆ ಭಗವಂತನೇ ಗುರುಗಳ ರೂಪವಾಗಿ ಅವರ ಹತ್ತಿರಕ್ಕೆ ಬಂದಿರುವನೆಂದೂ, ಭಗವಂತನ ಕರುಣೆಯೇ ಗುರು ಶಕ್ತಿ

ರೂಪದಲ್ಲಿ ಮೂರ್ತಿವತ್ತಾಗಿ ತಮ್ಮ ಎದುರಿಗೆ ಪ್ರಕಾಶಿತವಾಗಿದೆಯೆಂದೂ ಅವರು ತಿಳಿದುಕೊಂಡರು.

**ವೇದ ಮತ್ತು ಸಮಾಧಿ ಸ್ಥಿತಿಯಲ್ಲಿ ಆಗುವ ದರ್ಶನ—ಇವುಗಳ ಆಧಾರದ ಮೇಲೆ ಯೇ ಅವತಾರ ವಾದದ ಭಿತ್ತಿಯು ಪ್ರತಿಷ್ಠಿತವಾಗಿದೆ**

ಗುರೂಪಾಸನೆಯಲ್ಲಿ ಮನಸ್ಸು ಇಷ್ಟು ದೂರ ಮುಂದುವರಿದ ಮೇಲೆ, ಯಾವ ಮಹಾತ್ಮರನ್ನಾಶ್ರಯಿಸಿ ಆ ಶಕ್ತಿಯು ಪ್ರಕಟಿತವಾಗಲಾರಂಭಿಸಿತೋ ಅವರನ್ನು ಜ್ಞಾನಪ್ರದನಾದ ದಕ್ಷಿಣಾಮೂರ್ತಿಯೊಂದಿಗೆ ಅಭಿನ್ನಭಾವದಲ್ಲಿ ನೋಡುವುದಕ್ಕೆ ಹೆಚ್ಚು ಕಾಲ ಬೇಕಾಗಲಿಲ್ಲ. ಈ ರೀತಿಯಾಗಿ ಆಚಾರ್ಯೋಪಾಸನೆಯು, ಕಾಲಕ್ರಮದಲ್ಲಿ ಅವತಾರವಾದವು ಹುಟ್ಟುವುದಕ್ಕೂ ಪರಿಪುಷ್ಟವಾಗುವುದಕ್ಕೂ ಸಹಾಯ ಮಾಡಿತೆಂದು ಪ್ರತೀತಿ ಇದೆ. ಆದುದರಿಂದ, ಅವತಾರವಾದವು ಸ್ಪಷ್ಟವಾಗಿ ಕಾಣಿಸುವುದು ಪೌರಾಣಿಕ ಯುಗದಲ್ಲಿಯೇ. ಆದರೂ ಅದರ ಮೂಲತತ್ತ್ವವು ವೈದಿಕ ಯುಗದಿಂದಲೂ ಅಧಿಕಾರ ಮಾಡುತ್ತಿತ್ತೆಂದು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ. ವೇದ, ಉಪನಿಷತ್ತು, ದರ್ಶನಗಳ ಕಾಲದಲ್ಲಿ ಕಂಡುಬರುವ ಈಶ್ವರನ ಗುಣ, ಕರ್ಮ, ಸ್ವಭಾವ ಸಂಬಂಧವಾದ ಅಭಿಜ್ಞತೆಯೇ ಪೌರಾಣಿಕ ಯುಗದಲ್ಲಿ ಸ್ಪಷ್ಟವಾದ ಆಕಾರವನ್ನು ಧಾರಣಮಾಡಿ ಅವತಾರವಿಶ್ವಾಸರೂಪವಾಗಿ ವ್ಯಕ್ತವಾಯಿತು, ಅಥವಾ ಸಂಯಮತಪಸ್ಯಾದಿಗಳ ಸಹಾಯದಿಂದ ಔಪನಿಷದಿಕ ಯುಗದಲ್ಲಿ ಮಾನವನು 'ನೇತಿ ನೇತಿ' ಮಾರ್ಗವನ್ನನುಸರಿಸಿ ನಿರ್ಗುಣ ಬ್ರಹ್ಮೋಪಾಸನೆಯಲ್ಲಿ ಸಾಫಲ್ಯವನ್ನು ಹೊಂದಿ, ಸಮಾಧಿ ರಾಜ್ಯದಿಂದ ವಿಲೋಮ ಮಾರ್ಗವನ್ನನುಸರಿಸಿ ಇಳಿದು ಬಂದು, ಸಮಗ್ರ ಜಗತ್ತನ್ನು ಬ್ರಹ್ಮಪ್ರಕಾಶವೆಂದು ನೋಡುವುದಕ್ಕೆ ಯಾವಾಗ ಸಮರ್ಥನಾದನೋ, ಆಗಲೇ ಸಗುಣವಿರಾಟ್‌ಬ್ರಹ್ಮ ಅಥವಾ ಈಶ್ವರನಲ್ಲಿ ಅವನಿಗೆ ಪ್ರೇಮಭಕ್ತಿಗಳುಂಟಾಗಿ ಅವನು ಈಶ್ವರೋಪಾಸನೆಯಲ್ಲಿ ಪ್ರವೃತ್ತನಾದನು, ಮತ್ತು ಆಗಲೇ ಅವನು ಈಶ್ವರನ ಗುಣಕರ್ಮ ಸ್ವಭಾವಾದಿಗಳ ಸಂಬಂಧದಲ್ಲಿ ಒಂದು ಸ್ಥಿರವಾದ ಸಿದ್ಧಾಂತವನ್ನು ಮಾಡಿ ಈಶ್ವರನು ವಿಶೇಷಭಾವದಿಂದ ಅವತಾರಮಾಡುವನೆಂಬುದರಲ್ಲಿ ನಂಬಿಕೆಯುಳ್ಳವನಾದನು.

**ಈಶ್ವರನ ಕರುಣೆಯ ಉಪಲಬ್ಧಿಯಿಂದಲೇ ಪೌರಾಣಿಕ ಯುಗ**

ಭರತಖಂಡದಲ್ಲಿ ಅವತಾರವಿಶ್ವಾಸವು ಪೌರಾಣಿಕ ಯುಗದಲ್ಲಿಯೇ ವಿಶೇಷವಾಗಿ ಪ್ರಕಟಿತವಾಯಿತೆಂದು ಹಿಂದೆಯೇ ಹೇಳಿದ್ದೇವಷ್ಟೆ. ಆ ಯುಗದ ಆಧ್ಯಾತ್ಮಿಕ ವಿಕಾಸ

**ದಲ್ಲಿ ಅವತಾರ ವಾದವು ಪ್ರಚಾರ ವಾದುದ.**

ದಲ್ಲಿ ಅನೇಕ ದೋಷಗಳಿದ್ದರೂ, ಅವತಾರ ಮಹಿಮಾ ಪ್ರಕಾಶದಲ್ಲಿ ಮಾತ್ರ ಅದರ ವಿಶೇಷತ್ವವೂ ಮಹತ್ವವೂ ಸ್ಪಷ್ಟವಾಗಿ ಹೃದಯಂಗಮವಾಗುತ್ತವೆ. ಅದಕ್ಕೆ ಕಾರಣ ವೇನೆಂದರೆ, ಅವತಾರ ವಿಶ್ವಾಸವನ್ನು ಅವಲಂಬನ ಮಾಡಿಯೇ ಮನುಷ್ಯನು ಸಗುಣಬ್ರಹ್ಮದ ನಿತ್ಯಲೀಲಾವಿಲಾಸಗಳನ್ನು ತಿಳಿಯಲು ಸಮರ್ಥನಾದುದು. ಇದರಿಂದಲೇ ಅವನಿಗೆ ಗೊತ್ತಾದ ಮತ್ತೊಂದು ಅಂಶವೇನೆಂದರೆ, ತಾನು ಎಷ್ಟು ಕಾಲ ಎಷ್ಟು ದುರ್ನೀತಿಪರಾಯಣನಾದರೂ ಭಗವಂತನ ಅಪಾರಕರುಣೆಯು ತನ್ನನ್ನು ಬಹುಕಾಲ ವಿನಾಶಮಾರ್ಗದಲ್ಲಿ ಎಂದಿಗೂ ಹೋಗಗೊಡುವುದಿಲ್ಲ ವೆಂದೂ, ಆ ಕೃಪೆಯು ರೂಪವನ್ನು ತಾಳಿ ಯುಗಯುಗದಲ್ಲಿಯೂ ಆವಿರ್ಭಾವ ವಾಗುವುದೆಂದೂ, ಮತ್ತು ತನ್ನ ಸ್ವಭಾವಕ್ಕೆ ಅನುಗುಣವಾದ ಹೊಸ ಹೊಸ ಆಧ್ಯಾತ್ಮಿಕ ಮಾರ್ಗಗಳನ್ನು ತೋರಿಸಿ ತನಗೆ ಧರ್ಮಲಾಭವು ಸುಗಮವಾಗು ವಂತೆ ಮಾಡಿಕೊಡುವುದೆಂದೂ ತಿಳಿದಿದ್ದನು

**ಅವತಾರಪುರುಷರ ದಿವ್ಯಸ್ವಭಾವ ಸಂಬಂಧವಾಗಿ ಶಾಸ್ತ್ರೋಕ್ತಿಯ ಸಾರಸಂಕ್ಷೇಪ**

ಅಮಿತಗುಣ ಸಂಪನ್ನರಾದ ಅವತಾರಪುರುಷರ ದಿವ್ಯ ಜನ್ಮಕರ್ಮಾದಿಗಳ ವಿಚಾರವಾಗಿ ಸ್ಮೃತಿ ಪುರಾಣಗಳಲ್ಲಿ ಉಕ್ತವಾಗಿರುವ ಅಂಶಗಳ ಸಾರವನ್ನು ಸಂಕ್ಷೇಪವಾಗಿ ಇಲ್ಲಿ ಹೇಳುವುದು ತಪ್ಪಾಗಲಾರದು ಅವು ತಿಳಿಸುವುದೇ ನೆಂದರೆ—ಅವತಾರ ಪುರುಷನು ಈಶ್ವರನಂತೆ ನಿತ್ಯಶುದ್ಧ ಬುದ್ಧ ಮುಕ್ತ ಸ್ವಭಾವವುಳ್ಳವನು, ಕರ್ಮದಿಂದ ಆತನು ಎಂದಿಗೂ ಬದ್ಧನಾಗುವುದಿಲ್ಲ, ಏಕೆಂದರೆ ಆತನು ಹುಟ್ಟಿದಂದಿನಿಂದಲೂ ಆತ್ಮಾರಾಮನಾಗಿರುತ್ತಾನೆ, ಐಹಿಕ ಭೋಗಸುಖಲಾಭಕ್ಕಾಗಿ ಸಾಮಾನ್ಯರಲ್ಲಿರುವಂತೆ ಸ್ವಾರ್ಥಪರತೆಯ ಪ್ರಯತ್ನವು ಆತನಲ್ಲಿ ಎಂದಿಗೂ ಉಂಟಾಗುವುದಿಲ್ಲ, ಶರೀರಧಾರಣ ಮಾಡಿದಂದಿನಿಂದಲೂ ಆತನ ಎಲ್ಲಾ ಪ್ರಯತ್ನಗಳೂ ಲೋಕ ಕಲ್ಯಾಣ ನಿಮಿತ್ತವಾಗಿಯೇ ಇರುತ್ತವೆ. ಇದೂ ಅಲ್ಲದೆ ಆತನು ಮಾಯೆಯ ಅಜ್ಞಾನದಿಂದ ಎಂದಿಗೂ ಬದ್ಧನಾಗದಿರು ವುದರಿಂದ ಹಿಂದಿನ ಜನ್ಮಗಳಲ್ಲಿ ಅನುಷ್ಠಾನಮಾಡಿದ ಕರ್ಮಗಳನ್ನು ಆತನು ಮರೆಯುವುದಿಲ್ಲ.

**ಅವತಾರಪುರುಷರ ಅಖಂಡಸ್ಮೃತಿಶಕ್ತಿ.**

"ಹಾಗಾದರೆ ಈ ವಿಧವಾದ ಅಖಂಡಸ್ಮೃತಿಯು ಅವ ರಲ್ಲಿ ಶೈಶವದಿಂದಲೂ ಇರುತ್ತದೆಯೆ?" ಎಂದು ಪ್ರಶ್ನೆ

ಹುಟ್ಟಬಹುದು. ಇದಕ್ಕೆ ಉತ್ತರವಾಗಿ ಪುರಾಣಕಾರರು ಹೀಗೆ ಹೇಳುತ್ತಾರೆ— ಆ ಸ್ಮೃತಿಯು ಅವರಲ್ಲಿ ಅಂತಸ್ಥವಾಗಿ ಇದ್ದರೂ ಶೈಶವದಲ್ಲಿ ಅದು ಪ್ರಕಾಶವಾಗುವುದಿಲ್ಲ, ಶರೀರ ಮನೋ ರೂಪವಾದ ಯಂತ್ರಗಳೆರಡೂ ಪುಷ್ಟವಾದ ಕೂಡಲೆ ಅನಾಯಾಸವಾಗಿ ಅಥವಾ ಅತ್ಯಲ್ಪ ಆಯಾಸದಿಂದ ಆ ಸ್ಮೃತಿಯುಂಟಾಗುತ್ತದೆ ಅವರ ಪ್ರತಿಯೊಂದು ಕಾರ್ಯದಿಂದಲೂ ಈ ವಿಷಯವು ಗೊತ್ತಾಗುತ್ತದೆ. ಹೀಗಾಗುವುದಕ್ಕೆ ಕಾರಣವೇನಂದರೆ, ಮನುಷ್ಯ ಶರೀರವನ್ನು ಧಾರಣಮಾಡಿದಾಗ ಅವರ ಸಮಸ್ತ ಕಾರ್ಯಗಳೂ ಸರ್ವಥಾ ಮನುಷ್ಯರಂತೆಯೇ ಇರುತ್ತವೆ.

**ಅವತಾರಪುರುಷರ ನವಧರ್ಮಸ್ಥಾಪನೆ**

ಹೀಗೆ ಶರೀರ ಮನಸ್ಸುಗಳು ಪೂರ್ಣತೆಯನ್ನು ಹೊಂದಿದ ಕೂಡಲೆ, ಅವತಾರ ಪುರುಷರು ತಮ್ಮ ಜೀವನದ ಉದ್ದೇಶವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುತ್ತಾರೆ ಅಷ್ಟೇ ಅಲ್ಲ, ಆ ಉದ್ದೇಶವು ಸಫಲವಾಗುವುದಕ್ಕೆ ಪ್ರಯೋಜನಕಾರಿಯಾದುವೆಲ್ಲವೂ ಎಲ್ಲಿಂದಲೋ ತಾವಾಗಿ ಬಂದು ಅವರನ್ನು ಸೇರುತ್ತವೆ. ಸಾಮಾನ್ಯ ಜನರಿಗೆ ಯಾವ ದಾರಿಯು ಸರ್ವದಾ ಅಂಧಕಾರಮಯವಾಗಿರುವಂತೆ ಕಾಣುತ್ತದೆಯೋ ಅದೇ ದಾರಿಯು ಅವತಾರಪುರುಷರಿಗೆ ಉಜ್ಜ್ವಲವಾದ ಬೆಳಕಿನಿಂದ ಕೂಡಿದುದಾಗಿ ಕಂಡುಬರುವುದರಿಂದ ಅವರು ನಿರಾಲೋಚನೆಯಿಂದ ಜೀವನಪಥದಲ್ಲಿ ನಡೆದು, ತಮ್ಮ ಉದ್ದೇಶದಲ್ಲಿ ಸಾಫಲ್ಯವನ್ನು ಪಡೆದು, ಇತರರಿಗೆ ದಾರಿಯನ್ನು ತೋರಿಸುತ್ತಾರೆ. ಈ ರೀತಿಯಾಗಿ ಅವರು ಮಾಯಾತೀತವಾದ ಬ್ರಹ್ಮಸ್ವರೂಪವನ್ನೂ ಜಗತ್ಕಾರಣನಾದ ಈಶ್ವರನನ್ನೂ ಅರಿಯುವುದಕ್ಕೆ ಅಪೂರ್ವವಾದ ನೂತನಮಾರ್ಗಗಳನ್ನು ಯುಗಯುಗದಲ್ಲಿಯೂ ಪುನಃ ಪುನಃ ತೋರಿಸುತ್ತಾರೆ.

**ಅವತಾರಪುರುಷರ ಆವಿರ್ಭಾವಸಂಬಂಧವಾದ ಶಾಸ್ತ್ರೋಕ್ತಿ**

ಪುರಾಣಕಾರರು ಅವತಾರಪುರುಷರ ಗುಣಕರ್ಮಸ್ವಭಾವಾದಿಗಳನ್ನು ನಿರ್ಣಯಮಾಡಿ ಅಷ್ಟರಿಂದಲೇ ತೃಪ್ತರಾಗಲಿಲ್ಲ, ಅವರ ಆವಿರ್ಭಾವ ಕಾಲವನ್ನೂ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಅವರು ಹೇಳಿರುವುದೇನೆಂದರೆ—ಸನಾತನವಾದ ಸಾರ್ವಜನಿಕ ಧರ್ಮಕ್ಕೆ ಯಾವಾಗ ಕಾಲಪ್ರಭಾವದಿಂದ ಗ್ಲಾನಿಯುಂಟಾಗುವುದೋ, ಜನರು ಯಾವಾಗ ಮಾಯೆಯಿಂದುಂಟಾದ ಅಜ್ಞಾನದ ಅನಿರ್ವಚನೀಯ ಪ್ರಭಾವದಿಂದ ಮುಗ್ಧರಾಗಿ ಐಹಿಕಭೋಗಸುಖವೇ ಸರ್ವಸ್ವವೆಂದು

ತಿಳಿದು ಜೀವನವನ್ನು ನಡೆಸುತ್ತಾರೆಯೋ, ಇಂದ್ರಿಯಾತೀತವಾದ ಮತ್ತು ನಿತ್ಯವಾದ ಆತ್ಮ, ಈಶ್ವರ, ಮುಕ್ತಿ, ಮೊದಲಾದವುಗಳನ್ನೆಲ್ಲಾ ಯಾವುದೋ ಒಂದು ಭ್ರಮಾಂಧವಾದ ಕಾಲದ ಸ್ವಪ್ನರಾಜ್ಯದ ಕವಿಕಲ್ಪನೆಯೆಂದು ಭಾವಿಸುತ್ತಾರೆಯೋ, ಯಾವಾಗ ಸ್ವಸಾಮರ್ಥ್ಯ, ಬುದ್ಧಿಕೌಶಲಗಳನ್ನೆಲ್ಲಾ ವ್ಯಯಮಾಡಿ ಎಲ್ಲಾ ವಿಧವಾದ ಐಶ್ವರ್ಯ ಇಂದ್ರಿಯ ಸುಖಗಳನ್ನು ಅನುಭವಿಸಿದರೂ ಮನಸ್ಸಿನಲ್ಲಿ ತೋರುವ ಯಾವುದೋ ಒಂದು ಅಭಾವನ್ನು ದೂರಮಾಡಲು ಅಸಮರ್ಥರಾಗಿ, ಅಂಧಕಾರದಿಂದ ಆವೃತವಾದ ದಡವಿಲ್ಲದ ಅಶಾಂತಿಯ ಪ್ರವಾಹದಲ್ಲಿ ಬಿದ್ದು, ಸಂಕಟದಿಂದ ಹಾಹಾಕಾರ ಮಾಡುವರೋ, ಆಗಲೇ ಭಗವಂತನು ತನ್ನ ಮಹಿಮೆಯಿಂದ ಸನಾತನಧರ್ಮವನ್ನು ರಾಹುಗ್ರಾಸದಿಂದ ಬಿಡುಗಡೆ ಹೊಂದಿದ ಚಂದ್ರನಂತೆ ಕಾಂತಿಯುಕ್ತವಾಗುವಂತೆ ಮಾಡುವುದಕ್ಕಾಗಿ ದುರ್ಬಲನಾದ ಮನುಷ್ಯನ ಮೇಲಿನ ಕೃಪೆಯಿಂದ ದೇಹಧಾರಣಮಾಡಿ ಅವನ ಕೈಯನ್ನು ಹಿಡಿದುಕೊಂಡು ಅವನನ್ನು ಪುನಃ ಧರ್ಮಮಾರ್ಗಕ್ಕೆ ಕರೆದೊಯ್ಯುತ್ತಾನೆ ಕಾರಣವಿಲ್ಲದೆ ಕಾರ್ಯೋತ್ಪತ್ತಿಯಾಗುವುದು ಅಸಂಭವ, ಸಾರ್ವಜನಿಕವಾದ ಅಭಾವವನ್ನು ದೂರಮಾಡುವ ಪ್ರಯೋಜನವಿಲ್ಲದೇ ಹೋದರೆ ಈಶ್ವರನು ಎಂದಿಗೂ ಲೀಲೆಯ ನೆಪದಿಂದ ಶರೀರಧಾರಣ ಮಾಡುವುದಿಲ್ಲ ಅಂತಹ ಯಾವುದೋ ಒಂದು ಅಭಾವವು ಸಮಾಜದಪ್ರತಿಯೊಂದು ಅಂಗದಲ್ಲಿಯೂ ಯಾವಾಗ ಕಾಣಿಸಿಕೊಳ್ಳುವುದೋ ಆಗ ಭಗವಂತನ ಅಪಾರವಾದ ಕರುಣೆಯು ಘನೀಭೂತವಾಗಿ ಆತನನ್ನು ಜಗದ್ಗುರು ರೂಪದಿಂದ ಹುಟ್ಟುವಂತೆ ಮಾಡುತ್ತದೆ. ಈ ವಿಧವಾದ ಪ್ರಯೋಜನಕ್ಕಾಗಿ ಮೇಲೆಮೇಲೆ ಲೀಲಾವಿಗ್ರಹರು ಜನ್ಮಧಾರಣ ಮಾಡಿದುದನ್ನು ಪ್ರತ್ಯಕ್ಷವಾಗಿ ನೋಡಿಯೇ ಪುರಾಣಕಾರರು ಪೂರ್ವೋಕ್ತ ಸಿದ್ಧಾಂತವನ್ನು ಮಾಡಿದರೆಂದು ಹೇಳಬೇಕಾದ ಅಗತ್ಯವಿಲ್ಲ.

**ಈ ಕಾಲದಲ್ಲಿ ಅವತಾರ ಪುರುಷರ ಪುನರಾಗಮನ**

ಆದುದರಿಂದ ನವೀನ ಧರ್ಮವನ್ನು ಬೋಧಿಸುವ, ಜಗದ್ಗುರುವೂ ಸರ್ವಜ್ಞನೂ ಆದ, ಅವತಾರ ಪುರುಷನು ಯುಗಪ್ರಯೋಜನಸಾಧನಕ್ಕಾಗಿಯೇ ಆವಿರ್ಭೂತನಾಗುತ್ತಾನೆಂದು ಗೊತ್ತಾಗುತ್ತದೆ ಧರ್ಮಕ್ಷೇತ್ರವಾದ ಭಾರತಭೂಮಿಯು ಅನೇಕಯುಗಗಳಲ್ಲಿ ಅನೇಕವೇಳೆ ಅವರ ಹೆಜ್ಜೆಗಳನ್ನು ಹೃದಯದಲ್ಲಿ ಧಾರಣ ಮಾಡಿ ಪವಿತ್ರೀಕೃತವಾಗಿರುತ್ತದೆ ಯುಗಪ್ರಯೋಜನವುಂಟಾದರೆ ಅಮಿತ ಗುಣಸಂಪನ್ನರಾದ ಅವತಾರಪುರುಷರ ಆವಿರ್ಭಾವವು ಈಗಲೂ ಭಾರತ

ಭೂಮಿಯಲ್ಲಿ ಉಂಟಾಗುತ್ತದೆ. ಸುಮಾರು ನಾಲ್ಕು ಶತಮಾನಗಳ ಕೆಳಗೆ ಭಗವಾನ್ ಶ್ರೀ ಕೃಷ್ಣ ಚೈತನ್ಯನು ಭಾರತೀಯ ಅಪೂರ್ವಮಹಿಮೆಯ ಫಲವಾಗಿ, ಹರಿನಾಮ ಸಂಕೀರ್ತನದಿಂದ ಉನ್ಮತ್ತನಾದ ವಿಷಯವು ಲೋಕ ಪ್ರಸಿದ್ಧವಾದುದು. ಪುನಃ ಅಂತಹ ಕಾಲ ಬಂದಿದೆಯೆ? ವಿದೇಶಿಗಳ ಕರುಣೆಗೆ ಅಸ್ಪದವಾಗಿ, ಗೌರವಹೀನವಾಗಿ, ದರಿದ್ರಾವಸ್ಥೆಯಲ್ಲಿರುವ ಭಾರತ ಭೂಮಿಯಲ್ಲಿ ಯುಗ ಪ್ರಯೋಜನವುಂಟಾಗಿ ಭಗವಂತನ ಕರುಣೆಯನ್ನು ಉದ್ರೇಕಗೊಳಿಸಿ ಆತನು ಶರೀರವನ್ನು ಧರಿಸುವಂತೆ ಮಾಡುವ ಕಾಲವು ಈಗ ಪುನಃ ಬಂದಿರುವುದೆ? ಪಾಠಕರೆ! ಅಶೇಷಕಲ್ಯಾಣಗುಣಸಂಪನ್ನನಾದ ಯಾವ ಮಹಾಪುರುಷನ ವಿಚಾರವನ್ನು ನಿಮಗೆ ತಿಳಿಸಬೇಕೆಂದು ನಾವು ಸಂಕಲ್ಪಿಸಿರುವೆವೋ ಆತನ ಜೀವನಾಲೋಚನೆಯಿಂದ ಅಂತಹ ಕಾಲವು ಬಂದಿರುವುದೆಂದು ಗೊತ್ತಾಗುತ್ತದೆ. ಶ್ರೀರಾಮಚಂದ್ರ, ಶ್ರೀಕೃಷ್ಣಾದಿ ರೂಪಗಳಿಂದ ಹಿಂದಿನ ಯುಗಗಳಲ್ಲಿ ಅವತಾರ ಮಾಡಿ ಸನಾತನ ಧರ್ಮವನ್ನು ಸಂಸ್ಥಾಪನ ಮಾಡಿದಾತನು ಈಗಿನ ಕಾಲದ ಯುಗಪ್ರಯೋಜನವನ್ನು ಸಾಧಿಸುವುದಕ್ಕಾಗಿ ಬಂದಿರುವುದನ್ನು ಕಣ್ತೆರೆದು ನೋಡಿ. ಭಾರತಭೂಮಿಯು ಪುನಃ ಧನ್ಯವಾಗಿದೆ.

# ಒಂದನೆಯ ಅಧ್ಯಾಯ

## ಯೋಗ ಪ್ರಯೋಜನ

**ವರ್ತಮಾನ ಕಾಲದಲ್ಲಿ ಮಾನವನು ಎಷ್ಟರಮಟ್ಟಿಗೆ ಶಕ್ತಿಶಾಲಿಯೂ ಉನ್ನತನೂ ಆಗಿರುವನು**

ವಿದ್ಯೆ, ಸಂಪತ್ತು, ಪುರುಷಕಾರ ಇವುಗಳ ಸಹಾಯದಿಂದ ವರ್ತಮಾನಕಾಲದಲ್ಲಿ ಮಾನವ ಜೀವನವು ಐಹಿಕವಾದ ಸಮಸ್ತವಿಷಯಗಳಲ್ಲಿಯೂ ಎಷ್ಟರಮಟ್ಟಿಗೆ ಪ್ರಸಾರವಾಗಿದೆ ಎಂಬುದನ್ನು ಅತಿಸೂಕ್ಷ್ಮದರ್ಶಿಗಳಾದವರೂ ಸುಲಭವಾಗಿ ತಿಳಿದುಕೊಳ್ಳಬಹುದಾಗಿದೆ ಈಗ ಮಾನವನು ಯಾವ ವಿಷಯದಲ್ಲಿಯೇ ಆಗಲಿ ಒಂದೇ ನಿಯಮದಿಂದ ಬದ್ಧನಾಗಿರಲು ಇಷ್ಟಪಡುವುದಿಲ್ಲ ಸ್ಥಲ ಜಲಗಳಲ್ಲಿ ಯಥೇಚ್ಛವಾಗಿ ಸಂಚಾರಮಾಡಿ ಅದರಿಂದ ತೃಪ್ತಿಯನ್ನು ಹೊಂದದೆ, ಹೊಸ ಹೊಸ ಯಂತ್ರಗಳನ್ನು ನಿರ್ಮಾಣಮಾಡಿ ಗಗನಚಾರಿಯಾಗಿದ್ದಾನೆ, ಅಂಧಕಾರಾವೃತವಾದ ಸಮುದ್ರತಲದಲ್ಲಿಯೂ ಅಗ್ನಿಪರ್ವತದ ಒಳಕ್ಕೂ ಪ್ರವೇಶಮಾಡಿ ತನ್ನ ಕುತೂಹಲವನ್ನು ಪೂರೈಸಿಕೊಂಡಿದ್ದಾನೆ, ಯಾವಾಗಲೂ ಹಿಮದಿಂದ ಕೂಡಿದ ಪರ್ವತಗಳಲ್ಲಿಯೂ ಸಾಗರಭಾಗಗಳಲ್ಲಿಯೂ ಸಂಚಾರಮಾಡಿ ಆ ಪ್ರದೇಶಗಳ ನಿಜವಾದ ರಹಸ್ಯವನ್ನು ಕಂಡು ಹಿಡಿಯುವುದರಲ್ಲಿ ಸಮರ್ಥನಾಗಿದ್ದಾನೆ, ಭೂಮಿಯಲ್ಲಿರುವ ಚಿಕ್ಕ, ದೊಡ್ಡ ಸಮಸ್ತ ಗಿಡ ಮರ ಬಳ್ಳಿಗಳಲ್ಲಿಯೂ ತನ್ನಲ್ಲಿರುವಂತೆಯೇ ಚೈತನ್ಯವಿರುವುದೆಂಬುದನ್ನು ಕಂಡು ಹಿಡಿದಿದ್ದಾನೆ, ಹಾಗೆಯೇ ಸಮಸ್ತ ಪ್ರಾಣಿವರ್ಗಗಳನ್ನು ಪ್ರತ್ಯಕ್ಷವಾಗಿ ನೋಡಿ, ಅಥವಾ ವಿಚಾರಶಕ್ತಿಯಿಂದ ಕಂಡು, ತನ್ನ ಜ್ಞಾನವನ್ನು ಅಭಿವೃದ್ಧಿ ಪಡಿಸಿಕೊಂಡಿರುತ್ತಾನೆ ಈ ರೀತಿಯಾಗಿ ಪೃಥ್ವಿ ಅಪ್ ತೇಜಾದಿ ಪಂಚಭೂತಗಳ ಮೇಲೆಯೂ ಈ ಆಧಿಪತ್ಯವನ್ನು ಸ್ಥಾಪಿಸಿ, ಮಾನವನು ಈಗ ಪೃಥ್ವಿಯ ಜಡವಸ್ತುಗಳ ವಿಷಯವನ್ನೆಲ್ಲಾ ಸಮಗ್ರವಾಗಿ ತಿಳಿದಿರುತ್ತಾನೆ. ಅಷ್ಟೇ ಅಲ್ಲ, ಇದರಿಂದಲೂ ಸಂತುಷ್ಟನಾಗದೆ ಬಹುದೂರದಲ್ಲಿರುವ ಗ್ರಹ ನಕ್ಷತ್ರಾದಿಗಳ ವಿಷಯವನ್ನು ತಿಳಿದುಕೊಳ್ಳಲು ಆತುರವುಳ್ಳವನಾಗಿ ಕ್ರಮವಾಗಿ ಅದರಲ್ಲಿಯೂ ಕೃತಕಾರ್ಯನಾಗಿದ್ದಾನೆ ಅಂತರ್ಜಗತ್ತಿನ ವಿಚಾರಗಳನ್ನು ತಿಳಿದುಕೊಳ್ಳುವುದರಲ್ಲಿಯೂ ಪ್ರಯತ್ನಮಾಡದೇ ಹೋಗಿಲ್ಲ. ಮೇಲಿಂದ ಮೇಲೆ ಉಂಟಾಗುವ ಅನುಭವ, ಗಾಢವಾದ ಮನನ ಇವುಗಳ ಸಹಾಯದಿಂದ ಈ ಕ್ಷೇತ್ರದಲ್ಲಿಯೂ ಹೊಸ ಹೊಸ ತತ್ವಗಳನ್ನು ಕಂಡುಹಿಡಿ

ಯುತ್ತಿದ್ದಾನೆ. ಜೀವನ ರಹಸ್ಯವನ್ನು ತಿಳಿಯುವುದಕ್ಕೆ ಹೊರಟು ಒಂದು ಜಾತಿಯ ಪ್ರಾಣಿಯು ಮತ್ತೊಂದು ಜಾತಿಯ ಪ್ರಾಣಿಯಾಗಿ ಪರಿಣಾಮಿಸುತ್ತದೆ ಎಂಬ, ಎಂದರೆ ಕ್ರಮಾಭಿವ್ಯಕ್ತಿಯ ಅಥವಾ ಪರಿಣಾಮವಾದದ ವಿಷಯವನ್ನು ತಿಳಿದುಕೊಂಡಿರುತ್ತಾನೆ. ಶರೀರದ ಮತ್ತು ಮನಸ್ಸಿನ ಸ್ವಭಾವವನ್ನು ಆಲೋಚನೆಮಾಡಿ ಸೂಕ್ಷ್ಮವಾದ ಜಡವಸ್ತುವಿನಿಂದಲೇ ಮನಸ್ಸು ರಚಿತವಾಗಿದೆ ಎಂಬ ತತ್ವವನ್ನು ನಿರ್ಣಯಿಸುವುದಕ್ಕೆ ಶಕ್ತನಾಗಿದ್ದಾನೆ. ಜಡಜಗತ್ತಿನಂತೆಯೇ ಅಂತರ್ಜಗತ್ತಿನ ಪ್ರತಿಯೊಂದು ಘಟನೆಯೂ ಅಲಂಘ್ಯವಾದ ನಿಯಮಸೂತ್ರಗಳಿಂದ ಬದ್ಧವಾಗಿದೆಯೆಂದೂ, ಆತ್ಮಹತ್ಯವೇ ಮೊದಲಾದ ಅಸಂಬದ್ಧವಾದ ಮಾನಸಿಕವ್ಯಾಪಾರಗಳಲ್ಲಿಯೂ ಸೂಕ್ಷ್ಮವಾದ ನಿಯಮಶೃಂಖಲೆಗಳಿವೆಯೆಂದೂ, ಕಂಡು ಹಿಡಿದಿದ್ದಾನೆ. ಇದೂ ಅಲ್ಲದೆ, ವ್ಯಕ್ತಿಗತ ಜೀವನದ ಚಿರಂಜೀವತ್ವದ ವಿಚಾರದಲ್ಲಿ ಯಾವ ವಿಧವಾದ ನಿಶ್ಚಯ ಪ್ರಮಾಣವನ್ನು ಕಂಡು ಹಿಡಿಯಲು ಸಮರ್ಥನಾಗದೇ ಇದ್ದರೂ, ಇತಿಹಾಸಾಲೋಚನೆಯಿಂದ ಜಾತಿಗತಜೀವನದ ಕ್ರಮೋನ್ನತಿಯನ್ನು ಪ್ರತ್ಯಕ್ಷಮಾಡಿ ತೋರಿಸಿದ್ದಾನೆ. ಹೀಗೆ ವ್ಯಕ್ತಿಗತಜೀವನದ ಸಾರ್ಥಕ್ಯವು ಜಾತಿಗತಜೀವನದಲ್ಲಿರುವುದನ್ನು ಕಂಡು ಈಗ ಅದರ ಸಾಫಲ್ಯಕ್ಕಾಗಿ ವಿಜ್ಞಾನ ಮತ್ತು ವ್ಯವಸ್ಥಿತ ಪ್ರಯತ್ನಗಳ ಸಹಾಯದಿಂದ ಅಜ್ಞಾನದೊಂದಿಗೆ ಚಿರಕಾಲ ಹೋಡೆದಾಡಲು ಸಿದ್ಧನಾಗಿದ್ದಾನೆ; ಮತ್ತು ಅನಂತ ಸಂಗ್ರಾಮದಿಂದ ಅನಂತ ಉನ್ನತಿಯಾಗುತ್ತದೆಂಬ ಕಲ್ಪನೆಯಿಂದ ಬಾಹ್ಯ ಮತ್ತು ಅಂತರ್ಜಗತ್ತುಗಳ ದುರ್ಲಕ್ಷ್ಯ ಪ್ರದೇಶಗಳನ್ನು ಹೊಂದಬೇಕೆಂಬ ಸಂಕಲ್ಪದಿಂದ ಅನಂತವಾಸನಾಪ್ರವಾಹದಲ್ಲಿ ತನ್ನ ಜೀವನದ ದೋಣಿಯನ್ನು ತೇಲಿಬಿಟ್ಟಿದ್ದಾನೆ

ಈ ಉನ್ನತಿ ಶಕ್ತಿಗಳ ಕೇಂದ್ರವು ಪಾಶ್ಚಾತ್ಯದಿಂದ ಪ್ರಾಚ್ಯದಲ್ಲಿ ಭಾವ ವಿಸ್ತಾರ.

ಹಿಂದೆ ಹೇಳಿದ ಜೀವನ ಪ್ರಸಾರವು ವಿಶೇಷವಾಗಿ ಪಾಶ್ಚಾತ್ಯ ಜನರಿಗೆ ಸಂಬಂಧಪಡುವುದಾದರೂ ಭರತಖಂಡವೇ ಮೊದಲಾದ ಪ್ರಾಚ್ಯದೇಶಗಳಲ್ಲಿಯೂ ಅದರ ಪ್ರಭಾವವು ಅಲ್ಪವಾಗಿ ಕಂಡು ಬರುವುದಿಲ್ಲ. ವಿಜ್ಞಾನದ ಅದಮ್ಯವಾದ ಶಕ್ತಿಯಿಂದ ಪ್ರಾಚ್ಯಪಾಶ್ಚಾತ್ಯ ಪ್ರದೇಶಗಳು ಎಷ್ಟೆಷ್ಟು ನಿಕಟ ಸಂಬಂಧದಿಂದ ಬದ್ಧವಾಗುತ್ತಿವೆಯೋ ಅಷ್ಟಷ್ಟುಮಟ್ಟಿಗೂ ಪ್ರಾಚ್ಯಜನರ ಪುರಾತನಸಂಸ್ಕಾರಗಳು ಪರಿವರ್ತಿತವಾಗಿ ಪಾಶ್ಚಾತ್ಯರ ಭಾವದಿಂದ ಕೂಡುತ್ತವೆ. ಪರ್ಷಿಯ, ಚೀನಾ, ಜಪಾನ್, ಭರತಖಂಡ ಮೊದಲಾದ

ದೇಶಗಳ ಸದ್ಯಸ್ಥಿತಿಯನ್ನು ಕುರಿತು ಆಲೋಚಿಸಿದರೆ ಈ ವಿಷಯವು ಗೊತ್ತಾಗುತ್ತದೆ ಮುಂದೆ ಫಲಾಫಲಗಳು ಹೇಗಾದರೂ ಆಗಲಿ, ಪ್ರಾಚ್ಯರಮೇಲೆ ಪಾಶ್ಚಾತ್ಯರ ಈ ವಿಧವಾದ ಭಾವವಿಸ್ತಾರ ವಿಷಯದಲ್ಲಿ ಮಾತ್ರ ಯಾವ ಸಂದೇಹವೂ ಇಲ್ಲ, ಇಷ್ಟೇ ಅಲ್ಲ ಕಾಲಕ್ರಮದಲ್ಲಿ ಜಗತ್ತೆಲ್ಲವೂ ಪಾಶ್ಚಾತ್ಯ ಭಾವದಿಂದ ತುಂಬಿಕೊಳ್ಳುವುದು ಅನಿವಾರ್ಯವೆಂದು ತೋರುತ್ತದೆ

ಪಾಶ್ಚಾತ್ಯರಜೀವನವನ್ನು ನೋಡಿ ಈ ಉನ್ನತಿಯ ಮುಂದಿನ ಫಲಾಫಲಗಳನ್ನು ನಿರ್ಣಯಿಸಬೇಕು

ಮೇಲೆ ಹೇಳಿದ ಪ್ರಸರಣದ ಫಲಾಫಲಗಳನ್ನು ನಿರ್ಣಯಿಸಬೇಕಾದರೆ ನಾವು ಪಾಶ್ಚಾತ್ಯ ದೇಶಗಳನ್ನೇ ಮುಖ್ಯವಾಗಿ ಅವಲಂಬನ ಮಾಡಬೇಕು, ವಿಚಾರ ಸಹಾಯದಿಂದ ಪಾಶ್ಚಾತ್ಯರ ಜೀವನ ರಹಸ್ಯಗಳನ್ನು ಕಂಡು ಹಿಡಿಯಬೇಕು. ಈ ಪ್ರಸಾರದ ಮೂಲವಾವುದು, ಅದರ ಸ್ವಭಾವವೆಂಥದು, ಅದರ ಪ್ರಭಾವದಿಂದ ಪಾಶ್ಚಾತ್ಯ ಜೀವನದ ಪುರಾತನ ಉತ್ತಮಾಧಮ ಭಾವಗಳು ಎಷ್ಟರಮಟ್ಟಿಗೆ ಉನ್ನತಿಯನ್ನು ಹೊಂದಿವೆ, ಮತ್ತು ಅದರ ಫಲವಾಗಿ ಪಾಶ್ಚಾತ್ಯದಲ್ಲಿ ವ್ಯಕ್ತಿಗತವಾದ ಮಾನವ ಮನಸ್ಸಿನಲ್ಲಿ ಸುಖದುಃಖಗಳು ಪೂರ್ವಕ್ಕಿಂತಲೂ ಎಷ್ಟು ಹೆಚ್ಚು ಅಥವಾ ಕಡಮೆಯಾದ ಪರಿಮಾಣದಲ್ಲಿವೆ, ಎಂಬ ಅಂಶಗಳನ್ನು ತಿಳಿದುಕೊಳ್ಳಬೇಕು ಈ ರೀತಿಯಾಗಿ ವ್ಯಷ್ಟಿಭೂತವಾದ ಮತ್ತು ಸಮಷ್ಟೀಭೂತವಾದ ಪಾಶ್ಚಾತ್ಯ ಜೀವನದಲ್ಲಿ ಅದರ ಫಲಾಫಲಗಳನ್ನು ಒಂದು ಸಲ ನಿರ್ಣಯಮಾಡಿದರೆ ಅನ್ಯತ್ರ ಅದರ ಪರಿಣಾಮವೇನಾಗುವುದೆಂಬುದನ್ನು ದೇಶಕಾಲಭೇದಕ್ಕನುಸಾರವಾಗಿ ನಿರ್ಣಯಿಸುವುದು ಕಠಿಣವಾಗುವುದಿಲ್ಲ

ಪಾಶ್ಚಾತ್ಯರ ಉನ್ನತಿಯ ಕಾರಣ, ಮತ್ತು ಇತಿಹಾಸ

ದುಸ್ಸಹವಾದ ಶೈತ್ಯಾಧಿಕ್ಯವು ಅತಿಪ್ರಾಚೀನ ಕಾಲದಿಂದಲೂ ಪಾಶ್ಚಾತ್ಯಮಾನವ ಮನಸ್ಸಿನಲ್ಲಿ ದೇಹ ಬುದ್ಧಿಯನ್ನು ದೃಢವಾಗಿ ಉಂಟುಮಾಡಿ ಅವರನ್ನು ಒಂದು ಕಡೆ ಹೇಗೆ ಸ್ವಾರ್ಥ ಪರರನ್ನಾಗಿ ಮಾಡಿತೋ, ಹಾಗೆಯೇ ಮತ್ತೊಂದು ಕಡೆಯಲ್ಲಿ ಐಕಮತ್ಯದಿಂದ ಪ್ರಯತ್ನ ಮಾಡಿದರೆ ಸ್ವಾರ್ಥ ಸಿದ್ಧಿಯಾಗುವುದು ಎಂಬ ವಿಷಯವನ್ನು ಸುಲಭವಾಗಿ ತಿಳಿಸಿ, ಸ್ವಜಾತಿ ಪ್ರೀತಿಯು ಹುಟ್ಟುವಂತೆ ಮಾಡಿತು ಎಂದು ಇತಿಹಾಸವು ಸ್ಪಷ್ಟವಾಗಿ ತಿಳಿಸುತ್ತದೆ ಈ ಸ್ವಾರ್ಥಪರತೆ, ಸ್ವಜಾತಿ ಪ್ರೀತಿಗಳು ಅವನನ್ನು ಕಾಲಕ್ರಮದಲ್ಲಿ ಅದಮ್ಯವಾದ ಉತ್ಸಾಹದಿಂದ

ಇತರ ಜನಾಂಗದವರನ್ನು ಸೋಲಿಸಿ, ಅವರ ಧನಸಂಪದಗಳನ್ನು ತಮ್ಮ ಸ್ವಾಧೀನ ಮಾಡಿಕೊಳ್ಳುವಂತೆ ಪ್ರೇರಿಸಿವೆ ಇದರ ಫಲರೂಪವಾಗಿ ಅವರ ಜೀವನ ಯಾತ್ರೆಯು ಸ್ವಲ್ಪ ಮಟ್ಟಿಗೆ ಸುಸಾರವಾದ ಮೇಲೆ ಅವರಲ್ಲಿ ಕ್ರಮಕ್ರಮವಾಗಿ ಅಂತರ್ದೃಷ್ಟಿಯ ಆವಿರ್ಭಾವವಾಗಿ ಅವರನ್ನು ವಿದ್ಯಾವಂತರೂ ಸದ್ಗುಣ ಸಂಪನ್ನರೂ ಆಗುವಂತೆ ಪ್ರೇರಿಸಿತು ಹೀಗೆ ಜೀವನ ಕಲಹವಲ್ಲದ ಉಚ್ಚ ವಿಷಯಗಳು ಅವರ ದೃಷ್ಟಿಯನ್ನು ಆಕರ್ಷಿಸಿದ ಕೂಡಲೆ ಅವರಿಗೆ ತಮ್ಮ ಲಕ್ಷ್ಯದ ಕಡೆಗೆ ಹೋಗುವ ಮಾರ್ಗದಲ್ಲಿ ಧರ್ಮವಿಶ್ವಾಸವೂ ಪುರೋಹಿತ ಕುಲದ ಪ್ರಾಧಾನ್ಯವೂ ವಿಘ್ನರೂಪವಾಗಿರುವುವೆಂದು ಕಂಡುಬಂತು ಭಗವಂತನ ಅಪ್ರಸನ್ನತೆಗೆ ಪಾತ್ರರಾಗಿ ಅನಂತ ನರಕಗಾಮಿಗಳಾಗುವರೆಂದು ಬೋಧಿಸುವುದರಿಂದ ಮಾತ್ರ ಪುರೋಹಿತರು ತೃಪ್ತರಾಗದೆ ಛಲಬಲ ಕೌಶಲಗಳಿಂದ ಅವರು ಆ ಮಾರ್ಗದಲ್ಲಿ ಹೋಗದಂತೆ ಅಡ್ಡಿಮಾಡಲು ಒದ್ದಕಂಕಣರಾಗಿರುವವರೆಂದು ಅವರಿಗೆ ಕಂಡಬಂತು ಆ ಸಂದರ್ಭದಲ್ಲಿ ತಮ್ಮ ಉದ್ದೇಶ ಸಾಧನಕ್ಕಾಗಿ ತಾವು ಮಾಡತಕ್ಕ ಕರ್ತವ್ಯವೇನೆಂಬುದನ್ನು ನಿರ್ಧರಿಸಲು ಸ್ವಾರ್ಥಸಾಧನ ಪರರಾದ ಪಾಶ್ಚಾತ್ಯರಿಗೆ ಹೆಚ್ಚು ಕಾಲ ಬೇಕಾಗಲಿಲ್ಲ ಭುಜಬಲದಿಂದ ಪುರೋಹಿತನನ್ನು ದೂರಕ್ಕೆ ತಳ್ಳಿ ತಾವು ಹೋಗತಕ್ಕ ದಾರಿಯಲ್ಲಿ ಮುಂದು ವರಿದರು ಹೀಗೆ ಪುರೋಹಿತರೊಂದಿಗೆ ಧರ್ಮವಿಶ್ವಾಸ ಶಾಸ್ತ್ರವಿಶ್ವಾಸಗಳನ್ನು ದೂರಮಾಡಿ ಪಾಶ್ಚಾತ್ಯರು ತಮ್ಮ ಜೀವನವನ್ನು ಒಂದು ಹೊಸ ಮಾರ್ಗದಲ್ಲಿ ನಡೆಯಿಸಲಾರಂಭಿಸಿದರು ಇದೂ ಅಲ್ಲದೆ ಪಂಚೇಂದ್ರಿಯಗಳಿಂದ ಗ್ರಹಿಸಬಹುದಾದ ನಿಶ್ಚಿತಪ್ರಮಾಣವಿಲ್ಲದೆ, ಯಾವ ವಿಷಯವನ್ನೇ ಆಗಲಿ ಎಂದಿಗೂ ತಾವು ನಂಬುವುದೂ ಇಲ್ಲ, ಸ್ವೀಕರಿಸುವುದೂ ಇಲ್ಲ, ಎಂಬುದೇ ಅವರ ಮೂಲ ಮಂತ್ರವಾಯಿತು.

ಇಂದ್ರಿಯ ಪ್ರತ್ಯಕ್ಷವನ್ನು ಆಧಾರವಾಗಿಟ್ಟುಕೊಂಡೇ ವಿಚಾರ ಅನುಮಾನಾದಿಗಳಿಂದ ಯಾವುದಾದರೊಂದು ವಿಷಯದ ಸತ್ಯಾಸತ್ಯತೆಯನ್ನು ನಿರೂಪಣ ಮಾಡಬೇಕು ಎಂಬುದಾಗಿ ನಿಶ್ಚಯಿಸಿ ಯುಷ್ಮದಪ್ರತ್ಯಯ ಗೋಚರವಾದ ವಿಷಯದ ಉಪಾಸಕರಾದರು; ಮತ್ತು ಅಸ್ಮದ್‌ಪ್ರತ್ಯಯ ಗೋಚರನಾದ ವಿಷಯಿಯನ್ನು (ಆತ್ಮನನ್ನು) ವಿಷಯಗಳಲ್ಲಿ ಒಂದು ಎಂದು ಭಾವಿಸಿ, ಅದರ ಸ್ವಭಾವಾದಿಗಳನ್ನೂ ಮೇಲೆ ಹೇಳಿದ ಪ್ರಮಾಣದಿಂದ ತಿಳಿದುಕೊಳ್ಳಲು ಪ್ರಯತ್ನಿಸಿದರು. ಕಳೆದ ನಾನ್ನೂರ ವರ್ಷಗಳಿಂದ ಈ ರೀತಿಯಾಗಿ ಜಗತ್ತಿನ

ಪ್ರತಿಯೊಂದು ವ್ಯಕ್ತಿ ಮತ್ತು ವಿಷಯಗಳನ್ನೂ ಪಂಚೇಂದ್ರಿಯಗಳ ಸಹಾಯದಿಂದ ಪರೀಕ್ಷೆಮಾಡಿಯೇ ಗ್ರಹಣಮಾಡುವುದಕ್ಕೆ ಆರಂಭಿಸಿದರು, ಈ ಕಾಲದಲ್ಲಿಯೇ ನವೀನ ಯುಗದ ಜಡ ವಿಜ್ಞಾನವು ಶೈಶವದ ಜಡತ್ವ ಅಸಹಾಯತೆಗಳಿಂದ ಮುಕ್ತವಾಗಿ ಯೌವನದ ಉದ್ಯಮ, ಆಶಾ, ಆನಂದ, ಬಲೋನ್ಮತ್ತತೆಗಳನ್ನು ಹೊಂದಿತು.

ಇದಕ್ಕೆ ಕಾರಣ ಆತ್ಮವಿಜ್ಞಾನ ವಿಚಾರದಲ್ಲಿ ಪಾಶ್ಚಾತ್ಯರ ಮೂರ್ಖತೆ ಇದರಿಂದ ಉಂಟಾಗಿರುವ ಅವರ ಮನಸ್ಸಿನ ಅಶಾಂತಿ

ಮೇಲೆ ಹೇಳಿದ ನೀತಿಯು ವಿಶೇಷವಾಗಿ ಜಡವಿಜ್ಞಾನದ ಉನ್ನತಿಸಾಧನೆಯನ್ನು ಮಾಡಿದರೂ ಆತ್ಮವಿಜ್ಞಾನ ಸಂಬಂಧವಾಗಿ ಪಾಶ್ಚಾತ್ಯರಿಗೆ ಯಾವ ದಾರಿಯನ್ನೂ ತೋರಿಸಲಾರದೇ ಹೋಯಿತು ಅದಕ್ಕೆ ಕಾರಣವೇನೆಂದರೆ ಸಂಯಮ, ಸ್ವಾರ್ಥತ್ಯಾಗ, ಅಂತರ್ಮುಖತೆ ಮುಂತಾದುವು ಮಾತ್ರವೇ ಈ ವಿಜ್ಞಾನ ಲಾಭಕ್ಕೆ ದಾರಿ, ನಿರುದ್ಧವೃತ್ತಿಯುಳ್ಳ ಮನಸ್ಸೊಂದೇ ಆತ್ಮೋಪಲಬ್ಧಿಯ ಸಾಧನ. ಆದುದರಿಂದ ಬಹಿರ್ಮುಖರಾದ ಪಾಶ್ಚಾತ್ಯರು ಈ ವಿಷಯದಲ್ಲಿ ದಾರಿಗಾಣದೆ ದಿನದಿನಕ್ಕೂ ದೇಹಾತ್ಮವಾದಿಗಳಾದ ನಾಸ್ತಿಕರಾಗಿ ಪರಿಣಮಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ ಆದುದರಿಂದ ಪಾಶ್ಚಾತ್ಯರಿಗೆ ಐಹಿಕ ಭೋಗಸುಖವೇ ಸರ್ವಸ್ವವಾಗಿದೆ, ಅದನ್ನು ಪಡೆಯುವುದಕ್ಕಾಗಿಯೇ ಅವರು ಸರ್ವಪ್ರಯತ್ನಗಳನ್ನೂ ಮಾಡುತ್ತಾರೆ. ಅವರು ವಿಜ್ಞಾನದಿಂದ ಪಡೆದಿರುವ ಪದಾರ್ಥಜ್ಞಾನವು ಈ ವಿಷಯದಲ್ಲಿಯೇ ಮುಖ್ಯಉಪಯೋಗ ಉಳ್ಳದ್ದಾಗಿ ಅವರನ್ನು ದಿನದಿನಕ್ಕೂ ದಾಂಭಿಕರನ್ನಾಗಿಯೂ ಸ್ವಾರ್ಥಪರರನ್ನಾಗಿಯೂ ಮಾಡಿರುತ್ತದೆ ಹೀಗಿರುವುದರಿಂದಲೇ ಪಾಶ್ಚಾತ್ಯರಲ್ಲಿ ಐಶ್ವರ್ಯದ ಆಧಾರದಮೇಲೆ ಜಾತಿವಿಭಾಗ, ಭಯಂಕರವಾದ ನಾಶಕಾರಿಯಾದ ಬಂದೂಕಾದಿಗಳು, ಅಪಾರವಾದ ಐಶ್ವರ್ಯದ ಪಕ್ಕದಲ್ಲಿಯೇ ದಾರಿದ್ರ್ಯದಿಂದುಂಟಾದ ಮಿತಿಮೇರೆಯಿಲ್ಲದ ಅಸಂತೋಷ, ಭಯಂಕರವಾದ ಧನಾಶೆ, ಪರದೇಶಾಧಿಕಾರ, ಪರಜಾತಿಪ್ರಪೀಡನ ಮೊದಲಾದುವು ಕಂಡು ಬರುತ್ತವೆ. ಆದುದರಿಂದಲೇ ಭೋಗಸುಖವನ್ನು ಪೂರ್ಣವಾಗಿ ಅನುಭವಿಸಿಯೂ ಪಾಶ್ಚಾತ್ಯ ನರನಾರಿಯರ ಮನಸ್ಸಿನಲ್ಲಿರುವ ಅಭಾವ ಬೋಧೆಯು ಹೋಗುವುದಿಲ್ಲ, ಮತ್ತು ಮರಣವಾದಮೇಲೆ ಜಾತಿಗತ ಅಸ್ತಿತ್ವದಲ್ಲಿ ಮಾತ್ರ ನಂಬಿಕೆ ಇರುವವರಾದುದರಿಂದ ಅವರು ಯಾತರಿಂದಲೂ ಸುಖಿಗಳಾಗಲಾಗದವರಾಗಿದ್ದಾರೆ ಎಂದು

ಕಾಣುತ್ತದೆ. ವಿಶೇಷವಾದ ಅನುಸಂಧಾನದ ಫಲವಾಗಿ ಈಗ ಪಾಶ್ಚಾತ್ಯರು ಪಂಚೇಂದ್ರಿಯಗಳಿಂದ ಹುಟ್ಟುವಜ್ಞಾನವು ದೇಶಕಾಲಾತೀತವಾದ ವಸ್ತುಪರಿಚಯವನ್ನು ಹೊಂದುವ ಸಾಮರ್ಥ್ಯವನ್ನುಂಟುಮಾಡಲಾರದೆಂದು ತಿಳಿದುಕೊಂಡಿದ್ದಾರೆ ವಿಜ್ಞಾನವು ಅವರಿಗೆ ಈ ವಸ್ತುವಿನ ಕ್ಷಣಿಕ ಆಭಾಸವನ್ನು ಮಾತ್ರ ಕೊಟ್ಟು, ಅದನ್ನು ಗ್ರಹಿಸಿ ತಿಳಿಯುವುದು ತನಗೆ ಅಸಾಧ್ಯವೆಂದು ನಿವೃತ್ತವಾಗುತ್ತದೆ. ಆದುದರಿಂದ ಯಾವ ದೇವತೆಯ ಬಲದಿಂದ ತಾವು ಬಲಿಷ್ಠರೆಂದು ಭಾವಿಸಿಕೊಂಡಿದ್ದರೋ, ಯಾವ ದೇವತೆಯ ಪ್ರಸಾದದಿಂದ ಅವರ ಸಮಸ್ತವಾದ ಭೋಗಭಾಗ್ಯಗಳುಂಟಾಗುತ್ತಿದ್ದುವೊ, ಆ ದೇವತೆಯ ಪರಾಭವದಿಂದ ಪಾಶ್ಚಾತ್ಯರ ಮನಸ್ಸಿನ ಹಾಹಾಕಾರವು ಈಗ ದಿನದಿನಕ್ಕೂ ಹೆಚ್ಚುತ್ತಿದೆ, ಅವರು ತಾವು ಕೇವಲ ನಿರುಪಾಯರಾಗಿರುವೆವೆಂದು ಭಾವಿಸುತ್ತಿದಾರೆ.

ಪಾಶ್ಚಾತ್ಯರಂತೆ ಉನ್ನತಿಯನ್ನು ಪಡೆಯಬೇಕಾದರೆ ಸ್ವಾರ್ಥಪರರೂ ಭೋಗಲೋಲುಪರೂ ಆಗಲೇಬೇಕು

ಪೂರ್ವೋಕ್ತ ಪಾಶ್ಚಾತ್ಯಜೀವನದ ಇತಿಹಾಸ ಸಮಾಲೋಚನೆಯಿಂದ ಅವರ ಪ್ರಸಾರ ಭಿತ್ತಿಯ ಮೂಲದಲ್ಲಿ ವಿಷಯಲೋಲುಪತೆಯೂ, ಸ್ವಾರ್ಥಪರತೆಯೂ, ಧರ್ಮವಿಶ್ವಾಸ ರಾಹಿತ್ಯವೂ ಇರುವುವೆಂದು ಕಂಡುಬರುತ್ತದೆ. ಆದುದರಿಂದ ವ್ಯಕ್ತಿಗತ ಅಥವಾ ಜಾತಿಗತ ಜೀವನದಲ್ಲಿ ಪಾಶ್ಚಾತ್ಯರಿಗೆ ಅನುರೂಪವಾದ ಫಲವನ್ನು ಹೊಂದಬೇಕಾದರೆ ಇತರರೂ ಇಷ್ಟವಿದ್ದೋ ಇಲ್ಲವೋ ಆ ಭಿತ್ತಿಯ ಮೇಲೆಯೇ ತಮ್ಮ ಜೀವನವನ್ನು ಪ್ರತಿಷ್ಠೆಮಾಡಬೇಕಾಗುತ್ತದೆ. ಆದಕಾರಣವೇ ಜಪಾನರೇ ಮೊದಲಾದ ಯಾವ ಪ್ರಾಚ್ಯದೇಶದ ಜನರು ಪಾಶ್ಚಾತ್ಯರೀತಿಯಲ್ಲಿ ತಮ್ಮ ಜನಾಂಗವನ್ನು ಮಾಡಬೇಕೆಂದು ಪ್ರಯತ್ನಪಟ್ಟಿದ್ದಾರೆಯೋ ಅವರಲ್ಲಿ ಸ್ವದೇಶಾಭಿಮಾನ ಸ್ವಜನ ಪ್ರೀತಿ ಇವುಗಳ ಜೊತೆಜೊತೆಗೆ ಮೇಲೆ ಹೇಳಿದ ದೋಷಗಳೆಲ್ಲವೂ ಉಂಟಾಗಿವೆ. ಇದೇ ಪಾಶ್ಚಾತ್ಯಭಾವವನ್ನು ಹೊಂದುವುದರಲ್ಲಿರುವ ದೊಡ್ಡ ದೋಷ. ಪಾಶ್ಚಾತ್ಯ ಸಂಸರ್ಗದಿಂದ ಭಾರತೀಯ ಜೀವನದಲ್ಲಿ ಯಾವ ಅವಸ್ಥೆಯುಂಟಾಗಿದೆ ಎಂಬುದನ್ನು ಪರಿಶೀಲಿಸಿದರೆ ಈ ವಿಷಯವು ನಮಗೆ ಇನ್ನೂ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಭರತಖಂಡದ ಜನ ಜೀವನದ ಪ್ರಾಚೀನ ಭಿತ್ತಿ

ಈ ಸಂದರ್ಭದಲ್ಲಿ ಮೊಟ್ಟಮೊದಲೇ ಒಂದು ಪ್ರಶ್ನೆ ಹುಟ್ಟುತ್ತದೆ, ಯಾವುದೆಂದರೆ ಪಾಶ್ಚಾತ್ಯ ಸಂಸರ್ಗವಾಗುವುದಕ್ಕೆ ಮುಂಚೆ ''ಜಾತೀಯ ಜೀವನ'' ಎಂಬ ಮಾತು ಭರತಖಂಡದಲ್ಲಿ ಇತ್ತೇ ಇಲ್ಲವೆ ಎಂಬುದು. ಇದಕ್ಕೆ ಉತ್ತರವಾಗಿ ಹೀಗೆ ಹೇಳಬಹುದು. ಆ ಮಾತು ಇಲ್ಲದೇ ಹೋಗಿದ್ದರೂ ಆ ಮಾತಿಗೆ ಲಕ್ಷ್ಯವಾದುದು ಮಾತ್ರ ಒಂದು ರೀತಿಯಾಗಿ ಇತ್ತು ಎಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ ಆಗಲೂ ಸಮಗ್ರ ಭಾರತಭೂಮಿಯು ಶ್ರೀಗುರು, ಗಂಗಾ, ಗಾಯಿತ್ರೀ ಗೀತೆ, ಇವುಗಳಲ್ಲಿ ಶ್ರದ್ಧಾಪರಾಯಣವಾಗಿತ್ತು, ಆಗಲೂ ಗೋಪೂಜೆಯು ಭಾರತಭೂಮಿಯ ಎಲ್ಲ ಕಡೆಗಳಲ್ಲಿಯೂ ನಡೆಯುತ್ತಿತ್ತು, ಆಗಲೂ ಭರತಖಂಡದ ಆಬಾಲವೃದ್ಧರೂ ನರನಾರಿಯರೂ ರಾಮಾಯಣ ಮಹಾಭಾರತಾದಿ ಧರ್ಮಗ್ರಂಥಗಳಿಂದ ಒಂದೇ ಭಾರತ ರಂಗಸ್ಥಳವನ್ನು ಹೃದಯದಲ್ಲಿ ಧಾರಣಮಾಡಿ ಜೀವನವನ್ನು ನಡೆಸುತ್ತಿದ್ದರು, ಬೇರೆಬೇರೆ ಭಾಗದ ಪಂಡಿತರು ತಮ್ಮತಮ್ಮ ಮನೋಭಾವಗಳನ್ನು ಸಂಸ್ಕೃತ ಭಾಷೆಯಲ್ಲಿ ಒಬ್ಬೊಬ್ಬರಿಗೆ ವ್ಯಕ್ತಪಡಿಸಲು ಸಮರ್ಥರಾಗಿದ್ದರು. ಹೀಗೆಯೇ ಇನ್ನೂ ಅನೇಕ ಏಕತೆಯ ಸೂತ್ರಗಳನ್ನು ಹೇಳಬಹುದು, ಧರ್ಮಭಾವ, ಧರ್ಮಾನುಷ್ಠಾನಗಳೇ ಈ ಏಕತೆಯ ಮುಖ್ಯ ಅವಲಂಬನಗಳಾಗಿದ್ದುವೆಂದು ನಿಸ್ಸಂಶಯವಾಗಿ ತಿಳಿದುಕೊಳ್ಳಬಹುದು

ಭರತಖಂಡದ ಜಾತಿಯ ಜೀವನವು ಈ ರೀತಿಯಾಗಿ ಧರ್ಮದ ಆಧಾರದ ಮೇಲೆ ಪ್ರತಿಷ್ಠಿತವಾಗಿದ್ದುದರಿಂದ, ಅದರ ನಾಗರಿಕತೆಯು ಒಂದು ಅಪೂರ್ವವೂ, ಪ್ರತ್ಯೇಕವೂ, ಆದ ಉಪಾದಾನದಿಂದ ರಚಿತವಾಗಿತ್ತು ಒಂದೇ ಮಾತಿನಲ್ಲಿ ಹೇಳಬೇಕಾದರೆ ಸಂಯಮವೇ ಈ ನಾಗರಿಕತೆಯ ಪ್ರಾಣಸ್ವರೂಪವಾಗಿತ್ತು ವ್ಯಕ್ತಿಗೂ ಜಾತಿಗೂ ಇಬ್ಬರಿಗೂ ಭಾರತಭೂಮಿಯು ಸಂಯಮ ಸಹಾಯದಿಂದ ತಮ್ಮತಮ್ಮ ಜೀವನವನ್ನು ನಿಯಮಿತಮಾಡಿಕೊಳ್ಳುವಂತೆ ಶಿಕ್ಷಿಸುತ್ತದೆ. ಭೋಗವನ್ನು ಸ್ವೀಕರಿಸುವುದು ತ್ಯಾಗಕ್ಕಾಗಿ, ಇಹಜೀವನದ ಶಿಕ್ಷೆಯು ಪರಜೀವನಕ್ಕಾಗಿ, ಎಂಬುದನ್ನು ಸರ್ವರಿಗೂ ಸರ್ವಾವಸ್ಥೆಗಳಲ್ಲಿಯೂ ಸ್ಮರಣೆಗೆ ತಂದು ವ್ಯಕ್ತಿಯ ಮತ್ತು ಜಾತಿಯ ವ್ಯಾವಹಾರಿಕ ಜೀವನಗಳನ್ನು ಸರ್ವದಾ ಉಚ್ಚತಮ ಲಕ್ಷ್ಯದಲ್ಲಿ ನಡೆಯುವಂತೆ ಮಾಡಿದೆ. ಆದುದರಿಂದಲೇ ಅದರ ವರ್ಣ ಅಥವಾ ಜಾತಿ ವಿಭಾಗವು ಇಷ್ಟು ಕಾಲವೂ ಯಾವ ಶ್ರೇಣಿಯವರಿಗೂ ಸ್ವಾರ್ಥದಿಂದ ಆಘಾತವನ್ನುಂಟುಮಾಡಿ ಅವರ ಅಸಂತೋ

ಷಕ್ಕೆ ಕಾರಣವಾಗಿಲ್ಲ. ಏಕೆಂದರೆ ಸಮಾಜದ ಯಾವ ಶ್ರೇಣಿಯಲ್ಲಿ ಮನುಷ್ಯನು ಹುಟ್ಟುತ್ತಾನೆಯೋ ಆ ಶ್ರೇಣಿಯ ಕರ್ತವ್ಯವನ್ನು ನಿಷ್ಕಾಮ ಕರ್ಮದಿಂದ ಮಾಡಿದರೆ ಅನ್ಯರೊಂದಿಗೆ ಸರಿಸಮವಾಗಿ ಮಾನವ ಜೀವನದ ಮುಖ್ಯೋದ್ದೇಶವಾದ ಜ್ಞಾನ ಮುಕ್ತಿಗಳ ಅಧಿಕಾರಿಯಾಗುವನೆಂದು ಗೊತ್ತಾದಮೇಲೆ ಅವನ ಅಸಂತೋಷಕ್ಕೆ ಕಾರಣವಾದರೂ ಏನಿರುತ್ತದೆ? ಶ್ರೇಣಿವಿಶೇಷದ ಭೋಗಸುಖ ತಾರತಮ್ಯಕ್ಕೆ ಅಧಿಕಾರಕೊಟ್ಟು, ಪಾಶ್ಚಾತ್ಯ ಸಮಾಜದಂತೆ ಭಾರತೀಯ ಸಮಾಜದಲ್ಲಿ ಪ್ರಾಚೀನಕಾಲದಲ್ಲಿ ವಿರೋಧವಿಲ್ಲದಿದ್ದುದಕ್ಕೆ ಕಾರಣ ಜೀವನದ ಉಚ್ಚತಮ ಲಕ್ಷ್ಯದಲ್ಲಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಸಮನಾಧಿಕಾರವಿದ್ದುದೇ ಆಗಿತ್ತು. ಪ್ರಾಚೀನ ಭರತಖಂಡದ ಜಾತೀಯ ಜೀವನದ ವಿಷಯವಾಗಿ ಹಿಂದೆ ಹೇಳಿದುದನ್ನು ಜ್ಞಾಪಕವಿಟ್ಟುಕೊಂಡು ಪಾಶ್ಚಾತ್ಯ ಸಂಸರ್ಗದಿಂದ ಆ ಜೀವನದಲ್ಲಿ ಎಂಥಾ ಪರಿವರ್ತನಗಳುಂಟಾಗಿವೆ ಎಂಬುದನ್ನು ವಿಚಾರ ಮಾಡಬೇಕು.

**ಪಾಶ್ಚಾತ್ಯರ ಭರತ ಖಂಡದ ಅಧಿಕಾರ, ಅದರ ಫಲ**

ಭರತಖಂಡದಲ್ಲಿ ಪಾಶ್ಚಾತ್ಯರ ಅಧಿಕಾರವಾರಂಭವಾದ ಮೇಲೆ ಭರತಖಂಡದ ಧನವಿಭಾಗಕ್ರಮದ ವಿಶೇಷವಾದೊಂದು ಪರಿವರ್ತನ ಉಂಟಾಗುವುದು ಸ್ವಾಭಾವಿಕವೂ ಅನಿವಾರ್ಯವೂ ಆಗಿದೆ ಪಾಶ್ಚಾತ್ಯ ಪ್ರಭಾವವು ಈ ಭಾಗದಲ್ಲಿ ಪರಿವರ್ತನವನ್ನುಂಟುಮಾಡಿ ಅಷ್ಟಕ್ಕೇ ಬಿಡಲಿಲ್ಲ. ಭಾರತೀಯರು ಪ್ರಾಚೀನಕಾಲದಿಂದಲೂ ಯಾವ ಮೂಲ ಸಂಸ್ಕಾರಗಳನ್ನವಲಂಬನೆ ಮಾಡಿ ವ್ಯಕ್ತಿಗತ ಮತ್ತು ಜಾತಿಗತ ಜೀವನವನ್ನು ನಡೆಸುತ್ತಿದ್ದರೋ ಆ ಎಲ್ಲ ಸಂಸ್ಕಾರಗಳಲ್ಲಿಯೂ ಅಪೂರ್ವವಾದೊಂದು ಭಾವಪರಿವರ್ತನವನ್ನುಂಟು ಮಾಡಿತು "ತ್ಯಾಗಕ್ಕಾಗಿ ಭೋಗ" ಎಂಬ ಮಾತು ಪುರೋಹಿತಕುಲದ ಸ್ವಾರ್ಥಬುದ್ಧಿಯಿಂದ ಹುಟ್ಟಿದುದೆಂದೂ, ಪರಜೀವನ, ಆತ್ಮದ ಅಸ್ತಿತ್ವ, ಇವುಗಳನ್ನು ಒಪ್ಪಿಕೊಳ್ಳುವುದು ಒಂದು ದೊಡ್ಡ ಕವಿಕಲ್ಪನೆಯೆಂದೂ, ಸಮಾಜದ ಯಾವ ಶ್ರೇಣಿಯಲ್ಲಿ ಮನುಷ್ಯನು ಹುಟ್ಟಿದನೋ ಆ ಶ್ರೇಣಿಯಲ್ಲಿಯೇ ಅವನು ಸಾಯುವವರಗೂ ಇರಬೇಕೆಂಬುದಕ್ಕಿಂತಲೂ ಅಯುಕ್ತಿಕವೂ, ಅನ್ಯಾಯವೂ ಆದ ನಿಯಮವು ಮತ್ತೊಂದಿಲ್ಲವೆಂದೂ ಬೋಧಿಸಿತು. ಭಾರತವೂ ಕಾಲಕ್ರಮದಲ್ಲಿ ಅದನ್ನು ಒಪ್ಪಿಕೊಂಡು, ತ್ಯಾಗ ಸಂಯಮಪ್ರಧಾನವಾದ ಹಿಂದಿನ ಜೀವನ ಲಕ್ಷ್ಯವನ್ನು ಪರಿತ್ಯಾಗಮಾಡಿ, ಹೆಚ್ಚು ಭೋಗವನ್ನು ಪಡೆಯುವುದರಲ್ಲಿ ಆತುರವನ್ನು ತೋರಿಸುವುದಾಯಿತು. ಹೀಗೆ

ಆದರಲ್ಲಿ ಪೂರ್ವದ ಶಿಕ್ಷಾದೀಕ್ಷೆಗಳು ಲೋಪವಾದವು ; ನಾಸ್ತಿಕ್ಯ, ಪರಾನುಕರಣಪ್ರೀತಿ, ಆತ್ಮವಿಶ್ವಾಸರಾಹಿತ್ಯ ಇವುಗಳು ತಲೆದೋರಿ ಅದನ್ನು ಬೆನ್ನುಮೂಳೆಯಿಲ್ಲದ ಪ್ರಾಣಿಯಂತೆ ಅತ್ಯಂತ ನಿರ್ವೀರ್ಯವಾಗಿ ಮಾಡಿದವು. ಭಾರತವು ತಾನು ಎಷ್ಟೋ ಕಾಲದಿಂದ ಹೃದಯದಲ್ಲಿ ವಹಿಸಿದ್ದ, ಬಹು ಪ್ರಯತ್ನದಿಂದ ಅನುಷ್ಠಾನಮಾಡುತ್ತಿದ್ದ, ಸಮಸ್ತವೂ ಸಂಪೂರ್ಣವಾದ ಭ್ರಮ ಸಮೂಹಗಳಿಂದೂ ವಿಜ್ಞಾನಬಲದಿಂದ ಬಲಿಷ್ಟರಾದ ಪಾಶ್ಚಾತ್ಯರು ತನ್ನ ಸಂಸ್ಕಾರಗಳನ್ನು "ಅಸಂಬದ್ಧ ಮತ್ತು ಅರ್ಧಬರ್ಬರ" ಎಂದು ನಿರ್ದಿಷ್ಟಮಾಡ ವುದು ಸತ್ಯವೆಂದೂ ತಿಳಿದುಕೊಂಡಿತು ಭೋಗಲಾಲಸತೆಯಿಂದ ಮುಗ್ಧವಾದ ಭಾರತವು ತನ್ನ ಪೂರ್ವದ ಇತಿಹಾಸವನ್ನೂ ಪೂರ್ವ ಗೌರವವನ್ನೂ ಮರೆತುಬಿಟ್ಟಿತು ಸ್ಮೃತಿಭ್ರಂಶದಿಂದ ಬುದ್ಧಿನಾಶವಾಯಿತು ತನ್ನ ಜಾತಿಯ ಅಸ್ತಿತ್ವವನ್ನು ನಾಶಪಡಿಸುವ ಪ್ರಯತ್ನಕ್ಕೆ ಉಪಕ್ರಮಿಸಿತು ಇದರ ಪರಿಣಾಮವೇನೆಂದರೆ ಇತ್ತಕಡೆ ಐಹಿಕಭೋಗಲಾಭಕ್ಕಾಗಿ ಇಲ್ಲಿಂದ ಮುಂದಕ್ಕೆ ಪರಮುಖಾಪೇಕ್ಷಿಯಾದುದರಿಂದ ಅದರ ಲಾಭವೂ ಅದರ ದುರದೃಷ್ಟದಿಂದ ದೂರವಾಯಿತು. ಹೀಗೆ ಯೋಗಭೋಗ ಎರಡರ ಮಾರ್ಗದಿಂದಲೂ ಭ್ರಷ್ಟವಾಗಿ ನಾವಿಕನಿಲ್ಲದ ದೋಣಿಯಂತೆ ಪರಾನುಕರಣಮಾಡಿ ವಾಸನಾ ಎಂಬ ಗಾಳಿಗೆ ಎದುರಾಗಿ ಸ್ವೇಚ್ಛೆಯಿಂದ ತಿರುಗಾಡುವುದಕ್ಕೆ ಆರಂಭಿಸಿತು

ಪಾಶ್ಚಾತ್ಯಭಾವದ ಸಹಾಯದಿಂದ ನಿರ್ಜೀವಭಾರತವನ್ನು ಸಜೀವವಾಗಿ ಮಾಡುವ ಪ್ರಯತ್ನ- ಅದರ ಫಲ

ಹೀಗಾದಮೇಲೆ ಭಾರತಕ್ಕೆ ಜಾತೀಯ ಜೀವನವು ಯಾವಕಾಲದಲ್ಲಿಯೂ ಇರಲೇ ಇಲ್ಲ ಪಾಶ್ಚಾತ್ಯರ ಕೃಪೆಯಿಂದ ಇಷ್ಟು ದಿವಸಕ್ಕೆ ಅದರ ಈ ಜೀವನದ ಎಚ್ಚರಿಕೆಯುಂಟಾಯಿತು, ಆದರೆ ಅದರ ಪೂರ್ಣಾವಿರ್ಭಾವದ ದಾರಿಯಲ್ಲಿ ಈಗಲೂ ಅನೇಕ ಪ್ರತಿಬಂಧಗಳಿವೆ, ದುರ್ನಿವಾರ್ಯವಾದ ಧರ್ಮಸಂಸ್ಕಾರಗಳೇ ಅದರ ಸರ್ವನಾಶವನ್ನುಂಟುಮಾಡಿದವು, ಅಸಂಖ್ಯ ದೇವದೇವೀ ಪೂಜೆಯು ಈ ಗೊಂಬೆಯ ಆಟವೇ ಅದನ್ನು ಇದುವರೆಗೂ ಮೇಲಕ್ಕೆ ಏಳದಂತೆ ಮಾಡಿದೆ, ಇದನ್ನೆಲ್ಲಾ ವಿನಾಶಮಾಡು, ಕತ್ತರಿಸಿಹಾಕು, ಆಗಲೇ ಭಾರತೀಯರು ಸಜೀವರಾಗುತ್ತಾರೆ, ಎಂದು ನಾಲ್ಕು ದಿಕ್ಕುಗಳಿಂದಲೂ ಕೂಗಾಟಕ್ಕಾರಂಭವಾಯಿತು. ಕ್ರೈಸ್ತಧರ್ಮವೂ, ಅದರ ಅನುಕರಣದಿಂದ ಏಕೇಶ್ವರವಾದವೂ ಪ್ರಚಾರವಾಗಲಾರಂಭವಾಯಿತು ಪಾಶ್ಚಾತ್ಯ ಅನುಕರಣದಿಂದ ಸಭಾಸಮಿತಿಗಳು

ಉಚಿತವಾಗಿ, ನಿರ್ಜೀವವಾದ ಭಾರತಕ್ಕೆ ರಾಜನೀತಿ, ಸಮಾಜತತ್ತ್ವ, ವಿಧವಾ ವಿವಾಹ, ಸ್ತ್ರೀ ಸ್ವಾತಂತ್ರ್ಯದ ಉಪಯೋಗ ಮೊದಲಾದುವು ಉಪದೇಶಿಸ ಲಾರಂಭಿಸಿದವು. ಆದರೆ ಅದರ ಅಭಾವಬೋಧೆಯಾಗಲಿ ಹಾಹಾಕಾರವಾಗಲಿ ನಾಶವಾಗುವುದಕ್ಕೆ ಬದಲಾಗಿ ದಿನದಿನಕ್ಕೂ ಹೆಚ್ಚಾಗಲಾರಂಭವಾಯಿತು. ರೈಲ್ವೆ, ಟೆಲಿಗ್ರಾಫ್, ಮೊದಲಾದ ಪಾಶ್ಚಾತ್ಯ ನಾಗರಿಕತೆಯ ಹೊಸಹೊಸ ಉಪಕರಣಗಳೆಲ್ಲವೂ ಒಂದೊಂದಾಗಿ ಭರತಖಂಡಕ್ಕೆ ಬಂದವು. ಆದರೆ ಯಾವ ಭಾವಪ್ರೇರಣೆಯಿಂದ ಭಾರತವು ಸಜೀವವಾಗಿತ್ತೋ ಆ ಭಾವದ ಅನು ಸಂಧಾನವೂ ಪುನಃ ಪ್ರವರ್ತನೆಯೂ ಇವುಗಳಿಂದ ಸ್ವಲ್ಪವೂ ಆಗಲಿಲ್ಲ. ಔಷಧವು ಬೇಕಾದ ಸ್ಥಾನದಲ್ಲಿ ಪ್ರಯೋಗವಾಗಲಿಲ್ಲ. ಹೀಗಿರುವಾಗ ರೋಗವು ಉಪಶಮವಾಗುವುದು ಹೇಗೆ? ಧರ್ಮಪ್ರಾಣವಾದ ಭಾರತದ ಧರ್ಮವೇ ಸಜೀವವಾಗದಿರುವಾಗ ಅದು ಸಜೀವವಾಗುವುದು ಹೇಗೆ? ಪಾಶ್ಚಾತ್ಯ ಭಾವಪ್ರಸಾರದಿಂದ ಅದರಲ್ಲಿ ಧರ್ಮಗ್ಲಾನಿಯುಂಟಾಯಿತು. ನಾಸ್ತಿಕ ಪಾಶ್ಚಾತ್ಯಕ್ಕೆ ಅದನ್ನು ದೂರಮಾಡುವ ಸಾಮರ್ಥ್ಯವೆಲ್ಲಿಂದ ಬರಬೇಕು? ಪಾಶ್ಚಾತ್ಯವು ತಾನೇ ಅಸಿದ್ಧವಾಗಿರುವಾಗ ಇತರರನ್ನು ಸಿದ್ಧಮಾಡುವುದು ಹೇಗೆ?

**ಭಾರತದ ಪ್ರಾಚೀನ ಜಾತೀಯ ಜೀವನದ ಗುಣದೋಷ ವಿಚಾರ**

ಪಾಶ್ಚಾತ್ಯಾಧಿಕಾರಕ್ಕೆ ಪೂರ್ವದಲ್ಲಿ ಭಾರತದ ಜಾತೀಯ ಜೀವನದಲ್ಲಿ ಸ್ವಲ್ಪವೂ ದೋಷವಿರಲಿಲ್ಲವೆಂದು ಹೇಳಲಾಗುವುದಿಲ್ಲ. ಆದರೆ ಜಾತೀಯ ಶರೀರವು ಸಜೀವವಾಗಿದ್ದುದರಿಂದ ತಾನಾಗಿ ತಾನೇ ದೋಷನಿವಾರಣ ಪ್ರಯತ್ನವನ್ನು ಮಾಡುವುದು ಯಾವಾಗಲೂ ಕಂಡುಬರುತ್ತಿತ್ತು. ಜಾತಿ ಮತ್ತು ಸಮಾಜಗಳಲ್ಲಿ ಈಗ ಆ ಪ್ರಯತ್ನವು ಇಲ್ಲದಿರುವುದನ್ನು ನೋಡಿದರೆ ಪಾಶ್ಚಾತ್ಯ ಭಾವ ಪ್ರಸಾರರೂಪವಾದ ಔಷಧದ ಪ್ರಯೋಗದಿಂದ ರೋಗದ ಜೊತೆಗೆ ರೋಗಿಯೂ ಹೊರಟುಹೋಗುವ ಸ್ಥಿತಿ ಬಂದಿದೆ ಎಂದು ಗೊತ್ತಾಗುತ್ತದೆ.

**ಪಾಶ್ಚಾತ್ಯ ಭಾವ ವಿಸ್ತಾರದಿಂದ ಭರತ ಖಂಡದಲ್ಲಿ ಈಗ ಧರ್ಮಗ್ಲಾನಿ ಯಾಗಿದೆ.**

ಹೀಗಿರುವುದರಿಂದಲೇ ಪಾಶ್ಚಾತ್ಯದ ಧರ್ಮಗ್ಲಾನಿಯು ಭರತಖಂಡದಲ್ಲಿಯೂ ತನ್ನ ಅಧಿಕಾರವನ್ನು ವಿಸ್ತಾರಮಾಡುತ್ತಿರುವುದು ಕಂಡುಬರುತ್ತದೆ. ವಾಸ್ತವಿಕವಾಗಿ ಈ ಗ್ಲಾನಿಯು ವರ್ತಮಾನಕಾಲದಲ್ಲಿ ಪೃಥ್ವಿಯ ಎಲ್ಲೆಡೆಗಳಲ್ಲಿಯೂ ಎಷ್ಟುದೂರ ಪ್ರಬಲವಾಗಿದೆ ಎಂಬುದನ್ನು

ಯೋಚಿಸಿದರೆ ಸ್ತಂಭಿತರಾಗಬೇಕಾಗುತ್ತದೆ. ಧರ್ಮವೆಂಬ ಒಂದು ವಸ್ತು ಅಥವಾ ಪದಾರ್ಥವಿದ್ದು ವಿಧಾತನ ನಿಯಮಾನುಸಾರ ಅದನ್ನು ಪಡೆಯು ವುದು ಮಾನವನಿಗೆ ಸಾಧ್ಯವಾಗಿದ್ದ ಪಕ್ಷದಲ್ಲಿ, ವರ್ತಮಾನಯುಗದ ಭೋಗ ಪರಾಯಣವಾದ ಮಾನವಜೀವನವು ಅದರಿಂದ ಬಹುದೂರದಲ್ಲಿ ಬಿದ್ದು ಹೋಗಿದೆ ಎಂಬುದು ನಿಸ್ಸಂದೇಹವಾದ ವಿಷಯ ವಿಜ್ಞಾನದ ಸಹಾಯ ದಿಂದ ಮಾನವನ ಈಗಿನ ಕಾಲದ ಜೀವನಪ್ರಸಾರವು ಮಾನವನನ್ನು ವಿಚಿತ್ರ ಭೋಗ ಸಾಧನವನ್ನು ಪಡೆಯಲು ಸಮರ್ಥನನ್ನಾಗಿ ಮಾಡಿದ್ದರೂ ಅವನನ್ನು ಶಾಂತಿಯ ಅಧಿಕಾರಿಯನ್ನಾಗಿ ಮಾಡಲಾರದಿರುವುದಕ್ಕೆ ಇದೇ ಕಾರಣ ಇದಕ್ಕೆ ಪ್ರತಿಕಾರಮಾಡುವವರಾರು? ಪೃಥ್ವಿಯ ಈ ಅಶಾಂತಿಯೂ ಹಾಹಾ ಕಾರವೂ ಯಾರಮನಸ್ಸಿನಲ್ಲಿ ನಿರಂತರವೂ ಧ್ವನಿತವಾಗಿ, ಸರ್ವಭೋಗ ಸಾಧನಗಳನ್ನೂ, ಉಪೇಕ್ಷೆಮಾಡಿ ಯುಗೋಪಯೋಗಿಯಾದ ನೂತನಧರ್ಮ ಪಥವನ್ನು ತೋರಿಸುವಂತೆ ಪ್ರಯುಕ್ತನನ್ನಾಗಿಮಾಡುವುದು? ಪ್ರಾಚ್ಯ ಪಾಶ್ಚಾತ್ಯಗಳ ಧರ್ಮಗ್ಲಾನಿಯನ್ನು ದೂರಮಾಡಿ ಶಾಂತಿಮಯವಾದ ನೂತನ ಮಾರ್ಗದಲ್ಲಿ ಜೀವನವನ್ನು ನಡೆಸುವಂತೆ ಮಾನವನಿಗೆ ಶಿಕ್ಷಾಪ್ರದಾನ ಮಾಡುವವರಾರು?

ಈ ಗ್ಲಾನಿಯ ನಿವಾರಣೆಗಾಗಿ ಈಶ್ವರನು ಪುನಃ ಅವತಾರ ಮಾಡುವುದು

ಜಗತ್ತಿನಲ್ಲಿ ಧರ್ಮಗ್ಲಾನಿಯಾದರೆ ತಾನು ತನ್ನ ಮಾಯಾ ಶಕ್ತಿಯನ್ನವಲಂಬನಮಾಡಿ ಶರೀರಧಾರಣ ಮಾಡುವುದಾಗಿಯೂ, ಈ ಗ್ಲಾನಿಯನ್ನು ದೂರಮಾಡಿ ಪುನಃ ಮಾನವನನ್ನು ಶಾಂತಿಯ ಅಧಿಕಾರಿಯನ್ನು ಮಾಡುವುದಾಗಿಯೂ, ಗೀತೆಯ ಮುಖೇನ ಭಗವಂತನು ಪ್ರತಿಜ್ಞೆಮಾಡಿರುತ್ತಾನೆ ಈ ಯುಗದ ಪ್ರಯೋಜನವು ಆತನ ಕರುಣೆಗೆ ವಿಶೇಷ ಉತ್ತೇಜನವನ್ನು ಉಂಟುಮಾಡದಿರು ವುದೆ? ಈಗಿನ ಅಭಾವಬೋಧೆಯೂ ಅಶಾಂತಿಯೂ ಆತನನ್ನು ಶರೀರಧಾರಣ ಮಾಡುವಂತೆ ಪ್ರೇರಿಸದಿರುವುದೆ?

ಎಲೈ ಪಾಠಕನೆ· ಯುಗ ಪ್ರಯೋಜನವು ಈ ಕೆಲಸವನ್ನು ಮಾಡಿರು ತ್ತದೆ ಭಗವಂತನು ಜಗದ್ಗುರು ರೂಪವಾಗಿ ಸತ್ಯವಾಗಿಯೂ ಪುನಃ ಅವತಾರ ಮಾಡಿದನು. ಆಶಾಯುಕ್ತನಾಗಿ ಆತನ ಪವಿತ್ರವಾದ ಆಶೀರ್ವಾಣಿಯನ್ನು ಕೇಳು—" ಎಷ್ಟು ಮತಗಳಿವೆಯೋ, ಅಷ್ಟು ಪಥಗಳಿವೆ, " " ಸರ್ವಾಂತಃಕರಣ

ದಿಂದ ಯಾವುದನ್ನಾದರೂ ಅನುಷ್ಠಾನಮಾಡು, ಅದರಿಂದಲೇ ನೀನು ಭಗವಂತನನ್ನು ಹೊಂದುತ್ತಿ," ಮುಗ್ಧನಾಗಿ ಈ ವಿಷಯವನ್ನೂ ಮನನಮಾಡು—ಪರಾವಿದ್ಯೆಯನ್ನು ಪುನಃ ತರುವುದಕ್ಕಾಗಿಯೇ ಆತನ ಅಲೌಕಿಕ ತ್ಯಾಗ ಮತ್ತು ತಪಸ್ಯೆ. ಆತನ ಕಾಮಗಂಧಹೀನವಾದ ಪುಣ್ಯಚರಿತ್ರೆಯನ್ನು ಯಥಾಸಾಧ್ಯವಾಗಿ ಆಲೋಚಿಸಿ, ಧ್ಯಾನಮಾಡಿ, ನಾವಿಬ್ಬರೂ ಪವಿತ್ರರಾಗೋಣ, ಬಾ.

——:0——

ಶ್ರೀಃ

# ಶ್ರೀ ರಾಮಕೃಷ್ಣ ಲೀಲಾಪ್ರಸಂಗ

## ಎರಡನೆಯ ಅಧ್ಯಾಯ

### ಕಾಮಾರಪುಕುರ ಮತ್ತು ಪಿತೃ ಪರಿಚಯ.

ಬಡವರ ಮನೆಯಲ್ಲಿ ಈಶ್ವರನು ಅವತಾರ ಮಾಡುವುದಕ್ಕೆ ಕಾರಣ

ಈಶ್ವರಾವತಾರರೆಂದು ಯಾವ ಮಹಾಪುರುಷರು ಜಗತ್ತಿನಲ್ಲಿ ಈಗಲೂ ಪೂಜಿತರಾಗಿದ್ದಾರೆಯೋ ಅವರಲ್ಲಿ ಶ್ರೀರಾಮಚಂದ್ರ ಗೌತಮಬುದ್ಧ ಇವರಿಬ್ಬರನ್ನು ಬಿಟ್ಟರೆ, ಮಿಕ್ಕವರೆಲ್ಲರ ಇಹಲೋಕದ ಜೀವನವು ದುಃಖ, ದಾರಿದ್ರ್ಯ, ಸಂಸಾರದ ಅಸಚ್ಛಲತೆ, ಇಂಥ ಯಾವುದೋ ಒಂದು ಕಠೋರವಾದ ಸ್ಥಿತಿಯಲ್ಲಿ ಆರಂಭವಾಗುತ್ತದೆಂದು ಕಂಡು ಬರುತ್ತದೆ. ಹೇಗೆಂದರೆ ಶ್ರೀಕೃಷ್ಣನು ಕ್ಷತ್ರಿಯ ರಾಜವಂಶವನ್ನು ಅಲಂಕರಿಸಿದರೂ ಆತನು ಹುಟ್ಟಿದುದು ಕಾರಾಗೃಹದಲ್ಲಿ, ಬಾಲ್ಯವನ್ನು ಕಳೆದುದು ಆತ್ಮೀಯಜನರಿಂದ ದೂರವಾಗಿ ನೀಚ ಗೋಪಕುಲದಲ್ಲಿ, ಈಶನು (ಏಸುಕ್ರಿಸ್ತ) ಛತ್ರದಲ್ಲಿ ದನದ ಕೊಟ್ಟಿಗೆಯಲ್ಲಿ ದರಿದ್ರರಾದ ತಂದೆ ತಾಯಿಗಳ ಮಗನಾಗಿ ಹುಟ್ಟಿ ಬೆಳೆದನು, ಭಗವಾನ್ ಶಂಕರನು ದರಿದ್ರ ವಿಧವೆಯ ಪುತ್ರನಾಗಿ ಅವತಾರ ಮಾಡಿದನು, ಭಗವಾನ್ ಕೃಷ್ಣಚೈತನ್ಯನು ಕೇವಲ ಸಾಮಾನ್ಯನಾದ ಮನುಷ್ಯನ ಮನೆಯಲ್ಲಿ ಜನ್ಮಗ್ರಹಣ ಮಾಡಿದನು; ಇಸ್ಲಾಂ ಧರ್ಮ ಪ್ರವರ್ತಕನಾದ ಮಹಮ್ಮದನ ಜೀವನದಲ್ಲಿಯೂ ಇದೇ ವಿಷಯವು ಗೊತ್ತಾಗುತ್ತದೆ. ಹೀಗಿದ್ದರೂ ಯಾವ ದುಃಖ ದಾರಿದ್ರ್ಯಗಳಲ್ಲಿ ಸಂತೋಷವಿಲ್ಲವೋ, ಯಾವ ಅಸಚ್ಛಲ ಸಂಸಾರದಲ್ಲಿ ಸ್ವಾರ್ಥತ್ಯಾಗ, ಪ್ರೇಮಗಳಿಲ್ಲವೋ, ಯಾವ ದರಿದ್ರ ತಂದೆ ತಾಯಿಗಳ ಹೃದಯದಲ್ಲಿ ತ್ಯಾಗ, ಪವಿತ್ರತೆ, ಮತ್ತು ಕಠೋರ ಮನುಷ್ಯತ್ವದೊಂದಿಗೆ ಕೋಮಲವಾದ ದಯಾ ದಾಕ್ಷಿಣ್ಯಾದಿ ಭಾವಗಳ ಮಧುರ ಸಾಮಂಜಸ್ಯ ಇವಿಲ್ಲವೋ, ಅಂಥಾ ಸ್ಥಾನಗಳಲ್ಲಿ ಅವರು ಯಾವಾಗಲೂ ಜನ್ಮಗ್ರಹಣ ಮಾಡಲಿಲ್ಲ

ಆಲೋಚಿಸಿ ನೋಡಿದರೆ ಪೂರ್ವೋಕ್ತವಿಧಾನದೊಂದಿಗೆ ಅವರ ಮುಂದಿನ ಜೀವನದ ಗೂಢ ಸಂಬಂಧವೊಂದು ಕಂಡುಬರುತ್ತದೆ. ಏಕೆಂದರೆ ಯಾರು ತಮ್ಮ

ಯೌವನದಲ್ಲಿ ದುಃಖಿಗಳ, ದರಿದ್ರರ, ಮತ್ತು ಅತ್ಯಾಚಾರಕ್ಕೆ ಒಳಪಟ್ಟವರ ಕಣ್ಣೀರನ್ನು ಒರೆಸಿ ಅವರ ಮನಸ್ಸಿಗೆ ಶಾಂತಿಯನ್ನುಂಟುಮಾಡಬೇಕೋ ಅವರು ಇಂತಹ ಜನರ ಅವಸ್ಥೆಯನ್ನು ಮೊದಲಿಂದಲೂ ಅರಿತವರೂ, ಅವರಲ್ಲಿ ಸಹಾನುಭೂತಿಯುಳ್ಳವರೂ ಆಗದಿದ್ದರೆ ಆ ಕಾರ್ಯವನ್ನು ಸಾಧಿಸುವುದು ಹೇಗೆ? ಅಷ್ಟೇ ಅಲ್ಲ ಅವತಾರ ಪುರುಷರು ಜನ್ಮಗ್ರಹಣ ಮಾಡುವುದು ಧರ್ಮಗ್ಲಾನಿಯ ನಿವಾರಣಕ್ಕಾಗಿಯೇ ಎಂದು ಹಿಂದೆಯೇ ಹೇಳಿದ್ದೇವಷ್ಟೆ. ಈ ಕಾರ್ಯವನ್ನು ಸಾಧಿಸುವುದಕ್ಕಾಗಿ ಅವರು ಅನೂಚೀನವಾಗಿ ಬಂದ ಧರ್ಮವಿಧಾನಗಳನ್ನೆಲ್ಲಾ ಸ್ಪಷ್ಟವಾಗಿ ಮೊದಲೇ ತಿಳಿದುಕೊಳ್ಳಬೇಕು, ಮತ್ತು ಆ ಪ್ರಾಚೀನವಿಧಾನಗಳು ಗ್ಲಾನಿಯಾಗುವುದಕ್ಕೆ ಕಾರಣವೇನೆಂಬುದನ್ನು ಪರ್ಯಾಲೋಚಿಸಿ ಆ ಧರ್ಮಗಳ ಪೂರ್ಣವಾದ ಸಫಲವಾದ ದೇಶಕಾಲೋಚಿತವಾದ ನೂತನ ವಿಧಾನಗಳನ್ನು ಕಂಡು ಹಿಡಿಯಬೇಕು. ಈ ತಿಳಿವಳಿಕೆಯುಂಟಾಗುವ ಸುಯೋಗವು ದೊರಯುವುದು ದರಿದ್ರರ ಕುಟೀರದಲ್ಲಿಯೇ ಹೊರತು ಧನಿಕರ ಪ್ರಾಸಾದ ಭವನಗಳಲ್ಲಲ್ಲ ಇದಕ್ಕೆ ಕಾರಣವೇನೆಂದರೆ ಸಂಸಾರದ ಸುಖಭೋಗಗಳಿಂದ ವಂಚಿತನಾದ ದರಿದ್ರನೇ ಈಶ್ವರನನ್ನೂ, ಆತನು ತೋರಿಸುವ ದಾರಿಯನ್ನೂ ತನ್ನ ಜೀವನದ ಮುಖ್ಯಾವಲಂಬವೆಂದು ನಂಬಿರುತ್ತಾನೆ. ಆದುದರಿಂದ ಎಲ್ಲ ಎಡೆಗಳಲ್ಲಿಯೂ ಧರ್ಮಗ್ಲಾನಿಯಾದರೂ ಪ್ರಾಚೀನ ಸಂಪ್ರದಾಯದ ಸ್ವಲ್ಪ ಭಾಗವಾದರೂ ಬಡವರ ಗುಡಿಸಿಲಿನಲ್ಲಿ ಆಗಲೂ ಉಳಿದಿರುತ್ತದೆ ಆದುದರಿಂದಲೇ ಜಗದ್ಗುರು ಮಹಾಪುರುಷರೆಲ್ಲರೂ ಜನ್ಮಗ್ರಹಣ ಕಾಲದಲ್ಲಿ ದರಿದ್ರ ಪರಿವಾರದಿಂದ ಆಕರ್ಷಿತರಾಗುತ್ತಾರೆಂದು ಕಾಣುತ್ತದೆ.

ಈಗ ನಾವು ಯಾವ ಮಹಾ ಪುರುಷರ ವಿಷಯವನ್ನು ಹೇಳಬೇಕೆಂದಿರುವೆವೋ ಅವರ ಜೀವನಾರಂಭವೂ ಪೂರ್ವೋಕ್ತ ನಿಯಮವನ್ನು ಮೀರಿಲ್ಲ

**ಶ್ರೀರಾಮಕೃಷ್ಣ ಪರಮಹಂಸರ ಜನ್ಮಭೂಮಿಯಾದ ಕಾಮಾರಪುಕುರ**

ಹುಗ್ಲಿ ಜಿಲ್ಲೆಯ ವಾಯುವ್ಯ ಮೇರೆಯೂ ಬಂಕೂರ ಮತ್ತು ಮೇದಿನೀಪುರ ಜಿಲ್ಲೆಗಳ ಮೇರೆಗಳೂ ಸಂಧಿಸುವ ಸ್ಥಳಕ್ಕೆ ಸಮೀಪದಲ್ಲಿ ಮೂರು ಗ್ರಾಮಗಳಿವೆ ಒಂದಕ್ಕೊಂದು ಹತ್ತಿರದಲ್ಲಿವೆ ತ್ರಿಕೋಣಾಕಾರವಾಗಿ ಗ್ರಾಮವಾಸಿಗಳು ಈ ಮೂರು ಗ್ರಾಮಗಳನ್ನೂ ಶ್ರೀಪುರ, ಕಾಮಾರಪುಕುರ, ಮುಕುಂದಪುರವೆಂದು ಬೇರೆ ಬೇರೆ ಹೆಸರುಗಳಿಂದ ಕರೆದರೂ ಆ ಮಾರ್ಗದಲ್ಲಿ

ಹೋಗಿಬರತಕ್ಕವರು ಅವು ಒಂದಕ್ಕೊಂದು ಕೇವಲ ಸಮೀಪವಾಗಿರುವುದರಿಂದ ಅವನ್ನು ಒಂದೇ ಗ್ರಾಮದ ಬೇರೆ ಬೇರೆ ಭಾಗಗಳೆಂದು ಭಾವಿಸುತ್ತಾರೆ. ಆದುದರಿಂದ ಸುತ್ತಮುತ್ತಿನ ಸ್ಥಳಗಳವರು ಆ ಮೂರನ್ನೂ ಕಾಮಾರಪುಕುರ ವೆಂಬ ಒಂದೇ ಹೆಸರಿನಿಂದ ಕರೆಯುತ್ತಾರೆ. ಆ ಮೂರು ಗ್ರಾಮಗಳ ಜಮೀನ್‌ದಾರರು ಬಹುಕಾಲದಿಂದಲೂ ಈ ಗ್ರಾಮದಲ್ಲಿಯೇ ವಾಸ ಮಾಡುತ್ತಿದ್ದುದೇ ಅದಕ್ಕೆ ಕಾರಣವಿರಬಹುದು. ನಾವು ಯಾವಕಾಲದ ವಿಷಯವಾಗಿ ಬರೆಯುತ್ತಿರುವೆವೋ ಆ ಕಾಲದಲ್ಲಿ ಕಾಮಾರಪುಕುರವು ವರ್ಧಮಾನ ಮಹಾರಾಜರ ಗುರುವಂಶದವರ ಜಮೀನು ದಾರಿಯಲ್ಲಿ ಸೇರಿತ್ತು. ಅವರ ವಂಶದವರಾದ ಗೋಪೀಲಾಲ್, ಸುಖಲಾಲ್ ಮೊದಲಾದವರು ಅಲ್ಲಿ ವಾಸ ಮಾಡುತ್ತಿದ್ದರು.

ವರ್ಧಮಾನ (ಬದ್ವಾರ್ನ್) ಪಟ್ಟಣವು ಕಾಮಾರಪುಕುರಕ್ಕೆ ಉತ್ತರದಲ್ಲಿ ಸುಮಾರು ಅರುವತ್ತುಮೈಲಿ ದೂರದಲ್ಲಿದೆ. ಅಲ್ಲಿಂದ ಬರುವುದಕ್ಕೆ ದೊಡ್ಡ ರಸ್ತೆ ಇದೆ, ಅದು ಅಲ್ಲಿಗೇ ಮುಗಿಯುವುದಿಲ್ಲ, ಆ ಗ್ರಾಮವನ್ನು ಅರ್ಧ ಬಳಸಿಕೊಂಡು ನೈರುತ್ಯ ದಿಕ್ಕಿಗೆ ಪುರಿಯವರೆಗೂ ಹೋಗುತ್ತದೆ ಪಾದಚಾರಿಗಳಾದ ದರಿದ್ರ ಯಾತ್ರಿಕರೂ ವೈರಾಗ್ಯಶಾಲಿಗಳಾದ ಸಾಧುಗಳೂ ಈ ದಾರಿಯಲ್ಲಿ ಜಗನ್ನಾಥಸ್ವಾಮಿಯ ದರ್ಶನಕ್ಕಾಗಿ ಹೋಗಿಬರುತ್ತಾರೆ

ಕಾಮಾರಪುಕುರಕ್ಕೆ ಸುಮಾರು ಒಂಬತ್ತು ಹತ್ತು ಕ್ರೋಶ ಪೂರ್ವ ದಿಕ್ಕಿಗೆ ತಾರಕೇಶ್ವರ ಮಹಾದೇವರ ಪ್ರಸಿದ್ಧವಾದ ದೇವಸ್ಥಾನವಿದೆ ಅಲ್ಲಿಂದ ದಾರುಕೇಶ್ವರ ನದಿಯ ತೀರದಲ್ಲಿರುವ ಜಿಹಾನಾಬಾದ್ ಅಥವ ಆರಾಮ್ ಬಾಗಿನ ಮೂಲಕ ಕಾಮಾರಪುಕುರಕ್ಕೆ ಒಂದು ರಸ್ತೆ ಬರುತ್ತದೆ ಅದೂ ಅಲ್ಲದೆ ಆ ಗ್ರಾಮಕ್ಕೆ ಸುಮಾರು ಒಂಬತ್ತುಕ್ರೋಶ ದಕ್ಷಿಣದಲ್ಲಿರುವ ಘಾಟಾಲಿನಿಂದಲೂ, ಸುಮಾರು ಹನ್ನೊಂದು ಕ್ರೋಶ ಪಶ್ಚಿಮದಲ್ಲಿರುವ ವನವಿಷ್ಣುಪುರದಿಂದಲೂ ಅಲ್ಲಿಗೆ ಬರುವುದಕ್ಕೆ ಒಳ್ಳೆಯ ದಾರಿಗಳಿವೆ

**ಕಾಮಾರಪುಕುರ ಪ್ರಾಂತದ ಪೂರ್ವ ಕಾಲದ ಸಮೃದ್ಧಿ, ಈಗಿನ ಸ್ಥಿತಿ**

ಕ್ರಿ ಶ ೧೮೬೭ರಲ್ಲಿ ಮಲೇರಿಯ ರೋಗವು ಹುಟ್ಟುವುದಕ್ಕೆ ಮುಂಚೆ ಕೃಷಿಪ್ರಧಾನವಾದ ಬಂಗಾಳದ ಹಳ್ಳಿಪಳ್ಳಿಗಳಲ್ಲಿ ಎಂಥಾ ಅಪೂರ್ವವಾದ ಶಾಂತಿ ಇತ್ತೆಂದು ವರ್ಣಿಸುವುದು ಅಸಾಧ್ಯ ಅದರಲ್ಲಿಯೂ ಹೂಗ್ಲಿ ವಿಭಾ

ಗದ ಈ ಗ್ರಾಮಗಳ ವಿಸ್ತೀರ್ಣವಾದ ಭತ್ತದ ಪೈರುಗಳ ಮಧ್ಯದಲ್ಲಿದ್ದ ಸಣ್ಣ ಸಣ್ಣ ಹಳ್ಳಿಗಳು ವಿಶಾಲವಾದ ಹರಿತ್ಸಾಗರದಲ್ಲಿ ಕಂಗೊಳಿಸುವ ದ್ವೀಪ ಪುಂಜಗಳ ಹಾಗಿದ್ದವು. ಜಮೀನು ಫಲವತ್ತಾಗಿದ್ದುದರಿಂದ ಆಹಾರ ಪದಾರ್ಥಗಳ ಅಭಾವವಿರಲಿಲ್ಲ, ನಿರ್ಮಲವಾದ ವಾಯುವಿನಲ್ಲಿ ದಿನವೆಲ್ಲವೂ ಕೆಲಸಮಾಡುತ್ತಿದ್ದುದರಿಂದ ಗ್ರಾಮವಾಸಿಗಳು ಆರೋಗ ದೃಢಕಾಯರಾಗಿಯೂ, ಸರ್ವದಾ ಪ್ರೀತಿ ಸಂತೋಷಗಳಿಂದ ಕೂಡಿದ ಮನಸ್ಸುಳ್ಳವರಾಗಿಯೂ ಇದ್ದರು. ಬಹು ಜನಗಳಿದ್ದ ಗ್ರಾಮಗಳಲ್ಲಿ ಕೃಷಿಕಾರ್ಯವಲ್ಲದೆ ಸಣ್ಣಪುಟ್ಟ ಅನೇಕ ಶಿಲ್ಪ ಕಾರ್ಯಗಳನ್ನೂ ಜನರು ಮಾಡುತ್ತಿದ್ದರು. ಉತ್ಕೃಷ್ಟವಾದ ಜಿಲೇಬಿ, ಮಿಠಾಯಿ, ಬತ್ತಾಸುಗಳನ್ನು ಮಾಡುವುದರಲ್ಲಿ ಕಾಮಾರಪುಕುರವು ಆ ಪ್ರಾಂತದಲ್ಲೆಲ್ಲಾ ಹೆಸರುವಾಸಿಯಾಗಿತ್ತು, ಆವಲೂಷ ಕಟ್ಟಿಗೆಯಿಂದ ಮಾಡಿದ ಹುಕ್ಕಾದ ನಾಳವನ್ನು ಮಾಡಿ ಕಲ್ಕತ್ತೆಗೆ ಕಳುಹಿಸಿ ಆ ಊರಿನವರು ಈಗಲೂ ನಾಲ್ಕು ಕಾಸನ್ನು ಸಂಪಾದಿಸುತ್ತಾರೆ. ನೂಲುವುದರಲ್ಲಿಯೂ, ಬಟ್ಟೆಗಳನ್ನು ನೇಯುವುದರಲ್ಲಿಯೂ ಮತ್ತೆ ಕೆಲವು ಶಿಲ್ಪಗಳಲ್ಲಿಯೂ ಕಾಮಾರಪುಕುರವು ಒಂದು ಕಾಲದಲ್ಲಿ ಪ್ರಸಿದ್ಧವಾಗಿತ್ತು. ವಿಷ್ಣುಚಾಪಡಿ ಪ್ರಮುಖರಾದ ಕೆಲವು ಜನ ಪ್ರಖ್ಯಾತರಾದ ಸೇಗೆಯವರು ಈ ಗ್ರಾಮದಲ್ಲಿಯೇ ವಾಸವಾಗಿದ್ದು ಕಲ್ಕತ್ತೆಯೊಂದಿಗೆ ಸಾವಿರಾರು ರೂಪಾಯಿನ ವ್ಯವಹಾರ ಮಾಡುತ್ತಿದ್ದರು. ಪ್ರತಿಶನಿವಾರ ಮಂಗಳವಾರವೂ ಈ ಗ್ರಾಮದಲ್ಲಿ ಈಗಲೂ ಸಂತೆಯಾಗುತ್ತದೆ. ತಾರಾಹಾಟ್, ವದನಗಂಜ್, ಸಿಹರ್, ದುಶಿರಾ ಮೊದಲಾದ ನಾಲ್ಕು ಕಡೆಯ ಗ್ರಾಮಗಳಿಂದಲೂ ನೂಲು, ಬಟ್ಟೆ, ಚೌಕ, ಮಡಿಕ, ಮೊರ, ಕುಕ್ಕೆ, ಹಾಸುವ ಚಾಪೆ, ಬಿದರು ಚಾಪೆ ಇವೇ ಮೊದಲಾದ ದಿನಚರಿಯ ಜೀವನಕ್ಕೆ ಬೇಕಾದ ಪದಾರ್ಥಗಳನ್ನೂ ಧವಸ ಧಾನ್ಯಗಳನ್ನೂ ಕಾಮಾರ ಪುಕುರಕ್ಕೆ ತಂದು ಕ್ರಯ ವಿಕ್ರಯ ಮಾಡುತ್ತಾರೆ. ಆ ಊರಿನಲ್ಲಿ ಈಗಲೂ ಆನಂದೋತ್ಸವಗಳಿಗೆ ಕಡಮೆಯಿಲ್ಲ. ಚೈತ್ರಮಾಸದಲ್ಲಿ ಮನಸಾ ದೇವಿಯಪೂಜೆ ಶಿವನ ಕೀರ್ತನೆ. ವೈಶಾಖ ಅಥವಾ ಜ್ಯೇಷ್ಠಮಾಸದಲ್ಲಿ ಇಪ್ಪತ್ತನಾಲ್ಕು ಗಂಟೆಯೂ ಹರಿವಾಸರದ ಗಲಭೆ. ಅದಲ್ಲದೆ ಜಮೀನ್ದಾರರ ಮನೆಯಲ್ಲಿ ಹನ್ನೆರಡು ತಿಂಗಳೂ ಸಮಸ್ತ ಪ್ರಕಾರವಾದ ಹಬ್ಬ ಹರಿದಿನಗಳು, ಅವರು ಪ್ರತಿಷ್ಠಿಸಿದ ದೇವಾಲಯಗಳಲ್ಲಿ ನಿತ್ಯಪೂಜೆ ಪಾರ್ವಣಾದಿಗಳು ನಡೆಯುತ್ತಿದ್ದುವು. ಈಗ ಬಡತನದ ಪ್ರಭಾವದಿಂದ ಇವುಗಳಲ್ಲಿ ಅನೇಕ ಹಬ್ಬಗಳು ನಿಂತುಹೋಗಿವೆ.

ಆ ಪ್ರಾಂತದಲ್ಲಿ ಧರ್ಮಠಾಕೂರನ ಪೂಜೆ

ಈ ಸ್ಥಳದಲ್ಲಿ ಧರ್ಮಠಾಕೂರನ ಪೂಜೆಯೂ ಒಂದಾನೊಂದು ಕಾಲದಲ್ಲಿ ಬಹು ವಿಜೃಂಭಣೆಯಿಂದ ನಡೆಯುತ್ತಿತ್ತು. ಈಗ ಆ ಕಾಲವಿಲ್ಲ, ಬೌದ್ಧ ತ್ರಿರತ್ನಗಳಲ್ಲಿ ಒಬ್ಬನಾದ ಶ್ರೀಧರ್ಮನನ್ನು ಈಗ ಕೂರ್ಮಮೂರ್ತಿಯೆಂದು ಭಾವಿಸಿ, ಆ ಊರಿನಲ್ಲಿಯೂ ಸುತ್ತುಮುತ್ತಿನ ಗ್ರಾಮಗಳಲ್ಲಿಯೂ ಸಾಮಾನ್ಯವಾಗಿ ಮಾತ್ರ ಪೂಜೆ ಮಾಡುತ್ತಾರೆ. ಒಂದೊಂದು ಸಮಯದಲ್ಲಿ ಬ್ರಾಹ್ಮಣರೂ ಈ ಮೂರ್ತಿಯನ್ನು ಪೂಜೆ ಮಾಡುವಂತೆ ಕಂಡು ಬರುತ್ತದೆ ಧರ್ಮಠಾಕೂರನ ಹೆಸರು ಬೇರೆ ಬೇರೆ ಗ್ರಾಮಗಳಲ್ಲಿ ಬೇರೆ ಬೇರೆಯಾಗಿರುತ್ತದೆ. ಕಾಮಾರಪುಕುರದಲ್ಲಿ ಧರ್ಮಠಾಕೂರನಿಗೆ "ರಾಜಾಧಿ ರಾಜಧರ್ಮ" ಎಂದೂ, ಶ್ರೀಪುರದಲ್ಲಿ "ಯಾತ್ರಾಸಿದ್ಧಿರಾಯಧರ್ಮ" ಎಂದೂ, ಮುಕುಂದಪುರದ ಹತ್ತಿರವಿರುವ ಮಧುವಾಟೀ ಗ್ರಾಮದಲ್ಲಿ "ಸನ್ಯಾಸೀರಾಯ ಧರ್ಮ" ಎಂದೂ ಹೆಸರುಗಳಿವೆ ಕಾಮಾರಪುಕುರದಲ್ಲಿ ಪ್ರತಿಷ್ಠಿತವಾಗಿರುವ ಧರ್ಮ ಠಾಕೂರನ ರಥೋತ್ಸವವೂ ಹಿಂದೆ ಒಂದು ಕಾಲದಲ್ಲಿ ಮಹಾ ಸಮಾರಂಭದಿಂದ ನಡೆಯುತ್ತಿತ್ತು ಒಂಬತ್ತು ಅಂತಸ್ತುಗಳಿಂದ ಕೂಡಿದ ಉನ್ನತವಾದ ರಥವು ಆಗ ಆ ದೇವಸ್ಥಾನದ ಬಳಿಯಲ್ಲಿ ನಿತ್ಯವೂ ಕಣ್ಣಿಗೆ ಕಾಣುತ್ತಿತ್ತು. ಮುರಿದುಹೋದಮೇಲೆ ಪುನಃ ಈ ರಥವನ್ನು ಯಾರೂ ನಿರ್ಮಿಸಲಿಲ್ಲ. ಧರ್ಮ ಠಾಕೂರನ ದೇವಸ್ಥಾನವೂ ನೋಡಿಕೊಳ್ಳುವರಿಲ್ಲದೆ ನಶಿಸಮವಾಗುವ ಸ್ಥಿತಿಗೆ ಬಂದುದನ್ನು ನೋಡಿ ಧರ್ಮಪಂಡಿತ ಯಜ್ಞೇಶ್ವರನು ತನ್ನ ಮನೆಯಲ್ಲಿ ಆ ದೇವರನ್ನು ಈಗಲೂ ಇಟ್ಟಿದ್ದಾನೆ

ಹಾಲ್‌ದಾರ್ ಪುಕೂರ, ಭೂತೀರ ಖಾಲ್, ಆಮ್ರಕಾನನ ಮುಂತಾದವುಗಳ ವಿಚಾರ

ಬ್ರಾಹ್ಮಣ, ಕಾಯಸ್ಥ, ನೇಯಿಗೇಯವ, ಗೊಲ್ಲ, ಕಮ್ಮಾರ, ಕುಂಬಾರ, ಬೆಸ್ತ, ಸ್ಮಶಾನಕಾಯುವವ, ಮುಂತಾದ ಉಚ್ಚನೀಚ ಜಾತಿಯ ಜನಗಳೆಲ್ಲರಿಗೂ ಕಾಮಾರಪುಕುರದಲ್ಲಿ ವಸತಿ ಇದೆ ಗ್ರಾಮದಲ್ಲಿ ಮೂರು ನಾಲ್ಕು ದೊಡ್ಡ ಪುಷ್ಕರಣಿಗಳಿವೆ ಅವುಗಳಲ್ಲೆಲ್ಲಾ ಹಾಲದಾರ್ ಪುಷ್ಕರಣಿಯೇ ಎಲ್ಲಕ್ಕಿಂತಲೂ ದೊಡ್ಡದು ಅವಲ್ಲದೆ ಸಣ್ಣ ಪುಷ್ಕರಣಿಗಳು ಅನೇಕ ಇವೆ ಅವುಗಳಲ್ಲಿ ಕೆಲವು ಕಮಲ, ಕುಮುದ, ಕಲ್ಹಾರ ಮೊದಲಾದ ಪುಷ್ಪಗಳಿಂದ ಒಪ್ಪುತ್ತಿವೆ ಗ್ರಾಮದಲ್ಲಿ ಇಟ್ಟಿಗೆಯಿಂದ ಕಟ್ಟಿದ ಮನೆಗಳೂ ಸಮಾಧಿಗಳೂ ಇಲ್ಲದೇ ಹೋಗಿಲ್ಲ. ಹಿಂದಿನ ಕಾಲದಲ್ಲಿ ಅವುಗಳ

ಸಂಖ್ಯೆಯು ಹೆಚ್ಚಾಗಿತ್ತು. ರಾಮಾನಂದಶಾಂಖಾರಿಯ ಭಗ್ನದೇವಾಲಯ, ಫಕೀರದತ್ತನ ಜೀರ್ಣರಾಸಮಂಚ, ಕಾಡು ಬೆಳೆದಿರುವ ಇಟ್ಟಿಗೆಯ ಸ್ತೂಪ, ಹಾಳು ಬಿದ್ದಿರುವ ದೇವಾಲಯಗಳು ಮೊದಲಾದುವು ಅನೇಕ ಕಡೆಗಳಲ್ಲಿ ಈಗಲೂ ಇದ್ದು, ಈ ವಿಷಯಕವಾದ ಮತ್ತು ಗ್ರಾಮದ ಪೂರ್ವಸಮೃದ್ಧಿಯ ಪರಿಚಯವನ್ನುಂಟುಮಾಡಿಕೊಡುತ್ತವೆ. ಗ್ರಾಮದ ಈಶಾನ್ಯ ಮತ್ತು ವಾಯವ್ಯ ಮೂಲೆಗಳಲ್ಲಿ "ಬುದುಯಿಮೋಡಲ್" ಮತ್ತು "ಭೂತೀರಖಾಲ್" ಎಂಬ ಎರಡು ಸ್ಮಶಾನಗಳಿವೆ. ಹಿಂದೆ ಹೇಳಿದ ಸ್ಥಳಕ್ಕೆ ಪಶ್ಚಿಮದಲ್ಲಿ ಗೋಮಾಳವೂ ಮಾಣಿಕರಾಜನು ಹಾಕಿಸಿದ ಮಾವಿನ ತೋಪೂ, ಆಮೋದರ ನದಿಯೂ ಇವೆ. ಭೂತೀರಖಾಲ್ ಎಂಬುದು ದಕ್ಷಿಣಕ್ಕೆ ಹರಿದು ಗ್ರಾಮದ ಹತ್ತಿರವೇ ಮೇಲೆ ಹೇಳಿದ ನದಿಯೊಂದಿಗೆ ಸಂಗಮವಾಗುತ್ತದೆ.

**ಭೂರಸುಬೋ ಗ್ರಾಮದ ಮಾಣಿಕರಾಜ**

ಕಾಮಾರಪುಕುರಕ್ಕೆ ಅರ್ಧಕ್ರೋಶ ಉತ್ತರದಲ್ಲಿ ಭೂರಸುಬೊ ಎಂಬ ಗ್ರಾಮವಿದೆ. ಮಾಣಿಕಚಂದ್ರ ವಂಧ್ಯೋಪಾಧ್ಯಾಯನೆಂಬ ಒಬ್ಬ ಬಹು ಧನಾಢ್ಯನು ಆ ಊರಲ್ಲಿ ವಾಸಮಾಡುತ್ತಿದ್ದನು. ಸುತ್ತುಮುತ್ತಿನ ಹಳ್ಳಿಗಳಲ್ಲೆಲ್ಲ "ಮಾಣಿಕರಾಜ" ಎಂಬ ಹೆಸರಿನಿಂದ ಆತನು ಪ್ರಸಿದ್ಧನಾಗಿದ್ದನು. ಮೇಲೆ ಹೇಳಿದ ಮಾವಿನ ತೋಪೂ ಅಲ್ಲದೆ "ಸುಖಸಾಗರ" "ಹಸ್ತಿಸಾಗರ" ಮುಂತಾದ ದೊಡ್ಡ ಕೊಳಗಳು ಈಗಲೂ ಆತನ ಕೀರ್ತಿಯನ್ನು ಕೊಂಡಾಡುತ್ತಿವೆ. ಆತನ ಮನೆಯಲ್ಲಿ ಅನೇಕಸಲ ಲಕ್ಷಬ್ರಾಹ್ಮಣ ಸಂತರ್ಪಣೆ ನಡೆಯಿತೆಂದು ತಿಳಿದು ಬರುತ್ತದೆ.

**ಮಂದಾರಣ ದುರ್ಗ**

ಕಾಮಾರಪುಕುರದ ಆಗ್ನೇಯದಿಕ್ಕಿನಲ್ಲಿ ಮಂದಾರಣವೆಂಬ ಗ್ರಾಮವಿದೆ. ಸುತ್ತುಮುತ್ತಿನ ಹಳ್ಳಿಗಳನ್ನು ಶತ್ರುಗಳು ಮುತ್ತಿದಾಗ ರಕ್ಷಿಸುವುದಕ್ಕಾಗಿ ಹಿಂದೆ ಯಾವುದೋ ಒಂದು ಕಾಲದಲ್ಲಿ ಅಲ್ಲಿ ಒಂದು ದುರ್ಭೇದ್ಯವಾದ ದುರ್ಗವು ನಿರ್ಮಾಣವಾಗಿತ್ತು. ಹತ್ತಿರದಲ್ಲಿಯೇ ಹರಿಯುತ್ತಿದ್ದ ಆಮೋದರ ನದಿಯನ್ನು ಕೌಶಲದಿಂದ ತಿರುಗಿಸಿ ದುರ್ಗದ ಕಂದಕದಲ್ಲಿ ನೀರು ತುಂಬುವಂತೆ ಮಾಡಿದ್ದರು.

**ಉಚಾಲನದ ಕೊಳ ಮತ್ತು ಮೊಗಲ್ ಮಾರಿ (ರಣರಂಗ)**

ಮಂದಾರಣ ದುರ್ಗದ ಹಾಳು ತೋರಣ, ಸ್ತೂಪ, ಕಂದಕ ಮುಂತಾದವುಗಳೂ ಅದಕ್ಕೆ ಸಮೀಪದಲ್ಲಿಯೇ ಇರುವ ಶೈಲೇಶ್ವರನ ದೇವಸ್ಥಾನವೂ ಈಗಲೂ ಇವೆ.

ಅವುಗಳನ್ನು ನೋಡಿದರೆ ಪರಾನರ ಕಾಲದಲ್ಲಿ ಆ ಸ್ಥಳಗಳು ಎಷ್ಟು ಪ್ರಸಿದ್ಧಿಯಾಗಿದ್ದುವು ಎಂಬುದು ಗೊತ್ತಾಗುತ್ತದೆ. ಹಿಂದೆ ಹೇಳಿರುವ ಬದರ್ನಿಗೆ ಹೋಗಿ ಬರುವ ಮಾರ್ಗವು ಮಂದಾರಣ ದುರ್ಗದ ಪಾರ್ಶ್ವದಲ್ಲಿಯೇ ಇದೆ. ಈ ಮಾರ್ಗದ ಎರಡು ಕಡೆಗಳಲ್ಲಿಯೂ ಅನೇಕ ದೊಡ್ಡ ಕೊಳಗಳಿವೆ. ಮಂದಾರಣ ದುರ್ಗಕ್ಕೆ ಸುಮಾರು ಒಂಬತ್ತು ಕ್ರೋಶ ಉತ್ತರದಲ್ಲಿರುವ ಉಚಾಲನವೆಂಬ ಸ್ಥಳದಲ್ಲಿರುವ ಕೊಳವೇ ಅವುಗಳಲ್ಲೆಲ್ಲ ಅತ್ಯಂತ ದೊಡ್ಡದು. ಆ ದಾರಿಯಲ್ಲಿಯೇ ಒಂದು ಕಡೆ ಪಾಳುಬಿದ್ದಿರುವ ಗಜಶಾಲೆಯು ಕಂಡು ಬರುತ್ತದೆ. ಇದೆಲ್ಲವನ್ನೂ ನೋಡಿದರೆ ಸೈನ್ಯಗಳ ಸೌಕರ್ಯಕ್ಕಾಗಿಯೇ ಈ ದಾರಿಯು ನಿರ್ಮಿತವಾಯಿತೆಂದು ಮನಸ್ಸಿಗೆ ತೋರಿಬರುತ್ತದೆ ದಾರಿಯ ಮಧ್ಯಭಾಗದಲ್ಲಿರುವ ಮೊಗಲ್‌ಮುರಿ ಎಂಬ ಪ್ರಸಿದ್ಧವಾದ ಯುದ್ಧಕ್ಷೇತ್ರವು ಇದಕ್ಕೆ ಸಾಕ್ಷಿಯಾಗಿದೆ

**ದೇರೇಗ್ರಾಮದ ಜಮೀನ್‌ದಾರನಾದ ರಾಮಾನಂದ ರಾಯನ ವಿಷಯ**

ಕಾಮಾರಪುಕುರಕ್ಕೆ ಪಶ್ಚಿಮದಿಕ್ಕಿನಲ್ಲಿ ಸುಮಾರು ಒಂದು ಹರದಾರಿಯ ದೂರದಲ್ಲಿ ಸಾತ್‌ಬೇರೆ, ನಾರಾಯಣಪುರ, ದೇರೆ ಎಂಬ ಮೂರು ಗ್ರಾಮಗಳು ಹತ್ತಿರ ಹತ್ತಿರ ಇವೆ ಈ ಗ್ರಾಮಗಳೆಲ್ಲವೂ ಹಿಂದೆ ಒಂದು ಕಾಲದಲ್ಲಿ ಸಂಪತ್ತಿನಿಂದ ಕೂಡಿದ್ದುವು ದೇರೆಯ ಕೊಳ, ಅದರ ಹತ್ತಿರವಿರುವ ದೇವಾಲಯ, ಮುಂತಾದವುಗಳನ್ನು ನೋಡಿದರೆ ಹೀಗೆ ಊಹಿಸಲು ಕಾರಣವಿದೆಯೆಂದು ಗೊತ್ತಾಗುತ್ತದೆ ನಾವು ಯಾವ ಕಾಲದ ವಿಷಯವಾಗಿ ಮಾತನಾಡುತ್ತಿರುವೆವೋ ಆ ಕಾಲದಲ್ಲಿ ಆ ಮೂರು ಗ್ರಾಮಗಳೂ ಬೇರೆ ಜಮೀನ್‌ದಾರರಿಗೆ ಸೇರಿದ್ದುವು. ಆ ಗ್ರಾಮಗಳ ಜಮೀನ್‌ದಾರನಾದ ರಾಮಾನಂದ ರಾಯನು ಸಾತ್‌ಬೇರೆ ಗ್ರಾಮದಲ್ಲಿ ವಾಸಮಾಡುತ್ತಿದ್ದನು ಈ ಜಮೀನ್‌ದಾರನು ವಿಶೇಷ ಧನಾಢ್ಯನಲ್ಲದೇ ಇದ್ದರೂ ಜನಗಳನ್ನು ಬಹಳವಾಗಿ ಹಿಂಸಿಸುತ್ತಿದ್ದನು ಯಾವುದಾದರೊಂದು ಕಾರಣದಿಂದ ಯಾರಮೇಲಾದರೂ ಕೋಪಿಸಿಕೊಂಡರೆ ಅವನು ಅಂಥಾ ಮನುಷ್ಯನ ಸರ್ವಸ್ವವನ್ನೂ ನಾಶಮಾಡಲು ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ ಅವನ ಮಕ್ಕಳಾರೂ ಜೀವಂತರಾಗಿ ಉಳಿದಿರಲಿಲ್ಲ. ಪ್ರಜಾಪೀಡನ ಪಾಪದಿಂದಲೇ ಅವನು ನಿರ್ವಂಶನಾದನೆಂದೂ ಸತ್ತಮೇಲೆ ಅವನ ಆಸ್ತಿಯೆಲ್ಲವೂ ಕಂಡವರ ಪಾಲಾಯಿತೆಂದೂ ಜನಗಳು ಹೇಳುತ್ತಾರೆ.

ದೇರೇಗ್ರಾಮದ ಮಾಣಿಕರಾಮ ಚಟ್ಟೋಪಾಧ್ಯಾಯ.

ಸುಮಾರು ಒಂದೂವರೆ ಶತಮಾನಕ್ಕೆ ಹಿಂದೆ ಸಾಮಾನ್ಯ ಸ್ಥಿತಿಯಲ್ಲಿದ್ದ ಧರ್ಮನಿಷ್ಠವಾದ ಬ್ರಾಹ್ಮಣ ಸಂಸಾರವೊಂದು ದೇರೇ ಗ್ರಾಮದಲ್ಲಿ ವಾಸವಾಗಿತ್ತು. ಅವರು ಸದಾಚಾರಸಂಪನ್ನರೂ ಕುಲೀನರೂ ರಾಮಚಂದ್ರನ ಉಪಾಸಕರೂ ಆಗಿದ್ದರು. ಅವರು ಪ್ರತಿಷ್ಠೆಮಾಡಿದ ಶಿವಾಲಯದೊಡನೆ ಕೂಡಿದ ಪುಷ್ಕರಿಣಿಯು "ಚಾಟುರ್ಯೇಪುಕೂರ್" ಎಂಬ ಹೆಸರಿನಿಂದ ಈಗಲೂ ಪ್ರಖ್ಯಾತವಾಗಿದೆ. ಆ ವಂಶದವನಾದ ಮಾಣಿಕರಾಮ ಚಟ್ಟೋಪಾಧ್ಯಾಯನಿಗೆ ಮೂವರು ಗಂಡುಮಕ್ಕಳೂ ಒಬ್ಬ ಮಗಳೂ ಆಗಿದ್ದರು. ಅವರಲ್ಲಿ ಹಿರಿಯವನಾದ ಕ್ಷುದಿರಾಮನು ಕ್ರಿ. ಶ. ೧೭೭೫ನೇ ವರ್ಷದಲ್ಲಿ ಹುಟ್ಟಿದನು. ಆಮೇಲೆ ರಾಮಶೀಲಾ ಎಂಬ ಮಗಳೂ ನಿಧಿರಾಮ, ಕನಾಯಿರಾಮ ಎಂಬ ಇಬ್ಬರು ಗಂಡುಮಕ್ಕಳೂ ಆದರು.

ಆತನ ಮಗ ಕ್ಷುದಿರಾಮ

ಕ್ಷುದಿರಾಮನು ಪ್ರಾಪ್ತವಯಸ್ಕನಾದಾಗ ಜೀವನೋಪಾಯಕ್ಕೆ ಬೇಕಾದ ಯಾವದಾದರೂ ವಿದ್ಯೆಯನ್ನು ಕಲಿತಿದ್ದನೋ ಇಲ್ಲವೋ ಗೊತ್ತಿಲ್ಲ. ಆದರೆ ಸದ್ಬ್ರಾಹ್ಮಣನಲ್ಲಿ ಸ್ವಭಾವಸಿದ್ಧವಾಗಿರಬೇಕಾದುವು ಎಂದು ಶಾಸ್ತ್ರಗಳು ಹೇಳುವ ಸತ್ಯನಿಷ್ಠೆ, ಸಂತೋಷ, ಕ್ಷಮೆ, ತ್ಯಾಗ ಮುಂತಾದ ಸದ್ಗುಣಗಳನ್ನು ಬ್ರಹ್ಮನು ಆತನಿಗೆ ಬೇಕಾದಹಾಗೆ ಕೊಟ್ಟಿದ್ದನು. ಆತನು ಆಜಾನುಬಾಹುವಾಗಿಯೂ ದೃಢಕಾಯನಾಗಿಯೂ ಇದ್ದನು, ಬಣ್ಣದಲ್ಲಿ ಬೆಳ್ಳಗೂ ನೋಡುವುದಕ್ಕೆ ಪ್ರಿಯನಾಗಿಯೂ ಇದ್ದನು. ವಂಶಾನುಗತವಾಗಿ ಬಂದ ರಾಮಚಂದ್ರನ ಮೇಲಿನ ಭಕ್ತಿಯು ಆತನಲ್ಲಿ ವಿಶೇಷವಾಗಿ ಪ್ರಕಾಶಿಸುತ್ತಿತ್ತು. ಆತನು ಪ್ರತಿನಿತ್ಯವೂ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಅನುಷ್ಠಾನ ಮಾಡಿದಮೇಲೆ ಪುಷ್ಪಚಯನ ಪೂರ್ವಕವಾಗಿ ರಘುವೀರನನ್ನು ಪೂಜೆಮಾಡಿ ಜಲಗ್ರಹಣ ಮಾಡುತ್ತಿದ್ದನು. ಶೂದ್ರರಿಂದ ದಾನವನ್ನು ತೆಗೆದುಕೊಳ್ಳುವುದು ಹೋಗಲಿ, ಶೂದ್ರಯಾಜಿಗಳಾದ ಬ್ರಾಹ್ಮಣರ ನಿಮಂತ್ರಣವನ್ನೂ ಗ್ರಹಣಮಾಡುತ್ತಿರಲಿಲ್ಲ. ಹಣವನ್ನು ತೆಗೆದುಕೊಂಡು ಹೆಣ್ಣು ಕೊಡುತ್ತಿದ್ದ ಬ್ರಾಹ್ಮಣರು ಮುಟ್ಟಿದ ನೀರನ್ನು ಕೂಡಾ ಕುಡಿಯುತ್ತಿರಲಿಲ್ಲ. ಹೀಗೆ ನಿಷ್ಠನೂ ಸದಾಚಾರಿಯೂ ಆಗಿದ್ದುದರಿಂದ ಆ ಗ್ರಾಮವಾಸಿಗಳು ಆತನನ್ನು ಬಹಳ ಭಕ್ತಿಯಿಂದಲೂ ಗೌರವದಿಂದಲೂ ಕಾಣುತ್ತಿದ್ದರು.

**ಕ್ಷುದಿರಾಮನ ಭಾರ್ಯೆ ಚಂದ್ರಾ ದೇವಿ**

ತಂದೆಯು ಮೃತನಾದ ಮೇಲೆ ಸಂಸಾರವನ್ನು ನಡೆಸುವುದು, ದ್ರವ್ಯಾರ್ಜನೆ ಇವುಗಳು ಕ್ಷುದಿರಾಮನ ಕುತ್ತಿಗೆಗೆ ಬಿದ್ದವು ಆತನು ಧರ್ಮಮಾರ್ಗವನ್ನು ಬಿಟ್ಟು ಚಲಿಸದೆ ಆ ಕಾರ್ಯಗಳನ್ನೆಲ್ಲ ಯಥಾಸಾಧ್ಯವಾಗಿ ನಿರ್ವಹಿಸುತ್ತಿದ್ದನು ಇದಕ್ಕೆ ಮೊದಲೇ ವಿವಾಹವಾಗಿ ಸಂಸಾರದಲ್ಲಿ ಪ್ರವೇಶಮಾಡಿದ್ದರೂ, ಆತನ ಹಂಡತಿಯು ಅಲ್ಪವಯಸ್ಸಿನಲ್ಲಿಯೇ ದೈವಾಧೀನಳಾದಳು ಆದುದರಿಂದ ಸುಮಾರು ೨೫ ವರ್ಷ ವಯಸ್ಸಾದಾಗ ಆತನು ಪುನಃ ಎರಡನೆಯ ಸಲ ಲಗ್ನವಾದನು ಆತನ ಎರಡನೆಯ ಹೆಂಡತಿಯ ಹೆಸರು ಶ್ರೀಮತಿ ಚಂದ್ರಮಣಿ , ಆದರೆ ಮನೆಯಲ್ಲಿ ಆಕೆಯನ್ನು " ಚಂದ್ರಾ " ಎಂದು ಕರೆಯುತ್ತಿದ್ದರು ಆಕೆಯ ತವರುಮನೆಯು ಸರಾಟಿಮಾಯಾಪುರದಲ್ಲಿತ್ತು. ಆಕೆಯು ಸುರೂಪಿ, ಸರಳೆ, ದೇವದ್ವಿಜಪರಾಯಣಳು ಆದರೂ ಆಕಯ ಹೃದಯದ ಅಪಾರವಾದ ಶ್ರದ್ಧಾ, ಸ್ನೇಹ ಪ್ರೇಮಗಳೇ ಆಕಯ ವಿಶೇಷ ಗುಣಗಳೆಂದು ನಿರ್ದೇಶಮಾಡಬಹುದು. ಈ ಗುಣಗಳಿಂದ ಆಕೆಯು ಸಂಸಾರದಲ್ಲಿ ಪ್ರತಿಯೊಬ್ಬರಿಗೂ ಪ್ರಿಯಳಾಗಿದ್ದಳು ಸುಮಾರು ಬಂ ಶ ಸ॥ ೧೧೯೭ ರಲ್ಲಿ ಚಂದ್ರಮಣಿಯು ಹುಟ್ಟಿದಳು ಆದುದರಿಂದ ಸ॥ ೧೨೦೫ ರಲ್ಲ ಆಕೆಗೆ ಮದುವೆಯಾದಾಗ ಆಕೆಗೆ ಎಂಟೇ ವರ್ಷ ವಯಸ್ಸಾಗಿತ್ತು ಸುಮಾರು ಸ॥ ೧೨೧೧ ರಲ್ಲಿ ಆಕೆಯ ಹಿರಿಯಮಗ ರಾಮಕುಮಾರನು ಹುಟ್ಟಿದನು ಆದಾದ ಐದು ವರ್ಷಗಳವೇಲೆ ಕಾತ್ಯಾಯನಿ ಎಂಬ ಮಗಳೂ ೧೨೩೨ ರಲ್ಲಿ ಎರಡನೆಯ ಮಗ ರಾಮೇಶ್ವರನೂ ಹುಟ್ಟಿದರು

**ಜಮೀನ್ ದಾರ ನೊಂದಿಗೆ ವಿವಾದ. ಕ್ಷುದಿರಾಮನು ಸರ್ವಸ್ವವನ್ನೂ ಕಳೆದುಕೊಂಡುದು**

ಧರ್ಮಮಾರ್ಗದಲ್ಲಿದ್ದು ಸಂಸಾರ ಯಾತ್ರೆಯನ್ನು ನಿರ್ವಹಿಸುವುದು ಎಷ್ಟು ಕಠಿನವಾದ ಕೆಲಸ ಎಂಬುದು ಕ್ಷುದಿರಾಮನಿಗ ಹೃದಯಂಗಮವಾಗಿ ಗೊತ್ತಾಗುವುದಕ್ಕೆ ವಿಳಂಬವಾಗಲಿಲ್ಲ ಬಹುಶಃ ಆತನಮಗಳು ಕಾತ್ಯಾಯನಿ ಹುಟ್ಟಿದ ಮೇಲೆ ಸ್ವಲ್ಪ ಕಾಲಕ್ಕೆ ಆತನು ವಿಷಮ ಪರೀಕ್ಷೆಯಲ್ಲಿ ಬಿದ್ದನು ಗ್ರಾಮದ ಜಮೀನ್‌ದಾರ ರಾಮಾನಂದರಾಯನ ಪ್ರಜಾಪೀಡನದ ವಿಷಯವನ್ನು ನಾವು ಹಿಂದೆಯೇ ತಿಳಿಸಿದ್ದೇವೆ ಆತನು ದೇರೇಗ್ರಾಮದ ಯಾವನೋ ಒಬ್ಬ ಮನುಷ್ಯನಲ್ಲಿ ಅಸಂತುಷ್ಟನಾಗಿ ಆಗ ಸುಳ್ಳು ಸುಳ್ಳೇ ಕೋರ್ಟಿನಲ್ಲಿ ದಾವಾ ದಾಖಲು ಮಾಡಿದನು. ಸಂಜಕೆಗೆ

ಅರ್ಹನಾದ ಸಾಕ್ಷಿಯೊಬ್ಬನು ಬೇಕಾಗಿದ್ದುದರಿಂದ ಕ್ಷುದಿರಾಮನನ್ನು ತನ್ನ ಪಕ್ಷವಾಗಿ ಸಾಕ್ಷಿ ಹೇಳಬೇಕೆಂದು ನಿರ್ಬಂಧಪಡಿಸಿದನು. ಧರ್ಮಪರಾಯಣನಾದ ಕ್ಷುದಿರಾಮನು ಕಾನೂನು ಕಚೇರಿಯೆಂದರೆ ಭಯಪಡುತ್ತಿದ್ದನು; ಅಲ್ಲದೆ ಸಂಗತಿಯು ಸತ್ಯವಾದರೂ ತತ್ಪೂರ್ವದಲ್ಲಿ ಯಾವಾಗಲೂ ಯಾರೂ ಯಾರ ವಿರುದ್ಧವಾಗಿಯೂ ಆತನ ಸಹಾಯವನ್ನು ಕೇಳಿರಲಿಲ್ಲ. ಆದುದರಿಂದ ಹಿಂದೆ ಹೇಳಿದಂತೆ ಜಮೀನ್ದಾರನು ಆತನನ್ನು ನಿರ್ಬಂಧಪಡಿಸಿದಾಗ ವಿಪತ್ತಿಗೊಳಗಾದೆನೆಂದು ತಿಳಿದುಕೊಂಡನು. ಆದರೂ ಸುಳ್ಳು ಸಾಕ್ಷಿಯನ್ನು ಹೇಳದೆ ಹೋದರೆ ಜಮೀನ್ದಾರನ ವಿಷಮ ಕೋಪಕ್ಕೆ ಪಾತ್ರನಾಗಬೇಕಾಗುತ್ತದೆಂಬುದನ್ನು ಸ್ಪಷ್ಟವಾಗಿ ತಿಳಿದಿದ್ದರೂ ಆತನು ಒಪ್ಪಲಿಲ್ಲ ಆದ್ದರಿಂದ ಇಂತಹ ಸಂದರ್ಭದಲ್ಲಿ ಆಗತಕ್ಕದ್ದೇ ಆಯಿತು. ಜಮೀನ್ದಾರನು ಆತನ ಮೇಲೆಯೂ ಸುಳ್ಳು ಮೊಕದ್ದಮೆಯನ್ನು ತಂದು, ಮೊಕದ್ದಮೆಯಲ್ಲಿ ಗೆದ್ದು ಆತನ ಪಿತ್ರಾರ್ಜಿತ ಸ್ವತ್ತನ್ನೆಲ್ಲಾ ಹರಾಜುಮಾಡಿಸಿ ತೆಗೆದುಕೊಂಡುಬಿಟ್ಟನು. ಕ್ಷುದಿರಾಮನಿಗೆ ದೇರೆಯಲ್ಲಿರಲು ಸಾಸಿವೆ ಕಾಳಿನಷ್ಟು ಸ್ಥಳವೂ ಇಲ್ಲವಾಯಿತು ಗ್ರಾಮದವರೆಲ್ಲರೂ ಆತನ ದುಃಖದಿಂದ ನಿಜವಾಗಿಯೂ ಕಾತರರಾದರು, ಆದರೂ ಜಮೀನ್ದಾರನಿಗೆ ವಿರುದ್ಧವಾಗಿ ಆತನಿಗೆ ಸಹಾಯ ಮಾಡಲು ಯಾರಿಗೂ ಸಾಧ್ಯವಿರಲಿಲ್ಲ.

**ಕ್ಷುದಿರಾಮನು ದೇರೆಯನ್ನು ಬಿಟ್ಟು ಹೊರಟು ಹೋದುದು**

ಈ ಪ್ರಕಾರವಾಗಿ ಸುಮಾರು ನಲವತ್ತುವರ್ಷ ವಯಸ್ಸಾದಾಗ ಕ್ಷುದಿರಾಮನು ಇದ್ದಕ್ಕಿದ್ದಹಾಗೆ ನಿರ್ಗತಿಕನಾದನು. ಪಿತ್ರಾರ್ಜಿತವಾದ ಆಸ್ತಿಯೂ ತಾನು ಸಂಪಾದಿಸಿದ ಆಸ್ತಿಯೂ ಗಾಳಿಯಿಂದ ಬಡಿದುಕೊಂಡು ಹೋದ ಮೇಘದಂತೆ ಈಗ ಎಲ್ಲವೂ ಒಂದೇಸಲ ಹೊರಟುಹೋಯಿತು. ಆದರೂ ಆತನು ಇದರಿಂದ ಧರ್ಮಮಾರ್ಗವನ್ನು ಬಿಟ್ಟು ಬಿಂದು ಮಾತ್ರವೂ ಚಲಿಸಲಿಲ್ಲ ಆತನು ಶ್ರೀ ರಘುವೀರನ ಪಾದಪದ್ಮಗಳಲ್ಲಿ ಒಮ್ಮನಸ್ಸಿನಿಂದ ಶರಣುಹೋಗಿ ಸ್ಥಿರಚಿತ್ತದಿಂದ ತನ್ನ ಕರ್ತವ್ಯವೇನೆಂಬುದನ್ನು ನಿರ್ಧರಿಸಿ ದುರ್ಜನರನ್ನು ಬಿಟ್ಟು ದೂರ ಇರುವ ನಿಮಿತ್ತವಾಗಿ ವಂಶಪಾರಂಪರ್ಯವಾಗಿ ಬಂದ ಮನೆಯನ್ನೂ ಸ್ವಗ್ರಾಮವನ್ನೂ ಬಿಟ್ಟು ಹೊರಟು ಹೋದನು.

**ಸುಖಲಾಲಗೋಸ್ವಾಮಿಯ ಇಷ್ಟ**

ಕಾಮಾರಪುಕುರದ ಸುಖಲಾಲಗೋಸ್ವಾಮಿಯ ವಿಷಯವನ್ನು ನಾವು ಹಿಂದೆಯೇ ತಿಳಿಸಿದ್ದೇವೆ. ಸಮ

*ಪ್ರಕಾರ ಕ್ಷುದಿ ರಾಮನು ಕಾಮಾರ ಪುಕುರಕ್ಕೆ ಹೋಗಿ ಅಲ್ಲಿ ವಾಸಮಾಡು ವುದು.*

ಸ್ವಭಾವನಾದುದರಿಂದ ಆತನು ಕ್ಷುದಿರಾಮನೊಂದಿಗೆ ಪೂರ್ವದಿಂದಲೂ ಬಹಳ ಸ್ನೇಹವಾಗಿದ್ದನು ಸ್ನೇಹಿತನ ಈ ವಿಪತ್ತಿನ ವಿಷಯವನ್ನು ಕೇಳಿ ಆತನು ಬಹಳವಾಗಿ ವ್ಯಥೆಪಟ್ಟು ತನ್ನ ಮನೆಯ ಒಂದು ಭಾಗವನ್ನು ಬಿಟ್ಟು ಕೊಟ್ಟು ಕಾಮಾರಪುಕುರಕ್ಕೆ ಬಂದು ಅಲ್ಲಿಯೇ ವಾಸ ಮಾಡಬೇಕೆಂದು ಕ್ಷುದಿರಾಮನಿಗೆ ಹೇಳಿ ಕಳುಹಿಸಿದನು. ಇದರಿಂದ ಆತನಿಗೆ ದಡಸಿಕ್ಕಿದ ಹಾಗಾಯಿತು ಭಗವಂತನ ಅಚಿಂತ್ಯಲೀಲೆಯಿಂದಲೇ ಈ ವಿಧವಾದ ಅನುರೋಧವುಂಟಾಯಿತೆಂದು ಭಾವಿಸಿ ಕೃತಜ್ಞತೆಯಿಂದ ಕಾಮಾರಪುಕುರಕ್ಕೆ ಬಂದು ಆ ಸ್ಥಳದಲ್ಲಿಯೇ ವಾಸಮಾಡಲಾರಂಭಿಸಿದನು ಇದರಿಂದ ಆತನ ಪ್ರಾಣಪ್ರಿಯನಾದ ಸುಖಲಾಲನಿಗೆ ಬಹಳ ಆನಂದವಾಯಿತು ಧರ್ಮಪರಾಯಣನಾದ ಕ್ಷುದಿರಾಮನ ಸಂಸಾರ ನಿರ್ವಾಹಕ್ಕೋಸ್ಕರ ಆತನು ಒಂದು ಬಿಘಾ ಹತ್ತು ಚಟಾಕು ಭೂಮಿಯನ್ನು ಆತನಿಗೆ ದಾನವಾಗಿ ಕೊಟ್ಟನು

---

## ತೃತೀಯ ಅಧ್ಯಾಯ

## ಕಾಮಾರಪುಕುರದಲ್ಲಿ ಧಾರ್ಮಿಕ ಸಂಸಾರ

*ಕಾಮಾರಪುಕು ರಕ್ಕೆ ಬಂದು ಕ್ಷುದಿ ರಾಮನು ವಾನ ಪ್ರಸ್ಥನಂತೆ ಜೀವನ ಮಾಡುವುದಕ್ಕೆ ಕಾರಣ*

ಹತ್ತು ವರ್ಷದ ಮಗ ರಾಮಕುಮಾರನನ್ನೂ ನಾಲ್ಕು ವರ್ಷದ ಮಗಳು ಕಾತ್ಯಾಯನಿಯನ್ನೂ ಕರೆದುಕೊಂಡು ಪತ್ನಿಯೊಡನೆ ಕ್ಷುದಿರಾಮನು ಕಾಮಾರಪುಕುರಕ್ಕೆ ಬಂದು ಪರ್ಣಕುಟೀರದಲ್ಲಿ ವಾಸಮಾಡಲು ಮೊದಲು ಮಾಡಿದ ದಿನ ಅವರ ಮನೋಭಾವವು ಹೇಗಿತ್ತೆಂದು ವರ್ಣಿಸುವುದು ಸಾಧ್ಯವಲ್ಲ ಈರ್ಷ್ಯಾದ್ವೇಷಗಳಿಂದ ತುಂಬಿದ ಸಂಸಾರವು ಆದಿನ ಅವರಿಗೆ ಕಗ್ಗತ್ತಲೆಯಿಂದ ಕೂಡಿದ ಘೋರವಾದ ಶ್ಮಶಾನದಂತೆ ತೋರಿತು ಸ್ನೇಹ, ಪ್ರೇಮ, ದಯೆ, ನ್ಯಾಯಪರತೆ ಮುಂತಾದ ಸದ್ಗುಣ ಸಮೂಹವು ಆಗ ಅಲ್ಲಲ್ಲಿ ಸಣ್ಣ ಬೆಳಕನ್ನು ಹರಡಿ ಹೃದಯದಲ್ಲಿ ಸುಖದ ಆಶೆಯನ್ನು ಹುಟ್ಟಿಸಿದರೂ ಉತ್ತರಕ್ಷಣದಲ್ಲಿಯೇ ಅದು ಎಲ್ಲಿಯೋ ಲೀನವಾಗಿ ಹೋಗಿ ಪುನಃ ಆ ಅಂಧಕಾರವೇ ಕವಿಯುತ್ತಿತ್ತು. ತಮ್ಮ

ಪೂರ್ವಾವಸ್ಥೆಯೊಂದಿಗೆ ಆಗಿನ ಅವಸ್ಥೆಯನ್ನು ಹೋಲಿಸಿ ನೋಡಿಯೇ ಈ ವಿಧವಾದ ಭಾವನೆಗಳು ಅವರ ಮನಸ್ಸಿನಲ್ಲಿ ಹುಟ್ಟುತ್ತಲಿದ್ದುವೆಂದು ಊಹಿಸಬಹುದು. ಏಕೆಂದರೆ ದುಃಖ ದುರ್ದಿನಗಳಲ್ಲಿ ಸಿಕ್ಕಿಯೇ ಮಾನವನು ಸಂಸಾರದ ಅಸಾರತೆ ಅನಿತ್ಯತೆಗಳನ್ನು ಚೆನ್ನಾಗಿ ತಿಳಿದುಕೊಳ್ಳುವುದು. ಆದುದರಿಂದ ಕ್ಷುದಿರಾಮನ ಮನಸ್ಸಿನಲ್ಲಿ ವೈರಾಗ್ಯ ಹುಟ್ಟಿದುದರಲ್ಲಿ ವಿಚಿತ್ರವೇನೂ ಇಲ್ಲ. ಇದೂ ಅಲ್ಲದೆ ಮೇಲೆ ಹೇಳಿದಂತೆ ಅಯಾಚಿತವಾಗಿಯೂ ಅಪ್ರತ್ಯಾಶಿತವಾಗಿಯೂ ಆಶ್ರಯ ದೊರೆತದ್ದರಿಂದ ಧರ್ಮಪ್ರಾಣನಾದ ಆತನ ಮನಸ್ಸಿನಲ್ಲಿ ದೈವಭಕ್ತಿಯೂ ಈಶ್ವರ ನಿರ್ಭರತೆಯೂ ಆಗ ಪೂರ್ಣವಾದುವೆಂದು ಹೇಳಬೇಕಾದುದಿಲ್ಲ. ಹೀಗಿದ್ದುದರಿಂದ ಆತನು ರಘುವೀರನಲ್ಲಿ ಸಂಪೂರ್ಣವಾಗಿ ಆತ್ಮಸಮರ್ಪಣೆಮಾಡಿ ಪುನಃ ಸಂಸಾರದ ಉನ್ನತಿ ಸಾಧನೆಯಲ್ಲಿ ಉದಾಸೀನನಾಗಿ ಭಗವಂತನ ಪೂಜಾಸೇವಾದಿಗಳಲ್ಲಿಯೇ ದಿನಗಳನ್ನು ಕಳೆಯಬೇಕೆಂದು ನಿರ್ಧರಿಸಿದುದರಲ್ಲಿ ಆಶ್ಚರ್ಯವೇನು ? ಆತನು ವಾಸ್ತವಿಕವಾಗಿ ಸಂಸಾರದಲ್ಲಿದ್ದರೂ ಅಂದಿನಿಂದಲೂ ಅಸಂಸಾರಿಯಾಗಿ ಪ್ರಾಚೀನ ಕಾಲದ ವಾನಪ್ರಸ್ಥರಂತೆ ದಿನಗಳನ್ನು ಕಳೆಯಲಾರಂಭಿಸಿದನು.

ಕ್ಷುದಿರಾಮನಿಗೆ ರಘುವೀರ ಸಾಲ ಗ್ರಾಮವು ದೊರೆತದ್ದು.

ಈ ಕಾಲದಲ್ಲಿ ನಡೆದ ಒಂದು ಘಟನೆಯಿಂದ ಕ್ಷುದಿರಾಮನ ಧರ್ಮವಿಶ್ವಾಸವು ಹೆಚ್ಚು ಗಭೀರವಾಯಿತು. ಯಾವುದೋ ಒಂದು ಕೆಲಸಕ್ಕಾಗಿ ಒಂದು ದಿನ ಆತನು ಗ್ರಾಮಾಂತರಕ್ಕೆ ಹೋಗಬೇಕಾಯಿತು. ಅಲ್ಲಿಂದ ಹಿಂದಿರುಗಿ ಬರುವಾಗ ಆತನು ದಣಿದು ಮಧ್ಯದಾರಿಯಲ್ಲಿ ಒಂದು ಗಿಡದ ನೆರಳಿನಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳುವುದಕ್ಕಾಗಿ ಕುಳಿತುಕೊಂಡನು. ನಿರ್ಜನವಾದ ವಿಸ್ತಾರವಾದ ಅಡವಿಯು ಆತನ ಚಿಂತಾಕ್ರಾಂತವಾದ ಮನಸ್ಸಿನಲ್ಲಿ ಶಾಂತಿಯನ್ನುಂಟುಮಾಡಿತು. ನಿರ್ಮಲವಾದ ವಾಯುವು ಮೆಲ್ಲನೆ ಸುಳಿದು ಆತನ ಶರೀರಕ್ಕೆ ಆಪ್ಯಾಯನವನ್ನುಂಟುಮಾಡಿತು. ಆತನಿಗೆ ಮಲಗಬೇಕೆಂಬ ಇಚ್ಛೆಯು ಬಲವಾಯಿತು, ಮಲಗಿದ ಕೂಡಲೇ ನಿದ್ರೆ ಬಂತು. ಸ್ವಲ್ಪ ಹೊತ್ತಿನಲ್ಲಿಯೇ ಸ್ವಪ್ನವಾದಂತಾಯಿತು. ಆತನ ಇಷ್ಟದೇವನಾದ ನವದೂರ್ವಾದಲಶ್ಯಾಮವಿಗ್ರಹನಾದ ಭಗವಾನ್ ಶ್ರೀರಾಮಚಂದ್ರನು ದಿವ್ಯ ಬಾಲಕ ವೇಷಧಾರಿಯಾಗಿ ಆತನ ಎದುರಿಗೆ ಬಂದು ನಿಂತು, ಒಂದು ಸ್ಥಳವನ್ನು ತೋರಿಸಿ "ನಾನು ಅಲ್ಲಿ ಅನೇಕ ದಿನಗಳಿಂದ ಅನಾಹಾರಿಯಾಗಿ ಇದ್ದೇನೆ;

ನನ್ನನ್ನು ನಿನ್ನ ಮನೆಗೆ ಕರೆದುಕೊಂಡು ಹೋಗು, ನಿನ್ನ ಸೇವೆಯನ್ನು ಸ್ವೀಕರಿಸಬೇಕೆಂದು ನನಗೆ ಬಹಳ ಮನಸ್ಸಾಗಿದೆ '' ಎಂದು ಹೇಳಿದನು ಈ ಮಾತನ್ನು ಕೇಳಿ ಕೃಷ್ಣದಿರಾಮನು ಸಂಪೂರ್ಣವಾಗಿ ವಿಹ್ವಲನಾದನು ಆತನಿಗೆ ಪುನಃ ಪುನಃ ನಮಸ್ಕಾರಮಾಡಿ '' ಪ್ರಭೋ, ನಾನು ಭಕ್ತಿಹೀನ, ದಟ್ಟದರಿದ್ರ, ನನ್ನ ಮನೆಯಲ್ಲಿ ನಿನಗೆ ಯೋಗ್ಯವಾದ ಸೇವೆ ದೊರಕುವ ಸಂಭವವಿಲ್ಲ, ಸೇವಾಪರಾಧಿಯಾಗಿ ನಾನು ನರಕಗಾಮಿಯಾಗಬೇಕಾಗುತ್ತದೆ, ಆದುದರಿಂದ ಈರೀತಿಯಾಗಿ ಏಕೆ ಅನ್ಯಾಯವಾಗಿ ಬಲವಂತಪಡಿಸುವಿ '' ಎಂದು ಹೇಳಿದನು ಬಾಲಕವೇಷಿಯಾದ ಶ್ರೀರಾಮಚಂದ್ರನು ಅದನ್ನು ಕೇಳಿ ಪ್ರಸನ್ನಮುಖನಾಗಿ ಅವನಿಗೆ ಅಭಯ ಪ್ರದಾನಮಾಡಿ '' ಭಯವಿಲ್ಲ, ನಾನು ಎಂದಿಗೂ ನಿನ್ನ ನ್ಯೂನತೆಯನ್ನು ಗಣಿಸುವುದಿಲ್ಲ ನನ್ನನ್ನು ಕರೆದುಕೊಂಡು ಹೋಗು '' ಎಂದು ಹೇಳಿದನು. ಭಗವಂತನ ಅಪ್ರಾರ್ಥಿತವಾದ ಈ ಬಗೆಯ ಕೃಪೆಯಿಂದ ಹಿಡಿಯಲಾರದಷ್ಟು ಆನಂದವನ್ನು ಹೊಂದಿ ಆನಂದಾಶ್ರುವನ್ನು ಸುರಿಸಿದನು ಅಷ್ಟು ಹೊತ್ತಿಗೆ ಅವನಿಗೆ ನಿದ್ರಾಭಂಗವಾಯಿತು.

ಎಚ್ಚೆತ್ತು ಕೃಷ್ಣದಿರಾಮನು '' ಇದೇನು ಅದ್ಭುತಸ್ವಪ್ನ, ಎಂದಿಗಾದರೂ ನಿಜವಾಗಿ ನನಗೆ ಇಂಥಾ ಸೌಭಾಗ್ಯವುಂಟಾಗುವುದೆ '' ಎಂಬದಾಗಿ ಆಲೋಚಿಸುವುದಕ್ಕೆ ಆರಂಭಿಸಿದನು ಹೀಗೆ ಯೋಚಿಸುತ್ತಿರುವಾಗ ಅವನ ದೃಷ್ಟಿಯು ಹತ್ತಿರದ್ದ ಹೊಲದಮೇಲೆ ಬಿದ್ದಿತು ತಾನು ಸ್ವಪ್ನದಲ್ಲಿ ನೋಡಿದ ಸ್ಥಳವು ಅದೇ ಎಂದು ತಿಳಿದುಕೊಳ್ಳಲು ಹೆಚ್ಚು ಹೊತ್ತಾಗಲಿಲ್ಲ ಆತನು ಅತ್ಯಾಶ್ಚರ್ಯದಿಂದ ಮೇಲಕ್ಕೆ ಎದ್ದು ನೋಡಲು, ಒಂದು ಸುಂದರವಾದ ಸಾಲಗ್ರಾಮದ ಮೇಲೆ ಹಾವು ಹೆಡೆಯನ್ನು ಎತ್ತಿಕೊಂಡಿರುವುದು ಕಂಡಿತು. ಆ ಶಿಲೆಯನ್ನು ತನ್ನ ಕೈಗೆ ತೆಗೆದುಕೊಳ್ಳಬೇಕೆಂದು ಅವನ ಮನಸ್ಸಿನಲ್ಲಿ ಪ್ರಬಲವಾದ ಆಶೆಯುಂಟಾಯಿತು ಆತನು ವೇಗವಾಗಿ ಆ ಸ್ಥಳಕ್ಕೆ ಹೋಗಿ ನೋಡಲು ಹಾವು ಹುತ್ತದೊಳಕ್ಕೆ ಹೋಗಿತ್ತು, ಹುತ್ತದ ಬಾಯಲ್ಲಿ ಸಾಲಗ್ರಾಮವಿತ್ತು. ಸ್ವಪ್ನವು ಸುಳ್ಳಲ್ಲವೆಂದು ಭಾವಿಸಿ ಕೃಷ್ಣದಿರಾಮನ ಹೃದಯವು ಅತ್ಯಂತ ಉತ್ಸಾಹಪೂರ್ಣವಾಯಿತು, ತಾನು ದೇವಾವಿಷ್ಟನೆಂದು ಭಾವಿಸಿ ಹಾವು ಕಡಿಯುವುದೆಂಬ ಅಂಜಿಕೆಯಿಲ್ಲದೆ '' ಜಯ ರಘುವೀರ '' ಎಂದು ಗಟ್ಟಿಯಾಗಿ ರಾಮನಾಮೋಚ್ಚಾರಣೆ ಮಾಡಿ ಸಾಲಗ್ರಾಮವನ್ನು ತೆಗೆದುಕೊಂಡನು. ಶಾಸ್ತ್ರಜ್ಞನಾದ ಕೃಷ್ಣದಿರಾಮನು ಆಮೇಲೆ ಆ ಶಿಲೆಯ ಲಕ್ಷಣ

ಗಳನ್ನೆಲ್ಲಾ ಪರೀಕ್ಷಿಸಿ ನೋಡಲು ವಾಸ್ತವಿಕವಾಗಿಯೂ ಅದು "ರಘುವೀರ" ಎಂಬ ಹೆಸರಿನ ಸಾಲಗ್ರಾಮವಾಗಿತ್ತು. ಆಗ ಆನಂದದಿಂದಲೂ ಆಶ್ಚರ್ಯದಿಂದಲೂ ಕೂಡಿದವನಾಗಿ ಆತನು ಮನೆಗೆ ಹೋಗಿ ಶಾಸ್ತ್ರೋಕ್ತ ಸಂಸ್ಕಾರಗಳನ್ನು ಮಾಡಿ ಅದನ್ನು ತನ್ನ ಗೃಹದೇವತಾರೂಪವಾಗಿ ಪ್ರತಿಷ್ಠೆ ಮಾಡಿ ನಿತ್ಯವೂ ಪೂಜೆಮಾಡಲಾರಂಭಿಸಿದನು. ಹೀಗೆ ಅದ್ಭುತವಾದ ರೀತಿಯಲ್ಲಿ ರಘುವೀರ ಸಾಲಗ್ರಾಮವು ದೊರೆಯುವುದಕ್ಕೆ ಮುಂಚೆ ಕ್ಷುದಿರಾಮನು ತನ್ನ ಅಭೀಷ್ಟದೈವವಾದ ಶ್ರೀರಾಮಚಂದ್ರನನ್ನು ಪೂಜಿಸುತ್ತಿದ್ದುದಲ್ಲದೆ, ಘಟದಲ್ಲಿ ಪ್ರತಿಷ್ಠೆಮಾಡಿ ಶೀತಲಾದೇವಿಯನ್ನೂ ನಿತ್ಯವೂ ಪೂಜಿಸುತ್ತಿದ್ದನು.

**ಸಾಂಸಾರಿಕ ಕಷ್ಟಗಳಲ್ಲಿಯೂ ಕ್ಷುದಿರಾಮನ ಅವಿಚಲತೆ ಮತ್ತು ಈಶ್ವರ ನಿರ್ಭರತೆ**

ಒಂದಾದಮೇಲೊಂದರಂತೆ ದುರ್ದಿನಗಳು ಕಳೆಯುವುದಕ್ಕೆ ಆರಂಭವಾಯಿತು. ಕ್ಷುದಿರಾಮನೂ ಎಲ್ಲ ದುಃಖ ಕಷ್ಟಗಳನ್ನು ತುಚ್ಛತ್ಕಾರಮಾಡಿ ಧರ್ಮವೊಂದನ್ನೇ ದೃಢಭಾವದಿಂದ ಆಶ್ರಯಿಸಿ ಸಂತೋಷಚಿತ್ತನಾಗಿ ಕಾಲಹರಣ ಮಾಡುತ್ತಿದ್ದನು. ಸಂಸಾರದಲ್ಲಿ ಒಂದೊಂದು ಸಲ ಒಪ್ಪೊತ್ತು ಅನ್ನವಿಲ್ಲದೆ ಇರುತ್ತಿತ್ತು. ಪತಿಪ್ರಾಣಳಾದ ಚಂದ್ರಾದೇವಿಯು ವ್ಯಾಕುಲಹೃದಯಳಾಗಿ ಪತಿಗೆ ಈ ವಿಷಯವನ್ನು ತಿಳುಸುತ್ತಿದ್ದಳು. ಕ್ಷುದಿರಾಮನು ಅದರಿಂದಲೂ ವಿಚಲಿತನಾಗದೆ "ಭಯವೇನು ? ರಘುವೀರನು ಉಪವಾಸವಿರುವ ಸಂದರ್ಭ ಬಂದಾಗ ನಾವೂ ಆತನೊಂದಿಗೆ ಉಪವಾಸ ಮಾಡೋಣ" ಎಂದು ಆಕೆಗೆ ಸಮಾಧಾನವನ್ನು ಹೇಳುತ್ತಿದ್ದನು. ಸರಳ ಸ್ವಭಾವದವಳಾದ ಚಂದ್ರಾದೇವಿಯೂ ತನ್ನ ಪತಿಯಂತೆಯೇ ರಘುವೀರನ ಮೇಲೆ ಪೂರ್ಣಭರವಸೆಯನ್ನಿಟ್ಟು ಮನೆಯ ಕೆಲಸಗಳನ್ನು ಮಾಡುತ್ತಿದ್ದಳು, ಅಂಥ ದಿನಗಳಲ್ಲಿ ಆಹಾರದ ವ್ಯವಸ್ಥೆಯು ಹೇಗೋ ಆಗುತ್ತಿತ್ತು.

**ಲಕ್ಷ್ಮೀಜಲದ ಧಾನ್ಯಕ್ಷೇತ್ರ**

ಆದರೆ ಈ ವಿಧವಾದ ಅನ್ನಾಭಾವವನ್ನು ಕ್ಷುದಿರಾಮನು ಬಹು ದಿನಗಳು ಅನುಭವಿಸಬೇಕಾಗಲಿಲ್ಲ. ಆತನ ಸ್ನೇಹಿತನಾದ ಸುಖಲಾಲ ಗೋಸ್ವಾಮಿಯು ಆತನಿಗೆ ಲಕ್ಷ್ಮೀಜಲಾ ಎಂಬ ಸ್ಥಳದಲ್ಲಿ ಒಂದು ಬಿಘಾ ಹತ್ತು ಚಟಾಕು ಹೊಲವನ್ನು ದಾನಮಾಡಿದ್ದನಷ್ಟೆ. ರಘುವೀರನ ದಯೆಯಿಂದ ಅದರಲ್ಲಿ ಅಂದಿನಿಂದ ಆತನ ಚಿಕ್ಕ ಸಂಸಾರಕ್ಕೆ ಒಂದು ವರ್ಷಕ್ಕಾಗುವಷ್ಟು ಧಾನ್ಯವು ಬರುತ್ತಿದುದಲ್ಲದೆ ಅತಿಥಿ ಅಭ್ಯಾಗತರ

ಸೇವಾ ಕಾರ್ಯಕ್ಕೂ ಸಾಕಾಗುತ್ತಿತ್ತು. ಬೇಸಾಯಗಾರರಿಗೆ ಕೂಲಿ ಕೊಟ್ಟು ಕ್ಷುದಿರಾಮನು ಆ ಜಮೀನನ್ನು ಸಾಗುವಳಿಮಾಡಿಸುತ್ತಿದ್ದನು. ಭೂಮಿಯನ್ನು ಉತ್ಪಾದನೆಮೇಲೆ ಬಿತ್ತನೆಯ ಕಾಲ ಬಂದಾಗ ರಾಮಚಂದ್ರನ ಹೆಸರನ್ನು ಹೇಳಿ ತಾನೇ ಒಂದುಹಿಡಿ ಬೀಜವನ್ನು ಮೊದಲು ಬಿತ್ತಿ ಅನಂತರ ಕೂಲಿಯವರನ್ನು ಆ ಕೆಲಸಕ್ಕೆ ನಿಯಮಿಸುತ್ತಿದ್ದನು.

ಕ್ಷುದಿರಾಮನ ಈಶ್ವರ ಭಕ್ತಿಯ ಅಭಿವೃದ್ಧಿ ಮತ್ತು ದಿವ್ಯದರ್ಶನ ಲಾಭ ನೆರೆಹೊರೆಯವರಿಗೆ ಆತನಲ್ಲಿದ್ದ ಭಕ್ತಿ

ಹೀಗೆ ಎರಡು ಮೂರು ವರ್ಷಗಳು ಕಳೆದವು. ರಘುವೀರನನ್ನೇ ನಂಬಿಕೊಂಡು ಯಾವ ಜೀವನ ವೃತ್ತಿಯನ್ನೂ ಅವಲಂಬಿಸದೇ ಇದ್ದರೂ ಕ್ಷುದಿರಾಮನ ಸಂಸಾರದಲ್ಲಿ ಅನ್ನವಸ್ತ್ರಕ್ಕೆ ಅಭಾವವಿರಲಿಲ್ಲ ಆದರೆ ಈ ಎರಡು ಮೂರು ವರ್ಷಗಳ ಕಠೋರವಾದ ಶಿಕ್ಷಾಪ್ರಭಾವದಿಂದ, ಆತನ ಮನಸ್ಸಿನಲ್ಲಿ ಶಾಂತಿ, ಸಂತೋಷ ಮತ್ತು ಈಶ್ವರ ನಿರ್ಭರತೆ ಇವು ಸಂತತವೂ ಇರುತ್ತಿದ್ದುವು ಈ ವಿಧವಾದ ಭಾಗ್ಯವು ಬಹು ಸ್ವಲ್ಪ ಮಂದಿ ಜನರಿಗೆ ಮಾತ್ರ ಲಭಿಸುವುದು ಅಂತರ್ಮುಖಿಯಾಗಿರುವುದೇ ಆತನ ಮನಸ್ಸಿನ ಸ್ವಭಾವವಾಯಿತು. ಅಲ್ಲದೆ ಆದರ ಪ್ರಭಾವದಿಂದ ಆತನಿಗೆ ಆಗಾಗ ದಿವ್ಯದರ್ಶನಗಳಾಗುತ್ತಿದ್ದುವು ಪ್ರತಿ ದಿವಸವೂ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸಂಧ್ಯಾವಂದನೆಯನ್ನು ಮಾಡುವುದಕ್ಕಾಗಿ ಕುಳಿತು ಗಾಯತ್ರೀದೇವಿಯ ಧ್ಯಾನಮಾಡಿ ಆ ಧ್ಯಾನದಲ್ಲಿಯೇ ಮಗ್ನನಾದಾಗ ಆತನ ವಕ್ಷಸ್ಥಳವು ರಕ್ತವರ್ಣವಾಗುತ್ತಿತ್ತು ಮತ್ತು ಮುಚ್ಚಿದ ಕಣ್ಣುಗಳಿಂದ ಪ್ರೇಮಾಶ್ರುವು ಅವಿರಳವಾಗಿ ಸುರಿಯುತ್ತಿತ್ತು ಪ್ರತಿದಿನ ಪ್ರಾತಃಕಾಲದಲ್ಲಿಯೂ ಹೂವಿನ ಪುಟ್ಟಿಯನ್ನು ಕೈಲಿ ಹಿಡಿದುಕೊಂಡು ಹೂವನ್ನು ಕೊಯ್ಯಲಿಕ್ಕೆ ಆತನು ಹೋದಾಗ ಆತನ ಆರಾಧ್ಯ ದೇವತೆಯಾದ ಶೀತಲಾದೇವಿಯು ಎಂಟುವರ್ಷದ ಕನ್ಯಾರೂಪವನ್ನು ಧರಿಸಿ ರಕ್ತವಸ್ತ್ರವನ್ನುಟ್ಟು, ನಾನಾ ಅಲಂಕಾರಗಳನ್ನು ಧಾರಣಮಾಡಿ ನಗುತ್ತ ನಗುತ್ತ ತನ್ನಜತೆಗೆ ಬರುತ್ತಿದುದನ್ನೂ ಹೂವಿನ ಗಿಡಗಳ ಕೊನೆಗಳನ್ನು ಬಾಗಿಸಿ ಹಿಡಿದುಕೊಂಡು ಹೂವನ್ನು ಕೊಯ್ಯುವುದಕ್ಕೆ ಸಹಾಯ ಮಾಡುತ್ತಿದ್ದುದನ್ನೂ ಆತನು ನೋಡುತ್ತಿದ್ದನು ಈ ದಿವ್ಯದರ್ಶನಗಳಿಂದ ಆತನ ಮನಸ್ಸು ಆಗ ಸರ್ವದಾ ಉಲ್ಲಾಸದಿಂದ ತುಂಬಿರುತ್ತಿತ್ತು. ಮತ್ತು ಆತನ ಮನಸ್ಸಿನ ದೃಢವಾದ ವಿಶ್ವಾಸ ಭಕ್ತಿಗಳು ಮುಖದಲ್ಲಿ ಪ್ರಕಾಶಿತವಾಗಿದ್ದುದರಿಂದ ಆತನು ಒಂದು ಅಪೂರ್ವವಾದ ದಿವ್ಯಾವೇಶದಿಂದ

ಯಾವಾಗಲೂ ಪರಿವೃತನಾಗಿರುವಂತೆ ಕಾಣುತ್ತಿತ್ತು. ಆತನ ಸೌಮ್ಯವಾದ ಶಾಂತಿಯಿಂದೊಡಗೂಡಿದ ಮುಖವನ್ನು ನೋಡಿ ಗ್ರಾಮವಾಸಿಗಳು ಅದನ್ನು ತಮ್ಮ ಮನಸ್ಸಿನಲ್ಲಿಯೇ ಅನುಭವಮಾಡಿ ಆತನನ್ನು ಋಷಿಯ ಹಾಗೆ ಭಕ್ತಿ ಶ್ರದ್ಧೆಗಳಿಂದ ಕಾಣುತ್ತಿದ್ದರು. ಆತನು ಬರುವುದನ್ನು ಕಂಡರೆ ಅವರು ಹರಟುವುದನ್ನು ಬಿಟ್ಟು ಗೌರವದಿಂದ ಎದ್ದು ನಿಂತು ಮಾತನಾಡುತ್ತಿದ್ದರು. ಆತನು ಸ್ನಾನಮಾಡುತ್ತಿದ್ದಾಗ ಅದೇ ಪುಷ್ಕರಿಣಿಯಲ್ಲಿಯೇ ತಾವು ಸ್ನಾನ ಮಾಡುವುದಕ್ಕೆ ಸಂಕೋಚಪಟ್ಟವರಾಗಿ ದೂರದಲ್ಲಿ ನಿಂತು ಸಂಭ್ರಮದಿಂದ ನೋಡುತ್ತಿದ್ದರು. ಆತನ ಆಶೀರ್ವಾದವು ನಿಶ್ಚಯವಾಗಿಯೂ ಫಲದಾಯಕ ವಾಗುವುದೆಂದು ನಂಬಿ ಅವರು ಸಂಪತ್ತು ವಿಪತ್ತುಗಳಲ್ಲಿ ಆತನನ್ನು ನೋಡು ವುದಕ್ಕೆ ಆತನ ಹತ್ತಿರಕ್ಕೆ ಬರುತ್ತಿದ್ದರು.

**ಚಂದ್ರಾದೇವಿಯನ್ನು ನೆರೆಹೊರೆಯವರು ಹೇಗೆ ಕಾಣುತ್ತಿದ್ದರು**

ಸ್ನೇಹ ಮತ್ತು ಸರಳ ಭಾವಗಳ ಮೂರ್ತಿಯಾದ ಚಂದ್ರಾದೇವಿಯು ತನ್ನ ದಯೆ ಪ್ರೇಮಗಳಿಂದ ಅವರನ್ನು ಮುಗ್ಧರನ್ನಾಗಿ ಮಾಡಿ ಅವರ ಮಾತೃಭಕ್ತಿಗೆ ಅಧಿಕಾರಿಣಿಯಾಗಿದ್ದಳು. ಏಕೆಂದರೆ ಸಂಪತ್ತಿನಲ್ಲಾಗಲಿ ವಿಪತ್ತಿನಲ್ಲಾಗಲಿ ಆಕೆಯಂತೆ ಸಹಾನುಭೂತಿಯನ್ನು ತೋರಿಸುವವರನ್ನು ಅವರು ಮತ್ತೆಲ್ಲಿಯೂ ನೋಡಿರಲಿಲ್ಲ. ದರಿದ್ರರು ಚಂದ್ರಾದೇವಿಯ ಹತ್ತಿರಕ್ಕೆ ಹೋದಾಗ ಅವರಿಗೆ ಒಂದು ಹಿಡಿ ಅನ್ನ ಸಿಕ್ಕುತ್ತಿದ್ದುದು ಮಾತ್ರವೇ ಅಲ್ಲ ಆಕೆಯು ಅವರಿಗೆ ತೋರುತ್ತಿದ್ದ ಸ್ವಾಭಾವಿಕವಾದ ಪ್ರೀತಿಯಿಂದ ಅವರ ಮನಸ್ಸಿಗೂ ಬಹುತೃಪ್ತಿಯಾಗುತ್ತಿತ್ತು. ತಮಗೆ ಭಿಕ್ಷೆ ಕೊಡುವುದಕ್ಕೆ ಆಕೆಯ ಮನೆಯಬಾಗಿಲು ಯಾವಾಗಲೂ ತೆರೆದಿರುತ್ತಿತ್ತು ಎಂಬುದು ಭಿಕ್ಷುಕರಾದ ಸಾಧುಗಳಿಗೆ ಗೊತ್ತಿತ್ತು. ನೆರೆಹೊರೆಯ ಹುಡುಗರು ಯಾವುದಕ್ಕಾದರೂ ಹೋಗಿ ಆಕೆಯ ಹತ್ತಿರ ಹಠಮಾಡಿದರೆ ಆಕೆಯು ಹೇಗಾದರೂ ಯಾವುದೋ ಒಂದು ಉಪಾಯದಿಂದ ತಮಗೆ ಬೇಕಾದುದನ್ನು ಕೊಡುವಳೆಂದು ಅವರಿಗೆ ನಂಬಿಕೆಯಿತ್ತು. ಹೀಗೆ ನೆರೆಹೊರೆಯಲ್ಲಿದ್ದ ಆಬಾಲವೃದ್ಧರೂ ಯಾವಾಗ ಬೇಕಾದರೆ ಆಗ ಕ್ಷುದಿರಾಮನ ಪರ್ಣಕುಟೀರಕ್ಕೆ ಹೋಗುತ್ತಿದ್ದರು. ಬಡವರ ಮನೆಯಾಗಿದ್ದರೂ ಆ ಮನೆಯಲ್ಲಿ ಅಪೂರ್ವವಾದ ಶಾಂತಿಯು ನೆಲೆಸಿತ್ತು.

**ಕ್ಷುದಿರಾಮನ ತಂಗಿಯಾದ ರಾಮ**

ಕ್ಷುದಿರಾಮನಿಗೆ ರಾಮಶೀಲಾ ಎಂಬ ತಂಗಿಯೂ ನಿಧಿರಾಮ ಮತ್ತು ಕನಾಯಿರಾಮ ಅಥವಾ ರಾಮ

ಶೀಲಾದೇವಿಯ ವಿಚಾರ

ಕಾನಾಯಿ ಎಂಬ ಇಬ್ಬರು ತಮ್ಮಂದಿರೂ ಇದ್ದರೆಂದು ಹಿಂದೆಯೇ ತಿಳಿಸಿದ್ದೇವೆ. ದೇರೆಯ ಜಮೀನುದಾರನೊಂದಿಗೆ ವಿವಾದ ಉಂಟಾದಮೇಲೆ ಕ್ಷುದಿರಾಮನು ಸರ್ವಸ್ವವನ್ನೂ ಕಳೆದುಕೊಂಡಾಗ ಆತನ ತಂಗಿಯ ವಯಸ್ಸು ಸುಮಾರು ಮೂವತ್ತೈದುವರ್ಷವೂ ತಮ್ಮಂದಿರ ವಯಸ್ಸು ಮೂವತ್ತೂ, ಇಪ್ಪತ್ತೈದೂ ಆಗಿದ್ದುವು ಅಷ್ಟು ಹೊತ್ತಿಗೆ ಅವರೆಲ್ಲರೂ ಮದುವೆ ಮಾಡಿಕೊಂಡು ಸಂಸಾರಿಗಳಾಗಿದ್ದರು ಕಾಮಾರ ಪುಕುರಕ್ಕೆ ಸುಮಾರು ಆರು ಹರದಾರಿ ಪಶ್ಚಿಮಕ್ಕಿರುವ ಛಿಲೀಂ ಪುರದ ಭಾಗ ವತ ವಂದ್ಯೋಪಾಧ್ಯಾಯನಿಗೆ ರಾಮಶೀಲೆಯನ್ನು ಕೊಟ್ಟು ಮದುವೆ ಯಾಗಿತ್ತು. ಆಕೆಗೆ ರಾಮಚಾಂದ್ ಎಂಬ ಒಬ್ಬ ಮಗನೂ ಹೇಮಾಂಗಿನಿ ಎಂಬ ಮಗಳೂ ಆಗಿದ್ದರು. ಹಿಂದೆ ಪ್ರಸ್ತಾಪಿಸಿರುವ ವಿಪತ್ತಿನ ಕಾಲದಲ್ಲಿ ರಾಮ ಚಾಂದನ ವಯಸ್ಸು ಸುಮಾರು ಇಪ್ಪತ್ತೊಂದು ವರ್ಷ, ಹೇಮಾಂಗಿನಿಯ ವಯಸ್ಸು ಹದಿನಾರು ವರ್ಷ ಆಗ ರಾಮಚಾಂದನು ಮೇದಿನೀಪುರದಲ್ಲಿ ಮೊಖ್ತಿಯಾರಿ ಕೆಲಸಮಾಡುತ್ತಿದ್ದನು ಹೇಮಾಂಗಿನಿಯು ದೇರೆಯಲ್ಲಿ ಸೋದರ ಮಾವನ ಮನೆಯಲ್ಲಿ ಹುಟ್ಟಿದಳು, ಅಣ್ಣನಿಗಿಂತಲೂ ಆಕೆಗೆ ಸೋದರಮಾವನ ಮನೆಯವರಲ್ಲಿ ಹೆಚ್ಚು ಸ್ನೇಹವಿತ್ತು ಕ್ಷುದಿರಾಮನು ಆಕೆಯನ್ನು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳ ಹಾಗೆ ಕಾಪಾಡಿ ವಿವಾಹಕಾಲ ಬಂದಾಗ ಕಾಮಾರಪುಕುರಕ್ಕೆ ಎರಡೂವರೆ ಹರಿದಾರಿ ವಾಯುವ್ಯ ದಿಕ್ಕಿನಲ್ಲಿದ್ದ ಸಿಹರ್ ಗ್ರಾಮದ ಕೃಷ್ಣಚಂದ್ರ ಮುಖ್ಯೋಪಾಧ್ಯಾಯನಿಗೆ ತಾನೇ ಕನ್ಯಾದಾನ ಮಾಡಿದನು. ಯೌವನ ಪ್ರಾಪ್ತಿಯಾದಮೇಲೆ ಆಕೆಯು ರಾಘವ, ರಾಮ ರತನ, ಹೃದಿರಾಮ ಮತ್ತು ರಾಜಾರಾಮ ಎಂಬ ನಾಲ್ಕು ಮಕ್ಕಳ ತಾಯಿಯಾದಳು.

ಕ್ಷುದಿರಾಮನ ತಮ್ಮಂದಿರ ವಿಷಯ

ಕ್ಷುದಿರಾಮನ ತಮ್ಮನಾದ ನಿಧಿರಾಮನಿಗೆ ಮಕ್ಕಳಾ ದುವೋ ಇಲ್ಲವೋ ಗೊತ್ತಿಲ್ಲ ಎಲ್ಲರಿಗಿಂತಲೂ ಚಿಕ್ಕವ ನಾದ ಕಾನಾಯಿರಾಮನಿಗೆ ರಾಮತಾರಕ ಅಥವ ಹಲ ಧಾರಿ ಮತ್ತು ಕಾಳಿದಾಸ ಎಂಬ ಇಬ್ಬರು ಗಂಡುಮಕ್ಕಳಾದರು. ಕಾನಾಯಿ ರಾಮನು ಭಕ್ತಿಯುತನೂ ಭಾವುಕನೂ ಆಗಿದ್ದನು. ಒಂದು ಸಮಯದಲ್ಲಿ ಆತನು ಎಲ್ಲಿಗೋ ಒಂದು ಕಡೆಗೆ ಒಂದು ವಿಧವಾದ ನಾಟಕ ಜಾತ್ರೆಯನ್ನು ನೋಡುವುದಕ್ಕೆ ಹೋಗಿದ್ದನು ಶ್ರೀರಾಮಚಂದ್ರನು ವನವಾಸಕ್ಕೆ ಹೋಗು

ವುದು ಅಭಿನಯಿಸಲ್ಪಟ್ಟಿತು. ಅದನ್ನು ಕೇಳುತ್ತಾ ಕೇಳುತ್ತಾ ಆತನು ಕೇವಲ ತನ್ಮಯನಾಗಿ ಕೈಕೇಯಿಯು ರಾಮಚಂದ್ರನನ್ನು ವನಕ್ಕೆ ಕಳುಹಿಸುವುದಕ್ಕೆ ಮಾಡುತ್ತಿದ್ದ ಆಲೋಚನೆ ಪ್ರಯತ್ನಾದಿಗಳನ್ನು ಸತ್ಯವೆಂದು ಭಾವಿಸಿ ನಾಟಕ ಶಾಲೆಯಲ್ಲಿ ಆ ವೇಷದವನನ್ನು ಹೊಡೆಯುವುದಕ್ಕೆ ಹೋದನು ಅದು ಹೇಗಾದರೂ ಇರಲಿ ಪಿತ್ರಾರ್ಜಿತವಾದ ಆಸ್ತಿಯನ್ನು ಕಳೆದುಕೊಂಡಮೇಲೆ ನಿಧಿರಾಮನೂ ಕಾನಾಯಿರಾಮನೂ ದೇರೆಯನ್ನು ಬಿಟ್ಟು ತಮ್ಮ ಅಳಿಯಂದಿರಿದ್ದ ಊರಿಗೆ ಹೋದರೆಂದು ಕಾಣುತ್ತದೆ

**ಕ್ಷುದಿರಾಮನ ಅಳಿಯ ರಾಮಚಾಂದ**

ರಾಮಶೀಲಾದೇವಿಯ ಮಗನಾದ ರಾಮಚಾಂದ ವಂದ್ಯೋಪಾಧ್ಯಾಯನು ಮೇದಿನಿಪುರದಲ್ಲಿ ಮೊಖ್ತಿಯಾರಿ ಕೆಲಸಮಾಡುತ್ತಿದ್ದ ವಿಷಯವನ್ನು ಹಿಂದೆಯೇ ತಿಳಿಸಿದ್ದೇವೆ ಕಷ್ಟಪಟ್ಟು ಕೆಲಸಮಾಡಿ ಮೇದಿನೀ ಪುರದಲ್ಲೇ ವಾಸಮಾಡುತ್ತಾ ಸ್ವಲ್ಪ ಮಟ್ಟಿಗೆ ಹಣವನ್ನು ಸಂಪಾದಿಸಲಾರಂಭಿಸಿದನು ಆಗ ಮಾವನ ಮನೆಯವರ ದುರವಸ್ಥೆಯನ್ನು ಜ್ಞಾಪಕ ಮಾಡಿಕೊಂಡು ಕ್ಷುದಿರಾಮನಿಗೆ ತಿಂಗಳಿಗೆ ಹದಿನೈದು ರೂಪಾಯಿಗಳನ್ನೂ ನಿಧಿರಾಮ್, ಕಾನಾಯಿರಾಮ್ ಇವರಿಬ್ಬರಿಗೆ ಒಬ್ಬೊಬ್ಬರಿಗೆ ಹತ್ತು ರೂಪಾಯಿಗಳಂತೆಯೂ ಕಳುಹಿಸುವುದಕ್ಕೆ ಮೊದಲು ಮಾಡಿದನು ಕ್ಷುದಿರಾಮನು ಅಳಿಯನಿಂದ ಕೆಲವು ದಿನಗಳು ಕಾಗದವು ಬಾರದೇ ಹೋದರೆ ಚಿಂತಿಸಿ ಮೇದಿನೀ ಪುರಕ್ಕೆ ಹೋಗುತ್ತಿದ್ದನು ಮತ್ತು ಅಲ್ಲಿ ನಾಲ್ಕಾರು ದಿನಗಳಿದ್ದು ಕಾಮಾರಪುಕುರಕ್ಕೆ ಹಿಂದಿರುಗಿ ಬರುತ್ತಿದ್ದನು ಹೀಗೆ ಮೇದಿನೀ ಪುರಕ್ಕೆ ಒಂದುಸಲ ಹೋಗುತ್ತಿದ್ದಾಗ ನಡೆದ ಒಂದು ವಿಶೇಷ ಸಂಗತಿಯನ್ನು ನಾವು ಕೇಳಿದ್ದೇವೆ ಆ ಸಂಗತಿಯು ಕ್ಷುದಿರಾಮನ ಆಂತರಿಕವಾದ ದೇವಭಕ್ತಿಯನ್ನು ಪರಿಚಯಮಾಡಿ ಕೊಡುವುದರಿಂದ ಅದನ್ನು ಇಲ್ಲಿ ತಿಳಿಸುತ್ತೇವೆ.

**ಕ್ಷುದಿರಾಮನ ದೇವಭಕ್ತಿಯನ್ನು ತಿಳಿಸುವ ಸಂಗತಿ.**

ಕಾಮಾರಪುಕುರಕ್ಕೆ ವಾಯುವ್ಯದಲ್ಲಿ ಸುಮಾರು ಇಪ್ಪತ್ತುನಾಲ್ಕು ಮೈಲಿ ದೂರದಲ್ಲಿ ಮೇದಿನೀ ಪುರವಿದೆ. ರಾಮಚಾಂದನ ಮತ್ತು ಅವನ ಪರಿವಾರದ ಕ್ಷೇಮ ಸಮಾಚಾರವು ಬಹು ದಿನಗಳು ತಿಳಿಯದಿರಲು ಕ್ಷುದಿರಾಮನು ಚಿಂತೆಗೀಡಾಗಿ ಒಂದು ದಿನ ಅಲ್ಲಿಗೆ ಹೋಗಬೇಕೆಂದು ಮನೆಯನ್ನು ಬಿಟ್ಟು ಹೊರಟನು ಆಗ

ಮಾಘ ಅಥವಾ ಫಾಲ್ಗುಣ ಮಾಸವಾಗಿತ್ತು ಬಿಲ್ವವೃಕ್ಷದ ಎಲೆಗಳು ಆಗ ಉದುರುತ್ತವೆ. ಗಿಡವು ಚಿಗುರುವವರೆಗೂ ಜನಗಳಿಗೆ ಶಿವಪೂಜೆ ಮಾಡುವುದಕ್ಕೆ ವಿಶೇಷ ಕಷ್ಟವಾಗುತ್ತದೆ. ಕ್ಷುದಿರಾಮನು ಈ ಕಷ್ಟವನ್ನು ಅದಕ್ಕೆ ಕೆಲವು ದಿನಗಳ ಹಿಂದಿನಿಂದಲೂ ವಿಶೇಷವಾಗಿ ಅನುಭವಿಸಿದ್ದನು.

ಬೆಳಿಗ್ಗೆ ಬಹು ಜಾಗ್ರತೆ ಎದ್ದು ಮನೆಯನ್ನು ಬಿಟ್ಟು ಹೊರಟು ಸುಮಾರು ಹತ್ತು ಗಳಿಗೆವರೆವಿಗೂ ದಾರಿಯನ್ನು ನಡೆದಮೇಲೆ ಒಂದು ಗ್ರಾಮದಲ್ಲಿ ಉಳಿದುಕೊಂಡನು ಅಲ್ಲಿ ಬಿಲ್ವಗಿಡಗಳು ಹೊಸದಾಗಿ ಚಿಗುರಿದ್ದುದನ್ನು ನೋಡಿ ಅವನ ಮನಸ್ಸಿಗೆ ಬಹಳ ಆನಂದವಾಯಿತು ಆಗ ಮೇದಿನೀಪುರಕ್ಕೆ ಹೋಗಬೇಕೆಂಬುದನ್ನು ಸಂಪೂರ್ಣವಾಗಿ ಮರೆತು ಆ ಗ್ರಾಮದಲ್ಲಿ ಒಂದು ಹೊಸ ಬುಟ್ಟಿಯನ್ನೂ ಒಂದು ಬಟ್ಟೆಯನ್ನೂ ಕೊಂಡುಕೊಂಡು ಅವೆರಡನ್ನೂ ಹತ್ತಿರ ಇದ್ದ ಒಂದು ಕೊಳದಲ್ಲಿ ಚೆನ್ನಾಗಿ ಶುದ್ಧಿ ಮಾಡಿದನು ಆಮೇಲೆ ಬಿಲ್ವ ಪತ್ರೆಯನ್ನು ಬುಟ್ಟಿ ತುಂಬಾ ಬಿಡಿಸಿಕೊಂಡು ಒದ್ದೆಬಟ್ಟೆಯನ್ನು ಆ ಬುಟ್ಟಿಯ ಮೇಲೆ ಹೊದ್ದಿಸಿ, ಹೊತ್ತುಕೊಂಡು ಮಧ್ಯಾಹ್ನಾತ್ಪರ ಮೂರು ಗಂಟೆಯ ಹೊತ್ತಿಗೆ ಕಾಮಾರಪುಕುರಕ್ಕೆ ಹಿಂದಿರುಗಿ ಬಂದನು ಮನೆಗೆ ಹೋಗಿ ಸ್ನಾನಮಾಡಿ ಮಹಾ ಉತ್ಸಾಹದಿಂದ ಮಹಾದೇವನ ಮತ್ತು ಶೀತಲಾ ದೇವಿಯ ಪೂಜೆಯನ್ನು ಸಾವಕಾಶವಾಗಿ ಮಾಡಿದನು. ಆಮೇಲೆ ಊಟಕ್ಕೆ ಕುಳಿತನು ಚಂದ್ರಾದೇವಿಗೆ ಆತನನ್ನು ಪ್ರಶ್ನೆಮಾಡಲು ಆಗ ಅವಕಾಶ ಸಿಕ್ಕಿದುದರಿಂದ ಮೇದಿನೀಪುರಕ್ಕೆ ಹೋಗದಿರಲು ಕಾರಣವೇನೆಂದು ಕೇಳಿದಳು. ಆ ಕಥೆಯನ್ನೆಲ್ಲ ಕೇಳಿ ಬಿಲ್ವಪತ್ರೆಯಿಂದ ದೇವತಾರ್ಚನೆ ಮಾಡುವುದಕ್ಕಾಗಿ ಇಷ್ಟು ದಾರಿಯನ್ನು ನಡೆದುದನ್ನು ತಿಳಿದು ಆಕೆಯು ಬಹಳ ಆಶ್ಚರ್ಯಪಟ್ಟಳು ಮರುದಿನ ಪ್ರಾತಃಕಾಲದಲ್ಲಿ ಕ್ಷುದಿರಾಮನು ಪುನಃ ಮೇದಿನೀಪುರಕ್ಕೆ ಹೊರಟನು.

**ರಾಮಕುಮಾರ ಮತ್ತು ಕಾತ್ಯಾಯನಿ ಯವರ ವಿವಾಹ**

ಕ್ಷುದಿರಾಮನು ಕಾಮಾರಪುಕುರದಲ್ಲಿ ವಾಸಮಾಡುವುದಕ್ಕೆ ಆರಂಭವಾಗಿ ಆರು ವರ್ಷಗಳಾದುವು ಆಗ ಆತನ ಮಗ ರಾಮಕುಮಾರನಿಗ ವಯಸ್ಸು ಹದಿನಾರುವರ್ಷ. ಮಗಳು ಕಾತ್ಯಾಯನಿಗೆ ಹನ್ನೊಂದುವರ್ಷ ಮಗಳು ವಿವಾಹಯೋಗ್ಯಳಾದುದನ್ನು ಕಂಡು ಆತನು ವರನನ್ನು ಹುಡುಕುವುದಕ್ಕೆ ಮೊದಲು ಮಾಡಿದನು. ಕಾಮಾರಪುಕುರಕ್ಕೆ ವಾಯವ್ಯ ದಿಕ್ಕಿನಲ್ಲಿ ಒಂದು ಹರದಾರಿ ದೂರದಲ್ಲಿರುವ ಆನೂರು ಗ್ರಾಮದ ಕೇನಾರಾಮ್ ವಂದ್ಯೋಪಾಧ್ಯಾಯನಿಗೆ ತನ್ನ ಮಗಳನ್ನು

ಕೊಟ್ಟು ಕೇನಾರಾಮನ ತಂಗಿಯನ್ನು ತನ್ನ ಮಗನಿಗೆ ಮದುವೆಮಾಡಿದನು. ರಾಮಕುಮಾರನು ಹತ್ತಿರಿದ್ದ ಗ್ರಾಮದ ಚತುಷ್ಪಾಟಿ (ಪಾಠಶಾಲೆ)ಯಲ್ಲಿ ಅದಕ್ಕೆ ಮೊದಲೇ ವ್ಯಾಕರಣ ಮತ್ತು ಸಾಹಿತ್ಯ ಪಾಠಗಳನ್ನೂ ಸಮಾಪ್ತಿ ಮಾಡಿ ಈಗ ಸ್ಮೃತಿ ಶಾಸ್ತ್ರವನ್ನು ಅಧ್ಯಯನ ಮಾಡುತ್ತಿದ್ದನು.

**ಸುಖಲಾಲ್ ಗೋಸ್ವಾಮಿಯ ಮರಣ ಇತ್ಯಾದಿಗಳು**

ಇನ್ನು ಮೂರು ನಾಲ್ಕು ವರ್ಷಗಳು ಕಳೆದವು. ರಘುವೀರನ ದಯೆಯಿಂದ ಕ್ಷುದಿರಾಮನ ಸಂಸಾರದಲ್ಲಿ ಮೊದಲಿಗಿಂತಲೂ ಈಗ ಅನೇಕ ಅನುಕೂಲಗಳಿದ್ದವು. ಆತನು ನಿಶ್ಚಿಂತನಾಗಿ ಭಗವದಾರಾಧನೆಯಲ್ಲಿ ಕಾಲಕಳೆಯುತ್ತಿದ್ದನು ಈ ನಾಲ್ಕು ವರ್ಷಗಳಲ್ಲಿ ರಾಮಕುಮಾರನು ಸ್ಮೃತಿಯ ಅಧ್ಯಯನವನ್ನು ಮುಗಿಸಿ ಸಂಸಾರದ ಆರ್ಥಿಕ ಸ್ಥಿತಿಯನ್ನು ಉನ್ನತಿಗೊಳಿಸಬೇಕೆಂದು ತನ್ನ ಕೈಲಾದಮಟ್ಟಿಗೆ ಹಣವನ್ನು ಸಂಪಾದಿಸುವುದಕ್ಕೆ ಆರಂಭಿಸಿದನು. ಸುಮಾರು ಇದೇ ಕಾಲದಲ್ಲಿ ಕ್ಷುದಿರಾಮನ ಪರಮಸ್ನೇಹಿತನಾದ ಸುಖಲಾಲಗೋಸ್ವಾಮಿಯು ದೇಹತ್ಯಾಗ ಮಾಡಿದನು. ಪ್ರಿಯ ಸ್ನೇಹಿತನ ಮರಣದಿಂದ ಕ್ಷುದಿರಾಮನು ಬಹಳ ವ್ಯಥೆ ಪಟ್ಟನೆಂದು ಹೇಳಬೇಕಾದ ಆವಶ್ಯಕವಿಲ್ಲ

**ಕ್ಷುದಿರಾಮನು ಸೇತುಬಂಧತೀರ್ಥಕ್ಕೆ ಹೋದದ್ದು ರಾಮೇಶ್ವರನೆಂಬ ಮಗನು ಹುಟ್ಟಿದ್ದು.**

ರಾಮಕುಮಾರನು ಯೌವನಸ್ಥನಾಗಿ ಸಂಸಾರದ ಭಾರವನ್ನು ವಹಿಸಿದುದನ್ನು ನೋಡಿ ಕ್ಷುದಿರಾಮನು ನಿಶ್ಚಿಂತನಾಗಿ ತನ್ನ ಮನಸ್ಸನ್ನು ಬೇರೆ ವಿಷಯದ ಕಡೆಗೆ ತಿರುಗಿಸಿದನು ತೀರ್ಥಯಾತ್ರೆ ಹೋಗಬೇಕೆಂದು ಅವನ ಮನಸ್ಸಿನಲ್ಲಿ ಪ್ರಬಲವಾದ ಸಂಕಲ್ಪವುಂಟಾಯಿತು ಸುಮಾರು 1230ನೇ ವರ್ಷದಲ್ಲಿ ಆತನು ಪಾದಚಾರಿಯಾಗಿ ಸೇತುಬಂಧ ರಾಮೇಶ್ವರ ದರ್ಶನಕ್ಕಾಗಿ ಹೊರಟನು ದಾಕ್ಷಿಣಾತ್ಯ ಪ್ರದೇಶಗಳ ತೀರ್ಥಕ್ಷೇತ್ರಗಳನ್ನೆಲ್ಲ ನೋಡಿಕೊಂಡು ಸುಮಾರು ಒಂದು ವರ್ಷವಾದ ಮೇಲೆ ಊರಿಗೆ ಹಿಂದಿರುಗಿದನು ಸೇತುಬಂಧದಿಂದ ಈ ಸಮಯದಲ್ಲಿ ಆತನು ಒಂದು ಬಾಣಲಿಂಗವನ್ನು ಕಾಮಾರಪುಕುರಕ್ಕೆ ತಂದು ನಿತ್ಯವೂ ಪೂಜಿಸುತ್ತಿದ್ದನು ಕಾಮಾರಪುಕುರದಲ್ಲಿ ರಾಮೇಶ್ವರ ಎಂಬ ಈ ಬಾಣಲಿಂಗವು ರಘುವೀರ ಸಾಲಿಗ್ರಾಮದ ಮತ್ತು ಶೀತಲಾದೇವಿಯ ಘಟದ ಹತ್ತಿರ ಈಗಲೂ ಇರುತ್ತದೆ. ಅದು ಹೇಗಾದರೂ ಇರಲಿ. ಚಂದ್ರಾದೇವಿಯು ಬಹುಕಾಲವಾದ

ಮೇಲೆ ಈ ಸಮಯದಲ್ಲಿ ಪುನಃ ಗರ್ಭಿಣಿಯಾಗಿ 1232 ರಲ್ಲಿ ಒಬ್ಬ ಮಗನನ್ನು ಹೆತ್ತಳು. ರಾಮೇಶ್ವರ ತೀರ್ಥದಿಂದ ಹಿಂದಿರುಗಿ ಬಂದ ಮೇಲೆ ಈ ಪುತ್ರನಾದುದರಿಂದ ಕ್ಷುದಿರಾಮನು ಆ ಮಗುವಿಗೆ ರಾಮೇಶ್ವರನೆಂಬ ಹೆಸರನ್ನಿಟ್ಟನು.

ರಾಮಕುಮಾರನ ದೈವೀ ಶಕ್ತಿ

ಇದಾದ ಮೇಲೆ ಸುಮಾರು ಎಂಟು ವರ್ಷಗಳು ಹೆಚ್ಚಿನ ವಿಶೇಷಗಳ್ಯಾವುವೂ ಇಲ್ಲದೆ ಕ್ಷುದಿರಾಮನ ಸಂಸಾರವು ನಡೆಯಿತು ರಾಮಕುಮಾರನು ಸ್ಮೃತಿ ವಿಧಾನದಿಂದಲೂ ಶಾಂತಿಸ್ವಸ್ತ್ಯಯನಾದಿಗಳಿಂದಲೂ ಸಂಪಾದನೆ ಮಾಡುತ್ತಿದ್ದನು. ಆದುದರಿಂದ ಈಗ ಪೂರ್ವದಂತೆ ಸಂಸಾರದಲ್ಲಿ ಕಷ್ಟವೇನೂ ಇರಲಿಲ್ಲ ಶಾಂತಿಸ್ವಸ್ತ್ಯಯನಾದಿ ಕರ್ಮಗಳಲ್ಲಿ ರಾಮಕುಮಾರನು ಬಹಳ ಗಟ್ಟಿಗನೆಂದು ಹೆಸರಾಗಿದ್ದನು ಆತನಿಗೆ ಈ ವಿಷಯದಲ್ಲಿ ದೈವೀ ಶಕ್ತಿಯಿತ್ತೆಂದು ತಿಳಿದು ಬರುತ್ತದೆ. ಶಾಸ್ತ್ರಾಧ್ಯಯನ ಫಲವಾಗಿ ಆತನು ಇದಕ್ಕೆ ಮೊದಲೇ ಆದಿಶಕ್ತಿಯ ಉಪಾಸನೆಯಲ್ಲಿ ಬಹಳ ಶ್ರದ್ಧೆಯುಳ್ಳವನಾಗಿದ್ದನು ಮತ್ತು ಯೋಗ್ಯನಾದ ಗುರುವಿನ ಹತ್ತಿರ ದೇವೀ ಮಂತ್ರವನ್ನು ಉಪದೇಶ ಹೊಂದಿದ್ದನು. ಅಭೀಷ್ಟ ದೇವಿಯನ್ನು ನಿತ್ಯವೂ ಪೂಜೆಮಾಡುವ ಕಾಲದಲ್ಲಿ ಒಂದು ದಿನ ಅವನಿಗೆ ಅಪೂರ್ವದರ್ಶನ ಲಾಭವಾಯಿತು ದೇವಿಯು ತನ್ನ ಬೆರಳಿನಿಂದ ಆತನ ನಾಲಗೆಯ ಮೇಲೆ ಜ್ಯೋತಿಷ್ಯ ಶಾಸ್ತ್ರದಲ್ಲಿ ಸಿದ್ಧಿಯುಂಟಾಗಲೆಂದು ಕೆಲವು ಮಂತ್ರಾಕ್ಷರಗಳನ್ನು ಬರೆದಂತೆ ಆತನಿಗೆ ಅನುಭವವಾಯಿತು ಅಲ್ಲಿಂದ ಮುಂದೆ ರೋಗಿಗಳನ್ನು ನೋಡಿದ ಕೂಡಲೇ ಅವರಿಗೆ ಆರೋಗ್ಯವಾಗುವುದೇ ಇಲ್ಲವೇ ಎಂಬುದು ರಾಮಕುಮಾರನಿಗೆ ಗೊತ್ತಾಗುತ್ತಿತ್ತು ಈ ಶಕ್ತಿ ಇದ್ದುದರಿಂದ ಅವನು ರೋಗಿಗಳ ಸಂಬಂಧವಾಗಿ ಹೇಳುತ್ತಿದ್ದುದೆಲ್ಲ ನಿಜವಾಗುತ್ತಿತ್ತು ಹೀಗೆ ಭವಿಷ್ಯತ್ತನ್ನು ಹೇಳುವವನೆಂದು ಆ ಪ್ರಾಂತ್ಯದಲ್ಲೆಲ್ಲಾ ಆತನ ಪ್ರಸಿದ್ಧಿಯು ಹರಡಿತ್ತು. ಈ ಸಮಯದಲ್ಲಿ ಆತನು ವಿಶೇಷ ಕಾಯಿಲೆಯಿಂದ ನರಳುತ್ತಿದ್ದ ಒಬ್ಬ ಮನುಷ್ಯನಿಗೋಸ್ಕರ ಸ್ವಸ್ತ್ಯಯನ ಮಾಡುತ್ತಿದ್ದನು. ಮತ್ತು ಅವನನ್ನು ಕುರಿತು ಈ ಸ್ವಸ್ತ್ಯಯನ ವೇದಿಯಲ್ಲಿ ಹುಟ್ಟುವ ಗಿಡದಲ್ಲಿ ಬೀಜವಾದರೆ ಈ ಮನುಷ್ಯನಿಗೆ ಆರೋಗ್ಯವಾಗುವುದೆಂದು ಸ್ಪಷ್ಟವಾಗಿ ಹೇಳಿದನು. ಫಲವು ವಾಸ್ತವಿಕವಾಗಿ ಹಾಗೆಯೇ ಆಯಿತು. ಆತನ ಈ ಶಕ್ತಿಯ ಉದಾಹರಣ

ಸ್ವರೂಪವಾಗಿ ಆತನ ಅಣ್ಣನ ಮಗನಾದ ಶಿವರಾಮ ಚಟ್ಟೋಪಾಧ್ಯಾಯನು ಕೆಳಗೆ ಹೇಳುವ ವಿಷಯವನ್ನು ತಿಳಿಸಿದನು.

ಯಾವುದೋ ಒಂದು ಕಾರ್ಯಕ್ಕಾಗಿ ರಾಮಕುಮಾರನು ಕಲ್ಕತ್ತೆಗೆ ಹೋಗಿ ಒಂದು ದಿನ ಗಂಗಾನದಿಯಲ್ಲಿ ಸ್ನಾನಮಾಡುತ್ತಿದ್ದನು. ಆ ಸಮಯ ದಲ್ಲಿ ಯಾರೋ ಒಬ್ಬ ಧನಾಢ್ಯನು ಸಪರಿವಾರನಾಗಿ ಸ್ನಾನಮಾಡುವುದ ಕ್ಕೋಸ್ಕರ ಅಲ್ಲಿಗೆ ಹೋದನು ಆತನ ಹೆಂಡತಿಯ ಸ್ನಾನಕ್ಕಾಗಿ ಪಲ್ಲಕ್ಕಿ ಯನ್ನು ಗಂಗಾನದಿಯೊಳಕ್ಕೆ ತೆಗೆದುಕೊಂಡು ಹೋದರು. ಆಕೆಯು ಪಲ್ಲಕ್ಕಿ ಯಲ್ಲಿ ಕುಳಿತು ಸ್ನಾನಮಾಡುತ್ತಿದ್ದಳು ಹಳ್ಳಿಯಲ್ಲಿ ವಾಸಮಾಡುವ ರಾಮಕುಮಾರನು ಸ್ನಾನಕಾಲದಲ್ಲಿ ಸ್ತ್ರೀಯರು ಹೀಗೆ ಮಾಡುತ್ತಿದ್ದುದನ್ನು ನೋಡಿರಲಿಲ್ಲ. ಆದುದರಿಂದ ವಿಸ್ಮಿತನಾಗಿ ನೋಡುತ್ತ ಪಲ್ಲಕ್ಕಿಯಲ್ಲಿದ್ದ ಹೆಂಗಸಿನ ಮುಖವನ್ನು ಒಂದು ಕ್ಷಣ ನೋಡಿದನು ಮೇಲೆ ಹೇಳಿರುವ ದೈವೀ ಶಕ್ತಿಯ ಪ್ರಭಾವದಿಂದ ಆಕೆಯ ಮೃತ್ಯು ವಿಷಯವನ್ನೂ ತಿಳಿದವನಾಗಿ ಆಕ್ಷೇಪಿಸಿ ಹೀಗೆ ಹೇಳಿದನು. "ಅಹಾ! ಯಾರನ್ನು ಈ ದಿವಸ ಇಷ್ಟು ಕಟ್ಟಾದ ನಿಯಮದಿಂದ ಸ್ನಾನಮಾಡಿಸುತ್ತಾರೋ ನಾಳೆಯದಿನ ಅವರನ್ನು ಎಲ್ಲರ ಎದುರಿಗೂ ಗಂಗಾನದಿಯಲ್ಲಿ ವಿಸರ್ಜನೆ ಮಾಡಬೇಕಾಗುತ್ತದೆ." ಆ ಧನಾಢ್ಯನು ಈ ಮಾತನ್ನು ಕೇಳಿ ಅದು ನಿಶ್ಚಯವೋ ಅಲ್ಲವೋ ಎಂಬುದನ್ನು ಪರೀಕ್ಷೆ ಮಾಡುವುದಕ್ಕಾಗಿ ರಾಮಕುಮಾರನನ್ನು ಬಲವಂತದಿಂದ ತನ್ನ ಮನೆಗೆ ಕರೆದುಕೊಂಡು ಹೋದನು ಆ ಮಾತು ಸುಳ್ಳಾದರೆ ರಾಮಕು ಮಾರನಿಗೆ ಚೆನ್ನಾಗಿ ಅಪಮಾನ ಮಾಡಬೇಕೆಂದು ಆತನ ಮನಸ್ಸಿನಲ್ಲಿತ್ತು. ಆ ಹೆಂಗಸು ಸಂಪೂರ್ಣ ಆರೋಗ್ಯವಾಗಿದ್ದುದರಿಂದ ಆರೀತಿ ಆಗುವ ಸಂಭವವು ಯಾವುದೂ ಕಂಡುಬರಲಿಲ್ಲ ಆದರೂ ಕೊನೆಗೆ ರಾಮಕುಮಾರನು ಹೇಳಿದ್ದು ನಿಶ್ಚಯವಾಯಿತು. ಆಧನಾಢ್ಯನು ಆತನನ್ನು ಗೌರವಿಸಿ ಕಳುಹಿಸಿಕೊಡ ಬೇಕಾಯಿತು.

ಈಶಕ್ತಿಯ ಪರಿಚಯವನ್ನು ಕೊಡುವ ರಾಮಕುಮಾರನ ಹೆಂಡತಿಯ ಸಂಬಂಧದ ವಿಷಯ.

ತನ್ನ ಹೆಂಡತಿಯ ಅದೃಷ್ಟವನ್ನು ನೋಡಿ ರಾಮ ಕುಮಾರನು ಒಂದು ಸಮಯದಲ್ಲಿ ವಿಷಮ ಫಲವಾಗುವು ದೆಂದು ನಿರ್ಣಯಿಸಿದನು. ಪರಿಣಾಮದಲ್ಲಿ ಹಾಗೆಯೇ ಆಯಿತು. ಆತನ ಹೆಂಡತಿಯು ಸುಲಕ್ಷಣ ಸಂಪನ್ನೆಯಾಗಿ ದ್ದಳು. ಬಹುಶಃ ೧೭೨೬ ರಲ್ಲಿ ರಾಮಕುಮಾರನು

ಎಂದು ಪಾಣಿಗ್ರಹಣವಾಗಿ ಏಳು ವರ್ಷದವಳಾದ ತನ್ನ ಪತ್ನಿಯನ್ನು ಕಾಮಾರಪುಕುರಕ್ಕೆ ಕರೆದುಕೊಂಡು ಬಂದನೋ ಅಂದಿನಿಂದಲೂ ಆತನಿಗೆ ಅದೃಷ್ಟವು ಹೆಚ್ಚುವುದಕ್ಕೆ ಕಾರಣವಾಯಿತು. ಆತನ ತಂದೆಯ ದರಿದ್ರ ಸಂಸಾರದಲ್ಲಿಯೂ ಅಂದಿನಿಂದ ಈ ವಿಧವಾದ ಪರಿವರ್ತನವಾಯಿತು. ಏಕೆಂದರೆ, ಕ್ಷುದಿರಾಮನ ಅಳಿಯನಾದ ಮೇದಿನೀ ಪುರದ ರಾಮಚಾಂದಾ ವಂದ್ಯೋಪಾಧ್ಯಾಯನು ತಿಂಗಳು ತಿಂಗಳಿಗೆ ಹಣ ಕಳುಹಿಸುವುದಕ್ಕೆ ಮೊದಲು ಮಾಡಿದುದು ಅಂದಿನಿಂದಲೇ ಸ್ತ್ರೀಯಾಗಲಿ, ಪುರುಷನಾಗಲಿ ಮೊದಲು ಮನೆಯಲ್ಲಿ ಪ್ರವೇಶಿಸಿದಾಗ ಹೀಗೆ ಶುಭ ಫಲವಾದರೆ ಪರಿವಾರದ ಸಮಸ್ತರೂ ವಿಶೇಷ ಶ್ರದ್ಧೆಯಿಂದಲೂ ಪ್ರೀತಿಯಿಂದಲೂ ಅವರನ್ನು ನೋಡುತ್ತಾರೆಂದು ಹೇಳಬೇಕಾದುದಿಲ್ಲ ಇದರ ಮೇಲೆ ರಾಮಕುಮಾರನ ಹೆಂಡತಿಯಾದ ಆ ಚಿಕ್ಕ ಹುಡಿಗಿಯು ಆ ಕಾಲದಲ್ಲಿ ಅವರ ಮನೆಯಲ್ಲಿ ಇದ್ದ ಒಬ್ಬಳೇ ಸೊಸೆ. ಹೀಗಿದ್ದುದರಿಂದ ಆ ಹುಡುಗಿಯು ಎಲ್ಲರ ಆದರಕ್ಕೂ ಪಾತ್ರಳಾಗಿದ್ದಳು ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. ಹೀಗೆ ಅತಿ ಆದರದ ಸಲವಾಗಿ ಅನೇಕ ಸದ್ಗುಣಗಳಿಂದ ಕೂಡಿದ ಆಕೆಯಲ್ಲಿ ಅನೇಕ ದೋಷಗಳಿಗೆ ಕಾರಣ ವಾಯಿತು ಆಕೆಯು ದುರಭಿಮಾನಿಯೂ, ಹೇಳಿದ ಮಾತನ್ನು ಕೇಳದವಳೂ ಆದಳು ಈ ದೋಷವು ಮನೆಯಲ್ಲಿ ಎಲ್ಲರಿಗೂ ಗೊತ್ತಿದ್ದರೂ ಯಾರೂ ಏನೂ ಹೇಳುತ್ತಿರಲಿಲ್ಲ ಆಕೆಯನ್ನು ತಿದ್ದುವುದಕ್ಕೂ ಪ್ರಯತ್ನ ಪಡುತ್ತಿರಲಿಲ್ಲ. ಸಣ್ಣ ಸಣ್ಣ ದೋಷಗಳಿದ್ದರೂ ಆಕೆಯು ಮನೆಗೆ ಬಂದಂದನಿಂದಲೂ ಸಂಸಾರ ದಲ್ಲಿ ಐಶ್ವರ್ಯ ಹೆಚ್ಚಲಿಲ್ಲವೇ ಎಂಬದಾಗಿ ಅವರು ಅಂದುಕೊಳ್ಳುತ್ತಿದ್ದರು. ಕೆಲವು ದಿನಗಳಾದಮೇಲೆ ಒಂದು ದಿನ ರಾಮಕುಮಾರನು ಪ್ರಾಪ್ತಯೌವನ ಳಾದ ತನ್ನ ಹೆಂತಿಯನ್ನು ನೋಡಿ “ ಈಕೆಯೇನೋ ಸುಲಕ್ಷಣ ಸಂಪನ್ನೆ, ಗರ್ಭಿಣಿಯಾದರೆ ಇವಳು ಸತ್ತು ಹೋಗುತಾಳೆ ” ಎಂದು ಹೇಳಿದನು. ಆಮೇಲೆ ಒಹು ದಿನಗಳಾದರೂ ಹೆಂಡತಿಯು ಗರ್ಭಿಣಿಯಾಗದೇ ಇದ್ದುದನ್ನು ನೋಡಿ ಆಕೆಯು ಬಂಜೆಯೆಂದು ಭಾವಿಸಿ ನಿಶ್ಚಿಂತನಾದನು. ಆದರೆ ಆತನ ಹೆಂಡತಿಯು ಮುವ್ವತ್ತೈದು ವರ್ಷ ವಯಸ್ಸಾದಾಗ ಗರ್ಭಧಾರಣ ಮಾಡಿದಳು. ಒಹು ಸುಂದರನಾದ ಒಬ್ಬ ಪುತ್ರನನ್ನು ಹೆತ್ತು ಸ್ವರ್ಗಸ್ಥಳಾದಳು. ಈ ಮಗನಿಗೆ ಅಕ್ಷಯ ಎಂಬ ಹೆಸರನ್ನಿಟ್ಟರು. ಇದು ಬಹುಮುಂದಿನ ಕಾಲದ ಮಾತಾದರೂ ಅನುಕೂಲಕ್ಕಾಗಿ ಪಾಠಕರಿಗೆ ಇದನ್ನು ಇಲ್ಲಿಯೇ ತಿಳಿಸಿದ್ದೇವೆ.

ಕ್ಷುದಿರಾಮನ ಪರಿವಾರದಲ್ಲಿದ್ದ ಸಕಲರ ವಿಶೇಷ ಗುಣಗಳು.

ಕ್ಷುದಿರಾಮನ ಧರ್ಮಸಂಸಾರದಲ್ಲಿ ಸ್ತ್ರೀ ಪುರುಷರೆಲ್ಲರಲ್ಲಿಯೂ ಒಂದು ವಿಶೇಷತ್ವವಿತ್ತು. ಸ್ವಲ್ಪ ವಿಚಾರ ಮಾಡಿ ನೋಡಿದರೆ ಅವರಲ್ಲಿ ಪ್ರತಿಯೊಬ್ಬರಲ್ಲಿಯೂ ಇದ್ದ ಈ ವಿಶೇಷತ್ವವು ಆಧ್ಯಾತ್ಮಿಕರಾಜ್ಯದ ಸೂಕ್ಷ್ಮಶಕ್ತಿಗಳಿಂದ ಉಂಟಾದುದೆಂದು ಗೊತ್ತಾಗುತ್ತೆ. ಕ್ಷುದಿರಾಮನಲ್ಲಿಯೂ ಆತನ ಪತ್ನಿಯಲ್ಲಿಯೂ ಈ ವಿಶೇಷತ್ವವು ಅಧಿಕವಾಗಿ ಪ್ರಕಾಶಿತವಾಗಿದ್ದುದರಿಂದಲೇ ಅವರ ಮಕ್ಕಳಲ್ಲಿಯೂ ಅದು ಇತ್ತೆಂದು ಕಾಣುತ್ತದೆ. ಕ್ಷುದಿರಾಮನ ಸಂಬಂಧವಾಗಿ ಈ ವಿಧವಾದ ಅನೇಕ ವಿಷಯಗಳನ್ನು ನಾವು ಆಗಲೇ ಪಾಠಕರಿಗೆ ತಿಳಿಸಿದ್ದೇವೆ ಚಂದ್ರಾದೇವಿಯ ವಿಷಯವಾಗಿ ಇಂತಹ ಒಂದು ಸಂಗತಿಯನ್ನು ತಿಳಿಸುವುದು ಈ ಸಂದರ್ಭದಲ್ಲಿ ಅಯುಕ್ತವಾಗಲಾರದು. ಆ ಸಂಗತಿಯಿಂದ ಗಂಡನಲ್ಲಿದ್ದಂತೆಯೇ ಚಂದ್ರಾದೇವಿಯಲ್ಲಿಯೂ ದಿವ್ಯದರ್ಶನ ಶಕ್ತಿಯು ಆಗಾಗ ಪ್ರಕಾಶವಾಗುತ್ತಿತ್ತೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಸಂಗತಿಯು ರಾಮಕುಮಾರನ ವಿವಾಹಕ್ಕೆ ಸ್ವಲ್ಪ ಪೂರ್ವದಲ್ಲಿ ನಡೆಯಿತು. ಇಪ್ಪತ್ತೈದು ವರ್ಷ ವಯಸ್ಸಾಗಿದ್ದ ರಾಮಕುಮಾರನು ಪಾಠಶಾಲೆಯಲ್ಲಿ ಓದುತ್ತಿದ್ದುದೂ ಅಲ್ಲದೆ ದೊಡ್ಡವರ ಮನೆಯಲ್ಲಿ ದೇವರ ಪೂಜೆ ಮಾಡಿಕೊಂಡು ಸಂಸಾರಕ್ಕೆ ತಕ್ಕಮಟ್ಟಿಗೆ ಸಹಾಯಮಾಡುತ್ತಿದ್ದನು

ಚಂದ್ರಾದೇವಿಯ ದಿವ್ಯದರ್ಶನಸಂಬಂಧವಾದ ಸಂಗತಿ

ಆಶ್ವೀಜ ಮಾಸದಲ್ಲಿ ಕೋಜಾಗರೀ ಲಕ್ಷ್ಮೀಯಪೂಜೆಯ ದಿವಸ (ಹುಣ್ಣಿಮೆಯ ದಿನ ಪೂಜಿಸತಕ್ಕ ಲಕ್ಷ್ಮೀ) ರಾಮಕುಮಾರನು ಭೂರ್‌ಸುಬೋ ಎಂಬ ಗ್ರಾಮದ ಯಜಮಾನನ ಮನೆಗೆ ಪೂಜೆಮಾಡಿಸುವುದಕ್ಕೆ ಹೋಗಿದ್ದನು ಅರ್ಧರಾತ್ರಿಯಾದರೂ ಮಗನು ಮನೆಗೆ ಹಿಂದಿರುಗಿ ಬರದಿದ್ದುದನ್ನು ನೋಡಿ ಚಂದ್ರಾದೇವಿಗೆ ಬಹಳ ಗಾಬರಿಯಾಯಿತು ಮನೆಯ ಹೊರಗೆ ಬಂದು ಅವನು ಬರುವ ದಾರಿಯನ್ನೇ ನೋಡುತ್ತಾ ನಿಂತಿದ್ದಳು ಸ್ವಲ್ಪ ಹೊತ್ತು ಆದಮೇಲೆ ಬಹು ದೂರದಲ್ಲಿ ಭೂರ್‌ಸುಬೋದ ಕಡೆಯಿಂದ ಯಾರೋ ಒಬ್ಬರು ಕಾಮಾರಪುಕುರದಕಡೆ ಬರುವಂತೆ ಕಂಡಿತು ಮಗನು ಬರುತ್ತಾನೆಂದು ಭಾವಿಸಿ ಆಕೆಯು ಬಹಳ ಉತ್ಸಾಹದಿಂದ ಮುಂದೆ ಹೋಗಿ ನೋಡುತ್ತಿದ್ದಳು. ಬರುತ್ತಿದ್ದ ವ್ಯಕ್ತಿಯು ಹತ್ತಿರ ಬಂದಾಗ ನೋಡಲು ರಾಮಕುಮಾರನಾಗಿರಲಿಲ್ಲ. ಯಾರೋ ಒಬ್ಬ ಪರಮಸುಂದರಿಯಾದ ಸ್ತ್ರೀಯು ಅನೇಕ ಅಲಂಕಾರಗಳಿಂದ

ಭೂಷಿತಳಾಗಿ ಏಕಾಕಿನಿಯಾಗಿ ಬರುತ್ತಿದ್ದಳು. ಮಗನಿಗೆ ಏನಾಯಿತೋ ಎಂದು ಚಂದ್ರಾದೇವಿಯು ಬಹಳ ಚಿಂತೆಯಲ್ಲಿದ್ದಳು ಆದುದರಿಂದ ಉತ್ತಮ ವಂಶದವಳಾದ ಯುವತಿಯು ಗಭೀರ ರಾತ್ರಿಯಲ್ಲಿ ಒಬ್ಬಳೇ ದಾರಿಯಲ್ಲಿ ಬರುತ್ತಿದ್ದುದನ್ನು ನೋಡಿ ಆಕೆಗ ಆಶ್ಚರ್ಯವಾಯಿತು. ಸರಳಭಾವದಿಂದ ಆಕೆಯ ಹತ್ತಿರಕ್ಕೆ ಹೋಗಿ " ಅಮ್ಮಾ ! ನೀನು ಎಲ್ಲಿಂದ ಬರುತ್ತಿದ್ದೀ ?" ಎಂದು ಕೇಳಿದಳು ಆ ಹೆಂಗಸು " ಭೂರ್‌ಸುಬೋಯಿಂದ " ಎಂದು ಉತ್ತರ ಕೊಟ್ಟಳು. ಚಂದ್ರಾದೇವಿಯು " ನನ್ನ ಮಗ ರಾಮಕುಮಾರನನ್ನು ನೀವು ನೋಡಿದಿರಾ ? ಆತನು ಹಿಂದಿರುಗಿ ಬರುತ್ತಿದ್ದಾನೆಯೆ ? " ಎಂದು ಆಕೆಯನ್ನು ಕೇಳಿದಳು ಅಪರಿಚಿತಳಾದ ಹೆಂಗಸಿಗೆ ತನ್ನ ಮಗನು ಹೇಗೆ ಗೊತ್ತಾಗಬೇಕು ಎಂಬುದು ಆಕೆಯ ಮನಸ್ಸಿಗೆ ಹೊಳೆಯಲೇ ಇಲ್ಲ. ಆ ಹೆಂಗಸು ಆಕೆಯನ್ನು ಸಮಾಧಾನಮಾಡುತ್ತಾ " ಹೌದು, ನಿನ್ನ ಮಗನು ಯಾವ ಮನೆಯಲ್ಲಿ ಪೂಜೆ ಮಾಡಿಸುವುದಕ್ಕೆ ಹೋಗಿದ್ದಾನೆಯೋ ಆ ಮನೆಯಿಂದಲೇ ನಾನು ಈಗ ಬರುತ್ತಿದ್ದೇನ ಭಯವಿಲ್ಲ. ನಿನ್ನ ಮಗ ಈಗಲೇ ಬರುತ್ತಾನೆ " ಎಂದು ಹೇಳಿದಳು. ಚಂದ್ರಾದೇವಿಗ ಇಷ್ಟು ಹೊತ್ತಿಗೆ ಸಮಾಧಾನವಾಗಿ ಬೇರೆ ವಿಷಯವನ್ನು ಯೋಚಿಸುವುದಕ್ಕೆ ಮನಸ್ಸಾಯಿತು. ಆ ಹೆಂಗಸಿನ ಅಪೂರ್ವವಾದ ರೂಪವನ್ನೂ ಬಹು ಬೆಲೆಯಾದ ಶೀರೆಯನ್ನೂ ಮತ್ತು ವಿಧ ವಿಧವಾದ ಹೊಸ ಹೊಸ ಒಡವೆಗಳನ್ನೂ ನೋಡಿಯೂ ಆಕೆಯ ಮಧುರವಾದ ಮಾತುಗಳನ್ನು ಕೇಳಿಯೂ ಆಕೆಯನ್ನು ಕುರಿತು " ಅಮ್ಮಾ ! ನಿನಗಿನ್ನೂ ಚಿಕ್ಕ ವಯಸ್ಸು ಇಷ್ಟೊಂದು ಒಡೆವೆಗಳನ್ನೂ ಇಂಥಾ ಶೀರೆಯನ್ನೂ ಇಟ್ಟುಕೂಂಡು ಇಷ್ಟು ರಾತ್ರಿಯಲ್ಲಿ ಎಲ್ಲ ಹೋಗುತ್ತಿ ? ನಿನಗಿಷ್ಟು ಒಡವೆ ಎಲ್ಲಿಯದು ?" ಎಂದು ಕೇಳಿದಳು ಆ ಹೆಂಗಸು ನಗುತ್ತ ನಗುತ್ತ " ನನ್ನ ಹೆಸರು ಕುಂಡಲ ಈಗ ನಾನು ಇನ್ನು ಬಹು ದೂರ ಹೋಗಬೇಕು " ಎಂದು ಹೇಳಿದಳು. ಚಂದ್ರಾದೇವಿಯು ಆಕೆಯು ಏನೋ ಕಷ್ಟದಲ್ಲಿರಬೇಕೆಂದು ಭಾವಿಸಿ ಸ್ನೇಹದಿಂದ ಹೀಗ ಹೇಳಿದಳು " ಬಾರಮ್ಮಾ, ನಮ್ಮ ಮನೆಯಲ್ಲಿ ಈದಿನ ರಾತ್ರಿ ವಿಶ್ರಾಂತಿಯನ್ನು ತಗೆದುಕೊಂಡು ಬೆಳಿಗ್ಗೆ ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಗಬಹುದು " ಅದನ್ನು ಕೇಳಿ ಆ ಹೆಂಗಸು " ಆಗುವುದಿಲ್ಲಮ್ಮಾ. ನಾನು ಈಗಲೇ ಹೋಗಬೇಕು. ನಿಮ್ಮ ಮನೆಗೆ ನಾನು ಇನ್ನೊಂದು ಸಲ ಬರುತ್ತೇನೆ " ಎಂಬದಾಗಿ ಹೇಳಿದಳು ಹೀಗೆ ಹೇಳಿ ಆ

ಹೆಂಗಸು ಚಂದ್ರಾದೇವಿಯ ಅಪ್ಪಣೆಯನ್ನು ಪಡೆದು ಆಕೆಯ ಮನೆಯ ಪಕ್ಕದಲ್ಲಿದ್ದ ಲಾಹಾಬಾಬುವಿನ ಕಣಜಗಳಿದ್ದ ಕಡೆಗೆ ಹೊರಟು ಹೋದಳು. ರಸ್ತೆಯಲ್ಲಿ ಹೋಗದೆ ಲಾಹಾಬಾಬುವಿನ ಮನೆಯಕಡೆ ಆಕೆಯು ಹೋಗುವುದನ್ನು ನೋಡಿ ಚಂದ್ರಾದೇವಿಯು ಆಶ್ಚರ್ಯಪಟ್ಟು ಹೆಂಗಸು ದಾರಿಯನ್ನು ಮರೆತಿರಬಹುದೆಂದು ಭಾವಿಸಿ, ಅಲ್ಲಿಯೇ ನಿಂತುಕೊಂಡು ನಾಲ್ಕೂ ಕಡೆಗೂ ಪರೀಕ್ಷಿಸಿ ನೋಡಿದರೂ ಆಕೆಯು ಕಣ್ಣಿಗೆ ಕಾಣಲಿಲ್ಲ ಆ ಹೆಂಗಸು ಆಡಿದ ಮಾತುಗಳನ್ನು ಸ್ಮರಿಸುತ್ತಾ ಇರಲು ಆಕೆಯ ಮನಸ್ಸಿನಲ್ಲಿ ತಾನು ಲಕ್ಷ್ಮಿಯನ್ನೇ ನೋಡಿರಬಹುದೇ ಎಂಬದಾಗಿ ಯೋಚನೆ ಬಂತು ಆಮೇಲೆ ಕಂಪಿತ ಹೃದಯಳಾಗಿ ಗಂಡನ ಬಳಿಗೆ ಹೋಗಿ ಈ ವಿಷಯವನ್ನೆಲ್ಲ ಆದ್ಯೋಪಾಂತವಾಗಿ ತಿಳಿಸಿದಳು. ಕ್ಷುದಿರಾಮನು ಅದನ್ನೆಲ್ಲ ಕೇಳಿ “ಲಕ್ಷ್ಮೀದೇವಿಯು ನಿನ್ನ ಮೇಲೆ ಕೃಪೆ ಮಾಡಿ ದರ್ಶನವನ್ನು ಕೊಟ್ಟಳು” ಎಂದು ಆಕೆಯನ್ನು ಸಮಾಧಾನ ಪಡಿಸಿದನು. ಸ್ವಲ್ಪ ಹೊತ್ತಾದ ಮೇಲೆ ರಾಮಕುಮಾರನು ಮನೆಗೆ ಹಿಂದಿರುಗಿ ಒಂದು ತಾಯಿಯಿಂದ ಈ ವಿಷಯವನ್ನೆಲ್ಲ ಕೇಳಿ ಆಶ್ಚರ್ಯಪಟ್ಟನೆಂದು ಹೇಳಬೇಕಾದುದಿಲ್ಲ

**ಕ್ಷುದಿರಾಮನು ಗಯಾತೀರ್ಥಕ್ಕೆ ಹೋದುದು**

ಸನ್ 1241 ರಲ್ಲಿ ಕ್ಷುದಿರಾಮನ ಜೀವನದಲ್ಲಿ ಒಂದು ವಿಶೇಷ ಸಂಗತಿಯು ಉಂಟಾಯಿತು. ತೀರ್ಥಯಾತ್ರೆ ಮಾಡಬೇಕೆಂಬ ಅಭಿಲಾಷೆಯು ಆತನ ಮನಸ್ಸಿನಲ್ಲಿ ಪುನಃ ಪ್ರಬಲವಾಗಲು ಪಿತೃಗಳ ಉದ್ಧಾರಕ್ಕಾಗಿ ಗಯೆಗೆ ಹೋಗಬೇಕೆಂದು ಈಗ ಆತನು ಸಂಕಲ್ಪಿಸಿದನು. ಅರವತ್ತು ವರ್ಷ ವಯಸ್ಸಾಗಿದ್ದರೂ ಆತನು ಪಾದಚಾರಿಯಾಗಿ ಗಯಾಕ್ಷೇತ್ರಕ್ಕೆ ಯಾತ್ರೆ ಹೋಗುವುದಕ್ಕ ಸ್ವಲ್ಪವೂ ಹಿಂಜರಿಯಲಿಲ್ಲ. ಹೇಮಾಂಗಿನಿ ದೇವಿಯ ಮಗ ಹೃದಿರಾಮನು ಕ್ಷುದಿರಾಮನು ಗಯಾಕ್ಕೆ ಹೋದಕಾರಣ ಸಂಬಂಧವಾಗಿ ಒಂದು ಅದ್ಭುತವಾದ ಸಂಗತಿಯನ್ನು ಹೇಳುತ್ತಿದ್ದಾನೆ.

**ಕ್ಷುದಿರಾಮನ ಗಯಾ ಯಾತ್ರೆಯ ಸಂಬಂಧವಾಗಿ ಹೃದಿರಾಮನು ಹೇಳಿದ ಸಂಗತಿ.**

ತನ್ನ ಮಗಳು ಕಾತ್ಯಾಯನಿ ದೇವಿಗೆ ಬಹಳ ಕಾಯಲೆಯಾಗಿದೆಯೆಂಬ ಸುದ್ದಿಯನ್ನು ಕೇಳಿ ಕ್ಷುದಿರಾಮನು ಈ ಸಮಯದಲ್ಲಿ ಒಂದುದಿನ ಆಕೆಯನ್ನು ನೋಡುವುದಕ್ಕಾಗಿ ಆನೂರು ಗ್ರಾಮಕ್ಕೆ ಹೋದನು. ಕಾತ್ಯಾಯನೀ ದೇವಿಗೆ ಆಗ ಸುಮಾರು ಇಪ್ಪತ್ತೈದು ವರ್ಷ ವಯಸ್ಸು ಮಗಳಹಾವ

ಭಾವಗಳಿಂದಲೂ ಮಾತು ಕಥೆಗಳಿಂದಲೂ ಆಕೆಯ ಶರೀರದಲ್ಲಿ ಯಾವುದೋ ಭೂತವು ಆವೇಶವಾಗಿದೆಯೆಂದು ಆತನ ಮನಸ್ಸಿಗೆ ನಿಶ್ಚಯವಾಯಿತು. ಆತನು ಸಮಾಧಾನದಿಂದ ದೇವರನ್ನು ಸ್ಮರಿಸಿ ಮಗಳ ಶರೀರದಲ್ಲಿದ್ದ ಭೂತವನ್ನು ಕುರಿತು "ನೀನು ದೇವತೆಯಾಗು ಉಪದೇವತೆಯಾಗು ನನ್ನ ಮಗಳಿಗೆ ಏಕೆ ಈರೀತಿಯಾಗಿ ಕಷ್ಟವನ್ನು ಕೊಡುವೆ? ಬೇಗ ಆಕೆಯ ದೇಹವನ್ನು ಬಿಟ್ಟು ಬೇರೆಯಕಡೆಗೆ ಹೊರಡು" ಎಂಬದಾಗಿ ಹೇಳಿದನು. ಆತನ ಈ ಮಾತುಗಳನ್ನು ಕೇಳಿ ಆ ಭೂತವು ಭಯಪಟ್ಟು ಕಾತ್ಯಾಯನಿಯ ಶರೀರವನ್ನು ಅವಲಂಬಿಸಿ "ನೀವು ಗಯೆಗೆ ಹೋಗಿ ಪಿಂಡಪ್ರದಾನಮಾಡಿ ನನ್ನ ಕಷ್ಟವನ್ನು ನಿವಾರಣೆ ಮಾಡುವಹಾಗೆ ವಾಗ್ದಾನಮಾಡಿದರೆ ನಾನು ಈ ಕೂಡಲೆ ನಿಮ್ಮ ಮಗಳ ದೇಹವನ್ನು ಬಿಟ್ಟು ಹೊರಟುಹೋಗುತ್ತೇನೆ ಗಯಾ ಕ್ಷೇತ್ರಕ್ಕೆ ಹೋಗ ಬೇಕೆಂಬ ಉದ್ದೇಶ್ಯದಿಂದ ನೀವು ಮನೆಯನ್ನು ಬಿಟ್ಟು ಹೊರಟ ಕೂಡಲೆ ಈಕೆಗೆ ಯಾವ ಅಸ್ವಸ್ಥತೆಯೂ ಇರುವುದಿಲ್ಲ ಈ ಮಾತಿಗೆ ನಾನು ನಿಮ್ಮ ಎದುರಿಗ ಸಮ್ಮತಿ ಕೊಟ್ಟಿದ್ದೇನೆ" ಎಂಬದಾಗಿ ಹೇಳಿತು ಅನಂತರ ಕೃಷ್ಣದಿ ರಾಮನು ಆ ಭೂತದ ಕಷ್ಟವನ್ನು ನೋಡಿ ದುಃಖಿತನಾಗಿ "ಸಾಧ್ಯವಾದಷ್ಟು ಜಾಗ್ರತೆ ನಾನು ಗಯಾಕ್ಷೇತ್ರಕ್ಕ ಹೋಗಿ ನಿನ್ನ ಅಭಿಲಾಷೆಯನ್ನು ಪೂರ್ತಿ ಮಾಡುತ್ತೇನೆ. ಪಿಂಡಪ್ರದಾನ ಮಾಡಿದಮೇಲೆ ನೀನು ನಿಶ್ಚಯವಾಗಿಯೂ ಉದ್ಧಾರವಾದೆ, ಎಂಬುದಕ್ಕೆ ಯಾವುದಾದರೊಂದು ನಿದರ್ಶನ ಕಂಡು ಬಂದರೆ ನಾನು ಬಹು ಸುಖಿಯಾಗುತ್ತೇನೆ" ಎಂದು ಹೇಳಿದನು ಅದನ್ನು ಕೇಳಿ ಆ ಪ್ರೇತವು "ಈ ವಿಷಯದಲ್ಲಿ ನಿಶ್ಚಯವಾದ ಪ್ರಮಾಣವಾಗಿ ಎದುರಿಗೆ ಇರುವ ಬೇವಿನಮರದ ದೊಡ್ಡ ಕೊಂಬೆಯನ್ನು ನಾನು ಮುರಿದು ಹೋಗು ತ್ತೇನೆ ಅದೇ ಗುರುತು." ಎಂಬದಾಗಿ ಹೇಳಿತು. ಕೃಷ್ಣದಿರಾಮನು ಗಯಯಾತ್ರೆಗೆ ಹೋಗುವುದಕ್ಕ ಕಾರಣವು ಇದೆಂದು ಹೃದಿರಾಮನು ಹೇಳುತ್ತಿದ್ದನು ಆದಾದ ಕೆಲವು ದಿನಗಳಮೇಲೆ ಆ ಮರದ ಕೊಂಬೆಯು ಆದಾಗಿ ಅದೇ ಮುರಿದು ಹೋಗಲು ಎಲ್ಲರೂ ಆ ಪ್ರೇತವು ಉದ್ಧಾರವಾಯಿತು ಎಂಬುದನ್ನು ಧೃಡವಾಗಿ ತಿಳಿದುಕೊಂಡರು ಕಾತ್ಯಾಯನೀ ದೇವಿಗೂ ಅಂದಿ ನಿಂದಲೂ ಸಂಪೂರ್ಣವಾಗಿ ಗುಣವಾಯಿತು ಹೃದಿರಾಮನು ಹೇಳುವ ಸಂಗತಿಯು ಎಷ್ಟರಮಟ್ಟಿಗ ನಿಜವೋ ಗೊತ್ತಿಲ್ಲ ಆದರೆ ಈ ಸಮಯದಲ್ಲಿ ಕೃಷ್ಣದಿರಾಮನು ಗಯಾಕ್ಷೇತ್ರಕ್ಕೆ ಹೋದನೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ

**ಗಯಾಕ್ಷೇತ್ರದಲ್ಲಿ ಕ್ಷುದಿರಾಮನ ದೇವ ಸ್ವಪ್ನ.**

ಸನ್ 1241 ರಲ್ಲಿ (1835) ಛಳಿಗಾಲದಲ್ಲಿ ಕ್ಷುದಿರಾಮನು ಕಾಶೀಕ್ಷೇತ್ರವನ್ನೂ ಗಯಾಕ್ಷೇತ್ರವನ್ನೂ ದರ್ಶನ ಮಾಡುವುದಕ್ಕಾಗಿ ಹೊರಟನು. ಆತನು ಕಾಶಿಯಲ್ಲಿ ವಿಶ್ವೇಶ್ವರನ ದರ್ಶನಮಾಡಿ ಗಯಾಕ್ಷೇತ್ರಕ್ಕೆ ಹೊರಟಾಗ ಚೈತ್ರ ಮಾಸವಾಗಿತ್ತು ಮಧುಮಾಸದಲ್ಲಿ ಗಯೆಯಲ್ಲಿ ಪಿಂಡಪ್ರದಾನ ಮಾಡಿದರೆ ಪಿತೃಗಳಿಗೆ ಅಕ್ಷಯವಾದ ಪರಿತೃಪ್ತಿಯಾಗುವುದೆಂದು ತಿಳಿದೇ ಆತನು ಈ ಮಾಸದಲ್ಲಿ ಗಯೆಗೆ ಹೋದನೆಂದು ಕಾಣುತ್ತದೆ. ಒಂದು ತಿಂಗಳುಕಾಲ ಅಲ್ಲಿದ್ದು ಆತನು ಶಾಸ್ತ್ರೀಯವಾಗಿ ಕ್ಷೇತ್ರಕಾರ್ಯಗಳನ್ನೆಲ್ಲ ಮಾಡಿ ಕೊನೆಗೆ ಗದಾಧರನ ಪಾದಪದ್ಮದಲ್ಲಿ ಪಿಂಡಪ್ರದಾನ ಮಾಡಿದನು ಈ ರೀತಿಯಾಗಿ ಪಿತೃಕಾರ್ಯವನ್ನು ಯಥಾಶಾಸ್ತ್ರವಾಗಿ ಮಾಡಿದಮೇಲೆ ಕ್ಷುದಿರಾಮನ ಮನಸ್ಸಿನಲ್ಲಿ ಎಷ್ಟು ತೃಪ್ತಿಯೂ ಶಾಂತಿಯೂ ಉಂಟಾದುವೆಂಬುದನ್ನು ಹೇಳಲಾಗುವುದಿಲ್ಲ. ಪಿತೃ ಋಣವನ್ನು ತನ್ನ ಕೈಲಾದಮಟ್ಟಿಗೆ ತೀರಿಸಿ ಆತನು ನಿಶ್ಚಿಂತನಾದನು ಭಗವಂತನು ತನ್ನಂತಹ ಅಯೋಗ್ಯನಿಗೆ ಈ ಕಾರ್ಯವನ್ನು ಮಾಡುವಷ್ಟು ಶಕ್ತಿಯನ್ನು ಕೊಟ್ಟಿದ್ದಕ್ಕಾಗಿ ಆತನ ಮನಸ್ಸಿನಲ್ಲಿ ಕೃತಜ್ಞತೆಯೂ ದೀನಭಾವವೂ ಈಶ್ವರ ಪ್ರೇಮವೂ ಸಂಪೂರ್ಣವಾಗಿ ಉಂಟಾದುವು ಹಗಲು ಮಾತ್ರವೇ ಅಲ್ಲ ರಾತ್ರಿ ನಿದ್ದೆಹೋದಾಗಲು ಕೂಡ ಈ ವಿಧವಾದ ಶಾಂತಿಯೂ ಉಲ್ಲಾಸವೂ ಆತನನ್ನು ಬಿಡಲಿಲ್ಲ ಸ್ವಲ್ಪಹೊತ್ತು ನಿದ್ದೆಹೋದನೋ ಇಲ್ಲವೋ ಆತನಿಗೆ ಸ್ವಪ್ನ ಬಂದಿತು ದೇವಾಲಯದಲ್ಲಿ ಗದಾಧರನ ಪಾದ ಸಮ್ಮುಖದಲ್ಲಿ ಪುನಃ ಆತನು ಪಿತೃಗಳಿಗೆ ಪಿಂಡಪ್ರದಾನ ಮಾಡುತ್ತಿದ್ದನು ಅವರು ದಿವ್ಯ ಜ್ಯೋತಿರ್ಮಯ ಶರೀರವುಳ್ಳವರಾಗಿ ಅದನ್ನು ಆನಂದದಿಂದ ಗ್ರಹಣಮಾಡಿ ಆತನನ್ನು ಆಶೀರ್ವದಿಸಿದರು. ಬಹು ದಿನಗಳಾದಮೇಲೆ ಅವರ ದರ್ಶನ ಲಾಭವನ್ನು ಹೊಂದಿ ಆತನಿಗೆ ಮನಸ್ಸು ತಡೆಯಲಾರದ ಹಾಗಾಯಿತು ಭಕ್ತಿಯಿಂದ ಆನಂದಾಶ್ರುವನ್ನು ಸುರಿಸುತ್ತ ಅವರ ಪಾದಗಳನ್ನು ಮುಟ್ಟಿ ನಮಸ್ಕಾರಮಾಡಿದನು. ಉತ್ತರಕ್ಷಣದಲ್ಲಿಯೇ ದೇವಸ್ಥಾನವು ಒಂದು ಅಪೂರ್ವವಾದ ಜ್ಯೋತಿಯಿಂದ ತುಂಬಿದ ಹಾಗೆ ಕಂಡಿತು ಪಿತೃಗಳು ಸಂಭ್ರಮದಿಂದ ಎರಡು ಪಾರ್ಶ್ವಗಳಲ್ಲಿಯೂ ಕೈಮುಗಿದುಕೊಂಡು ನಿಂತುಕೊಂಡು ದೇವಸ್ಥಾನದ ಮಧ್ಯದಲ್ಲಿದ್ದ ಒಂದು ವಿಚಿತ್ರ ಸಿಂಹಾಸನದಮೇಲೆ ಸುಖಾಸೀನನಾಗಿದ್ದ ಒಬ್ಬ ಅದ್ಭುತ ಪುರುಷನನ್ನು ಉಪಾಸನ ಮಾಡುತ್ತಿದ್ದರು.

ನವದೂರ್ವಾದಲಶ್ಯಾಮನಾದ ಜ್ಯೋತಿಮಂಡಿತತನುವಾದ ಆ ಪುರುಷನು ಪ್ರಸನ್ನ ದೃಷ್ಟಿಯಿಂದ ಅವರಕಡೆ ನೋಡಿ, ನಗುತ್ತಾ ಅವರನ್ನು ತನ್ನ ಹತ್ತಿರ ಬರುವಂತೆ ಇಂಗಿತ ಮಾಡಿದನು. ಯಂತ್ರದಂತೆ ಪರಿಚಾಲಿತನಾಗಿ ಆತನ ಎದುರಿಗೆ ತಾನು ಹೋಗಿ ನಿಂತನು ಭಕ್ತಿಯಿಂದ ದಂಡವತ್ಪ್ರಣಾಮ ಮಾಡಿ ಹೃದಯದ ಆವೇಗದಿಂದ ಅನೇಕವಾಗಿ ಸ್ತುತಿಸಿ ನಮಸ್ಕರಿಸಲಾರಂಭಿಸಿದನು. ಆ ದಿವ್ಯಪುರುಷನು ಅದರಿಂದ ಪರಿತುಷ್ಟನಾಗಿ ವೀಣಾಗಾನದಂತೆ ಮಧುರವಾದ ಸ್ವರದಿಂದ ಆತನನ್ನು ಕುರಿತು "ಕ್ಷುದಿರಾಮ, ನಿನ್ನ ಭಕ್ತಿಯಿಂದ ಪರಮ ಪ್ರಸನ್ನನಾಗಿದ್ದೇನೆ. ಪುತ್ರರೂಪದಿಂದ ನಿನ್ನ ಮನೆಯುಲ್ಲಿ ಅವತಾರಮಾಡಿ ನಾನು ನಿನ್ನ ಸೇವೆಯನ್ನು ಸ್ವೀಕರಿಸುತ್ತೇನೆ" ಎಂದು ಹೇಳಿದನು ಸ್ವಪ್ನಕ್ಕೂ ಅತೀತವಾದ ಈ ಮಾತನ್ನು ಕೇಳಿ ಅವನ ಮನಸ್ಸಿನಲ್ಲಿ ಉಂಟಾದ ಆನಂದಕ್ಕೆ ಮೇರೆಯೇ ಇರಲಿಲ್ಲ. ಆದರೆ ಉತ್ತರಕ್ಷಣದಲ್ಲಿಯೇ ಕೇವಲ ದರಿದ್ರನಾದ ತಾನು ಆತನಿಗೆ ತಿನ್ನುವುದಕ್ಕೆ ಏನು ಕೊಡಬಹುದು ? ಆತನನ್ನು ಎಲ್ಲಿ ಇಡಬೇಕು ? ಮುಂತಾದುದನೆಲ್ಲ ಯೋಚಿಸಿ ಬಹಳ ವಿಷಾದದಿಂದ ಕೂಡಿದವನಾಗಿ ಕಣ್ಣೀರು ಸುರಿಸುತ್ತ ದೇವರನ್ನು ಕುರಿತು "ಸ್ವಾಮಿ, ಹೀಗೆ ಮಾಡಬೇಡಿ ಈ ವಿಧವಾದ ಸೌಭಾಗ್ಯದಿಂದ ನನಗೆ ಏನೂ ಪ್ರಯೋಜನವಿಲ್ಲ. ಕೃಪೆಮಾಡಿ ತಾವು ತಮ್ಮ ದರ್ಶನವನ್ನು ಕೊಟ್ಟು ನನ್ನನ್ನು ಕೃತಾರ್ಥನನ್ನಾಗಿ ಮಾಡಿದಿರಿ ತಮ್ಮ ಈ ಅಭಿಪ್ರಾಯವನ್ನು ಸೂಚಿಸಿದ್ದೇ ಸಾಕು ನನಗೆ ಅದೇ ಯಥೇಷ್ಟವಾಯಿತು ನಿಜವಾಗಿಯೂ ನೀವು ಮಗನಾಗಿ ಹುಟ್ಟಿದರೆ ದರಿದ್ರನಾದ ನಾನು ನಿಮಗೆ ಏನು ಸೇವೆಯನ್ನು ಮಾಡಬಲ್ಲೆನು. ?" ಎಂಬುದಾಗಿ ಹೇಳಿದನು ಆ ದೇವಪುರುಷನು ಆಗ ಆತನ ಈ ವಿಧವಾದ ಪ್ರೇಮದ ಮಾತನ್ನು ಕೇಳಿ ವಿಶೇಷ ಪ್ರಸನ್ನನಾಗಿ "ಕ್ಷುದಿರಾಮ, ಭಯಪಡಬೇಡ, ನೀನು ಏನು ಕೊಡುತ್ತೀಯೋ ಅದನ್ನೇ ನಾನು ತೃಪ್ತಿಯಿಂದ ಪರಿಗ್ರಹಿಸುತ್ತೇನೆ ನನ್ನ ಅಭಿಲಾಷೆಯು ಪೂರ್ತಿಯಾಗುವುದಕ್ಕೆ ಅಡ್ಡಿಮಾಡಬೇಡ" ಎಂಬದಾಗಿ ಹೇಳಿದನು ಈ ಮಾತನ್ನು ಕೇಳಿ ಕ್ಷುದಿರಾಮನಿಗೆ ಮುಂದೆ ಏನು ಹೇಳಲೂ ಕೈಲಾಗಲಿಲ್ಲ ಆನಂದ, ದುಃಖ ಮೊದಲಾದ ಪರಸ್ಪರ ವಿಪರೀತವಾದ ಭಾವಗಳು ಆತನ ಮನಸ್ಸಿನಲ್ಲಿ ಜತೆ ಜತೆಗೇ ಹುಟ್ಟಿ ಆತನನ್ನು ಜ್ಞಾನಶೂನ್ಯನನ್ನಾಗಿ ಮಾಡಿದವು. ಅಷ್ಟು ಹೊತ್ತಿಗೆ ಅವನಿಗೆ ನಿದ್ರಾಭಂಗವಾಯಿತು

**ಕಾಮಾರಪುಕುರಕ್ಕೆ ಹಿಂದಿರುಗಿದ್ದು.**

ನಿದ್ರಾಭಂಗವಾದ ಮೇಲೆ ಕ್ಷುದಿರಾಮನಿಗೆ ತಾನಿರುವ ಸ್ಥಳವಾವುದೆಂಬುದನ್ನು ತಿಳಿದುಕೊಳ್ಳಲು ಬಹಳ ಹೊತ್ತಾಗಲಿಲ್ಲ. ಮೇಲೆ ಹೇಳಿದ ಸ್ವಪ್ನವು ಅವನನ್ನು ಸಂಜ್ಞಾಶೂನ್ಯನನ್ನಾಗಿ ಮಾಡಿತು ಆಮೇಲೆ ಕ್ರಮ ಕ್ರಮವಾಗಿ ಆತನಿಗೆ ಸ್ಥೂಲ ಜಗತ್ತಿನ ಜ್ಞಾನವು ಉಂಟಾಗಲು ಆತನು ಹಾಸಿಗೆಯನ್ನು ಬಿಟ್ಟೆದ್ದು ಈ ಅದ್ಭುತವಾದ ಸ್ವಪ್ನವನ್ನು ಸ್ಮರಿಸಿ ಏನೇನನ್ನೋ ಆಲೋಚಿಸಲಾರಂಭಿಸಿದನು. ಕೊನೆಗೆ ಅವನ ಮನಸ್ಸಿನಲ್ಲಿ ದೇವಸ್ವಪ್ನವು ಎಂದಿಗೂ ವ್ಯರ್ಥವಾಗುವುದಿಲ್ಲ. ನಿಜವಾಗಿಯೂ ಯಾರೋ ಒಬ್ಬ ಮಹಾಪುರುಷನು ತನ್ನ ಮನೆಯಲ್ಲಿ ಶ್ರೀಘ್ರವಾಗಿ ಜನ್ಮಗ್ರಹಣ ಮಾಡುತ್ತಾನೆ. ವೃದ್ಧವಯಸ್ಸಿನಲ್ಲಿ ನಿಜವಾಗಿಯೂ ತಾನು ಪುನಹ ಪುತ್ರನನ್ನು ನೋಡುತ್ತೇನೆ, ಎಂಬದಾಗಿ ನಿಶ್ಚಯ ಮಾಡಿಕೊಂಡನು ಅನಂತರ ಈ ಅದ್ಭುತ ಸ್ವಪ್ನದ ಫಲವನ್ನು ಪರೀಕ್ಷೆ ಮಾಡಿದ ಹೊರತು ಇದನ್ನು ಯಾರಮುಂದೆಯೂ ಹೇಳುವುದಿಲ್ಲ, ಎಂಬದಾಗಿ ಸಂಕಲ್ಪ ಮಾಡಿ ಕೆಲವು ದಿನಗಳಾದಮೇಲೆ ಗಯಾಕ್ಷೇತ್ರವನ್ನು ಬಿಟ್ಟು ಸನ್ ೧೨೪೨ ರಲ್ಲಿ ವೈಶಾಖಮಾಸದಲ್ಲಿ ಕಾಮಾರಪುಕುರಕ್ಕೆ ಹಿಂದಿರುಗಿದನು.

---

ಶ್ರೀಃ

# ಶ್ರೀ ರಾಮಕೃಷ್ಣ ಲೀಲಾಪ್ರಸಂಗ

## ನಾಲ್ಕನೆಯ ಅಧ್ಯಾಯ

### ಚಂದ್ರಾದೇವಿಯ ವಿಚಿತ್ರ ಅನುಭವ

**ಅವತಾರ ಪುರುಷರ ಆವಿರ್ಭಾವ ಕಾಲದಲ್ಲಿ ಅವರ ತಂದೆ ತಾಯಿಗಳಿಗೆ ಉಂಟಾಗುವ ದಿವ್ಯಾನುಭವದ ಸಂಬಂಧವಾದ ಶಾಸ್ತ್ರೋಕ್ತಿ**

ಜಗತ್ಪಾವನರಾದ ಮಹಾಪುರುಷರು ಜನ್ಮಗ್ರಹಣ ಮಾಡುವಕಾಲದಲ್ಲಿ ಅವರ ತಂದೆತಾಯಿಗಳ ಜೀವನದಲ್ಲಿ ಅಸಾಧಾರಣವಾದ ಆಧ್ಯಾತ್ಮಿಕ ಅನುಭವಗಳೂ ದರ್ಶನಗಳೂ ಉಂಟಾಗುತ್ತವೆಂಬುದು ಎಲ್ಲ ಜನಾಂಗಗಳ ಧರ್ಮಗ್ರಂಥಗಳಿಂದಲೂ ಗೊತ್ತಾಗುತ್ತದೆ. ಶ್ರೀರಾಮಚಂದ್ರ, ಶ್ರೀಕೃಷ್ಣ, ಬುದ್ಧದೇವ, ಯೇಸುಕ್ರಿಸ್ತ, ಶ್ರೀ ಶಂಕರಾಚಾರ್ಯ, ಶ್ರೀಕೃಷ್ಣಚೈತನ್ಯ ಮೊದಲಾದ ಯಾವ ಮಹಾಮಹಿಮರನ್ನು ಜನರು ಈಗಲೂ ಭಕ್ತಿಶ್ರದ್ಧೆಗಳಿಂದ ಪೂಜಿಸುತ್ತಿರುವರೋ ಅಂಥ ಪ್ರತಿಯೊಬ್ಬರ ತಂದೆತಾಯಿಗಳ ಸಂಬಂಧವಾಗಿಯೂ ಈ ವಿಷಯವು ಶಾಸ್ತ್ರಗಳಲ್ಲಿ ಬರೆಯಲ್ಪಟ್ಟಿದೆ ಪ್ರಮಾಣ ಸ್ವರೂಪವಾಗಿ ಕೆಳಗೆ ಬರೆದಿರುವ ಒಂದೊಂದು ವಿಷಯವನ್ನು ಜ್ಞಾಪಿಸಿಕೊಂಡರೆ ಪ್ರಕೃತಕ್ಕೆ ಸಾಕಾಗುತ್ತದೆ

ಯಜ್ಞಾವಶಿಷ್ಟ ಚರುವನ್ನು ಸ್ವೀಕರಿಸಿ ಕೌಸಲ್ಯಾದಿಗಳು ಗರ್ಭಧಾರಣ ಮಾಡಿದರೆಂಬ ವಿಷಯವು ಮಾತ್ರವೇ ರಾಮಾಯಣದಲ್ಲಿ ಉಕ್ತವಾಗಿಲ್ಲ. ರಾಮಲಕ್ಷ್ಮಣ ಭರತಶತೃಘ್ನರು ಹುಟ್ಟುವುದಕ್ಕೆ ಪೂರ್ವದಲ್ಲಿಯೂ ಹುಟ್ಟಿದ ಅನಂತರವೂ ಅವರು ವಿಷ್ಣುವಿನ ಅಂಶ ಸಂಭೂತರೆಂದೂ ದಿವ್ಯಶಕ್ತಿಸಂಪನ್ನರೆಂದೂ ಕೌಸಲ್ಯಾದಿಗಳಿಗೆ ತಿಳಿದಿತ್ತೆಂದೂ ಉಕ್ತವಾಗಿದೆ.

ಶ್ರೀಕೃಷ್ಣನ ಜನನೀ ಜನಕರು, ಆತನು ಗರ್ಭವನ್ನು ಪ್ರವೇಶಿಸಿದಾಗಲೂ ಹುಟ್ಟಿದ ಅನಂತರವೂ ಆತನು ಷಡೈಶ್ವರ್ಯಸಂಪನ್ನನಾದ ಈಶ್ವರ ರೂಪಿಯೆಂಬ

ಅನುಭವವನ್ನು ಪಡೆದಿದ್ದರು. ಅದೂ ಅಲ್ಲದೆ ಆತನು ಜನ್ಮಗ್ರಹಣ ಮಾಡಿದ ಉತ್ತರಕ್ಷಣದಿಂದ ಪ್ರತಿದಿನವೂ ಅವರ ಜೀವನದಲ್ಲಿ ಅನೇಕ ಅದ್ಭುತಗಳು ಸಂಭವಿಸಿದವು ಎಂಬುದು ಭಾಗವತಾದಿ ಪುರಾಣಗಳಲ್ಲಿ ಉಕ್ತವಾಗಿದೆ

ಬುದ್ಧದೇವನು ಗರ್ಭಪ್ರವೇಶ ಮಾಡುವಕಾಲದಲ್ಲಿ ಮಾಯಾದೇವಿಯು ಯಾವನೋ ಒಬ್ಬ ಪುರುಷಶ್ರೇಷ್ಠನು ಶ್ವೇತಹಸ್ತಿಯ ಆಕಾರವನ್ನು ಧರಿಸಿ ತನ್ನ ಉದರವನ್ನು ಪ್ರವೇಶಿಸಿದ ಹಾಗೂ, ಆಕೆಯ ಸೌಭಾಗ್ಯವನ್ನು ನೋಡಿ ಇಂದ್ರಾದಿ ದೇವತೆಗಳು ಆಕೆಗೆ ನಮಸ್ಕರಿಸಿದ ಹಾಗೂ, ದರ್ಶನವನ್ನು ಪಡೆದಳು.

ಯೇಸುವಿನ ಜನ್ಮಗ್ರಹಣಕಾಲದಲ್ಲಿ ಆತನ ತಾಯಿಯಾದ ಮೇರಿಯು ತನ್ನ ಪತಿಯಾದ ಜೊಸಫ್‌ನೊಂದಿಗ ಸೇರುವುದಕ್ಕೆ ಮೊದಲೇ ತನಗ ಗರ್ಭ ಉಂಟಾಯಿತೆಂದು ಅನುಭವವನ್ನು ಪಡೆದಳು ಅಪೂರ್ವವಾದ ದಿವ್ಯಾವೇಶವನ್ನು ಹೊಂದಿ ತನ್ಮಯಳಾಗಿಯೇ ತನ್ನ ಗರ್ಭಲಕ್ಷಣವನ್ನು ತಿಳಿದುಕೊಂಡಳು

ಶ್ರೀ ಶಂಕರಾಚಾರ್ಯರ ತಾಯಿಯು ಮಹಾದೇವನ ದಿವ್ಯದರ್ಶನವರಲಾಭಗಳಿಂದಲೇ ತಾನು ಗರ್ಭಧಾರಣ ಮಾಡಿದೆನೆಂಬ ಅನುಭವವನ್ನು ಪಡೆದಿದ್ದಳು.

ಶ್ರೀ ಕೃಷ್ಣಚೈತನ್ಯನ ತಾಯಿಯಾದ ಶಚೀದೇವಿಯ ಜೀವನದಲ್ಲಿಯೂ ಹಿಂದೆ ಹೇಳಿದ ಹಾಗೆ ಅನೇಕ ದಿವ್ಯ ಅನುಭವಗಳುಂಟಾದುವೆಂದು ಚೈತನ್ಯ ಚರಿತಾಮೃತ ಮುಂತಾದ ಗ್ರಂಥಗಳಿಂದ ಗೊತ್ತಾಗುತ್ತದೆ

ಮುಕ್ತಿಯನ್ನು ಪಡೆಯಲು ಈಶ್ವರನನ್ನು ಪ್ರೇಮದಿಂದ ಉಪಾಸನೆ ಮಾಡುವುದೇ ಸುಗಮವಾದ ಮಾರ್ಗವೆಂದು ಬೋಧಿಸುವ ಹಿಂದು, ಬೌದ್ಧ, ಕ್ರೈಸ್ತ ಮುಂತಾದ ಎಲ್ಲ ಮತಗಳೂ ಈರೀತಿಯಾಗಿ ಈ ವಿಷಯದಲ್ಲಿ ಏಕಮತವಾಗಿರುವುದರಿಂದ ನಿರಪೇಕ್ಷರಾದ ವಿಚಾರಕರ ಮನಸ್ಸಿನಲ್ಲಿ ಸ್ವಾಭಾವಿಕವಾಗಿ ಈ ವಿಧವಾದ ಪ್ರಶ್ನೆ ಹುಟ್ಟಬಹುದು.—ಇದರಲ್ಲಿ ವಾಸ್ತವಿಕವಾಗಿಯೂ ಯಾವುದೋ ಒಂದು ಸತ್ಯವು ಪ್ರಚ್ಛನ್ನವಾಗಿರಬೇಕಲ್ಲವೆ? ಮಹಾಪುರುಷರ ಜೀವನ ಚರಿತ್ರೆಗಳಲ್ಲಿ ವರ್ಣಿತವಾಗಿರುವ ಆಖ್ಯಾಯಿಕೆಗಳಲ್ಲಿ ಎಷ್ಟನ್ನು ಒಪ್ಪಬೇಕು, ಎಷ್ಟನ್ನು ಬಿಡಬೇಕು ,

ಈ ಶಾಸ್ತ್ರೋಕ್ತಿಯನ್ನೇ ಯುಕ್ತಿಯೂ ನಿರ್ದೇಶಿಸುತ್ತದೆ.

ಮೇಲೆ ಹೇಳಿದ ಶಾಸ್ತ್ರೋಕ್ತಿಯಲ್ಲಿ ಸ್ವಲ್ಪಮಟ್ಟಿಗೆ ಸತ್ಯವಿದ್ದರೂ ಇರಬಹುದು ಎಂದು ಯುಕ್ತಿಯು ಸೂಚಿಸುತ್ತದೆ. ಉಚ್ಚಸ್ವಭಾವದ ತಂದೆತಾಯಿಗಳಿಗೇ ಉದಾರ ಚರಿತರಾದ ಮಕ್ಕಳನ್ನು ಪಡೆಯುವ ಸಾಮರ್ಥ್ಯವಿರುವುದೆಂದು ಈಕಾಲದ ವಿಜ್ಞಾನವು ಒಪ್ಪಿದಾಗಲೇ ಶ್ರೀಕೃಷ್ಣ, ಬುದ್ಧ, ಏಸು ಮುಂತಾದ ಮಹಾಪುರುಷರ ತಂದೆತಾಯಿಗಳು ವಿಶೇಷ ಸದ್ಗುಣ ಸಂಪನ್ನರಾಗಿರಬೇಕೆಂಬುದನ್ನು ಒಪ್ಪಲೇಬೇಕಾಗುತ್ತದೆ ಅಷ್ಟೇ ಅಲ್ಲದೆ, ಈ ಮಹಾಪುರುಷರನ್ನು ಪಡೆಯುವ ಕಾಲದಲ್ಲಿ ಅವರ ಮನಸ್ಸು ಸಾಮಾನ್ಯರ ಮನಸ್ಸಿಗಿಂತಲೂ ಅತ್ಯಂತ ಉಚ್ಚಭೂಮಿಯಲ್ಲಿ ಇರಬೇಕೆಂದೂ, ಹಾಗೆ ಉಚ್ಚಭೂಮಿಯಲ್ಲಿರುವುದರಿಂದಲೇ ಅವರು ಆ ಕಾಲದಲ್ಲಿ ಅಸಾಧಾರಣವಾದ ದರ್ಶನ ಅನುಭವಾದಿಗಳನ್ನು ಪಡೆಯಲು ಅಧಿಕಾರಿಗಳಾಗುತ್ತಾರೆಂದೂ ಒಪ್ಪಬೇಕಾಗುತ್ತದೆ.

ಈ ವಿಷಯವನ್ನು ಸುಲಭವಾಗಿ ನಂಬಲಿಕ್ಕಾಗದಿದ್ದರೂ ಸುಳ್ಳೆಂದು ಬಿಡಲಾಗದು

ಆದರೆ ಪುರಾಣೇತಿಹಾಸಗಳು ಈ ವಿಷಯಕವಾದ ನಾನಾ ದೃಷ್ಟಾಂತಗಳನ್ನು ಉಲ್ಲೇಖಿಸಿದರೂ, ಈ ವಿಷಯವನ್ನು ಯುಕ್ತಿಯು ಈರೀತಿಯಾಗಿ ಸಮರ್ಥನ ಮಾಡಿದರೂ ಮಾನವಮನಸ್ಸು ಇದನ್ನು ಸಂಪೂರ್ಣವಾಗಿ ನಂಬಲಾರದು ಏಕೆಂದರೆ ಅದು ನಂಬತಕ್ಕದು ತನಗ ಪ್ರತ್ಯಕ್ಷವಾದುದನ್ನೇ ಆದುದರಿಂದಲೇ ಆತ್ಮಾ, ಈಶ್ವರ, ಮುಕ್ತಿ ಪರಕಾಲ ಮುಂತಾದ ವಿಷಯಗಳನ್ನು ಅಪರೋಕ್ಷಾನುಭೂತಿಗೆ ಮೊದಲೇ ನಂಬಲಾಗುವುದಿಲ್ಲ ಹೀಗಿದ್ದರೂ ನಿರಪೇಕ್ಷವಾದ ವಿಚಾರಬುದ್ಧಿಯು ಅಸಾಧಾರಣ ಅಥವಾ ಅಲೌಕಿಕವೆಂಬುದರಿಂದಲೇ ಯಾವ ವಿಷಯವನ್ನಾಗಲಿ ತ್ಯಜಿಸುವುದಕ್ಕೆ ಮನಸ್ಸುಮಾಡುವುದಿಲ್ಲ. ಆ ವಿಷಯದ ಸ್ವಪಕ್ಷ ಪರಪಕ್ಷಗಳ ಪ್ರಮಾಣಗಳನ್ನೆಲ್ಲಾ ಚನ್ನಾಗಿ ಪರ್ಯಾಲೋಚಿಸಿ ಆ ವಿಷಯುವನ್ನು ಮಿಥ್ಯವೆಂದು ಬಿಟ್ಟುಬಿಡುತ್ತದೆ ಅಥವಾ ಸತ್ಯವೆಂದು ಒಪ್ಪಿಕೊಳ್ಳುತ್ತದೆ.

ಅದು ಹಾಗಿರಲಿ. ನಾವು ಯಾವ ಮಹಾಪುರುಷನ ಜೀವನಚರಿತ್ರೆಯನ್ನು ಬರೆಯುತ್ತಿರುವೆವೋ ಆತನ ತಂದೆತಾಯಿಗಳ ಜೀವನದಲ್ಲಿಯೂ ಅನೇಕ ದಿವ್ಯದರ್ಶನ ಅನುಭವಾದಿಗಳುಂಟಾದುವೆಂದು ವಿಶ್ವಾಸಾರ್ಹವಾದ ಸ್ಥಾನದಿಂದ ನಮಗೆ ತಿಳಿದುಬಂದಿರುತ್ತದೆ. ಆದುದರಿಂದ ಆ ವಿಷಯಗಳನ್ನು ಬರೆಯುವುದು

ಹೊರತು ಬೇರೆ ಮಾರ್ಗವಿಲ್ಲ ಹಿಂದಿನ ಅಧ್ಯಾಯದಲ್ಲಿ ಕ್ಷುದಿರಾಮನ ಸಂಬಂಧವಾಗಿ ಈ ವಿಧವಾದ ಕೆಲವು ವಿಷಯಗಳನ್ನು ತಿಳಿಸಿದ್ದೇವೆ. ಈ ಅಧ್ಯಾಯದಲ್ಲಿ ಚಂದ್ರಾದೇವಿಯ ಸಂಬಂಧವಾಗಿ ನಮಗೆ ತಿಳಿದಿರುವ ವಿಷಯಗಳನ್ನೆಲ್ಲಾ ಬರೆಯುತ್ತೇವೆ.

**ಗಯಾಕ್ಷೇತ್ರದಿಂದ ಹಿಂದಿರುಗಿದ ಮೇಲೆ ಕ್ಷುದಿರಾಮನಿಗೆ ಚಂದ್ರಾದೇವಿಯ ಭಾವಪರಿವರ್ತನವು ಕಂಡುಬರುವುದು**

ಕ್ಷುದಿರಾಮನು ತಾನು ಗಯಾಕ್ಷೇತ್ರದಲ್ಲಿ ಕಂಡ ಅದ್ಭುತ ಸ್ವಪ್ನವನ್ನು ಮನೆಗೆ ಹಿಂದಿರುಗಿದಮೇಲೆ ಯಾರಿಗೂ ತಿಳಿಸದೆ ಅದರ ಫಲಾ ಫಲಗಳನ್ನು ನೀರವವಾಗಿ ನಿರೀಕ್ಷಿಸುತ್ತಿದ್ದ ನೆಂದು ನಾವು ಹಿಂದೆಯೇ ತಿಳಿಸಿದ್ದೇವೆ. ಈ ವಿಷಯವನ್ನು ಅನುಸಂಧಾನಮಾಡುವಾಗ ಚಂದ್ರಾದೇವಿಯ ಸ್ವಭಾವದಲ್ಲಿ ಅದ್ಭುತವಾದ ಪರಿವರ್ತನವಾಗಿರುವುದು ಮೊಟ್ಟಮೊದಲು ಆತನ ಕಣ್ಣಿಗೆ ಬಿತ್ತು. ಮಾನವೀಯ ಚಂದ್ರಾದೇವಿಯು ನಿಜವಾಗಿಯೂ ದೇವತ್ವವನ್ನು ಹೊಂದಿದಂತೆ ಕಂಡುಬಂತು ಸಾರ್ವಜನಿಕ ಪ್ರೇಮವು ಎಲ್ಲಿಂದಲೋ ಬಂದು ಆಕೆಯ ಹೃದಯದಲ್ಲಿ ಅಧಿಕಾರಮಾಡುತ್ತಾ ಸಂಸಾರದ ವಾಸನಾಮಯ ಕೋಲಾಹಲದಿಂದ ಆಕೆಯನ್ನು ಅತ್ಯಂತ ಉಚ್ಚಸ್ಥಾನಕ್ಕೆ ತೆಗೆದುಕೊಂಡು ಹೋಗಿತ್ತು. ಚಂದ್ರಾದೇವಿಯ ಮನಸ್ಸಿನಲ್ಲಿ ಈಗ ತನ್ನ ಸಂಸಾರದ ಚಿಂತೆಗಿಂತಲೂ ಬಡವರಾದ ನೆರೆಹೊರೆಯವರ ಸಂಸಾರದ ಚಿಂತೆಯು ಅಧಿಕವಾಗಿತ್ತು ಮನೆಯ ಕೆಲಸಗಳನ್ನು ಮಾಡುತ್ತ ಮಾಡುತ್ತ ಅದನ್ನು ಬಿಟ್ಟುಹೋಗಿ ಹತ್ತಾರುಸಲ ಅವರು ಏನುಮಾಡುತ್ತಾರೆಂಬುದನ್ನು ನೋಡಿಕೊಂಡು ಬರುತ್ತಿದ್ದಳು ಯಾರಮನೆಯಲ್ಲಾದರೂ ಆಹಾರ ಸಾಮಗ್ರಿಗಳಾಗಲಿ ಸಂಸಾರಕ್ಕೆ ಬೇಕಾದ ಮತ್ತಾವ ಪಧಾರ್ಥಗಳಾಗಲಿ ಇಲ್ಲವೆಂದು ತಿಳಿದುಬಂದರೆ ಆ ಪದಾರ್ಥವನ್ನು ತನ್ನ ಮನೆಯಿಂದ ಬಚ್ಚಿಟ್ಟುಕೊಂಡು ಹೋಗಿ ಆ ಕೂಡಲೆ ಅದನ್ನು ಅವರಿಗೆ ಕೊಟ್ಟುಬರುತ್ತಿದ್ದಳು. ಇದೂ ಅಲ್ಲದೆ ರಘುವೀರನ ಸೇವಾಕಾರ್ಯವನ್ನು ಮುಗಿಸಿಕೊಂಡು ತನ್ನ ಪತಿಗೂ ಮಕ್ಕಳಿಗೂ ಊಟಮಾಡಿಸಿ ಹೊತ್ತು ಮೂರು ಪ್ರಹರಗಳಾದಾಗ ತಾನು ಊಟಕ್ಕೆ ಕೂಡುವುದಕ್ಕೆ ಮೊದಲು ಮತ್ತೊಂದುಸಲ ನೆರೆಹೊರೆಯವರ ಮನೆಗಳಿಗೆ ಹೋಗಿ ಎಲ್ಲರಿಗೂ ಊಟವಾಯಿತೇ ಇಲ್ಲವೇ ಎಂದು ವಿಚಾರಿಸಿಕೊಂಡು ಬರುತ್ತಿದ್ದಳು. ಒಂದುವೇಳೆ ಯಾರಾದರೂ ಕಾರಣಾಂತರದಿಂದ ಊಟಮಾಡದೆ ಇದ್ದರೆ ಅವರನ್ನು ಆದರದಿಂದ ತನ್ನಮನೆಗೆ ಕರೆದುಕೊಂಡು

ಬಂದು, ತನ್ನ ಭಾಗದ ಅನ್ನವನ್ನು ಅವರಿಗೆ ಬಡಿಸಿ, ತಾನು ಸಂತೋಷದಿಂದ ನೀರನ್ನು ಕುಡಿದು ಆ ದಿವಸವನ್ನು ಕಳೆಯುತ್ತಿದ್ದಳು.

ಚಂದ್ರಾದೇವಿಯ ಪುತ್ರವಾತ್ಸಲ್ಯವು ಪ್ರಸಾರವಾಗುವುದು

ಚಂದ್ರಾದೇವಿಯು ನೆರೆಹೊರೆಯ ಹುಡುಗರನ್ನು ಯಾವಾಗಲೂ ತನ್ನ ಮಕ್ಕಳಂತೆ ಪ್ರೀತಿಸುತ್ತಿದ್ದಳು. ಈಗ ಆ ಪುತ್ರವಾತ್ಸಲ್ಯವು ದೇವತೆಗಳ ಮೇಲೆಯೂ ಪ್ರಸಾರವಾದಂತೆ ಕ್ಷುದಿರಾಮನಿಗೆ ಕಂಡುಬಂತು. ಕುಲದೇವರಾದ ರಘುವೀರನನ್ನು ಈಗ ನಿಜವಾಗಿಯೂ ತನ್ನ ಮಕ್ಕಳಲ್ಲಿ ಒಬ್ಬನು ಎಂದು ಭಾವಿಸುತ್ತಿದ್ದಳು. ಹಾಗೆಯೇ ಶೀತಲಾದೇವಿ, ರಾಮೇಶ್ವರ, ಬಾಣಲಿಂಗ ಈ ದೇವತೆಗಳಲ್ಲಿಯೂ ಆಕೆಯು ಅದೇ ಭಾವನೆಯನ್ನಿಟ್ಟಿದ್ದಳು. ಮೊದಲು ಈ ದೇವತೆಗಳ ಪೂಜಾಕಾಲದಲ್ಲಿ ಆಕೆಯ ಮನಸ್ಸು ಶ್ರದ್ಧೆಯಿಂದಲೂ ಭಯದಿಂದಲೂ ಕೂಡಿರುತ್ತಿತ್ತು. ಈಗ ಪ್ರೇಮವು ಬಂದು ಆ ಭಯವನ್ನು ಓಡಿಸಿಬಿಟ್ಟಿತು. ಇನ್ನು ದೇವತೆಗಳ ವಿಚಾರದಲ್ಲಿ ಆಕೆಗೆ ಭಯವಿರಲಿಲ್ಲ, ಸಂಕೋಚವಿರಲಿಲ್ಲ, ಬಚ್ಚಿಡತಕ್ಕದಿರಲಿಲ್ಲ, ಪ್ರಾರ್ಥಿಸತಕ್ಕದೂ ಇರಲಿಲ್ಲ. ಅದಕ್ಕೆ ಬದಲಾಗಿ ಈಗ ಉಳಿದುದು ಇಷ್ಟೇ—ಕೇವಲ ತನ್ನವರೆಂದು ಅವರನ್ನು ಭಾವಿಸತಕ್ಕದು, ಅವರಿಗೆ ಸೌಖ್ಯವನ್ನುಂಟು ಮಾಡುವುದಕ್ಕಾಗಿ ಸರ್ವಸ್ವವನ್ನು ಕೊಡುವ ಇಚ್ಛೆ, ಮತ್ತು ಅವರೊಂದಿಗೆ ಅನಂತ ಸಂಬಂಧವನ್ನು ಇಟ್ಟುಕೊಂಡಿರುವುದರಲ್ಲಿ ಉಲ್ಲಾಸ.

ಅದನ್ನು ನೋಡಿದ ಮೇಲೆ ಕ್ಷುದಿರಾಮನ ಆಲೋಚನೆ ಮತ್ತು ಸಂಕಲ್ಪ.

ಈ ನಿಸ್ಸಂಕೋಚವಾದ ದೈವಭಕ್ತಿ, ಈಶ್ವರನಿರ್ಭರದಿಂದುಂಟಾದ ಉಲ್ಲಾಸಗಳೇ ಸರಳ ಹೃದಯಳಾದ ಚಂದ್ರಾದೇವಿಯ ಅಧಿಕವಾದ ಉದಾರ ಸ್ವಭಾವಕ್ಕೆ ಕಾರಣಗಳೆಂದು ಕ್ಷುದಿರಾಮನು ತಿಳಿದುಕೊಂಡನು. ಅವುಗಳ ಪ್ರಭಾವದಿಂದಲೇ ಈಗ ಯಾರನ್ನೇ ಆಗಲಿ ಪ್ರೀತಿಸದೇ ಇರುವುದಕ್ಕೂ ಪರರೆಂದು ಭಾವಿಸುವುದಕ್ಕೂ ಆಕೆಗೆ ಸಾಧ್ಯವಿರಲಿಲ್ಲ. ಆದರೆ ಸ್ವಾರ್ಥಪರರಾದ ಸಾಮಾನ್ಯಜನಗಳು ಆಕೆಯ ಈ ಅಪೂರ್ವವಾದ ಉದಾರ ಭಾವದ ವಿಷಯವನ್ನು ಸರಿಯಾಗಿ ಎಂದಿಗಾದರೂ ತಿಳಿದುಕೊಳ್ಳಬಲ್ಲರೆ?—ಎಂದಿಗೂ ಇಲ್ಲ. ಆಕೆಯನ್ನು ಬುದ್ಧಿಕಡಮೆಯಾದವಳೆಂದೂ, ಹುಚ್ಚಿಯೆಂದೂ ಅಥವಾ ಇನ್ನಾವುದೊಂದು ಕ್ರೂರವಾದ ಹೆಸರಿನಿಂದಲೋ ಕರೆಯುತ್ತಾರೆ. ಹೀಗೆ ಭಾವಿಸಿ ಕ್ಷುದಿರಾಮನು ಆಕೆಗೆ ಇದನ್ನೆಲ್ಲಾ ಸಾವಧಾನವಾಗಿ ತಿಳಿಸಬೇಕೆಂದು ಸಮಯವನ್ನು ನಿರೀಕ್ಷಿಸುತ್ತಿದ್ದನು.

ಚಂದ್ರಾದೇವಿಗೆ ಬಿದ್ದ ದಿವ್ಯಸ್ವಪ್ನ

ಅಂಥ ಸಮಯ ಹೊದಗಲು ವಿಳಂಬವಾಗಲಿಲ್ಲ. ಸರಳೆ ಹೃದಯಳಾದ ಚಂದ್ರಾದೇವಿಯು ತನ್ನ ಮನಸ್ಸಿನ ಆಲೋಚನೆಯನ್ನು ಮೊದಲಿನಿಂದಲೂ ಯಾವುದನ್ನೂ ತನ್ನ ಗಂಡನ ಎದುರಿಗೆ ಮರೆಮಾಚುತ್ತಿರಲಿಲ್ಲ. ತನ್ನ ಗೆಳತಿಯರೊಂದಿಗೇ ತನ್ನ ಮನಸ್ಸಿನ ಆಲೋಚನೆಗಳನ್ನೆಲ್ಲಾ ಅನೇಕವೇಳೆ ಹೇಳಿಬಿಡುತ್ತಿದ್ದಳು. ಹಾಗಿರುವಾಗ ಈಶ್ವರನು ಯಾರೊಂದಿಗೆ ಅತ್ಯಂತ ಸಮೀಪ ಬಾಂಧವ್ಯವನ್ನು ಕಲ್ಪಿಸಿದನೋ ಅಂಥಾ ತನ್ನ ಪತಿಯೊಂದಿಗೆ ಇದನ್ನೆಲ್ಲಾ ಮುಚ್ಚುಮರೆಮಾಡುವುದುಂಟೆ? ಆದ್ದರಿಂದ ಗಯಾಯಾತ್ರೆ ಮಾಡಿಕೊಂಡು ಕ್ಷುದಿರಾಮನು ಮನೆಗೆ ಬಂದ ಮೇಲೆ ಚಂದ್ರಾದೇವಿಯು ಆತನು ಊರಲ್ಲಿಲ್ಲದಾಗ ನಡೆದುದೆಲ್ಲವನ್ನೂ ತಾನು ನೋಡಿದುದು ಅಥವಾ ಅನುಭವಿಸಿದುದೆಲ್ಲವನ್ನೂ ಸಮಯ ಸಿಕ್ಕಿದಾಗಲೆಲ್ಲಾ ಹೇಳಲಾರಂಭಿಸಿದಳು. ಇಂಥ ಸಮಯ ಸಿಕ್ಕಿದಾಗ ಒಂದುದಿನ ಹೀಗೆ ಹೇಳಿದಳು. "ನೋಡಿ, ನೀವು ಗಯಾಕ್ಕೆ ಹೋಗಿದ್ದಿರಲ್ಲ ಆಗ ಒಂದುದಿನ ರಾತ್ರಿ ಅದ್ಭುತವಾದ ಸ್ವಪ್ನ ಬಿತ್ತು ಯಾವುದೋ ಒಂದು ಜ್ಯೋತಿರ್ಮಯವಾದ ದೇವತೆಯು ನನ್ನ ಹಾಸಿಗೆಯಮೇಲೆ ಮಲಗಿದಂತಿತ್ತು. ನೀವೇ ಇರಬಹುದೆಂದು ಮೊದಲು ಎಂದುಕೊಂಡೆ; ಆಮೇಲೆ ಮನುಷ್ಯರು ಈ ರೂಪವನ್ನು ಹೊಂದಿರುವುದು ಸಂಭವವಲ್ಲ ಎಂದುಕೊಂಡೆ, ಅದು ಹೇಗಾದರೂ ಇರಲಿ, ಅದರಿಂದ ನಿದ್ರಾಭಂಗವಾಯಿತು. ಆಗಲೂ ಆತನು ಹಾಸಿಗೆಯಲ್ಲಿದ್ದಾನೆಯೋ ಏನೋ ಎನ್ನಿಸಿತು. ಉತ್ತರಕ್ಷಣದಲ್ಲಿಯೇ ದೇವತೆಯು ಮನುಷ್ಯರ ಹತ್ತಿರಕ್ಕೆ ಹೀಗೆ ಬರುವುದು ಎಲ್ಲಿಯಾದರೂ ಉಂಟೆ ಎನ್ನಿಸಿತು ಆಗ ಮನಸ್ಸಿನಲ್ಲಿ ಯಾವನೋ ಒಬ್ಬ ದುಷ್ಟನು ಯಾವುದೋ ಒಂದು ದುರುದ್ದೇಶದಿಂದ ಮನೆಯೊಳಕ್ಕೆ ನುಗ್ಗಿರಬೇಕು, ಅವನ ನಡಿಗೆಯ ಶಬ್ದದಿಂದ ನನಗೆ ಹೀಗೆ ಸ್ವಪ್ನ ಬಿದ್ದಿರಬೇಕು ಎನ್ನಿಸಿತು ಹೀಗೆ ಮನಸ್ಸಿಗೆ ತೋರಿದಕೂಡಲೆ ಬಹಳ ಗಾಬರಿಯಾಯಿತು. ಸರಕ್ಕನೆ ಎದ್ದು ದೀಪವನ್ನು ಮುಟ್ಟಿಸಿದೆ. ಎಲ್ಲಿಯೂ ಯಾರೂ ಕಾಣಲಿಲ್ಲ. ಬಾಗಿಲಿನ ಅಗಳಿ ಹಾಕಿದ್ದು ಹಾಕಿದ್ದ ಹಾಗೆಯೇ ಇತ್ತು. ಆದರೂ ಭಯದಿಂದ ಆ ರಾತ್ರಿ ನಿದ್ದೆ ಬರಲಿಲ್ಲ. ಯಾರಾದರೂ ಚಮತ್ಕಾರವಾಗಿ ಅಗುಳಿಯನ್ನು ತೆಗೆದು ಮನೆಯೊಳಗೆ ಹೊಕ್ಕು ನಾನು ಎಚ್ಚತ್ತುದನ್ನು ನೋಡಿ ಹೊರಗೆ ಓಡಿಹೋಗಿ ಜಾಣತನದಿಂದ ಹಾಗೆಯೇ ಅಗಳಿಯನ್ನು ಹಾಕಿಕೊಂಡಿರಬಹುದೆ ಎಂದು ಯೋಚಿಸಿದೆ.

ಹೊತ್ತು ಹುಟ್ಟುತ್ತಿದ್ದ ಹಾಗೆಯೇ ಕಮ್ಮಾರರ ಧನಿ, ಧರ್ಮದಾಸ ಲಾಹನ ಕಂಗಿ ಪ್ರಸನ್ನ ಇವರನ್ನು ಕರೆದು ಅವರಿಗೆ ಎಲ್ಲ ಸಂಗತಿಯನ್ನೂ ತಿಳಿಸಿ “ ನಿಮಗೆ ಹೇಗೆ ಕಾಣಿಸುತ್ತದೆ, ಹೇಳಿ ನೋಡೋಣ, ನಿಜವಾಗಿಯೂ ಯವನಾದರೂ ನಮ್ಮ ಮನೆಯೊಳಕ್ಕೆ ನುಗ್ಗಿರಬಹುದೆ? ಹಳ್ಳಿಯಲ್ಲಿ ಯಾರೊಡನೆಯೂ ನಾನು ವಿರೋಧ ಕಟ್ಟಿಕೊಂಡಿಲ್ಲ ಮಧುಯೊಂದಿಗೆ ಏನೊ ಒಂದು ಸಣ್ಣ ಮಾತಿಗಾಗಿ ಜಗಳವಾಡಿದೆ. ಅದನ್ನೇ ದೊಡ್ಡದುಮಾಡಿ ಹೀಗೆ ಮನೆಯಲ್ಲಿ ನುಗ್ಗಿರಬಹುದೆ?” ಎಂದು ಕೇಳಿದೆನು. ಆಗ ಅವರಿಬ್ಬರೂ ನಗುತ್ತ ನಗುತ್ತ ನನ್ನನ್ನು ವಿಶೇಷವಾಗಿ ತಿರಸ್ಕರಿಸಿ “ ಇದೇನು, ಕನಸುಕಂಡು ಹೀಗಾಡುತ್ತಿ, ಮುದುಕಿಯಾಗಿ ನಿನಗೇನು ಹುಚ್ಚುಗಿಚ್ಚು ಹಿಡಿಯಿತೇನು? ಇನ್ನಾರಾದರೂ ಈ ಮಾತನ್ನು ಕೇಳಿದರೆ ಏನೆಂದುಕೊಂಡಾರು, ಹೇಳು ನೋಡೋಣ. ನಿನ್ನ ಹಸರಿಗೆ ಒಂದೇ ಸಲ ಅಪವಾದ ಬಂದೀತು. ಹೋಗು ಹೋಗು. ಈ ಮಾತನ್ನು ಇನ್ನಾರಿಗಾದರೂ ಹೇಳಿದರೆ ಒಳ್ಳೇ ತಮಾಷೆಯಾಗುತ್ತೆ ನೋಡಿಕೊ” ಎಂದರು. ಅವರು ಹೀಗೆ ಹೇಳಿದ್ದನ್ನು ಕೇಳಿ, ಹಾಗಾದರೆ ಸ್ವಷ್ಟವೇ ಇರಬೇಕು ಎಂದು ನಿಶ್ಚಯಿಸಿದೆ ಆಮೇಲೆ ಈ ಮಾತನ್ನು ಇನ್ನಾರಿಗೂ ಹೇಳಕೂಡದು, ನೀವು ಬರುತ್ತಲೇ ನಿಮಗೆ ಮಾತ್ರ ತಿಳಿಸಬೇಕು ಎಂದುಕೊಂಡೆ”

**ಶಿವ ಮಂದಿರದಲ್ಲಿ ಚಂದ್ರಾದೇವಿಗೆ ಆದ ದಿವ್ಯದರ್ಶನ ಮತ್ತು ಅನುಭವ**

ಇನ್ನೊಂದು ದಿನ ಯುಗೀಯವರ ಶಿವಾಲಯದ ಎದುರಿಗೆ ನಿಂತುಕೊಂಡು ಧನಿಯೊಂದಿಗೆ ಮಾತಾಡುತ್ತಿದ್ದೆ ಆಗ ಮಹಾದೇವನ ಅಂಗದಿಂದ ದಿವ್ಯಜ್ಯೋತಿಯು ಹೊರಟು ದೇವಾಲಯದಲ್ಲೆಲ್ಲಾ ತುಂಬಿದ್ದನ್ನು ಕಂಡೆ ಗಾಳಿಯ ಹಾಗೆ ಅದು ಒಂದು ಅಲೆಯ ರೀತಿ ನನ್ನಕಡೆಗೆ ಬಂದಿತು. ಆಶ್ಚರ್ಯವನ್ನು ಹೊಂದಿ ಧನಿಗೆ ಇದನ್ನು ಹೇಳಬೇಕೆಂದಿದ್ದೆ, ಅಷ್ಟರಲ್ಲಿಯೇ ಅದು ಹತ್ತಿರಬಂದು ನನ್ನನ್ನು ಸುತ್ತಿಗೊಂಡಿತು. ಆಮೇಲೆ ವೇಗವಾಗಿ ನನ್ನ ದೇಹದೊಳಕ್ಕೆ ನುಗ್ಗುವುದಕ್ಕೆ ಮೊದಲುಮಾಡಿತು. ಭಯದಿಂದಲೂ ಆಶ್ಚರ್ಯದಿಂದಲೂ ದಿಕ್ಕು ತೋಚದಂತಾಗಿ ಪ್ರಜ್ಞೆತಪ್ಪಿ ಬಿದ್ದುಬಿಟ್ಟೆ. ಧನಿಯು ಶುಶ್ರೂಷೆಮಾಡಿದಳು. ಎಚ್ಚರಿಕೆ ಬಂದಮೇಲೆ ಅವಳಿಗೆ ಅದನ್ನೆಲ್ಲಾ ಹೇಳಿದೆ ಅದನ್ನು ಕೇಳಿ ಅವಳು ಮೊದಲು ಅವಾಕ್ಕಾದಳು ಆಮೇಲೆ “ ನಿನಗೆ ವಾಯುರೋಗ ಬಂದಿದೆ” ಎಂದಳು. ಆದರೆ ನನಗೇನೋ ಅಂದಿನಿಂದಲೂ ಆ ಜ್ಯೋತಿಯು ನನ್ನ ಗರ್ಭವನ್ನು ಪ್ರವೇಶಿಸಿದಂತೆಯೂ ಗರ್ಭಸಂಚಾರವು ಉಪಕ್ರಮವಾದಂತೆಯೂ ಎನ್ನಿ

ಸುತ್ತಿದೆ. ಇದನ್ನೂ ಧನಿಗೂ ಪ್ರಸನ್ನೆಗೂ ಹೇಳಿದೆ ಅವರು ಅದನ್ನು ಕೇಳಿ ನನ್ನನ್ನು ಬುದ್ಧಿಯಿಲ್ಲದವಳು, ಹುಚ್ಚಿ ಹೀಗೆ ಏನೇನೋ ಬೈದು ಹಾಗಾಗುವುದಕ್ಕೆ ನನ್ನ ಮನಸ್ಸಿನ ಭ್ರಮೆಯೋ ಅಥವಾ ವಾತ ಗುಲ್ಮವೆಂಬ ರೋಗವೋ ಕಾರಣವಾಗಿರಬೇಕೆಂದು ತಿಳಿಸಿ ಈ ಅನುಭವದ ವಿಷಯವನ್ನು ಮತ್ತಾರಿಗೂ ಹೇಳಕೂಡದೆಂದು ನಿಷೇಧಿಸಿದರು ನಿಮಗೊಬ್ಬರಿಗೆ ಹೊರತು ಮತ್ತಾರಿಗೂ ತಿಳಿಸಕೂಡದೆಂದು ನಿಶ್ಚಯಿಸಿ ಅವತ್ತಿನಿಂದ ಇಷ್ಟುದಿನಗಳೂ ಬಾಯಿಮುಚ್ಚಿಕೊಂಡಿದ್ದೆ. ನಿಮಗೆ ಹೇಗೆ ಕಾಣುತ್ತದೆ—ಈ ದರ್ಶನ ದೇವರಕೃಪೆಯಿಂದ ಆಗಿದ್ದೀತೆ ಅಥವಾ ವಾಯುರೋಗದಿಂದ ಆಗದ್ದೀತೆ? ಈಗಲೂ ನನಗೆ ಗರ್ಭ ಸಂಚಾರವಾಗುತ್ತಿರುವಂತೆ ತೋರುತ್ತದೆ.

ಈ ವಿಷಯಗಳನ್ನು ಯಾರಿಗೂ ಹೇಳಕೂಡದೆಂದು ಕ್ಷುದಿರಾಮನು ಚಂದ್ರಾದೇವಿಗೆ ವಿವರಿಸಿದ್ದು

ಕ್ಷುದಿರಾಮನು ಗಯೆಯಲ್ಲಿ ತನಗೆ ಬಿದ್ದ ಸ್ವಪ್ನವನ್ನು ಜ್ಞಾಪಕ ಮಾಡಿಕೊಳ್ಳುತ್ತ ಚಂದ್ರಾದೇವಿ ಹೇಳಿದ್ದನ್ನೆಲ್ಲ ಕೇಳಿದನು ಅದು ರೋಗಜನಿತವಲ್ಲೆಂದು ಆಕೆಗೆ ಅನೇಕವಾಗಿ ತಿಳಿಸಿ ಹೀಗೆ ಹೇಳಿದನು "ಇನ್ನುಮೇಲೆ ಇಂಥಾ ದರ್ಶನ ಅನುಭವಗಳ ವಿಷಯುವನ್ನು ನನಗೆ ಹೊರತು ಇನ್ನಾರಿಗೂ ತಿಳಿಸಬೇಡ. ರಘುವೀರನು ಕೃಪೆಯಿಂದ ಯಾವುದನ್ನು ತೋರಿಸುವನೋ ಅದು ಕಲ್ಯಾಣಕ್ಕಾಗಿಯೇ ಎಂದು ಭಾವಿಸಿ ನಿಶ್ಚಿಂತಳಾಗಿರು. ಗಯೆಯಲ್ಲಿದ್ದಾಗ ಗದಾಧರಸ್ವಾಮಿಯು ನನಗೂ ಒಂದು ಅಲೌಕಿಕ ರೀತಿಯಲ್ಲಿ ನಾವು ಪುನಃ ಮತ್ತೊಬ್ಬ ಮಗನನ್ನು ಕಾಣುವೆವೆಂದು ಸೂಚಿಸಿದನು." ಚಂದ್ರಾದೇವಿಯು ತನ್ನ ಪತಿಯು ಹೇಳಿದ ಈ ಮಾತನ್ನು ಕೇಳಿ ಸಮಾಧಾನವನ್ನು ಹೊಂದಿದಳು ಆತನ ಆಜ್ಞೆಯಪ್ರಕಾರ ಅಂದಿನಿಂದ ಶ್ರೀ ರಘುವೀರನ ಮುಖಾಪೇಕ್ಷಿಣಿಯಾಗಿ ಜೀವಿಸುತ್ತಿದ್ದಳು. ಮೇಲೆ ಬರೆದಿರುವ ಆ ಗಂಡ ಹೆಂಡಿರ ಮಾತುಕಥೆಗಳು ನಡೆದಮೇಲೆ ಮೂರುನಾಲ್ಕು ತಿಂಗಳು ಕಳೆದವು. ಆಗ ನಲ್ವತ್ತೈದು ವರ್ಷ ವಯಸ್ಸಾಗಿದ್ದ ಚಂದ್ರಾದೇವಿಯು ಪುನಃ ನಿಜವಾಗಿಯೂ ಬಸುರಾಗಿರುವಳೆಂದು ಎಲ್ಲರಿಗೂ ಗೊತ್ತಾಯಿತು. ಬಸುರಾದಾಗ ಸ್ತ್ರೀಯರ ರೂಪಲಾವಣ್ಯವು ಹೆಚ್ಚುವುದು ಸ್ವಾಭಾವಿಕವಷ್ಟೆ. ಚಂದ್ರಾದೇವಿಗೂ ಹಾಗೆಯೇ ಆಯಿತು. ಧನಿಯೇ ಮುಂತಾದ ಆಕೆಯ ನೆರೆಹೊರೆಯವರು ಈ ಸಲ ಬಸುರಾದಾಗ ಆಕೆಯು ಹಿಂದೆ ಎಂದೂ ಇಲ್ಲದಷ್ಟು ರೂಪಲಾವಣ್ಯವನ್ನು ಹೊಂದಿದ್ದಳೆಂದು ಹೇಳಿದರು. ಅವರಲ್ಲಿ

ಕೆಲವರು "ಮುದಿವಯಸ್ಸಿನಲ್ಲಿ ಗರ್ಭಿಣಿಯಾಗಿ ಈಕೆ ಎಷ್ಟು ಸುಂದರಳಾಗಿದ್ದಾಳೆ. ಬಹುಶಃ ಈ ಬ್ರಾಹ್ಮಣಳು ಈಸಲ ಹೆರಿಗೆಕಾಲದಲ್ಲಿ ಸಾಯುತ್ತಾಳೆಂತ ಕಾಣುತ್ತದೆ" ಎಂದು ಎಂದುಕೊಂಡರು.

**ಚಂದ್ರಾದೇವಿಯು ಗರ್ಭಿಣಿಯಾದಾಗ ನೋಡಿದ ದಿವ್ಯ ದರ್ಶನಗಳು**

ಅದು ಹೇಗಾದರೂ ಹೋಗಲಿ, ಗರ್ಭಿಣಿಯಾದಮೇಲೆ ಚಂದ್ರಾದೇವಿಯ ದಿವ್ಯದರ್ಶನಗಳೂ ಅನುಭವಗಳೂ ದಿನ ದಿನಕ್ಕೆ ಹೆಚ್ಚಾದವು ಈ ಕಾಲದಲ್ಲಿ ಆಕೆಯು ಪ್ರಾಯಶಃ ಪ್ರತಿನಿತ್ಯವೂ ಅನೇಕ ದೇವದೇವಿಯರ ದರ್ಶನವನ್ನು ಹೊಂದುತ್ತಿದ್ದಳೆಂದು ತಿಳಿಯಬರುತ್ತದೆ ಒಂದೊಂದು ಸಲ ಆ ದೇವ ದೇವಿಯರ ದೇಹದಿಂದ ಹೊರಟ ಪುಣ್ಯಗಂಧವು ಮನೆಯನ್ನೆಲ್ಲ ಸುತ್ತಿಕೊಂಡ ಹಾಗೆ ಆಕೆಗೆ ತೋರುತ್ತಿತ್ತು. ಒಂದೊಂದುಸಲ ದೇವ ದೇವಿಯರ ಮಾತನ್ನು ಕೇಳಿ ಆಕೆಯು ಆಶ್ಚರ್ಯಪಡುತ್ತಿದ್ದಳು. ಈ ಕಾಲದಲ್ಲಿ ಎಲ್ಲ ದೇವ ದೇವಿಯರ ಮೇಲೆಯೂ ಆಕೆಯ ಮಾತೃಸ್ನೇಹವು ಹೆಚ್ಚಿತೆಂದು ಕೇಳುತ್ತೇವೆ. ಆಕೆಯು ಪ್ರತಿದಿನವೂ ಈ ವಿಧವಾದ ದರ್ಶನ ಅನುಭವಗಳ ವಿಷಯವನ್ನು ಗಂಡನೆದುರಿಗೆ ಹೇಳಿ ತನಗೆ ಏಕೆ ಹಾಗಾಗುತ್ತಿತ್ತೋ ಅತನನ್ನು ಕೇಳುತ್ತಿದ್ದಳಂತೆ. ಕ್ಷುದಿರಾಮನು ಅದನ್ನು ಅನೇಕ ವಿಧವಾಗಿ ವಿವರಿಸಿ, ಆ ವಿಷಯದಲ್ಲೆಲ್ಲ ಶಂಕಿಸಬಾರದೆಂದು ಹೇಳುತ್ತಿದ್ದನಂತೆ ಈ ಕಾಲದಲ್ಲಿ ಒಂದುದಿವಸ ನಡೆದ ಒಂದು ವಿಷಯವನ್ನು ನಾವು ಕೇಳಿದಂತೆ ಇಲ್ಲಿ ವಿವರಿಸುತ್ತೇವೆ. ಆದಿನ ಚಂದ್ರಾದೇವಿಯು ಭಯಚಕಿತಳಾಗಿ ತನ್ನ ಗಂಡನ ಹತ್ತಿರ ಈ ರೀತಿಯಾಗಿ ಹೇಳಿದಳು. "ಶಿವಾಲಯದ ಎದುರಿಗೆ ಬೆಳಕನ್ನು ನೋಡಿದಂದಿನಿಂದ ಎಷ್ಟು ತರಹ ದೇವರನ್ನು ನೋಡುತ್ತ ಇದ್ದೇನೆಯೋ ಅದಕ್ಕೆ ಲೆಕ್ಕವೇ ಇಲ್ಲ. ಚಿತ್ರದಲ್ಲಿ ಕೂಡ ಅವುಗಳಲ್ಲಿ ಅನೇಕವನ್ನು ನಾನು ನೋಡಲಿಲ್ಲ. ಈ ದಿವಸ ಹಂಸೆಯ ಮೇಲೆ ಕೂತುಕೊಂಡು ಯಾರೋ ಒಬ್ಬರು ಬಂದಹಾಗಾಯಿತು. ನೋಡಿ ಭಯವಾಯಿತು. ಕೋಪದಿಂದ ಅವರಮುಖವು ಕೆಂಪಗಾಗಿರುವುದನ್ನು ನೋಡಿ ಮನಸ್ಸಿನಲ್ಲಿ ಗಾಬರಿಯಾಯಿತು. ಆಗ ಆ ವ್ಯಕ್ತಿಯನ್ನು ಕುರಿತು ಅಪ್ಪಾ! ಹಂಸದಿಂದ ಇಳಿ. ಕೋಪದಿಂದ ನಿನ್ನಮುಖ ಕೆಂಪಾಗಿದೆ, ನಮ್ಮ ಮನೆಯಲ್ಲಿ ಅನ್ನವಿದೆ. ಅದನ್ನು ಸ್ವಲ್ಪತಿಂದರೆ ತಂಪಾಗುತ್ತದೆ" ಈ ಮಾತನ್ನು ಕೇಳಿ ಆ ವ್ಯಕ್ತಿಯು ಮಾಯವಾಯಿತು ಪುನಃ ಕಾಣಲೇ ಇಲ್ಲ. ಹೀಗೆ ಎಷ್ಟು ಮೂರ್ತಿಗಳನ್ನು ನೋಡುವುದು, ಪೂಜೆಮಾಡುವಾಗಲ್ಲ, ಧ್ಯಾನಮಾ

ದುವಾಗಲ್ಲ, ಸುಮ್ಮನೇ ಇದ್ದಾಗ, ಯಾವಾಗ ಅಂದರೆ ಆವಾಗ ಕಾಣುತ್ತದೆ. ಒಂದೊಂದುಸಲ ಅವರು ಮನುಷ್ಯರೂಪದಿಂದ ಎದುರಿಗೆ ಬರುತ್ತ ಬರುತ್ತ ವಾಯುವಿನಲ್ಲಿ ಸೇರಿ ಹೋಗುತ್ತಾರೆ. ಇದೆಲ್ಲ ಏಕೆ ಕಾಣಬರುವುದು? ಹೇಳಿ ನೋಡೋಣ. ನನಗೆ ಏನಾದರೂ ರೋಗವಿದ್ದೀತೆ? 'ಒಂದೊಂದುಸಲ ಎನ್ನಿಸುತ್ತದೆ. ಗೋಸಾಯಿ ಏನಾದರೂ ಕಾಣಿಸುತ್ತಾನೇನೋ ಎಂದು.'' ಕ್ಷುದಿರಾಮನು ಆಗ ತನಗೆ ಗಯೆಯಲ್ಲಿ ಬಿದ್ದ ಸ್ವಪ್ನದ ವಿಷಯವನ್ನು ಹೇಳಿ ಪೂರ್ವಜನ್ಮದ ಪುಣ್ಯದಿಂದ ಆಕೆಯು ಈಸಲ ಪುರುಷೋತ್ತಮನನ್ನು ಗರ್ಭದಲ್ಲಿ ಧರಿಸಿರುವಳೆಂದೂ ಆದ್ದರಿಂದಲೇ ಆಕೆಗೆ ಆ ರೀತಿಯಾಗಿ ದಿವ್ಯದರ್ಶನಗಳಾಗುವುದೆಂದು ತಿಳಿಸಿದನು. ಪತಿಯಲ್ಲಿ ಅಪಾರವಾದ ವಿಶ್ವಾಸವನ್ನಿಟ್ಟಿದ್ದ ಚಂದ್ರಾದೇವಿಯ ಹೃದಯವು ಇದನ್ನೆಲ್ಲ ಕೇಳಿ ದಿವ್ಯಭಕ್ತಿಯಿಂದ ಪೂರ್ಣವಾಯಿತು ಏನೋ ಒಂದು ಹೊಸಶಕ್ತಿ ಬಂದಹಾಗಾಗಿ ಆಕೆಯು ನಿಶ್ಚಿಂತಳಾದಳು.

ಹೀಗೆ ದಿನಗಳು ಕಳೆದವು ಕ್ಷುದಿರಾಮನು ಆತನ ಹೆಂಡತಿಯೂ ರಘುವೀರನಿಗೆ ಶರಣಾಗತರಾಗಿ ಯಾರಶುಭಾಗಮನ ನಿರೀಕ್ಷಣೆಯಿಂದ ಜೀವನ ಮಾಡುತ್ತಿದ್ದರೋ ಮಹಾಪುರುಷನಾದ ಆ ಪುತ್ರನ ಮುಖವನ್ನು ನೋಡುವ ಆಶೆಯಿಂದ ಕಾಲವನ್ನು ಕಳೆಯುತ್ತಿದ್ದರು.

---

# ಐದನೆಯ ಅಧ್ಯಾಯ

---

## ಮಹಾ ಪುರುಷನ ಜನ್ಮ ಕಥೆ.

ಶರತ್ ಹೇಮಂತ ಶಿಶಿರ ಋತುಗಳು ಕಳೆದು ಋತುರಾಜವಾದ ವಸಂತವು ಪ್ರಾಪ್ತವಾಯಿತು. ಶೀತ ಗೀಷ್ಮಗಳ ಸುಖಸಮ್ಮಿಳನದಿಂದ ಮಧುಮಯವಾದ ಫಾಲ್ಗುಣವು ಸ್ಥಾವರ ಜಂಗಮಗಳಲ್ಲಿ ನವೀನಪ್ರಾಣವು ಸಂಚರಿಸುವಂತೆ ಮಾಡಿದ ಮೇಲೆ ಆರನೆಯ ದನ ಬಂದಿದೆ ಜೀವ ಜಗತ್ತಿನಲ್ಲಿ ಒಂದು ವಿಶೇಷವಾದ ಉತ್ಸಾಹ, ಆನಂದ, ಪ್ರೇಮದ ಪ್ರೇರಣೆಯು ಎಲ್ಲೆಡೆಗಳಲ್ಲಿಯೂ ಕಂಗೊಳಿಸುತ್ತಿದೆ. ಬ್ರಹ್ಮಾನಂದದ ಒಂದು ಕಣವು ಪದಾರ್ಥಗಳಲ್ಲೆಲ್ಲಾ ಸೇರಿಕೊಂಡು ಅವುಗಳನ್ನು ಸರಸವಾಗಿ ಮಾಡಿರುತ್ತದೆಂದು ಶಾಸ್ತ್ರದಲ್ಲಿ ಹೇಳಿದೆ. ಈ ದಿವ್ಯೋಜ್ಜ್ವಲ ಆನಂದಕಣದ ಆಲ್ಪಾಧಿಕ್ಯದಿಂದ ಈ ಕಾಲವು ಜಗತ್ತಿನಲ್ಲಿ ಸರ್ವತ್ರವೂ ಇಷ್ಟು ಉಲ್ಲಾಸವನ್ನುಂಟು ಮಾಡಿರಬಹುದೆ ?

ಚಂದ್ರಾದೇವಿಯ ಸಂಶಯ— ಪತಿಯ ಮಾತಿನಿಂದ ಸಮಾಧಾನ ಉಂಟಾಗುವುದು

ಪ್ರಸವ ಸಮಯವು ಸಮೀಪಿಸಿದ್ದ ಚಂದ್ರಾದೇವಿಯು ರಘುವೀರನ ನೈವೇದ್ಯಕ್ಕಾಗಿ ಅಡಿಗೆಮಾಡುತ್ತಾ ಕುಳಿತಿದ್ದಾಳೆ. ಇಂದು ಆಕೆಯ ಮನಸ್ಸು ದಿವ್ಯ ಉಲ್ಲಾಸದಿಂದ ಕೂಡಿದೆ, ಆದರೆ ಶರೀರವು ಬಹಳ ನಿರ್ಬಲವಾಗಿರುವಂತೆ ಆಕೆಗೆ ತೋರುತ್ತಿದೆ “ ಶರೀರ ಸ್ಥಿತಿ ಈಗ ಏಕ ಹೀಗಿರಬಹುದು ? ಒಂದುವೇಳೆ ಪ್ರಸವಕಾಲ ಈಗಲೇ ಬಂದರ ಈದಿನ ದೇವರ ನೈವೇದ್ಯಕ್ಕಾಗಿ ಅಡಿಗೆ ಮಾಡುವುದಕ್ಕೆ ಕೂಡ ಮತ್ತೊಬ್ಬರಿಲ್ಲ. ಹಾಗೇನಾದರೂ ಆದರೆ ಗತಿಯೇನು ?” ಹೀಗೆ ಭಾವಿಸಿ ಭೀತಳಾಗಿ ಆಕೆಯು ಈ ವಿಷಯವನ್ನು ತನ್ನ ಗಂಡನಿಗೆ ತಿಳಿಸಿದಳು ಕ್ಷುದಿರಾಮನು ಅದನ್ನೆಲ್ಲ ಕೇಳಿ ಆಕೆಯನ್ನು ಕುರಿತು “ ಏನೂ ಭಯವಿಲ್ಲ, ನಿನ್ನ ಗರ್ಭದಲ್ಲಿರುವ ಪುಣ್ಯಾಶಾಲಿಯು ರಘುವೀರನ ಪೂಜಾಸೇವಾದಿಗಳಿಗೆ ವಿಘ್ನವನ್ನುಂಟುಮಾಡಿ ಎಂದಿಗೂ ಜಗತ್ತಿನಲ್ಲಿ ಅವತರಿಸುವುದಿಲ್ಲವೆಂದು ನನಗೆ ದೃಢವಾದ ನಂಬಿಕೆಯಿದೆ ಆದುದರಿಂದ ನಿಶ್ಚಿಂತಳಾಗಿರು ಪ್ರತಿನಿತ್ಯದಂತೆಯೇ ಈದಿನವೂ ದೇವಸೇವಾ ಕಾರ್ಯವನ್ನು ನೀನೇ ನಿಶ್ಚಯವಾಗಿಯೂ ನೆರವೇರಿಸುತ್ತಿ. ನಾಳೆಯಿಂದ

ಅದಕ್ಕೆ ಬೇಕಾದ ಏರ್ಪಾಡನ್ನು ನಾನು ಮಾಡಿದ್ದೇನೆ. ಅದೂ ಅಲ್ಲದೆ ಇಂದಿನಿಂದ ರಾತ್ರಿಯ ಹೊತ್ತು ನಮ್ಮ ಮನೆಯಲ್ಲಿಯೇ ಮಲಗಬೇಕೆಂದು ಧನಿಗೂ ಹೇಳಿದ್ದೇನೆ.'' ಎಂಬದಾಗಿ ಆಕೆಗೆ ಸಮಾಧಾನವನ್ನು ಹೇಳಿದನು. ಪತಿಯ ಈ ಮಾತುಗಳಿಂದ ಚಂದ್ರಾದೇವಿಗೆ ದೇಹದಲ್ಲಿ ಒಂದು ಹೊಸಶಕ್ತಿ ಬಂದ ಹಾಗಾಗಿ ಆಕೆಯು ಸಂತೋಷಚಿತ್ತದಿಂದ ಪುನಃ ಕೆಲಸಕಾರ್ಯಗಳನ್ನು ಮಾಡತೊಡಗಿದಳು ಕ್ಷುದಿರಾಮನು ಹೇಳಿದ ಹಾಗೆಯೇ ಆಯಿತು. ಮಧ್ಯಾಹ್ನದಲ್ಲಿ ರಘುವೀರನ ನೈವೇದ್ಯವೂ ಆಯಿತು, ಸಾಯಂಕಾಲದಲ್ಲಿ ಸಂಧ್ಯಾರತಿ ಮೊದಲಾದವೂ ನಿರ್ವಿಘ್ನವಾಗಿ ಜರುಗಿದವು. ರಾತ್ರಿ ಭೋಜನಾದಿಗಳನ್ನು ತೀರಿಸಿಕೊಂಡು ಕ್ಷುದಿರಾಮನೂ ರಾಮಕುಮಾರನೂ ಮಲಗುವ ಕೊಠಡಿಗೆ ಹೋದರು. ಧನಿಯು ಬಂದು ಚಂದ್ರಾದೇವಿಯ ಜೊತೆಗೆ ಮತ್ತೊಂದು ಕೊಠಡಿಯಲ್ಲಿ ಮಲಗಿದಳು ದೇವರ ಮನೆಯಲ್ಲದೆ ಇನ್ನೆರಡು ಕೊಠಡಿಗಳೂ ಒಂದು ಅಡಿಗೆಯ ಮನೆಯೂ ಮಾತ್ರ ಇದ್ದವು. ಅವೂ ಅಲ್ಲದೆ ಪ್ರತ್ಯೇಕವಾಗಿ ಒಂದು ಚಿಕ್ಕ ಹುಲ್ಲಿನ ಮನೆ ಇತ್ತು. ಅದರಲ್ಲಿ ಒಂದುಕಡೆ ಧಾನ್ಯವನ್ನು ಕುಟ್ಟುವುದಕ್ಕ ಒಂದು ಒರಳೂ, ಹುರಿಯುವುದಕ್ಕೆ ಒಂದು ಒಲೆಯೂ ಇದ್ದವು ಸ್ಥಾನಾಭಾವದಿಂದ ಆ ಚಿಕ್ಕ ಹುಲ್ಲುಮನೆಯೇ ಚಂದ್ರಾದೇವಿಯ ಸೂತಿಕಾಗೃಹವಾಗಿರಬೇಕೆಂದು ಗೊತ್ತಾಯಿತು

**ಗದಾಧರನ ಜನ್ಮ**

ರಾತ್ರಿ ಮುಗಿಯುವುದಕ್ಕೆ ಸುಮಾರು ಅರ್ಧದಂಡಕಾಲ ಉಳಿದಿತ್ತು ಆಗ ಚಂದ್ರಾದೇವಿಗೆ ಪ್ರಸವವೇದನೆಯಾಯಿತು. ಧನಿಯು ಸಹಾಯದಿಂದ ಆಕೆಯು ಒರಳಿದ್ದ ಮನೆಗೆ ಹೋಗಿ ಮಲಗಿಕೊಂಡಳು, ಸ್ವಲ್ಪ ಹೊತ್ತಿನಲ್ಲಿಯೇ ಒಂದು ಗಂಡುಮಗುವನ್ನು ಹೆತ್ತಳು. ಧನಿಯು ಮೊದಲು ಚಂದ್ರಾದೇವಿಗೆ ಮಾಡತಕ್ಕ ಸಮಯೋಚಿತವಾದ ಉಪಚಾರಗಳನ್ನು ಮಾಡಿ ಮಗುವನ್ನು ಇಟ್ಟಿದ್ದ ಸ್ಥಳಕ್ಕೆ ಹೋದಳು. ಹೋಗಿ ನೋಡಲು ಅಲ್ಲಿ ಮಗು ಕಾಣಲಿಲ್ಲ. ಆಕೆಗೆ ಗಾಬರಿಯಾಯಿತು. ದೀಪವನ್ನು ಚಾಚಿ ಹೆಚ್ಚುಬೆಳಕುಮಾಡಿ ಹುಡುಕಿ ನೋಡಿದಳು. ಮಗುವು ರಕ್ತದಿಂದ ತೊಯಿದು ಕೆಂಪಾಗಿದ್ದ ಭೂಮಿಯಮೇಲೆ ಉರುಡಿಕೊಂಡು ಹೋಗಿ ವಿಭೂತಿಭೂಷಿತಾಂಗವಾಗಿ ಒಲೆಯಲ್ಲಿರುವಂತೆ ಕಂಡುಬಂತು. ಇಷ್ಟಾದರೂ ಸ್ವಲ್ಪವೂ ಸದ್ದುಮಾಡಿರಲಿಲ್ಲ. ಮಗುವನ್ನು ಎತ್ತಿಕೊಂಡು ಮೈಯನ್ನೆಲ್ಲ ವರೆಸಿ ದೀಪದ ಬೆಳಕಿಗೆ ಹಿಡಿದು ನೋಡಿದಳು—ಅದ್ಭುತ

ಪ್ರಿಯದರ್ಶನ ಬಾಲಕ, ಆರುತಿಂಗಳ ಮಗುವಿನಷ್ಟು ದೊಡ್ಡದಾಗಿತ್ತು. ಕೂಡಲೇ ಆ ಸುದ್ದಿಯನ್ನು ಕೇಳಿ ನೆರೆಹೊರೆಯಲ್ಲಿದ್ದ ಲಾಹಾಬಾಬೂ ಯವರ ಮನೆಯಿಂದ ಪ್ರಸನ್ನೆ ಮೊದಲಾದ ನಾಲ್ಕಾರು ಜನರು ಅಲ್ಲಿಗೆ ಹೋದರು —ಧನಿಯು ಅವರಿಗೆ ಈ ಸುದ್ದಿಯನ್ನು ತಿಳಿಸಿದಳು. ಪವಿತ್ರವೂ ಗಂಭೀರವೂ ಆದ ಬ್ರಾಹ್ಮ ಮುಹೂರ್ತದಲ್ಲಿ ತಪಸ್ವಿಯಾದ ಕ್ಷುದಿರಾಮನ ಬಡ ಕುಟೀರವು ಶಂಖಾರವದಿಂದ ಪೂರ್ಣವಾಗಿ ಮಹಾಪುರುಷನ ಶುಭಾಗಮನ ವಾರ್ತೆಯನ್ನು ಪ್ರಪಂಚಕ್ಕೆ ಪ್ರಸಾರಮಾಡಿತು.

ಅನಂತರ ಶಾಸ್ತ್ರಜ್ಞನಾದ ಕ್ಷುದಿರಾಮನು ಹೊಸದಾಗಿ ಹುಟ್ಟಿದ ಬಾಲಕನ ಜನ್ಮಲಗ್ನವನ್ನು ನಿರೂಪಣಮಾಡಬೇಕೆಂದು ನೋಡಲು ಜಾತಕನು ವಿಶೇಷ ಶುಭವಾದ ಮುಹೂರ್ತದಲ್ಲಿ ಹುಟ್ಟಿದನೆಂದು ಗೊತ್ತಾಯಿತು

ಗದಾಧರನ ಶುಭ ಜನ್ಮ ಮುಹೂರ್ತ ಸಂಬಂಧವಾಗಿ ಜ್ಯೋತಿಷಶಾಸ್ತ್ರ ದಿಂದ ತಿಳಿದು ಬರುವ ಅಂಶಗಳು.

ಆ ದಿನ ೧೭೫೭ ನೆಯ ಶಕಾಬ್ದದ (ಸೌರ) ಫಾಲ್ಗುಣದ ೬ ನೆಯ ದಿನ, ಶುಕ್ಲಪಕ್ಷ, ಬುಧವಾರವಾಗಿತ್ತು. ರಾತ್ರಿ ೩೧ ದಂಡಗಳು ಕಳೆದು ಅರ್ಧದಂಡ ಮಾತ್ರ ಉಳಿದಿದ್ದಾಗ ಬಾಲಕನು ಜನ್ಮಗ್ರಹಣ ಮಾಡಿದನು. ಶುಭಕರವಾದ ದ್ವಿತೀಯಾತಿಥಿಯು ಆ ಸಮಯದಲ್ಲಿ ಪೂರ್ವ ಭಾದ್ರಪದ ನಕ್ಷತ್ರದೊಂದಿಗೆ ಸಿದ್ಧಿಯೋಗವುಂಟಾಗಿತ್ತು. ಬಾಲಕನ ಜನ್ಮಲಗ್ನದಲ್ಲಿ ರವಿ ಚಂದ್ರ ಬುಧರು ಒಂದೇಕಡೆ ಸೇರಿದ್ದರು. ಶುಕ್ರ, ಕುಜ, ಶನಿ ಈ ಮೂರು ಗ್ರಹಗಳೂ ಉಚ್ಚಸ್ಥಿತಿಯಲ್ಲಿದ್ದು ಜಾತಕನ ಅಸಾಧಾರಣ ಜೀವನದ ಪರಿಚಯವನ್ನುಂಟುಮಾಡಿ ಕೊಡುತ್ತಿದ್ದವು. ಅಲ್ಲದೆ ಮಹಾಮುನಿ ಪರಾಶರ ಮತರೀತ್ಯಾ ರಾಹುಕೇತುಗಳಿಬ್ಬರೂ ಜಾತಕನ ಜನನಕಾಲದಲ್ಲಿ ಉಚ್ಚರಾಶಿಯಲ್ಲಿದ್ದರು. ಇದೂ ಅಲ್ಲದೆ ಬೃಹಸ್ಪತಿಯು ಉಚ್ಚಾರೋಹಿಯಾಗಿ ಬಾಲಕನ ಅದೃಷ್ಟದಮೇಲೆ ತನ್ನ ಶುಭಪ್ರಭಾವವನ್ನು ವಿಶೇಷವಾಗಿ ವಿಸ್ತರಿಸಿದ್ದನು.

ಗದಾಧರನ ರಾಶಿ ನಾಮ

ಅನಂತರ ಜ್ಯೋತಿಷಶಾಸ್ತ್ರಜ್ಞರು ಮಗುವಿನ ಜನನ ಕಾಲವನ್ನು ಪರೀಕ್ಷಿಸಿ ನೋಡಿ ಜಾತಕನು ಹುಟ್ಟಿದ ಉಚ್ಚಲಗ್ನದ ವಿಚಾರವಾಗಿ ಜ್ಯೋತಿಷಶಾಸ್ತ್ರದಲ್ಲಿ ಕೆಳಗೆ

ಹೇಳುವಂತೆ ಸ್ಪಷ್ಟವಾಗಿ ಲಿಖಿತವಾಗಿದೆ ಎಂದು ತಿಳಿಸಿದರು.—" ಇಂತಹ ವ್ಯಕ್ತಿಯು ಧರ್ಮಜ್ಞನೂ ಮಾನನೀಯನೂ ಆಗುತ್ತಾನೆ. ಯಾವಾಗಲೂ ಪುಣ್ಯಕರ್ಮಾನುಷ್ಠಾನ ನಿರತನಾಗಿರುತ್ತಾನೆ ಬಹುಮಂದಿ ಶಿಷ್ಯರಿಂದೊಡಗೂಡಿ ದೇವಸ್ಥಾನದಲ್ಲಿ ವಾಸಮಾಡುತ್ತಾನೆ. ಅದೂ ಅಲ್ಲದೆ ನವೀನ ಸಂಪ್ರದಾಯ ಪ್ರವರ್ತಕನಾಗಿ ನಾರಾಯಣಾಂಶ ಸಂಭೂತನಾದ ಮಹಾಪುರುಷನೆಂದು ಜಗತ್ತಿನಲ್ಲಿ ಖ್ಯಾತಿಯನ್ನು ಪಡೆದು ಸರ್ವತ್ರವೂ ಸಕಲರಿಂದಲೂ ಪೂಜ್ಯನಾಗುತ್ತಾನೆ." * ಇದನ್ನು ಕೇಳಿ ಕ್ಷುದಿರಾಮನಿಗೆ ಅತ್ಯಂತ ಆಶ್ಚರ್ಯವಾಯಿತು. ತನಗೆ ಗಯಾಕ್ಷೇತ್ರದಲ್ಲಿ ಬಿದ್ದಸ್ವಪ್ನವು ಸತ್ಯವಾಗಿಯೂ ಸಫಲವಾಯಿತು ಎಂದು ಭಾವಿಸಿ ಕೃತಜ್ಞಹೃದಯನಾದನು. ಜಾತಕರ್ಮಾನಂತರ ಬಾಲಕನಿಗೆ ಶಂಭುಚಂದ್ರ ಎಂದು ರಾಶಿನಾಮವನ್ನಿಟ್ಟನು, ಮತ್ತು ಗಯಾಕ್ಷೇತ್ರದ ಸ್ವಪ್ನ ವೃತ್ತಾಂತವನ್ನು ಜ್ಞಾಪಿಸಿಕೊಂಡು ಅವನಿಗೆ "ಗದಾಧರ" ಎಂಬದಾಗಿ ವ್ಯವಹಾರನಾಮವಿರಬೇಕೆಂದು ನಿಶ್ಚಯಿಸಿದನು

**ಗದಾಧರನ ಜನ್ಮ ಕುಂಡಲಿ**

ಪಾಠಕರ ಸೌಕರ್ಯಕ್ಕಾಗಿ ಪರಮಹಂಸರ ಅಪೂರ್ವ ಜನ್ಮ ಕುಂಡಲಿಯೊಂದಿಗೆ ಅವರ ಜನ್ಮಪತ್ರಿಕೆಯ ಸ್ವಲ್ಪ ಭಾಗವನ್ನು ಇಲ್ಲಿ ಬರೆಯುತ್ತೇವೆ ಅದು ಶ್ರೀರಾಮ, ಶ್ರೀಕೃಷ್ಣ, ಶ್ರೀಶಂಕರ, ಶ್ರೀ ಚೈತನ್ಯಾದಿ ಅವತಾರ ಪುರುಷರ ಜಾತಕಗಳಿ

---

ಧರ್ಮಸ್ಥಾನಾಧಿಪೇ ತುಂಗೇ ಧರ್ಮಸ್ಥೇ ತುಂಗಖೇಚರೇ ।
ಗುರುಣಾ ದೃಷ್ಟಿಸಂಯೋಗೇ ಲಗ್ನೇಶೇ ಧರ್ಮಸಂಸ್ಥಿತೇ ॥
ಕೇಂದ್ರಸ್ಥಾನಗತೇ ಸೌಮ್ಯೇ ಗುರೌ ಚೈವ ತು ಕೋಣಭೇ ।
ಸ್ಥಿರಲಗ್ನೇ ಯದಾ ಜನ್ಮ ಸಂಪ್ರದಾಯಪ್ರಭುಃ ಹಿ ಸಃ ॥
ಧರ್ಮವಿನ್ಮಾನನೀಯಸ್ತು ಪುಣ್ಯಕರ್ಮರತಸ್ಸದಾ ।
ದೇವಮಂದಿರವಾಸೀ ಚ ಬಹುಶಿಷ್ಯಸಮನ್ವಿತಃ ॥
ಮಹಾಪುರುಷ ಸಂಜ್ಞೋಽಯಂ ನಾರಾಯಣಾಂಶಸಂಭವಃ ।
ಸರ್ವತ್ರ ಜನಪೂಜ್ಯಶ್ಚ ಭವಿಷ್ಯತಿ ನ ಸಂಶಯಃ ॥

—ಇತಿ ಭೃಗುಸಂಹಿತಾಯಾಂ ಸಂಪ್ರದಾಯ ಪ್ರಭುಯೋಗಃ ತತ್ಫಲಂಚ—
ಶ್ರೀಯುಕ್ತ ನಾರಾಯಣಚಂದ್ರ ಜ್ಯೋತಿರ್ಭೂಷಣಕೃತ ಜನ್ಮಕೋಷ್ಟಿಯಿಂದ ಮೇಲೆ ಹೇಳಿದ ವಚನವು ಉದ್ಧೃತವಾಗಿದೆ.

ಗಿಂತಲೂ ಯಾವ ಅಂಶದಲ್ಲಿಯೂ ಹೀನವಾಗಿಲ್ಲವೆಂಬದಾಗಿ ಜ್ಯೋತಿಷ ಶಾಸ್ತ್ರವನ್ನರಿತ ಪಾರಕರು ತಿಳಿದುಕೊಳ್ಳಬಹುದು.

| | | | |
|---|---|---|---|
| ಶು:\| | | ರಾ: | ವಕ್ರೀ ಗು:\| |
| ರ:\| ಚ:\| ಲಗ್ನ ಬು:\| | ರಾಶಿ ಕುಂಡಲಿ | | |
| ವಕ್ರೀ ಕು:\| | | | |
| | ಕೇ: | ವಕ್ರೀ ಶ: | |

(ಶಕಾಬ್ದ 1757) ಏತಚ್ಛಕೀಯ ಸೌರಫಾಲ್ಗುನಸ್ಯ ಷಷ್ಠದಿವಸೆ, ಬುಧವಾಸರೆ, ಶುಕ್ಲಪಕ್ಷೀಯ ದ್ವಿತೀಯಾಯಾಂ ತಿಥೌ, ಪೂರ್ವಭಾದ್ರಪದ ನಕ್ಷತ್ರಸ್ಯ ಪ್ರಥಮಚರಣೆ, ಸಿದ್ಧಿಯೋಗೆ, ಬಾಲವಕರಣೆ, ಏವಂ ಪಂಚಾಂಗ ಸಂಶುದ್ಧೌ, ರಾತ್ರಿ ಚತುರ್ದಶಪಲಾಧಿಕೈಕ ತ್ರಿಂಶದ್ದಂಡ ಸಮಯೆ, ಅಯನಾಂಶೋದ್ಭವ ಶುಭ ಕುಂಭಲಗ್ನೆ (ಲಗ್ನಸ್ಫುಟರಾಶಾದಿ: 10—3—17—19—35—20), ಶನೈಶ್ಚರಸ್ಯ ಕ್ಷೇತ್ರೆ, ಸೂರ್ಯಸ್ಯ ಹೋರಾಯಾಂ, ಸೂರ್ಯಸುತಸ್ಯ ದ್ರೆಕ್ಕಾಣೆ, ಶುಕ್ರಸ್ಯ ನವಾಂಶೆ, ಬೃಹಸ್ಪತೇರ್ದ್ವಾದಶಾಂಶೆ, ಕುಜಸ್ಯ ತ್ರಿಂಶಾಂಶೆ, ಏವಂ ಷಡ್ವರ್ಗ ಪರಿಶೋಧಿತೆ ಪೂರ್ವಭಾದ್ರಪದ ನಕ್ಷತ್ರಾಶ್ರಿತ ಕುಂಭರಾಶಿಸ್ಥಿತೇ ಚಂದ್ರೆ ಬುಧಸ್ಯ ಯಾಮಾರ್ಧೇ, ಜೀವಸ್ಯ ದಂಡೇ, ಕೋಣಸ್ಥೆ ಗುರೌ, ಕೇಂದ್ರಸ್ಥೇ ಬುಧೆ ಚಂದ್ರೆ ಚ, ಲಗ್ನಸ್ಥೇ ಚಂದ್ರೇ ತ್ರಿಗ್ರಹಯೋಗೆ, ಧರ್ಮಕರ್ಮಾಧಿಪಯೋ: ಶುಕ್ರಭೌಮಯೋ: ತುಂಗಸ್ಥಿತಯೋ: ವರ್ಗೋತ್ತಮಸ್ಥೆ ಲಗ್ನಾಧಿಪೆ, ಶನೌ ಚ ತುಂಗೇ, ಪರಾಶರಮತೇನ ತು ರಾಹು ಕೇತ್ವೋಸ್ತುಂಗಸ್ಥಯೋ: (ಯತ: ಉಕ್ತಂ, "ರಾಹೋಸ್ತು ವೃಷಭಂ, ಕೇತೋರ್ವೃಶ್ಚಿಕಂ ತುಂಗಸಂಜ್ಞಿತಂ" ಇತ್ಯಾದಿ ಪ್ರಮಾಣಾತ್), ಅತಏವ ಉಚ್ಚಸ್ಥೇ ಗ್ರಹಪಂಚಕೇ, ಅಸಾಧಾರಣ ಪುಣ್ಯಭಾಗ್ಯಯೋಗೆ, ಶುಕ್ಲಪಕ್ಷೇ ನಿಶಿಜನ್ಮಹೇತೋ: ವಿಂಶೋತ್ತರೀ ದಶಾಧಿಕಾರೆ ಜನ್ಮ, ಏತೇನ ಬೃಹಸ್ಪತೇರ್ದಶಯಾಂ,

ತಥಾ ದೇಶಭೇದೇನ ದಶಾಧಿಕಾರ ನಿಯಮಾಚ್ಚ ಅಷ್ಟೋತ್ತರೀಯ ರಾಹೋರ್ದಶಾಯಾಂ, ಅಶೇಷಗುಣಾಲಂಕೃತಸ್ಯ ಧರ್ಮನಿಷ್ಠ ಕ್ಷುದಿರಾಮ ಚಟ್ಟೋಪಾಧ್ಯಾಯ ಮಹೋದಯಸ್ಯ (ಸಹಧರ್ಮಿಣೀ ದಯಾವತೀ ಚಂದ್ರಮಣಿದೇವಿ ಮಹೋದಯಾಯಃ ಗರ್ಭೇ) ಶುಭಃ ತೃತೀಯಪುತ್ರ ಸಮಜನಿ.||—ತಸ್ಯ ರಾಶ್ಯಾಶ್ರಿತಂ ನಾಮ ಶಂಭುರಾಮ ದೇವಶರ್ಮಾ || ಪ್ರಸಿದ್ಧನಾಮ ಗದಾಧರ ಚಟ್ಟೋಪಾಧ್ಯಾಯಃ ಸಾಧನಾಸಿದ್ಧಿಪ್ರಾಪ್ತ ಜಗದ್ವಿಖ್ಯಾತನಾಮ ಶ್ರೀರಾಮಕೃಷ್ಣ ಪರಮಹಂಸ ದೇವ ಮಹೋದಯಃ

ಆಮೇಲೆ ಪ್ರಿಯದರ್ಶನ ಪುತ್ರನ ಮುಖವನ್ನು ನೋಡಿಯೂ ಆತನ ಅಸಾಧಾರಣ ಭಾಗ್ಯದ ವಿಷಯವನ್ನು ಕೇಳಿಯೂ ಕ್ಷುದಿರಾಮನೂ ಚಂದ್ರಮಣಿಯೂ ತಾವು ಕೃತಾರ್ಥರೆಂದು ತಿಳಿದುಕೊಂಡರು ಯಥಾಕಾಲದಲ್ಲಿ ಆ ಮಗುವಿನ ನಿಷ್ಕ್ರಮಣ ನಾಮಕರಣಾದಿಗಳನ್ನು ಮಾಡಿ ಅಶೇಷ ಪ್ರಯತ್ನದಿಂದ ಆತನ ಲಾಲನೆ ಪಾಲನೆಗಳಲ್ಲಿ ಮನಸ್ಸನ್ನಿಟ್ಟರು.

---

* ಶ್ರೀಯುಕ್ತ ನಾರಾಯಣಚಂದ್ರ ಜ್ಯೋತಿರ್ಭೂಷಣ ಕೃತ ಜನ್ಮಕೋಷ್ಠಿಯಿಂದ ಮೇಲೆ ಹೇಳಿದ ಅಂಶವು ಉದ್ಧೃತವಾಗಿದೆ.

# ಶ್ರೀ ರಾಮಕೃಷ್ಣ ಲೀಲಾಪ್ರಸಂಗ

## ಆರನೆಯ ಅಧ್ಯಾಯ

### ಬಾಲ್ಯ ಮತ್ತು ಪಿತೃವಿಯೋಗ.

ರಾಮಚಾದನ ಗೋದಾನ.

ಶ್ರೀ ರಾಮ ಶ್ರೀ ಕೃಷ್ಣ ಮೊದಲಾದ ಅವತಾರ ಪುರುಷರೆಲ್ಲರ ತಂದೆತಾಯಿಗಳು ಆ ಮಹಾಪುರುಷರು ಜನ್ಮಗ್ರಹಣ ಮಾಡುವುದಕ್ಕೆ ಮೊದಲೂ ಆಮೇಲೆಯೂ ಅನೇಕ ದಿವ್ಯದರ್ಶನಗಳನ್ನು ಹೊಂದಿ ಅವರು ದೇವರಕ್ಷಿತರೆಂದು ಚೆನ್ನಾಗಿ ತಿಳಿದುಕೊಂಡಿದ್ದರೂ ಉತ್ತರ ಕ್ಷಣದಲ್ಲಿಯೇ ಪುತ್ರವಾತ್ಸಲ್ಯದಿಂದ ಆ ವಿಷಯವನ್ನೆಲ್ಲ ಮರೆತು ಅವರ ಲಾಲನೆ ಪಾಲನೆಗಳ ವಿಷಯದಲ್ಲಿ ಯಾವಾಗಲೂ ಚಿಂತಿಸುತ್ತಿದ್ದರೆಂದು ಶಾಸ್ತ್ರ ಗ್ರಂಥಗಳಿಂದ ತಿಳಿದುಬರುತ್ತದೆ. ಕ್ಷುದಿರಾಮ ಚಂದ್ರಾದೇವಿಯರ ಸಂಬಂಧವಾಗಿಯೂ ಇದೇ ಮಾತನ್ನೇ ಹೇಳಬಹುದು. ಏಕೆಂದರೆ, ಅವರೂ ಮುದ್ದು ಕುಮಾರನ ಮುಖ ಕಮಲವನ್ನು ನೋಡಿ ಗಯಾಕ್ಷೇತ್ರದ ದೇವಸ್ವಪ್ನ, ಶಿವಾಲಯದ ದಿವ್ಯದರ್ಶನ ಮುಂತಾದ ವಿಷಯಗಳನ್ನೆಲ್ಲ ಈಗ ಬಹುಮಟ್ಟಿಗೆ ಮರೆತು ಬಿಟ್ಟು ಆ ಮಗುವನ್ನು ಸರಿಯಾಗಿ ಕಾಪಾಡಬೇಕೆಂಬ ಚಿಂತೆಯನ್ನು ಹೊಂದಿ ಅನೇಕ ಉಪಾಯಗಳನ್ನು ಯೋಚಿಸುವುದಕ್ಕೆ ಆರಂಭಿಸಿದರು. ದ್ರವ್ಯಾರ್ಜನೆ ಮಾಡಲು ಶಕ್ತನಾದ ಸೋದರಳಿಯನಾದ ರಾಮಚಾದನ ಹತ್ತಿರಕ್ಕೆ ಮೇದಿನೀಪುರಕ್ಕೆ ಮಗನು ಹುಟ್ಟಿದ ಸಮಾಚಾರವನ್ನು ಹೇಳಿಕಳುಹಿಸಿದರು. ಸೋದರಮಾವನ ಬಡ ಸಂಸಾರದಲ್ಲಿ ಹಾಲಿಗೆ ತೊಂದರೆಯಾಗಬಹುದು ಎಂಬುವುದನ್ನು ಯೋಚಿಸಿ ಆತನು ಒಂದು ಕರೆಯುವ ಆಕಳನ್ನು ಕೊಟ್ಟು ಕಳುಹಿಸಿದನು. ಇದರಿಂದ ಕ್ಷುದಿರಾಮನಿಗೆ ಇದೊಂದು ಚಿಂತೆಯು ನಿವಾರಣೆಯಾಯಿತು. ಹೀಗೆ ಹೊಸದಾಗಿ ಹುಟ್ಟಿದ ಮಗುವಿಗೋಸ್ಕರ ಯಾವಾಗ ಯಾವವಸ್ತುಗಳು ಬೇಕಾಗುತ್ತಿದ್ದುವೋ ಆಗಲೇ ಆ ವಸ್ತುಗಳು ಅನೇಕ ಕಡೆಗಳಿಂದ ಹೇಗೋ ಬಂದು ಕೂಡುತ್ತಿದ್ದರೂ ಕ್ಷುದಿರಾಮನೂ ಚಂದ್ರಾದೇವಿಯೂ ಚಿಂತಿಸುವು

ದೇನೂ ಕಡಮೆಯಾಗುತ್ತಿರಲಿಲ್ಲ. ಈ ರೀತಿಯಾಗಿ ಅನೇಕ ದಿನಗಳು ಕಳೆದು ಹೋದುವು.

**ಗದಾಧರನ ಚಿತ್ತಾಕರ್ಷಕ ಶಕ್ತಿ**

ಇತ್ತಕಡೆ ಹೊಸದಾಗಿ ಹುಟ್ಟಿದ ಬಾಲಕನ ಚಿತ್ತಾಕರ್ಷಣ ಶಕ್ತಿಯು ದಿನದಿನಕ್ಕೂ ಅಭಿವೃದ್ಧಿ ಹೊಂದಿ ತಂದೆ ತಾಯಿಗಳ ಮೇಲೆ ತನ್ನ ಪ್ರಭಾವವನ್ನು ವಿಸ್ತರಿಸಿದುದು ಮಾತ್ರವೇ ಅಲ್ಲದೆ ಪರಿವಾರದಲ್ಲಿದ್ದ ಸಮಸ್ತರ ಮತ್ತು ಗ್ರಾಮದಲ್ಲಿದ್ದ ಸಮಸ್ತ ಹೆಂಗಸರ ಮೇಲೆಯೂ ತನ್ನ ಅಧಿಕಾರವನ್ನು ಮೆಲ್ಲ ಮೆಲ್ಲಗೆ ಸ್ಥಾಪಿಸಿತು. ಗ್ರಾಮದ ಹೆಂಗಸರು ಅವಕಾಶ ಸಿಕ್ಕಿದಾಗ ಚಂದ್ರಾದೇವಿಯನ್ನು ನೋಡುವುದಕ್ಕೆ ಈಗ ಪ್ರತಿನಿತ್ಯವೂ ಬರುತ್ತಿದ್ದರು. ಇದಕ್ಕೆ ಕಾರಣವೇನೆಂದು ಕೇಳಿದರೆ "ನಿನ್ನ ಮಗನನ್ನು ನಿತ್ಯವೂ ನೋಡಬೇಕೆನ್ನಿಸುತ್ತದೆ, ಇನ್ನೇನು ಮಾಡೋಣ ಹೇಳು, ನಿತ್ಯವೂ ಬರಲೇಬೇಕು" ಎಂದು ಹೇಳುತ್ತಿದ್ದರು. ಹತ್ತಿರಿದ್ದ ಹಳ್ಳಿಗಳಿಂದಲೂ ಬಂಧುಬಳಗದ ಹೆಂಗಸರು ಈ ಕಾರಣದಿಂದಲೇ ಬಡವನಾದ ಕ್ಷುದಿರಾಮನ ಮನೆಗೆ ಮೊದಲಿಗಿಂತಲೂ ಹೆಚ್ಚಾಗಿ ಈಗ ಬರುವುದಕ್ಕೆ ಮೊದಲುಮಾಡಿದರು. ಈ ರೀತಿಯಾಗಿ ಎಲ್ಲರ ಆದರಕ್ಕೂ ಪಾತ್ರನಾಗಿ ಬೆಳೆದ ಆ ಮಗುವಿಗೆ ಕ್ರಮವಾಗಿ ಐದು ತಿಂಗಳು ತುಂಬಿದವು. ಅನ್ನಪ್ರಾಶನದ ಕಾಲವು ಬಂತು.

**ಅನ್ನಪ್ರಾಶನ ಕಾಲದಲ್ಲಿ ಧರ್ಮದಾಸಲಾಹ ಅವರು ಮಾಡಿದ ಸಹಾಯ.**

ಮಗನ ಅನ್ನಪ್ರಾಶನ ಕಾರ್ಯದಲ್ಲಿ ಕ್ಷುದಿರಾಮನು ತನ್ನ ಯೋಗ್ಯತೆಗೆ ತಕ್ಕಂತೆ ಮೊದಲು ವ್ಯವಸ್ಥೆ ಮಾಡಿಕೊಂಡನು. ಶಾಸ್ತ್ರವಿಹಿತವಾದ ಕರ್ಮವನ್ನು ಮಾಡಿಕೊಂಡು ರಘುವೀರನಿಗೆ ನಿವೇದನಮಾಡಿ ಪ್ರಸಾದವನ್ನು ಮಗುವಿಗೆ ತಿನ್ನಿಸಿ ಅನ್ನಪ್ರಾಶನ ಕಾರ್ಯವನ್ನು ಮುಗಿಸಬೇಕೆಂದು ಅಂದುಕೊಂಡನು. ಆದುದರಿಂದ ನಾಲ್ಕಾರುಜನ ಹತ್ತಿರ ಸಂಬಂಧದವರನ್ನು ಮಾತ್ರ ಊಟಕ್ಕೆ ಕರೆಯಬೇಕೆಂದಿದ್ದನು. ಆದರೆ ಘಟನೆಯು ಬೇರೆ ವಿಧವಾಗಿ ನಡೆಯಿತು. ಆತನ ಆಪ್ತ ಸ್ನೇಹಿತನಾದ ಆ ಗ್ರಾಮದ ಜಮೀನುದಾರ ಧರ್ಮದಾಸಲಾಹಾ ಅವರ ಗುಪ್ತ ಪ್ರೇರಣೆಯಿಂದ ಆ ಗ್ರಾಮದ ಮುಖ್ಯ ಬ್ರಾಹ್ಮಣರೆಲ್ಲರೂ ಕ್ಷುದಿರಾಮನ ಹತ್ತಿರಕ್ಕೆ ಹೋಗಿ, ಅವನ ಮಗನ ಅನ್ನಪ್ರಾಶನ ದಿವಸ ತಮ್ಮೆಲ್ಲರನ್ನೂ ಊಟಕ್ಕೆ ಕರೆಯಬೇಕೆಂದು ಬಲವಂತ

ಮಾಡಿದರು. ಆದರೆ ಈ ವಿಧವಾದ ಬಲಾತ್ಕಾರವನ್ನು ನೋಡಿ, ಕ್ಷುದಿರಾಮನು ತನಗೆ ಒಳ್ಳೆಯ ಕಷ್ಟಬಂದಿತಲ್ಲ ಎಂದು ಅಂದುಕೊಂಡನು, ಏಕೆಂದರೆ, ಗ್ರಾಮದಲ್ಲಿ ಸಮಸ್ತರೂ ಆತನಿಗೆ ಶ್ರದ್ಧಾಭಕ್ತಿಯನ್ನು ತೋರಿಸುತ್ತಿದ್ದರು ಈಗ ಅವರಲ್ಲಿ ಕೆಲವರನ್ನು ಕರೆದು ಕೆಲವರನ್ನು ಕರೆಯದೆ ಬಿಡುವುದು ಸಾಧ್ಯವಾಗಿ ಕಾಣಲಿಲ್ಲ. ಎಲ್ಲರಿಗೂ ಊಟಕ್ಕೆ ಹೇಳುವಷ್ಟು ಸಾಮರ್ಥ್ಯವು ಆತನಿಗೆಲ್ಲಿಯದು? ಆದ್ದರಿಂದ "ರಘುವೀರನ ಇಚ್ಛೆಯಿದ್ದಂತಾಗಲಿ" ಎಂದು ಆತನು ಧರ್ಮದಾಸನೊಂದಿಗೆ ಮಾತನಾಡಿ ಈ ವಿಷಯವನ್ನು ನಿರ್ಧರಿಸಬೇಕೆಂದು ಆತನ ಮನೆಗೆ ಹೋದನು ಸ್ನೇಹಿತನ ಅಭಿಪ್ರಾಯವನ್ನು ತಿಳಿದುಕೊಂಡು ಆತನ ಮೇಲೆಯೇ ಆ ಕೆಲಸದ ಭಾರವನ್ನೆಲ್ಲ ಹಾಕಿ ಮನೆಗೆ ಹಿಂದಿರುಗಿದನು ಧರ್ಮದಾಸನು ಸಂತೋಷ ಚಿತ್ತದಿಂದ ಬಹುಮಟ್ಟಿಗೆ ಸ್ವಂತ ಖರ್ಚಿನಿಂದಲೇ ತಕ್ಕ ಏರ್ಪಾಟನ್ನು ಮಾಡಿ ಆ ಕಾರ್ಯವನ್ನು ನೆರವೇರಿಸಿದನು ಗದಾಧರನ ಅನ್ನಪ್ರಾಶನದ ಉದ್ದೇಶದಿಂದ ಆ ಗ್ರಾಮದ ಬ್ರಾಹ್ಮಣರೂ ಬ್ರಾಹ್ಮಣೇತರರೂ ಸಕಲ ಜಾತಿಯವರೂ ಕ್ಷುದಿರಾಮನ ಕುಟೀರಕ್ಕೆ ಹೋಗಿ ರಘುವೀರನ ಪ್ರಸಾದವನ್ನು ಸ್ವೀಕರಿಸಿ ತೃಪ್ತಿಯನ್ನು ಹೊಂದಿದರೆಂದೂ, ಹಾಗೆಯೇ ಅನೇಕ ದರಿದ್ರ ಭಿಕ್ಷುಕರೂ ಅದೇ ಪ್ರಕಾರ ತೃಪ್ತಿಯನ್ನು ಹೊಂದಿ ಕ್ಷುದಿರಾಮನ ಮಗನು ದೀರ್ಘಜೀವಿಯಾಗಿಯೂ ಸುಖವಾಗಿಯೂ ಇರಲೆಂದು ಹರಸಿ ಹೊರಟು ಹೋದರೆಂದು ಹೇಳುತ್ತಾರೆ.

**ಚಂದ್ರಾದೇವಿಯ ದಿವ್ಯ ದರ್ಶನ ಶಕ್ತಿಯು ಆ ಕಾಲದಲ್ಲಿ ಪ್ರಕಾಶವಾಗುವಿಕೆ**

ದಿನಗಳು ಕಳೆದ ಹಾಗೆಲ್ಲ ಗದಾಧರನ ಬಾಲ ಚೇಷ್ಟೆಗಳು ಮಧುರತರವಾಗಿ ಚಂದ್ರಾದೇವಿಯ ಹೃದಯವನ್ನು ಆನಂದ ಮತ್ತು ಭಯದ ಪ್ರವಾಹಗಳ ಪವಿತ್ರಪ್ರಯಾಗವಾಗಿ ಮಾಡಿದುವು ಮಗನು ಹುಟ್ಟುವುದಕ್ಕೆ ಮುಂಚೆ ದೇವತೆಗಳಲ್ಲಿ ಯಾವ ವಿಧವಾದ ಪ್ರಾರ್ಥನೆಯನ್ನೂ ಮಾಡುವುದಕ್ಕೆ ಹಿಂಜರಿಯುತ್ತಿದ್ದ ಚಂದ್ರಾದೇವಿಯು ಈಗ ದಿನಂಪ್ರತಿಯೂ ಮಗನ ಕಲ್ಯಾಣಕ್ಕಾಗಿ ನೂರಾರು ಸಲ ಸಾವಿರಾರುಸಲ ಜ್ಞಾತವಾಗಿಯೂ ಅಜ್ಞಾತವಾಗಿಯೂ ತನ್ನ ಮಾತೃ ಹೃದಯದ ಕರುಣಾಪೂರ್ಣವಾದ ಪ್ರಾರ್ಥನೆಯನ್ನು ದೇವತೆಗಳ ಚರಣಗಳಲ್ಲಿ ಅರ್ಪಣಮಾಡಿದರೂ ಸಂಪೂರ್ಣವಾಗಿ ನಿಶ್ಚಿಂತಳಾಗಿರಲು ಆಗುತ್ತಿರಲಿಲ್ಲ. ಹೀಗೆ ಮಗನ ಮಂಗಳಾಕಾಂಕ್ಷೆಯೂ ಅವನನ್ನು ಕಾಪಾಡುವುದೂ ಚಂದ್ರಾದೇವಿಯ ಧ್ಯಾನ ಜ್ಞಾನಗಳಾಗಿ ಹೋಗಿ ಆಕೆಗೆ ಪೂರ್ವದಲ್ಲಿದ್ದ ದಿವ್ಯದರ್ಶನಶಕ್ತಿಯು

ಈಗ ಕುಂದು ಹೋದುದೆಂಬುದು ಸುಲಭವಾಗಿ ಊಹಿಸಬಹುದಾದ ವಿಷಯ. ಆದರೂ ಆ ಶಕ್ತಿಯ ಸಾಮಾನ್ಯ ಪ್ರಕಾಶವು ಈಗಲೂ ಆಗಾಗ ಉಂಟಾಗುತ್ತಾ, ಆಕೆಗೆ ಕೆಲವು ವೇಳೆ ಆಶ್ಚರ್ಯವನ್ನೂ ಕೆಲವುವೇಳೆ ಮಗನಿಗೆ ಮುಂದೆ ಸಂಭವಿಸಬಹುದಾದ ಅಮಂಗಳದ ಭಯವನ್ನೂ ಹುಟ್ಟಿಸುತ್ತಿತ್ತು. ಈ ವಿಷಯವಾಗಿ ನಾವು ನಂಬಿಕೆಗೆ ಅರ್ಹರಾದ ಜನರಿಂದ ಕೇಳಿರುವ ಒಂದು ಘಟನೆಯನ್ನು ಇಲ್ಲಿ ಬರೆದರೆ, ಪಾಠಕರಿಗೆ ಮೇಲೆ ಹೇಳಿರುವ ಮಾತು ಸುಲಭವಾಗಿ ಗೊತ್ತಾಗಬಹುದು. ಘಟನೆಯು ಈ ರೀತಿಯಾಗಿತ್ತು.—

ಈ ವಿಷಯಕವಾದ ಘಟನೆ–ಗದಾಧರನನ್ನು ದೊಡ್ಡವನನ್ನಾಗಿ ನೋಡುವುದು.

ಗದಾಧರನಿಗೆ ಆಗ ಸುಮಾರು 7—8 ತಿಂಗಳ ವಯಸ್ಸಾಗಿತ್ತು. ಚಂದ್ರಾದೇವಿಯು ಒಂದುದಿನ ಮಗುವಿಗೆ ಹೊಟ್ಟೆಗೆ ಕೊಡುತ್ತಿದ್ದಳು. ಕೆಲವು ನಿಮಿಷಗಳಾದ ಮೇಲೆ ಮಗುವು ನಿದ್ದೆ ಹೋದುದನ್ನು ನೋಡಿ ಸೊಳ್ಳೆಗಳು ಕಡಿಯುವುದನ್ನು ತಪ್ಪಿಸುವುದಕ್ಕಾಗಿ ಸೊಳ್ಳೆಯ ಪರದೆಯಲ್ಲಿ ಮಲಗಿಸಿದಳು. ಆಮೇಲೆ ಕೊಠಡಿಯಿಂದ ಹೊರಗೆ ಹೋಗಿ ಕೆಲಸ ಕಾರ್ಯದಲ್ಲಿ ಮಗ್ನಳಾದಳು. ಸ್ವಲ್ಪ ಹೊತ್ತಾದಮೇಲೆ ಏನೋ ಒಂದು ಕೆಲಸಕ್ಕಾಗಿ ಆ ಕೋಣೆಯೊಳಕ್ಕೆ ಹೋಗಲು, ಸೊಳ್ಳೆಯ ಪರದೆಯಲ್ಲಿ ಮಗುವು ಕಾಣಲಿಲ್ಲ ಮಗುವಿದ್ದ ಸ್ಥಳದಲ್ಲಿ ಒಬ್ಬ ದೀರ್ಘಕಾಯನಾದ ಅಪರಿಚಿತನಾದ ಮನುಷ್ಯನು ಪರದೆಯನ್ನು ತೆಗೆದು ಮಲಗಿದ್ದನು. ಗಾಬರಿಯಾಗಿ ಚಂದ್ರಾದೇವಿಯು ಕಿರಿಚಿಕೊಂಡು ಓಡಿ ಓಡಿ ಕೊಠಡಿಯಿಂದ ಹೊರಗೆ ಹೋಗಿ ಗಂಡನನ್ನು ಕೂಗಿ ಕರೆದಳು. ಆತನು ಬರಲು, ಈ ವಿಷಯುವನ್ನು ಚಂದ್ರಾದೇವಿಯು ತಿಳಿಸಿದಳು ಇಬ್ಬರೂ ಮಾತನಾಡುತ್ತಾ ಮಾತನಾಡುತ್ತಾ ಪುನಃ ಕೊಠಡಿಯೊಳಕ್ಕೆ ಪ್ರವೇಶಮಾಡಿ ನೋಡಲು ಅಲ್ಲಿ ಯಾರು ಕಾಣಬರಲಿಲ್ಲ. ಮಗುವು ಮೊದಲು ನಿದ್ದೆ ಮಾಡುತ್ತಿದ್ದ ಹಾಗೆಯೇ ನಿದ್ದೆ ಮಾಡುತ್ತಿತ್ತು. ಅಷ್ಟಾದರೂ ಚಂದ್ರಾದೇವಿಯ ಭಯವು ಕಡಮೆಯಾಗಲಿಲ್ಲ ಆಕೆಯು “ ನಿಶ್ಚಯವಾಗಿಯೂ ಯಾವುದೋ ಒಂದು ಉಪದೇವತೆಯಿಂದ ಹೀಗಾಗಿದೆ. ನಾನು ಕಣ್ಣಾರೆ ನೋಡಿದೆ ಒಬ್ಬ ದೀರ್ಘಾಕಾರ ಪುರುಷನು ಮಲಗಿದ್ದುದನ್ನು ; ನನಗೆ ಸ್ವಲ್ಪವೂ ಭ್ರಾಂತಿಯಿರಲಿಲ್ಲ. ಇದ್ದಕ್ಕಿದ್ದಹಾಗೆ ಹಾಗೆ ಭ್ರಮೆಯಾಗುವುದಕ್ಕೂ ಕಾರಣವಿಲ್ಲ ಆದಕಾರಣ ಬೇಗ ಒಬ್ಬ ಬುದ್ಧಿವಂತನಾದ ಮಾಂತ್ರಿಕನನ್ನು ಕರೆಸಿ ಮಗುವನ್ನು ತೋರಿಸಿ. ಇಲ್ಲದೆ ಹೋದರೆ ಇದರಿಂದ ಮಗುವಿಗೆ

ಏನು ಅನಿಷ್ಟ ಬಡಿಯುತ್ತದೋ ಯಾರಿಗೆ ಗೊತ್ತು '' ಎಂಬುದಾಗಿ ಪುನಃ ಪುನಃ ಹೇಳಲಾರಂಭಿಸಿದಳು ಕ್ಷುದಿರಾಮನು ಆಕೆಗೆ ಸಮಾಧಾನವುಂಟಾಗುವಂತೆ ಹೀಗೆ ಹೇಳಿದನು, ''ಯಾವ ಮಗನು ಹುಟ್ಟುವುದಕ್ಕೆ ಪೂರ್ವದಿಂದಲೂ ನಾವು ನಾನಾ ದಿವ್ಯದರ್ಶನಗಳನ್ನು ಹೊಂದಿ ಧನ್ಯರಾದೆವೋ ಅಂಥಾವನ ವಿಷಯದಲ್ಲಿ ಈಗಲೂ ಈರೀತಿಯಾಗಿ ಸ್ವಲ್ಪಮಟ್ಟಿಗೆ ದರ್ಶನವನ್ನು ಹೊಂದುವುದರಲ್ಲಿ ವಿಚಿತ್ರವೇನೂ ಇಲ್ಲ ಆದುದರಿಂದ ಅದು ಉಪದೇವತೆಯಿಂದಾದದ್ದೆಂದು ನೀನು ಎಂದಿಗೂ ತಿಳಿಯಕೂಡದು ಇದರಮೇಲೆ ಮನೆಯಲ್ಲಿ ರಘುವೀರನು ಇದ್ದಾನೆ ಉಪದೇವತೆಗಳು ಹೇಗೆ ತಾನೆ ಇಲ್ಲಿ ಮಗುವಿಗೆ ಅನಿಷ್ಟವನ್ನುಂಟುಮಾಡಬಲ್ಲವು , ಆದುದರಿಂದ ನಿಶ್ಚಿಂತಳಾಗಿರು ಈ ಮಾತನ್ನು ಮತ್ತಾರಿಗೂ ಹೇಳಬೇಡ ರಘುವೀರನು ಮಗುವನ್ನು ಸರ್ವದಾ ರಕ್ಷಿಸುವನೆಂದು ತಿಳಿದುಕೊಂಡಿರು '' ಚಂದ್ರಾದೇವಿಯು ಪತಿಯ ಈ ಮಾತುಗಳಿಂದ ಆಗ ಸಮಾಧಾನವನ್ನು ಹೊಂದಿದ್ದೇನೋ ನಿಜ ಆದರೆ ಮಗುವಿಗೆ ಅಮಂಗಳವುಂಟಾಗಬಹುದೆಂಬ ಭಯವು ಮಾತ್ರ ಆಕೆಯ ಮನಸ್ಸನ್ನು ಸಂಪೂರ್ಣವಾಗಿ ಬಿಟ್ಟು ತೊಲಗಲಿಲ್ಲ ಆಕೆಯು ಕೈಗಳನ್ನು ಮುಗಿದುಕೊಂಡು ತನ್ನ ಮನಸ್ಸಿನಲ್ಲುಂಟಾದ ಸಂಕಟವನ್ನು ಆದಿನ ಬಹಳ ಹೊತ್ತಿನವರಿಗೂ ಕುಲದೇವರಾದ ರಘುವೀರನಲ್ಲಿ ಹೇಳಿ ಪ್ರಾರ್ಥಿಸಿಕೊಂಡಳು

**ಗದಾಧರನ ತಂಗಿ ಸರ್ವಮಂಗಳಾ.** ಈ ಪ್ರಕಾರವಾಗಿ ಆನಂದ, ಆವೇಗ, ಉತ್ಸಾಹ, ಆಶಂಕಗಳಲ್ಲಿ ಗದಾಧರನ ತಂದೆತಾಯಿಗಳ ದಿನಗಳು ಕಳೆಯಲಾರಂಭಿಸಿದವು ಹುಟ್ಟಿದಂದಿನಿಂದಲೂ ಬಾಲಕನು ತಂದೆತಾಯಿಗಳ ಮನಸ್ಸಿನಲ್ಲಿಯೂ ಇತರರ ಮನಸ್ಸಿನಲ್ಲಿಯೂ ಹುಟ್ಟಿಸಿದ ಅನುರಾಗವು ದಿನದಿನಕ್ಕೂ ಹೆಚ್ಚು ಧೃಢವೂ ಘನೀಭೂತವೂ ಆಗುತ್ತ ಬಂತು ಕ್ರಮವಾಗಿ ನಾಲ್ಕೈದು ವರ್ಷಗಳು ಕಳೆದವು ಸುಮಾರು ಈ ಕಾಲದಲ್ಲಿ ಕ್ಷುದಿರಾಮನಿಗೆ ಸರ್ವಮಂಗಳಾ ಎಂಬ ಒಬ್ಬ ಮಗಳಾದಳು.

**ಗದಾಧರನ ವಿದ್ಯಾರಂಭಾ.** ವಯೋವೃದ್ಧಿಯೊಂದಿಗೆ ಬಾಲಕ ಗದಾಧರನ ಅದ್ಭುತವಾದ ಮೇಧಾ ಪ್ರತಿಭೆಗಳು ವಿಕಾಸವಾಗುವುದನ್ನು ನೋಡಿ ಕ್ಷುದಿರಾಮನಿಗೆ ಈ ಕಾಲದಲ್ಲಿ ಆಶ್ಚರ್ಯವೂ ಆನಂದವೂ ಉಂಟಾದುವು , ಏಕೆಂದರೆ ಚಂಚಲನಾದ ಬಾಲಕನನ್ನು ಎತ್ತಿಕೊಂಡು ಆತನು ತನ್ನ ಪೂರ್ವಜರ

ನಾಮಾವಳಿ, ದೇವ ದೇವಿಯರ ಚಿಕ್ಕ ಚಿಕ್ಕ ಸ್ತೋತ್ರ ಪ್ರಣಾಮಾದಿಗಳು ಅಥವಾ ರಾಮಾಯಣ ಮಹಾಭಾರತಗಳಲ್ಲಿನ ಯಾವುದಾದರೂ ಒಂದು ಮನೋಹರವಾದ ಉಪಾಖ್ಯಾನ ಇವುಗಳನ್ನು ಹೇಳಿಕೊಟ್ಟಾಗ ಒಂದು ಸಲ ಕೇಳಿದಕೂಡಲೆ ಬಾಲಕನು ಅದರಲ್ಲಿ ಬಹು ಭಾಗವನ್ನು ಗ್ರಹಿಸುತ್ತಿದ್ದನೆಂದು ಆತನಿಗೆ ಕಂಡು ಬಂದಿತು. ಅಲ್ಲದೆ ಬಹುದಿನಗಳಾದ ಮೇಲೆ ಆತನು ಹಿಂದೆ ಹೇಳಿದ ಅಂಶಗಳನ್ನು ಕೇಳಿದರೆ ಬಾಲಕನು ಅದೆಲ್ಲವನ್ನೂ ಚನ್ನಾಗಿ ಒಪ್ಪಿಸುವುದಕ್ಕೆ ಶಕ್ತನಾಗಿದ್ದನೆಂದು ಕಂಡುಬಂದಿತು. ಇದರ ಜತೆಗೆ ಮತ್ತೊಂದು ವಿಷಯವೂ ಕ್ಷುದಿರಾಮನಿಗೆ ಗೊತ್ತಾಯಿತು. ಏನೆಂದರೆ ಬಾಲಕನ ಮನಸ್ಸು ಕೆಲವು ವಿಷಯಗಳನ್ನು ಹೇಗೆ ಆತುರದಿಂದ ಗ್ರಹಿಸುವುದಕ್ಕೂ ಜ್ಞಾಪಕದಲ್ಲಿಡುವುದಕ್ಕೂ ಶಕ್ತವಾಗಿದ್ದಿತೋ ಹಾಗೆಯೇ ಮತ್ತು ಕೆಲವು ವಿಷಯಗಳಲ್ಲಿ ಅದೇ ರೀತಿಯಾಗಿ ಔದಾಸೀನ್ಯವನ್ನು ತೋರುತ್ತಿತ್ತು—ಎಷ್ಟು ಪ್ರಯತ್ನಮಾಡಿದರೂ ಆ ವಿಷಯಗಳಲ್ಲಿ ಅನುರಾಗವು ಹುಟ್ಟುತ್ತಿರಲಿಲ್ಲ. ಗಣಿತಶಾಸ್ತ್ರದ ಮಗ್ಗಿ ಕೋಷ್ಟಕ ಮುಂತಾದುವುಗಳನ್ನು ಹೇಳಿಕೊಡುವುದಕ್ಕೆ ಹೋದಾಗ ಈ ವಿಷಯವು ಆತನಿಗೆ ಗೊತ್ತಾಯಿತು. ಚಪಲಬುದ್ಧಿಯ ಬಾಲಕನಿಗೆ ಅಷ್ಟು ಚಿಕ್ಕ ವಯಸ್ಸಿನಲ್ಲಿ ಇದನ್ನೆಲ್ಲ ಹೇಳಿಕೊಟ್ಟು ಪೀಡಿಸುವುದು ಆವಶ್ಯಕವಲ್ಲ ಎಂದೆಂದುಕೊಂಡನು. ಆದರೆ ಅವನು ವಿಶೇಷವಾಗಿ ಚಂಚಲನಾಗುವುದನ್ನು ನೋಡಿ ಐದನೆ ವರ್ಷದಲ್ಲಿ ಅವನಿಗೆ ಶಾಸ್ತ್ರೀಯವಾಗಿ ವಿದ್ಯಾರಂಭ ಮಾಡಿಸಿ ಪಾಠಶಾಲೆಗೆ ಕಳುಹಿಸುವುದಕ್ಕೆ ಮೊದಲು ಮಾಡಿದನು. ಇದರಿಂದ ಸಮವಯಸ್ಕರಾದ ಜತೆಗಾರರ ಪರಿಚಯಕ್ಕೆ ಅವಕಾಶವುಂಟಾಗಿ ಬಾಲಕನಿಗೆ ಬಹಳ ಸಂತೋಷವಾಯಿತು. ಸ್ವಲ್ಪ ಕಾಲದಲ್ಲಿಯೇ ತನ್ನ ಸ್ನೇಹಯುಕ್ತವಾದ ವ್ಯವಹಾರದಿಂದ ಬಾಲಕ ಜೊತೆಗಾರರ ಮತ್ತು ಅಧ್ಯಾಪಕರ ಪ್ರೀತಿಗೆ ಪಾತ್ರನಾದನು.

**ಲಾಹಬಾಬುಯವರ ಪಾಠಶಾಲಾ**

ಗ್ರಾಮದ ಜಮೀನ್ದಾರರಾದ ಲಾಹಬಾಬುಯವರ ಮನೆಯ ಎದುರಿಗೆ ಇದ್ದ ದೊಡ್ಡದಾದ ಕಲ್ಯಾಣ ಮಂಟಪದಲ್ಲಿ ಪಾಠಶಾಲೆಯಿತ್ತು. ಮುಖ್ಯವಾಗಿ ಅವರ ಖರ್ಚಿನಿಂದಲೇ ಒಬ್ಬ ಗುರುವು ನಿಯಮಿತನಾಗಿ ಅವರ ಮತ್ತು ಹತ್ತಿರಿದ್ದ ಗೃಹಸ್ಥರ ಬಾಲಕರಿಗೆ ಪಾಠಹೇಳುತ್ತಿದ್ದನು. ಅನಂತರ ಹಳ್ಳಿಯ ಹುಡುಗರ ಪ್ರಯೋಜನಾರ್ಥವಾಗಿ ಲಾಹಬಾಬುಯವರೇ ಒಂದು ಪಾಠಶಾಲೆಯನ್ನು ಸ್ಥಾಪಿಸಿದರು. ಅದು

ಕ್ಷುದಿರಾಮನ ಮನೆಗೆ ಸಮೀಪದಲ್ಲಿಯೇ ಇತ್ತು. ಬೆಳಿಗ್ಗೆ ಮತ್ತು ಮಧ್ಯಾಹ್ನ ಹೀಗೆ ಎರಡು ಹೊತ್ತು ಪ್ರತಿದಿವಸವೂ ಪಾಠಶಾಲೆ ನಡೆಯುತ್ತಿತ್ತು. ಹುಡುಗರು ಬೆಳಿಗ್ಗೆ ಒಂದು ಎರಡುಮೂರುಗಂಟೆ ಪಾಠಮಾಡಿಕೊಂಡು ಸ್ನಾನಾಹಾರ ಗಳಿಗಾಗಿ ಮನೆಗೆಹೋಗುತ್ತಿದ್ದರು. ಮಧ್ಯಾಹ್ನ ಮೂರುನಾಲ್ಕು ಘಳಿಗೆ ಹೊತ್ತು ಸಂಜೆಯವರಿಗೂ ಪಾಠವನ್ನು ಕಲಿತು ಮನೆಗೆ ಹೋಗುತ್ತಿದ್ದರು. ಗದಾಧರನಂತಹ ಅಲ್ಪವಯಸ್ಸಿನ ವಿದ್ಯಾರ್ಥಿಗಳಿಗೆ ಅಷ್ಟು ಹೊತ್ತು ಪಾಠವನ್ನು ಕಲಿಯಬೇಕಾಗುತ್ತಿರಲಿಲ್ಲ. ಆದರೂ ಅವರು ಶಾಲೆಯಲ್ಲಿ ಹಾಜರಿರಲೇ ಬೇಕಾಗಿತ್ತು. ಆದುದರಿಂದ ಪಾಠದ ಸಮಯದಲ್ಲಿ ಪಾಠವನ್ನು ಅಭ್ಯಾಸ ಮಾಡಿ ಅವರು ಅಲ್ಲಿಯೇ ಕುಳಿತಿರುತ್ತಿದ್ದರು. ಒಂದೊಂದು ಸಲ ಜತೆಯ ಹುಡುಗರೊಂದಿಗೆ ಪಾಠಶಾಲೆಯ ಹತ್ತಿರದಲ್ಲಿಯೇ ಆಟವಾಡುತಿದ್ದರು. ಕೆಲವು ವೇಳೆ ಪಾಠಶಾಲೆಯ ದೊಡ್ಡ ಹುಡುಗರು ಚಿಕ್ಕ ಹುಡುಗರಿಗೆ ಪಾಠವನ್ನು ಹೇಳಿ ಕೊಡುತ್ತಿದ್ದರು, ಮತ್ತು ಅವರು ಹಳೆಯ ಪಾಠಗಳನ್ನು ಅಭ್ಯಾಸ ಮಾಡುತ್ತಿದ್ದರೋ ಇಲ್ಲವೋ ಎಂಬುದನ್ನು ವಿಚಾರಿಸುತ್ತಿದ್ದರು.

ಹೀಗೆ ಒಬ್ಬನೇ ಒಬ್ಬ ಗುರುವು ಇದ್ದರೂ ಪಾಠಶಾಲೆಯ ಕೆಲಸವು ಸರಿಯಾಗಿ ನಡೆಯುತ್ತಿತ್ತು. ಗದಾಧರನು ಪಾಠಶಾಲೆಗೆ ಮೊದಲು ಸೇರಿದಾಗ ಯದುನಾಥ ಸರಕಾರ ಎಂಬಾತನು ಶಿಕ್ಷಕನಾಗಿದ್ದನು. ಸ್ವಲ್ಪ ದಿನಗಳಾದ ಮೇಲೆ ಕೆಲವು ಕಾರಣಗಳಿಂದ ಆತನು ಕೆಲಸವನ್ನು ಬಿಟ್ಟನು. ರಾಜೇಂದ್ರ ನಾಥ್ ಸರಕಾರ್ ಎಂಬಾತನು ಆ ಸ್ಥಾನಕ್ಕೆ ನಿಯಮಿತನಾಗಿ ಪಾಠಶಾಲೆ ಯನ್ನು ನಡೆಸುವುದಕ್ಕೆ ಪ್ರಾರಂಭಿಸಿದನು.

**ಬಾಲಕನ ವಿಚಿತ್ರ ಚರಿತ್ರೆಯ ಸಂಬಂಧವಾಗಿ ಕ್ಷುದಿರಾಮನ ಅಭಿಜ್ಞತೆ**

ಬಾಲಕನು ಹುಟ್ಟುವುದಕ್ಕೆ ಮುಂಚೆಯೇ ಅವನ ಅದ್ಭುತ ಜೀವನದ ಪರಿಚಯವನ್ನುಂಟುಮಾಡುವ ಯಾವ ಅದ್ಭುತ ಸ್ವಪ್ನ ದರ್ಶನಾದಿಗಳು ಕ್ಷುದಿರಾಮನಿಗೆ ಸಂಭವಿಸಿದ್ದುವೋ ಅವು ಆತನ ಮನಸ್ಸಿನಲ್ಲಿ ಚಿರಕಾಲವೂ ನಿಲ್ಲುವಂತೆ ದೃಢ ವಾಗಿ ನೆಲೆಸಿದ್ದುವು. ಆದಕಾರಣ ಬಾಲಕನ ಸುಲಭವಾದ ಚಪಲತೆಯಿಂದ ಮಗುವು ಯಾವುದಾದರೂ ಒಂದು ಅಶಿಷ್ಟಾಚಾರಣೆಯನ್ನು ಮಾಡುತ್ತಿ ದ್ದುದನ್ನು ನೋಡಿದರೂ ಆತನು ಹಾಗೆ ಮಾಡಬಾರದೆಂದು ಒಳ್ಳೆಯಮಾತಿನಿಂದ ಹೇಳುತ್ತಿದ್ದನೇ ಹೊರತು ಎಂದಿಗೂ ಕ್ರೂರವಾಗಿ ಶಿಕ್ಷಿಸುವುದಕ್ಕೆ ಆತನಿಗೆ

ಷೆನನ್ನು ಒಪ್ಪುತ್ತಿರಲಿಲ್ಲ ಎಲ್ಲರೂ ಪ್ರೀತಿಸುತ್ತಿದುದರಿಂದಲೋ ಅಥವಾ ಸ್ವಭಾವಗುಣದಿಂದಲೋ ಬಾಲಕನಲ್ಲಿ ಆಗಾಗ ಹಟಮಾರಿತನವು ಕಂಡು ಬರುತ್ತಿತ್ತು ಹಟಮಾರಿತನಕ್ಕಾಗಿ ಇತರ ತಂದೆತಾಯಿಗಳಂತೆ ಅವನನ್ನು ಹೊಡೆಯುವುದು ಹಾಗಿರಲಿ, ಅದರಿಂದಲೇ ಬಾಲಕನು ಮುಂದೆ ಬಹುಮಟ್ಟಿಗೆ ಉನ್ನತಿಯನ್ನು ಹೊಂದುವನೆಂದು ಆತನು ಭಾವಿಸುತ್ತಿದ್ದನು. ಹೀಗೆ ಭಾವಿಸುವುದಕ್ಕೆ ಬೇಕಾದಷ್ಟು ಕಾರಣಗಳೂ ಇದ್ದುವು ಹಟಮಾರಿಯಾದ ಆ ಹುಡುಗನು ಒಂದೊಂದುಸಲ ಪಾಠಶಾಲೆಗೆ ಹೋಗದೆ ಜತೆಯವರನ್ನು ಕರೆದುಕೊಂಡು ಊರ ಹೊರಗೆ ಆಟವಾಡುತ್ತಿದ್ದನು. ಒಂದೊಂದುಸಲ ಯಾರಿಗೂ ಹೇಳದೆ ಕೇಳದೆ ಹತ್ತಿರವಿರುವ ಯಾವುದಾದರೊಂದು ಸ್ಥಳದಲ್ಲಿ ಜಾತ್ರೆಯ* ಗಾನವನ್ನು ಕೇಳುವುದಕ್ಕೆ ಹೋಗುತ್ತಿದ್ದನು. ಯಾವುದನ್ನು ಮಾಡಬೇಕೆಂದು ಎಣಿಸುತ್ತಿತ್ತೋ ಅದನ್ನೇ ಮಾಡದೇ ಬಿಡುತ್ತಿರಲಿಲ್ಲ ಆದರೂ ಸುಳ್ಳು ಹೇಳಿ ತಾನು ಮಾಡಿದ ಯಾವ ಕೆಲಸವನ್ನೇ ಆಗಲಿ ಯಾವಾಗಲೂ ಮುಚ್ಚುಮರೆ ಮಾಡುವುದಕ್ಕೆ ಪ್ರಯತ್ನಪಡುತ್ತಿರಲಿಲ್ಲ ಇದೆಲ್ಲದರ ಮೇಲೆ ಅವನ ಪ್ರೇಮಮಯವಾದ ಹೃದಯವು ಇತರರಿಗೆ ಅನಿಷ್ಟವನ್ನು ಉಂಟುಮಾಡುವುದಕ್ಕೆ ಎಂದಿಗೂ ಅವನನ್ನು ಬಿಡುತ್ತಿರಲಿಲ್ಲ ಹೀಗಿದ್ದರೂ ಒಂದು ವಿಷಯದಲ್ಲಿ ಮಾತ್ರ ಕ್ಷುದಿರಾಮನಿಗೆ ಚಿಂತೆಯಾಗುತ್ತಿತ್ತು. ಯಾವ ಮಾತನ್ನೇ ಆಗಲಿ ಅವನ ಮನಸ್ಸಿಗೆ ಒಪ್ಪುವಂತೆ ಹೇಳದಿದ್ದರೆ, ವಿಧಿನಿಷೇಧಗಳನ್ನು ಗಣಿಸದೆ ಅಂಥಾ ಮಾತನ್ನು ಸ್ವಲ್ಪವೂ ಗಮನಿಸದೇ ಇದ್ದುದು ಮಾತ್ರವಲ್ಲದೇ ಅದಕ್ಕೆ ಕೇವಲ ವಿರುದ್ಧವಾದ ರೀತಿಯಲ್ಲಿ ನಡೆದುಬಿಡುತ್ತಿದ್ದನು ಈ ನಡೆತೆಯು ಬಾಲಕನ ವಿಚಾರ ಬುದ್ಧಿಯನ್ನು ಸೂಚಿಸತಕ್ಕದ್ದಾಗಿದ್ದರೂ ವ್ಯವಹಾರದ ಎಲ್ಲ ವಿಷಯಗಳಲ್ಲಿಯೂ ವಿಪರೀತವಾದ ರೀತಿಯ ಅನುಷ್ಠಾನವನ್ನು ನೋಡಿ "ಯಾರುತಾನೇ ಬಾಲಕನಿಗೆ ಹೀಗೆ ಸಕಲ ವಿಷಯಗಳಿಗೂ ಕಾರಣಗಳನ್ನು ತಿಳಿಸಿ ಅವನ ಕುತೂಹಲವನ್ನು ತೃಪ್ತಿಪಡಿಸುವುದಕ್ಕೆ ಸಾಧ್ಯ? ಹೀಗಿರುವುದರಿಂದ ಅನೇಕವೇಳೆ ಬಾಲಕನು ಸದ್ವಿಧಿಗಳನ್ನು ನಿರೀಕ್ಷ್ಯ ಮಾಡುವ ಸಂಭವವಿದೆ" ಎಂಬುದಾಗಿ ಭಾವಿಸುತ್ತಿದ್ದನು ಆ ಕಾಲದಲ್ಲಿ ನಡೆದ ಒಂದು ಸಣ್ಣ ಸಂಗತಿಯಿಂದ ಕ್ಷುದಿರಾಮನ ಮನಸ್ಸಿನಲ್ಲಿ ಬಾಲಕನ

---

* ಜಾತ್ರೆ ಎಂದರೆ ನಮ್ಮ ದೇಶದಲ್ಲಿ ಹಳ್ಳಿಗಾಡುಗಳಲ್ಲಿ ಆಡುವ "ಅಟ್ಟದಾಟ" ದಂತೆ ಒಂದು ವಿಧವಾದ ಆಟ.

ಸಂಬಂಧವಾಗಿ ಮೇಲೆ ಹೇಳಿದ ಚಿಂತೆಗಳುಂಟಾದುವು. ಮತ್ತು ಅಂದಿನಿಂದ ಆತನು ಅವನ ಮನಸ್ಸಿನ ಈ ಸ್ವಭಾವವನ್ನರಿತು ಅವನಿಗೆ ಯಾವುದನ್ನೇ ಆಗಲಿ ವಿಮರ್ಶಾ ಪೂರ್ವಕವಾಗಿ ಹೇಳಿಕೊಡುವುದಕ್ಕೆ ಆರಂಭಿಸಿದನು. ಆ ಸಂಗತಿಯು ಇದು.

ಈ ಸಂಬಂಧವಾದ ಒಂದು ಸಂಗತಿ.

ಕ್ಷುದಿರಾಮನ ಮನೆಗೆ ಒಂದು ಪಕ್ಕದಲ್ಲಿ ಹಾಲ್ ದಾರ್ ಪುಕೂರ್ ಎಂಬ ಒಂದು ದೊಡ್ಡ ಪುಷ್ಕರಿಣಿ ಯಿತ್ತು ಗ್ರಾಮದವರೆಲ್ಲರೂ ಅದರ ಸ್ವಚ್ಛವಾದ ನೀರನ್ನು ಅಡಿಗೆ ಸ್ನಾನ ಪಾನಾದಿಗಳಿಗೆ ಉಪಯೋಗಿಸುತ್ತಿದ್ದರು. ಸ್ನಾನಮಾಡುವುದಕ್ಕಾಗಿ ಹೆಂಗಸರಿ ಗಾಗಿಯೂ ಗಂಡಸರಿಗಾಗಿಯೂ ಎರಡು ಪ್ರತ್ಯೇಕವಾದ ಸ್ನಾನ ಘಟ್ಟಗಳಿ ದ್ದುವು. ಗದಾಧರನಂತೆ ಚಿಕ್ಕ ವಯಸ್ಸಿನ ಹುಡುಗರು ಸ್ನಾನಮಾಡುವುದಕ್ಕಾಗಿ ಹೆಂಗಸರ ಸ್ನಾನ ಘಟ್ಟಕ್ಕೆ ಅನೇಕ ವೇಳೆ ಹೋಗುತ್ತಿದ್ದರು. ನಾಲ್ಕಾರುಜನ ಜತೆಗಾರರೊಂದಿಗೆ ಗದಾಧರನು ಒಂದುದಿನ ಈ ಘಟ್ಟದಲ್ಲಿ ಸ್ನಾನಮಾಡುವು ದಕ್ಕೆ ಹೋಗಿ ನೀರಿನೊಳಕ್ಕೆ ಧುಮುಕಿ ವಿಶೇಷವಾಗಿ ಗಲಭೆಮಾಡುವುದಕ್ಕಾ ರಂಭಿಸಿದನು. ಅದರಿಂದ ಸ್ನಾನಕ್ಕೆಂದು ಹೋಗಿದ್ದ ಹೆಂಗಸರಿಗೆ ಬಹಳ ತೊಂದರೆಯಾಯಿತು. ಆಹ್ನಿಕಮಾಡಿಕೊಳ್ಳುತ್ತಿದ್ದ ಮುದುಕಿಯರಿಗೆ ಮೈಮೇಲೆ ನೀರು ಸಿಡಿದು ಅವರು ಬೇಡವೆಂದು ಎಷ್ಟು ಹೇಳಿದರೂ ಆ ಬಾಲಕರ ಗಲಾಟೆ ಯನ್ನು ತಪ್ಪಿಸಲು ಸಾಧ್ಯವಾಗಲಿಲ್ಲ ಆಗ ಅವರಲ್ಲಿ ಒಬ್ಬಾಕೆಯು ಕೋಪ ವನ್ನು ತಾಳಿ ಅವರನ್ನು ಕುರಿತು "ನೀವು ಈ ಘಟ್ಟಕ್ಕೆ ಯಾಕೆ ಬಂದಿರಿ? ಗಂಡಸರ ಘಟ್ಟಕ್ಕೆ ಹೋಗುವುದಕ್ಕಾಗಲಿಲ್ಲವೇನು? ಈ ಘಟ್ಟದಲ್ಲಿ ಹೆಂಗಸರು ಸ್ನಾನಮಾಡಿದ ಮೇಲೆ ಶೀರೆ ಮೊದಲಾದುವುಗಳನ್ನು ಒಗೆದುಕೊಳ್ಳುತ್ತಾರೆ. ಹೆಂಗಸರನ್ನು ಮೈಮೇಲೆ ಬಟ್ಟೆಯಿಲ್ಲದಾಗ ನೋಡಬಾರದೆಂದು ನಿಮಗೆ ಗೊತ್ತಿಲ್ಲವೇ?" ಎಂದು ಅವರನ್ನು ಬೈದಳು ಗದಾಧರನು ಆಕೆಯನ್ನು ಕುರಿತು "ಯಾಕ ನೋಡಬಾರದು" ಎಂದು ಕೇಳಿದನು ಆಕೆಯು ಅವನಿಗೆ ತಿಳಿಯುವಂತೆ ಯಾವುದಾದರೊಂದು ಕಾರಣವನ್ನು ಹೇಳದೆ ಅವನನ್ನು ಹೆಚ್ಚಾಗಿ ಬೈಯ್ಯುವುದಕ್ಕೆ ಮೊದಲುಮಾಡಿದಳು. ಹೆಂಗಸರಿಗೆ ಬಹಳ ಕೋಪ ಬಂತೆಂದು ತಿಳಿದುಕೊಂಡು ಮನೆಗೆ ಹೋಗಿ ಎಲ್ಲಿ ತಂದೆತಾಯಿಗಳಿಗೆ ಹೇಳುವರೋ ಎಂಬ ಭಯದಿಂದ ಹುಡುಗರು ಒಹುಮಟ್ಟಿಗೆ ಇನ್ನುಮುಂದೆ ಹಾಗೆ ಮಾಡಬಾರದೆಂದು ಸುಮ್ಮನಾದರು. ಗದಾಧರನು ಮಾತ್ರ ಮನಸ್ಸಿನಲ್ಲಿ

ಬೇರೆ ವಿಧವಾಗಿ ಸಂಕಲ್ಪಮಾಡಿದನು. ಎರಡು ಮೂರು ದಿನ ಹೆಂಗಸರು ಸ್ನಾನಮಾಡುವಾಗ ಅವನು ಪುಷ್ಕರಿಣಿಯ ಪಕ್ಕದಲ್ಲಿ ಒಂದು ಗಿಡದ ಮರೆಯಲ್ಲಿ ಇದ್ದುಕೊಂಡು ಅವರನ್ನೇ ನೋಡುತ್ತಿದ್ದನು. ಆಮೇಲೆ ಹಿಂದೆ ಬೈದಿದ್ದ ಮುದುಕಿಯನ್ನು ನೋಡಿದಾಗ ಆಕೆಯನ್ನು ಕುರಿತು "ಮೊನ್ನೆ ನಾಲ್ಕುಜನ ಹೆಂಗಸರನ್ನು ಸ್ನಾನಕಾಲದಲ್ಲಿ ನೋಡಿದೆ. ನಿನ್ನೆ ಆರು ಜನರನ್ನೂ, ಈ ದಿವಸ ಎಂಟು ಜನಗಳನ್ನೂ ನೋಡಿದೆ. ಏಕೆ ನನಗೆ ಏನೂ ಆಗಲಿಲ್ಲ?" ಎಂದು ಕೇಳಿದನು. ಆ ಮುದುಕಿಯು ಆ ದಿವಸ ಚಂದ್ರಾದೇವಿಯ ಹತ್ತಿರಕ್ಕೆ ಹೋಗಿ ನಗುತ್ತ ನಗುತ್ತ ಈ ವಿಷಯವನ್ನು ತಿಳಿಸಿದಳು. ಚಂದ್ರಾದೇವಿಯು ಸಮಯ ವನ್ನು ನೋಡಿ ಗದಾಧರನನ್ನು ಹತ್ತಿರಕ್ಕೆ ಕರೆದು ಒಳ್ಳೆಯ ಮಾತಿನಿಂದ ಹೀಗೆ ಹೇಳಿದಳು. "ಹಾಗೆ ಮಾಡಿದರೆ ನಿನಗೇನೂ ಆಗುವುದಿಲ್ಲ. ಆದರೆ ಹೆಂಗಸರು ತಮಗೆ ಬಹಳ ಅವಮಾನವಾಯಿತೆಂದು ತಿಳಿದುಕೊಳ್ಳುತ್ತಾರೆ. ಅವರೆಲ್ಲರೂ ನನಗೆ ಸಮಾನರಾದವರು. ಅವರಿಗೆ ಅಪಮಾನಮಾಡಿದರೆ ನನಗೇ ಅಪಮಾನ ಮಾಡಿದಹಾಗೆ. ಆದಕಾರಣ ಇನ್ನುಮೇಲೆ ಎಂದಿಗೂ ಈರೀತಿ ಅವರಿಗೆ ಮಾನಹಾನಿ ಮಾಡಬೇಡ. ಅವರಿಗೂ ನನಗೂ ಮನಸ್ಸಿನಲ್ಲಿ ವ್ಯಥೆಯುಂಟಾ ಗುವಂತೆ ಮಾಡುವುದು ಒಳ್ಳೆಯದೇನು?" ಬಾಲಕನು ಈ ಮಾತುಗಳನ್ನು ಕೇಳಿ ತಾನು ಹಾಗೆ ಮಾಡುವುದು ತಪ್ಪು ಎಂಬುದನ್ನು ತಿಳಿದು ಅಂದಿನಿಂದ ಹಾಗೆ ಮಾಡುವುದನ್ನು ಬಿಟ್ಟನು.

**ಗದಾಧರನ ಶಿಕ್ಷೆಯ ಉನ್ನತಿ ಮತ್ತು ಪ್ರಸಾರ**

ಅದು ಹೇಗಾದರೂ ಇರಲಿ, ಪಾಠಶಾಲೆಗೆ ಹೋದ ಮೇಲೆ ಗದಾಧರನ ವಿದ್ಯಾಭ್ಯಾಸವು ಬೇಗಬೇಗನೆ ಮುಂದು ವರಿಯಿತು. ಆತನು ಸ್ವಲ್ಪ ಕಾಲದಲ್ಲಿಯೇ ತಕ್ಕಮಟ್ಟಿಗೆ ಓದುವುದನ್ನೂ ಬರೆಯುವುದನ್ನೂ ಕಲಿತುಕೊಂಡನು. ಆದರೆ ಲೆಕ್ಕಗಳಲ್ಲಿ ಮಾತ್ರ ಆತನಿಗೆ ದ್ವೇಷವು ಯಾವಾಗಲೂ ಒಂದೇ ಸಮನಾಗಿತ್ತು. ಇನ್ನೊಂದು ಕಡೆ ಬಾಲಕನ ಅನುಕರಣ ಮತ್ತು ಉದ್ಭಾವನ ಶಕ್ತಿಯು ದಿನದಿನಕ್ಕೂ ಅನೇಕ ಹೊಸದಾರಿಗಳಲ್ಲಿ ಪ್ರಸರಿಸಲಾರಂಭಿಸಿತು. ಗ್ರಾಮದ ಕುಂಬಾರರು ದೇವದೇವಿಯರ ಮೂರ್ತಿಗಳನ್ನು ನಿರ್ಮಿಸುವುದನ್ನು ನೋಡಿ ಬಾಲಕನು ಅವರ ಹತ್ತಿರ ಹೋಗಿಬಂದು ಅವರನ್ನು ಕೇಳಿ ತಿಳಿದುಕೊಂಡು ಮನೆಯಲ್ಲಿ ಆ ವಿದ್ಯೆಯನ್ನು ಕಲಿಯುವುದಕ್ಕೆ ಮೊದಲು ಮಾಡಿದನು. ಹಾಗೆ ಮಾಡುವುದು ತನ್ನ ಆಟಗಳಲ್ಲಿ ಒಂದು ಎಂಬುದಾಗಿ ಆತನು ಭಾವಿಸಿದನು.

ಚಿತ್ರ ಬರೆಯುವವರೊಂದಿಗೆ ಸೇರಿ ತಾನೂ ಅವರಂತೆಯೇ ಚಿತ್ರ ಬರೆಯುವುದಕ್ಕೆ ಆರಂಭಮಾಡಿದನು. ಗ್ರಾಮದಲ್ಲಿ ಎಲ್ಲಿಯಾದರೂ ಪುರಾಣ ಪುಣ್ಯಕಥೆಗಳು ನಡೆಯುತ್ತವೆ ಎಂದಾಗಲಿ ಅಥವಾ ಜಾತ್ರ್ಯಾಗಾನವಾಗುತ್ತಿಂದಾಗಲಿ ಕೇಳಿದಾಗ ತಾನು ಅಲ್ಲಿಗೆ ಹೋಗಿ ಶಾಸ್ತ್ರದ ಉಪಾಖ್ಯಾನಗಳನ್ನು ಕಲಿಯುವುದಕ್ಕೆ ಮೊದಲುಮಾಡಿದನು. ಕೇಳತಕ್ಕವರಿಗೆ ಹೇಗೆ ಹೇಳಿದರೆ ವಿಶೇಷ ಪ್ರೀತಿಕರ ವಾಗಿರುತ್ತದೆ ಎಂಬುದನ್ನು ಲಕ್ಷ್ಯವಿಟ್ಟು ಸ್ಪಷ್ಟವಾಗಿ ತಿಳಿದುಕೊಂಡನು ಬಾಲಕನ ಅಪೂರ್ವವಾದ ಜ್ಞಾಪಕಶಕ್ತಿಯೂ ಮೇಧಾ ಶಕ್ತಿಯೂ ಈ ವಿಷಯ ಗಳಲ್ಲಿ ಅವನಿಗೆ ವಿಶೇಷವಾಗಿ ಸಹಾಯ ಮಾಡುತ್ತಿದ್ದುವು

ಇದೂ ಅಲ್ಲದೆ ಸದಾ ಸಂತೋಷ ಚಿತ್ತನಾದ ಬಾಲಕನ ರಸಿಕತೆಯು ಅವನ ಅದ್ಭುತವಾದ ಅನುಕರಣ ಶಕ್ತಿಯ ಸಹಾಯದಿಂದ ಅಭಿವೃದ್ಧಿಯನ್ನು ಹೊಂದಿ ಹೇಗೆ ಒಂದುಕಡೆ ಪರನಾರಿಯರ ವಿವಿಧ ಹಾವಭಾವಗಳನ್ನು ಅನುಕರಣ ಮಾಡುವುದಕ್ಕೆ ಆರಂಭಿಸುವಂತೆ ಮಾಡಿತೋ ಹಾಗೆಯೇ, ಮತ್ತೊಂದು ಕಡೆಯಲ್ಲಿಯೂ ಆತನ ಮನಸ್ಸಿನ ಸ್ವಾಭಾವಿಕವಾದ ಸರಳತೆಯೂ ದೈವಭಕ್ತಿಯೂ ಆತನ ತಂದೆತಾಯಿಗಳ ದಿನಚರಿಯ ಅನುಷ್ಠಾನಗಳ ದೃಷ್ಟಾಂತ ದಿಂದ ಬೇಗ ಬೇಗನೆ ಅಭಿವೃದ್ಧಿಯಾಗಲಿಕ್ಕೆ ಆರಂಭಿಸಿದುವು ಬಾಲಕನು ಪ್ರಾಪ್ತವಯಸ್ಕನಾದ ಮೇಲೆ ತನ್ನ ಜೀವಿತಕಾಲದಲ್ಲಿ ಇದನ್ನು ಕೃತಜ್ಞತೆ ಯಿಂದ ಸ್ಮರಿಸುತ್ತಿದ್ದನೆಂದು ಆತನು ದಕ್ಷಿಣೇಶ್ವರದಲ್ಲಿ ನಮ್ಮ ಎದುರಿಗೆ ಹೇಳಿದ ಮಾತುಗಳಿಂದ ಪಾಠಕರಿಗೆ ಬಹಳ ಚೆನ್ನಾಗಿ ಗೊತ್ತಾಗಬಹುದು.— "ನಮ್ಮ ತಾಯಿಯು ಸರಳತೆಯ ಮೂರ್ತಿಯಾಗಿದ್ದಳು ಜಗತ್ತಿನ ಯಾವ ವಿಷಯವನ್ನೂ ತಿಳಿದವಳಾಗಿರಲಿಲ್ಲ ಹಣ ಕಾಸುಗಳನ್ನು ಲೆಕ್ಕಮಾಡುವುದಕ್ಕೆ ಆಕೆಗೆ ಬರುತ್ತಿರಲಿಲ್ಲ ಯಾರಿಗೆ ಯಾವಮಾತನ್ನು ಹೇಳಬೇಕು ಹೇಳಬಾರದು ಎಂಬುದನ್ನು ತಿಳಿಯದೇ ತನ್ನ ಮನಸ್ಸಿನಲ್ಲಿದ್ದ ಎಲ್ಲವನ್ನೂ ಎಲ್ಲರಿಗೂ ಹೇಳಿ ಬಿಡುತ್ತಿದ್ದಳು ಆದುದರಿಂದ ಎಲ್ಲರೂ ಆಕೆಯನ್ನು "ಒಡಕುಬಾಯಿಯ" ಹೆಂಗಸೆಂದು ಕರೆಯುತ್ತಿದ್ದರು ಆಕೆಗೆ ಎಲ್ಲರನ್ನೂ ಆಪ್ತರನ್ನಾಗಿ ಮಾಡಿ ಕೊಳ್ಳುವುದರಲ್ಲಿ ಬಹಳ ಇಷ್ಟ. ನಮ್ಮ ತಂದೆ ಎಂದಿಗೂ ಶೂದ್ರರ ದಾನವನ್ನು ಹಿಡಿಯುತ್ತಿದ್ದಿಲ್ಲ ಪೂಜೆ, ಜಪ, ಧ್ಯಾನಗಳಲ್ಲಿಯೇ ದಿವಸದ ಬಹು ಭಾಗವನ್ನು ಕಳೆಯುತ್ತಿದ್ದನು. ಪ್ರತಿದಿನವೂ ಸಂಧ್ಯಾವಂದನೆ ಮಾಡುವಾಗ "ಆಯಾಹಿ ವರದೇ ದೇವಿ" ಮುಂತಾದ ಗಾಯಿತ್ರಿಯ ಆವಾಹನೆಯನ್ನು ಉಚ್ಚಾರ

ಮಾಡುತ್ತ ಮಾಡುತ್ತ ಆತನ ಎದೆಯು ಉಬ್ಬಿ ಕೆಂಪಾಗುತ್ತಿತ್ತು; ಮತ್ತೆ ಕಣ್ಣೀರಿನಿಂದ ತೊಯ್ದು ಹೋಗುತ್ತಿತ್ತು. ಆತನು ಪೂಜೆ ಮೊದಲಾದುವನ್ನು ಮಾಡದೇ ಇದ್ದಾಗ ರಘುವೀರನಿಗೆ ಅಲಂಕರಿಸುವುದಕ್ಕಾಗಿ ಸೂಜಿ, ದಾರ, ಹುವ್ವುಗಳನ್ನು ತೆಗೆದುಕೊಂಡು ಮಾಲೆ ಕಟ್ಟುವುದರಲ್ಲಿ ಹೊತ್ತು ಕಳೆಯುತ್ತಿದ್ದನು. ಸುಳ್ಳುಸಾಕ್ಷಿಯನ್ನು ಹೇಳುವ ಭಯದಿಂದ ಆತನು ತನ್ನ ಹಿರಿಯರ ಮನೆಯನ್ನೇ ಬಿಟ್ಟು ಬಿಟ್ಟನು. ಗ್ರಾಮದವರು ಆತನನ್ನು ಋಷಿಯಂತೆ ಗೌರವದಿಂದಲೂ ಭಕ್ತಿಯಿಂದಲೂ ಕಾಣುತ್ತಿದ್ದರು.''

**ಬಾಲಕನ ಸಾಹಸ.**

ಬಾಲಕನ ಮಿತಿಯಿಲ್ಲದ ಸಾಹಸವು ಪ್ರತಿನಿತ್ಯವೂ ಕಂಡುಬರುತ್ತಿತ್ತು. ಭೂತಪ್ರೇತಗಳ ಭಯದಿಂದ ಮುದುಕರಾದವರೂ ಹೋಗುವುದಕ್ಕೆ ಭಯಪಡುತ್ತಿದ್ದ ಸ್ಥಳಗಳಿಗೆ ಬಾಲಕನು ನಿರ್ಭಯನಾಗಿ ಹೋಗಿ ಬರುತ್ತಿದ್ದನು. ಆತನ ಸೋದರತ್ತೆಯಾದ ರಾಮಶೀಲಾದೇವಿಯ ಮೇಲೆ ಆಗಾಗ ಶೀತಳಾದೇವಿಯು ಬರುತ್ತಿದ್ದಳು. ಅಂತಹ ಸಮಯಗಳಲ್ಲಿ ಆಕೆಯು ಬೇರೊಬ್ಬ ವ್ಯಕ್ತಿಯಂತೆ ಕಾಣುತ್ತಿದ್ದಳು. ಕಾಮಾರ ಪುಕುರದಲ್ಲಿ ಅಣ್ಣನ ಮನೆಗೆ ಬಂದಿದ್ದಾಗ ಒಂದು ದಿನ ಆಕೆಗೆ ಇದ್ದಕ್ಕಿದ್ದ ಹಾಗೆಯೇ ಇಂತಹ ಭಾವಾಂತರ ಉಂಟಾಗಲು ಮನೆಯಲ್ಲಿದ್ದವರೆಲ್ಲರಿಗೂ ಭಯಭಕ್ತಿಗಳುಂಟಾದವು. ಆಕೆಯ ಈ ಅವಸ್ಥೆಯನ್ನು ಶ್ರದ್ಧಾಭಕ್ತಿಗಳಿಂದ ನೋಡಿದನಾದರೂ ಗದಾಧರನಿಗೆ ಅದರಿಂದ ಸ್ವಲ್ಪವೂ ಭಯವಾಗಲಿಲ್ಲ. ಅವನು ಆಕೆಯ ಹತ್ತಿರ ಕುಳಿತುಕೊಂಡು ಪರೀಕ್ಷಾಪೂರ್ವಕವಾಗಿ ಆಕೆಯ ಭಾವಾಂತರವನ್ನು ನೋಡುತ್ತಿದ್ದನು. ಆಮೇಲೆ ''ಅತ್ತೆಯ ಕುತ್ತಿಗೆಯಲ್ಲಿರ ತಕ್ಕದ್ದು ನನ್ನ ಕುತ್ತಿಗೆಗೂ ಒಂದರೆ ಬಹಳ ಸೊಗಸಾಗಿರುತ್ತದೆ'' ಎಂದು ಹೇಳಿದನು.

**ಪರಕೀಯರೊಡನೆ ಸ್ನೇಹ ಬೆಳಸುವುದರಲ್ಲಿ ಬಾಲಕನಿಗಿದ್ದ ಶಕ್ತಿ.**

ಕಾಮಾರ ಪುಕುರಕ್ಕೆ ಅರ್ಧಕ್ರೋಶ ಉತ್ತರದಲ್ಲಿರುವ ''ಭೂರ್‌ಸುಭೋ'' ಅಥವಾ ''ಭೂರ್‌ಶೋಭಾ'' ಎಂಬ ಗ್ರಾಮದ, ದಾನಶೀಲನೂ ಭಕ್ತಿಯುತನೂ ಆದ ಜಮೀನ್‌ದಾರ ಮಾಣಿಕರಾಜನ ವಿಷಯವನ್ನು ನಾವು ಪಾಠಕರಿಗೆ ಹಿಂದೆಯೇ ತಿಳಿಸಿದ್ದೇವೆ. ಆತನು ಕ್ಷುದಿರಾಮನ ಧರ್ಮಪರಾಯಣತೆಯಿಂದ ಆಕೃಷ್ಟನಾಗಿ ಆತನೊಂದಿಗೆ ವಿಶೇಷವಾಗಿ ಸ್ನೇಹವನ್ನು ಬೆಳಸಿದ್ದನು.

ಆರುವರ್ಷದ ಬಾಲಕನಾದ ಗದಾಧರನು ತಂದೆಯೊಂದಿಗೆ ಒಂದು ದಿನ ಮಾಣಿಕರಾಜನ ಮನೆಗೆ ಹೋಗಿದ್ದನು. ಆಗ ಎಲ್ಲರೊಡನೆಯೂ ಚಿರಪರಿಚಿತನಂತೆ ನಿಸ್ಸಂಕೋಚವಾಗಿಯೂ ಮಧುರವಾಗಿಯೂ ವ್ಯವಹಾರ ಮಾಡಿದ್ದರಿಂದ ಆವನು ಅಂದಿನಿಂದಲೂ ಅವರಿಗೆ ಪ್ರಿಯನಾದನು. ಮಾಣಿಕ ರಾಜನ ಸಹೋದರನಾದ ರಾಮಜಯ ವಂಧ್ಯೋಪಾಧ್ಯಾಯನು ಆದಿನ ಬಾಲಕನನ್ನು ನೋಡಿ ಮುಗ್ಧನಾಗಿ ಕ್ಷುದಿರಾಮನನ್ನು ಕುರಿತು "ಸ್ವಾಮಿ, ನಿಮ್ಮ ಈ ಹುಡುಗ ಸಾಮಾನ್ಯನಲ್ಲ, ಈತನಲ್ಲಿ ದೇವಾಂಶವು ವಿಶೇಷ ವಾಗಿರುವಂತೆ ತೋರುತ್ತದೆ ನೀವು ಈ ಪ್ರಾಂತ್ಯ ಬಂದಾಗಲೆಲ್ಲಾ ಹುಡುಗನನ್ನು ಜೊತೆಗೆ ಕರೆದುಕೊಂಡು ಬನ್ನಿ, ಆತನನ್ನು ನೋಡಿದರೆ ಪರಮಾನಂದವಾಗುತ್ತದೆ" ಎಂದು ಹೇಳಿದನು ಇದಾದ ತರುವಾಯ ಕ್ಷುದಿರಾಮನು ಕಾರಣಾಂತರದಿಂದ ಕೆಲವು ದಿನಗಳವರೆಗೂ ಮಾಣಿಕ ರಾಜನ ಮನೆಗೆ ಹೋಗಲಿಕ್ಕಾಗಲಿಲ್ಲ ಇದನ್ನು ನೋಡಿ ಮಾಣಿಕರಾಜನು ತಮ್ಮ ಮನೆಯ ಒಬ್ಬ ಹೆಂಗಸನ್ನು ಅಲ್ಲಿನ ವರ್ತಮಾನವನ್ನು ತರುವುದ ಕ್ಕಾಗಿಯೂ ಸ್ವಸ್ಥವಾಗಿದ್ದರೆ ಗದಾಧರನನ್ನು ಸ್ವಲ್ಪ ಹೊತ್ತಿನ ಮಟ್ಟಿಗೆ ಭೂರ್ ಸುಭೋ ಗ್ರಾಮಕ್ಕೆ ಕರೆದುಕೊಂಡು ಬರುವುದಕ್ಕಾಗಿಯೂ ಕಳುಹಿಸಿ ಕೊಟ್ಟನು. ಬಾಲಕನು ತಂದೆಯ ಅಪ್ಪಣೆಯನ್ನು ಪಡೆದು ಸಂತೋಷವಾಗಿ ಆ ಹೆಂಗಸಿನೊಡನೆ ಹೋದನು ಆ ದಿವಸವೆಲ್ಲಾ ಅಲ್ಲಿಯೇ ಇದ್ದು ನಾನಾ ವಿಧವಾದ ಮೃಷ್ಟಾನ್ನವನ್ನೂ ಅವರುಕೊಟ್ಟ ಆಭರಣವೊಂದನ್ನೂ ತೆಗೆದು ಕೊಂಡು ಕಾಮಾರ ಪುಕುರಕ್ಕೆ ಹಿಂದಿರುಗಿ ಬಂದನು ಗದಾಧರನು ಮಾಣಿಕ ರಾಜನ ಮನೆಯವರಿಗೆ ಕೇವಲ ಪ್ರಿಯನಾದನು ಅವನನ್ನು ಜೊತೆಗೆ ಕರೆದು ಕೊಂಡು ಕ್ಷುದಿರಾಮನು ಭೂರ್ ಸುಭೋ ಗ್ರಾಮಕ್ಕೆ ಹೋಗುವುದಕ್ಕೆ ಒಂದು ದಿನ ತಡವಾದರೂ ಯಾರನ್ನಾದರೂ ಕಳುಹಿಸಿ ಅವರನ್ನು ಬರಮಾಡಿ ಕೊಳ್ಳುತ್ತಿದ್ದರು.

ಈ ರೀತಿಯಾಗಿ ದಿನಗಳು, ಪಕ್ಷಗಳು, ಮಾಸಗಳು ಕಳೆದು ಬಾಲಕನಿಗೆ ಏಳು ವಯಸ್ಸು ಆರಂಭವಾಯಿತು. ಹಾಗೆಯೇ ಶೈಶವದ ಮಾಧುರ್ಯವು ಇನ್ನೂ ಹೆಚ್ಚಾಗಿ ದಿನದಿನಕ್ಕೂ ಆತನು ಎಲ್ಲರಿಗೂ ಹೆಚ್ಚು ಪ್ರೀತಿಪ್ರದನಾದನು. ಗ್ರಾಮವಾಸಿಗಳಾದ ಹೆಂಗಸರು ಮನೆಯಲ್ಲಿ ಒಳ್ಳೆಯ ಆಹಾರ ಪದಾರ್ಥ

ಗಳನ್ನು ಮಾಡಿದಾಗ ಅದರ ಸ್ವಲ್ಪ ಭಾಗವನ್ನು ಹೇಗೆ ಅವನಿಗೆ ಕೊಟ್ಟು ತಿನ್ನಿಸಬೇಕು ಎಂಬುದನ್ನೇ ಮೊದಲು ಯೋಚಿಸುತ್ತಿದ್ದರು ; ಸಮವಯಸ್ಕರಾದ ಬಾಲಕಬಾಲಿಕೆಯರು ತಾವು ತಿನ್ನುವುದನ್ನು ಅವನೊಂದಿಗೆ ಭಾಗಮಾಡಿ ಕೊಂಡು ತಿಂದರೇ ತಮಗೆ ತೃಪ್ತಿಯಾಯಿತೆಂದು ತಿಳಿದುಕೊಳ್ಳುತ್ತಿದ್ದರು, ನೆರೆಹೊರೆಯವರೆಲ್ಲರೂ ಆತನ ಮಧುರವಾದ ಮಾತು, ಸಂಗೀತ, ನಡತೆಗಳಿಂದ ಮುಗ್ಧರಾಗಿ ಆತನ ಬಾಲಸುಲಭವಾದ ದೌರಾತ್ಮ್ಯಗಳನ್ನೆಲ್ಲಾ ಸಂತೋಷ ದಿಂದ ಸಹಿಸುತ್ತಿದ್ದರು. ಈ ಕಾಲದಲ್ಲಿ ನಡೆದ ಒಂದು ಸಂಗತಿಯು ಆತನ ತಂದೆತಾಯಿಗಳಿಗೂ ಬಾಂಧವರಿಗೂ ವಿಶೇಷವಾಗಿ ಚಿಂತೆಯನ್ನುಂಟುಮಾಡಿತು. ಈಶ್ವರ ಕೃಪೆಯಿಂದ ಗದಾಧರನು ಆರೋಗ್ಯವಾದ ಮತ್ತು ಬಲವಾದ ಶರೀರವನ್ನು ಪಡೆದಿದ್ದನು. ಹುಟ್ಟಿದಂದಿನಿಂದ ಅಂದಿನವರೆಗೂ ಆತನಿಗೆ ಹೆಚ್ಚಿನ ಕಾಯಿಲೆಯಾವುದೂ ಬಂದಿರಲಿಲ್ಲ. ಆದುದರಿಂದ ಬಾಲಕನು ಆಕಾಶದಲ್ಲಿ ಹಾರಾಡುವ ಪಕ್ಷಿಯಂತೆ ಅಪೂರ್ವವಾದ ಸ್ವಾತಂತ್ರ್ಯದಿಂದಲೂ ಸಂತೋಷದಿಂದಲೂ ಹೊತ್ತು ಕಳೆಯುತ್ತಿದ್ದನು ಶರೀರಬೋಧರಾಹಿತ್ಯವೇ ಪೂರ್ಣ ಸ್ವಾಸ್ಥ್ಯದ ಲಕ್ಷಣವೆಂದು ಪ್ರಸಿದ್ಧರಾದ ವೈದ್ಯರು ನಿರ್ದೇಶಿಸಿರು ತ್ತಾರೆ. ಬಾಲಕನು ಹುಟ್ಟಿದಂದಿನಿಂದಲೂ ಆರೀತಿಯಾದ ಸ್ವಾಸ್ಥ್ಯ ಸುಖವನ್ನು ಹೊಂದಿದ್ದನು. ಇದರ ಮೇಲೆ ಆತನ ಸ್ವಾಭಾವಿಕವಾದ ಏಕಾಗ್ರಚಿತ್ತವು ಯಾವುದಾದರೊಂದು ವಿಷಯದಲ್ಲಿ ಪ್ರವೇಶಿಸಿದರೆ ಆತನ ಶರೀರಬುದ್ಧಿಯು ಹೋಗಿ ಒಮ್ಮೆಗೆ ಭಾವಮಯನಾಗಿ ಬಿಡುತ್ತಿದ್ದನು. ನಿರ್ಮಲವಾದ ವಾಯುವಿನಿಂದ ಅಲ್ಲಾಡುವ ಹುಲ್ಲುಗಾವಲಿನ ಸುಂದರವಾದ ಹಸುರುಬಣ್ಣ, ನದಿಯ ಅವಿರಾಮವಾದ ಪ್ರವಾಹ, ಪಕ್ಷಿಗಳ ಕಲಗಾನ, ನೀಲವಾದ ಆಕಾಶ, ಆಕಾಶದಲ್ಲಿ ಕ್ಷಣ ಕ್ಷಣಕ್ಕೂ ಬೇರೆಬೇರೆ ರೂಪವನ್ನು ತಾಳುವ ಮೇಘ ಸಮೂಹದ ಮಾಯಾರಾಜ್ಯ, ಮೊದಲಾದ ಯಾವ ಪದಾರ್ಥವೇ ಆಗಲಿ ತನ್ನ ರಹಸ್ಯಮಯವಾದ ಚಿತ್ರವನ್ನು ಅವನ ಮನಶ್ಚಕ್ಷುವಿನ ಮುಂದಿಟ್ಟು ತನ್ನ ಮಹಿಮೆಯನ್ನು ತೋರಿಸಿ ಅವನ ಹೃದಯವನ್ನು ಆಕರ್ಷಿಸಿದಾಗ, ಬಾಲಕನು ಅದರಿಂದ ಮುಗ್ಧನಾಗಿ ಭಾವರಾಜ್ಯದ ಯಾವುದೋ ಒಂದು ಬಹು ದೂರ ದಲ್ಲಿರುವ ಏಕಾಂತ ಪ್ರದೇಶಕ್ಕೆ ಹೊರಟುಹೋಗುತ್ತಿದ್ದನು. ಈಗ ನಡೆದ ಘಟನೆಯೂ ಈ ವಿಧವಾದ ಭಾವದ ಪ್ರಾಬಲ್ಯದಿಂದಲೇ ಉಂಟಾಯಿತು ಮೈದಾನದಲ್ಲಿ ಸ್ವೇಚ್ಛೆಯಾಗಿ ತಿರುಗಾಡುತ್ತಾ ಬಾಲಕನು ಮೇಘಗಳ

ವಕ್ಷದಲ್ಲಿ ಬಲಾಕ ಪಕ್ಷಿಗಳ ಸಾಲು ಬಿಳಿಯ ರೆಕ್ಕೆಗಳನ್ನು ವಿಸ್ತರಿಸಿಕೊಂಡು ಸುಂದರವಾಗಿ ಸ್ವೇಚ್ಛೆಯಾಗಿ ಹಾರುತ್ತಿರುವುದನ್ನು ನೋಡಿ ತನ್ಮಯನಾಗಿ ತನ್ನ ಶರೀರವನ್ನೂ ಮತ್ತು ಬಾಹ್ಯಜಗತ್ತಿನ ಸಕಲ ವಸ್ತುಗಳನ್ನೂ ಸಂಪೂರ್ಣವಾಗಿ ಮರೆತುಬಿಟ್ಟು ಸಂಜ್ಞಾಶೂನ್ಯನಾಗಿ ಆ ಮೈದಾನದಲ್ಲಿ ಬಿದ್ದುಬಿಟ್ಟನು. ಜೊತೆಗಾರರು ಆತನ ಆ ಅವಸ್ಥೆಯನ್ನು ನೋಡಿ ಗಾಬರಿಯಾಗಿ ಮನೆಗೆಹೋಗಿ ಆತನ ತಂದೆತಾಯಿಗಳಿಗೆ ಆ ಸುದ್ದಿಯನ್ನು ತಿಳಿಸಿದರು. ಎಲ್ಲರೂ ಸೇರಿ ಅವನನ್ನು ಮೈದಾನದಿಂದ ಎತ್ತಿಕೊಂಡು ಹೋಗಿ ಮನೆಗೆ ಸಾಗಿಸಬೇಕಾಯಿತು ಆದರೆ ಎಚ್ಚರವಾದ ಸ್ವಲ್ಪ ಹೊತ್ತಿನಲ್ಲಿಯೇ ಬಾಲಕನು ಎಂದಿನಂತೆ ಸ್ವಸ್ಥನಾದನು ಇದರಿಂದ ಕ್ಷುದಿರಾಮ ಚಂದ್ರಾದೇವಿಯರಿಗೆ ಯೋಚನೆಯುಂಟಾಯಿತೆಂದೂ, ಮುಂದೆ ಹಾಗಾಗದಿರುವುದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಬೇಕೆಂದು ಅವರು ಉಪಾಯಗಳನ್ನು ಆಲೋಚಿಸಿದರೆಂದೂ ಹೇಳಬೇಕಾಗಿಲ್ಲ ಹಾಗೆ ಯೋಚಿಸಿ ಬಾಲಕನಿಗೆ ಹಾಗಾದದ್ದು ಮೂರ್ಛೆರೋಗದ ಸೂಚನೆಯೆಂದು ತಿಳಿದು ಔಷಾಧಾದಿಗಳನ್ನು ಕೊಡಿಸಬೇಕೆಂದೂ ಶಾಂತಿ ಸ್ವಸ್ತ್ಯಯನಾದಿಗಳನ್ನು ಮಾಡಬೇಕೆಂದೂ ನಿಶ್ಚಯಿಸಿದರು ಆದರೆ ಬಾಲಕ ಗದಾಧರನು ತನ್ನ ಮನಸ್ಸು ಒಂದು ಅಪೂರ್ವವಾದ ಹೊಸಭಾವದಲ್ಲಿ ಲೀನವಾದುದರಿಂದ ತನಗೆ ಆ ಅವಸ್ಥೆಯುಂಟಾಯಿತೆಂದೂ ಬಾಹ್ಯದಲ್ಲಿ ಬೇರೆ ರೀತಿಯಾಗಿ ಕಾಣಿಸಿಕೊಂಡರೂ ಮನಸ್ಸಿನಲ್ಲಿ ಸಂಜ್ಞೆಯೂ ಒಂದು ವಿಧವಾದ ಅಪೂರ್ವವಾದ ಆನಂದ ಬೋಧೆಯೂ ಇದ್ದವು ಎಂದೂ ಈ ಘಟನೆಯ ಸಂಬಂಧವಾಗಿ ಅವರಿಗೆ ಪುನಃ ಪುನಃ ಹೇಳುತ್ತಿದ್ದನು ಅದು ಹೇಗಾದರೂ ಇರಲಿ, ಬಾಲಕನಿಗೆ ಅಂಥಾ ಅವಸ್ಥೆಯು ಪುನಃ ಉಂಟಾಗದೆ ಇದ್ದುದರಿಂದಲೂ ಅವನ ಆರೋಗ್ಯದಲ್ಲಿ ಯಾವ ವಿಧವಾದ ವ್ಯತ್ಯಾಸವೂ ಕಂಡುಬಾರದೆ ಇದ್ದುದರಿಂದಲೂ, ಯಾವುದೋ ಒಂದು ವಾಯುಪ್ರಕೋಪವಾದಾಗ ಹಾಗಾಗಿರಬೇಕೆಂದು ಕ್ಷುದಿರಾಮನು ಭಾವಿಸಿದನು, ಚಂದ್ರಾದೇವಿಯು ಉಪದೇವತೆ (ಪಿಶಾಚಿ)ಯ ದೃಷ್ಟಿ ತಾಕಿ ಹಾಗಾಯಿತೆಂದು ನಿಶ್ಚಯಿಸಿದಳು. ಈ ಘಟನೆಯಾದ ಕೆಲವು ದಿನಗಳವರೆಗೂ ಅವರು ಬಾಲಕನನ್ನು ಪಾಠಶಾಲೆಗೆ ಹೋಗಗೊಡಲಿಲ್ಲ. ಇದರಿಂದ ಬಾಲಕನು ನೆರೆಹೊರೆಯವರ ಮನೆಗಳಿಗೂ ಗ್ರಾಮದಲ್ಲಿ ಎಲ್ಲಿ ಬೇಕಾದರಲ್ಲಿಯೂ ತನ್ನ ಇಷ್ಟಬಂದಂತೆ ತಿರುಗಾಡುತ್ತಾ ಮೊದಲಿಗಿಂತಲೂ ಹೆಚ್ಚಾಗಿ ಆಟಪಾಟಗಳಲ್ಲಿ ಮನಸ್ಸುಳ್ಳವನಾದನು.

ರಾಮಚಾದನ ಮನೆಯಲ್ಲಿ ನಡೆದ ದುರ್ಗೋತ್ಸವ.

ಈ ರೀತಿಯಾಗಿ ಬಾಲಕನ ಏಳನೆಯ ವರ್ಷದಲ್ಲಿ ಅರ್ಧಕಾಲವು ಕಳೆದು ಹೋಗಿತ್ತು. ಶಾರದಾನವ ರಾತ್ರಿಯು ಸಮೀಪಿಸಿತು. ಕ್ಷುದಿರಾಮನ ಸೋದರಳಿಯನಾದ ರಾಮಚಾದ ವಂಧ್ಯೋಪಾಧ್ಯಾಯನ ವಿಷಯವನ್ನು ನಾವು ಹಿಂದೆಯೇ ಪಾಠಕರಿಗೆ ತಿಳಿಸಿದ್ದೇವೆ. ಕೆಲಸಕಾರ್ಯಗಳಿಗಾಗಿ ಆತನು ಮೇದಿನೀಪುರದಲ್ಲಿ ವರ್ಷದ ಬಹುಭಾಗವನ್ನು ಕಳೆಯುತ್ತಿದ್ದನಾದರೂ "ಸೇಲಾಂಪುರ" ಎಂಬುದೇ ಆತನ ಹಿರಿಯರ ವಾಸಸ್ಥಳ, ಆತನ ಪರಿವಾರದವರೆಲ್ಲರೂ ಆ ಗ್ರಾಮದಲ್ಲಿಯೇ ವಾಸಮಾಡುತ್ತಿದ್ದರು. ರಾಮಚಾದನು ಆ ಗ್ರಾಮದಲ್ಲಿ ಪ್ರತಿ ವರ್ಷವೂ ಶಾರದೀಯ ಮಹಾಪೂಜೆಯನ್ನು ಮಾಡಿ ಬಹಳವಾಗಿ ದ್ರವ್ಯವನ್ನು ವೆಚ್ಚಮಾಡುತ್ತಿದ್ದನು. ಈ ಪೂಜಾಕಾಲದಲ್ಲಿ ರಾಮಚಾದನ ಸೇಲಾಂಪುರದ ಮನೆಯು ಅಷ್ಟಾಹಕಾಲವೂ ಗೀತವಾದ್ಯ ಧ್ವನಿಯಿಂದ ತುಂಬಿರುತ್ತಿತ್ತೆಂದೂ ಬ್ರಾಹ್ಮಣ ಭೋಜನ, ಪಂಡಿತ ಮರ್ಯಾದೆ, ದರಿದ್ರರಿಗೆ ಅನ್ನದಾನ ವಸ್ತ್ರದಾನಗಳು ಮುಂತಾದ ಕಾರ್ಯಗಳಲ್ಲಿ ಅಲ್ಲಿ ಆನಂದದ ನದಿಯು ಈ ಕಾಲದಲ್ಲಿ ಯಾವಾಗಲೂ ಹರಿಯುತ್ತಿತ್ತೆಂದೂ ಹೃದಯರಾಮನು ಹೇಳುತ್ತಿದ್ದನು. ರಾಮಚಾದನು ಆಕಾಲದಲ್ಲಿ ಪರಮ ಗೌರವಾರ್ಹನಾದ ತನ್ನ ಸೋದರಮಾವನನ್ನು ತನ್ನ ಮನೆಗೆ ಕರೆಸಿಕೊಂಡು ಕೆಲಕಾಲವನ್ನು ಆತನೊಂದಿಗೆ ಆನಂದದಿಂದ ಕಳೆಯುತ್ತಿದ್ದನು. ಈ ವರ್ಷವೂ ಕ್ಷುದಿರಾಮನಿಗೂ ಆತನ ಪರಿವಾರ ವರ್ಗಕ್ಕೂ ರಾಮಚಾದನಿಂದ ಆದರ ಪೂರ್ವಕವಾದ ಆಹ್ವಾನವು ಬಂತು.

ಕ್ಷುದಿರಾಮನೂ ರಾಮಕುಮಾರನೂ ರಾಮಚಾದನ ಮನೆಗೆ ಹೋದ ದು.

ಕ್ಷುದಿರಾಮನಿಗೆ ಈಗ ಅರವತ್ತೆಂಟು ವರ್ಷಕ್ಕಿಂತಲೂ ಸ್ವಲ್ಪ ಹೆಚ್ಚು ವಯಸ್ಸಾಗಿತ್ತು. ಕಲಕಾಲ ಹಿಂದಿನಿಂದಲೂ ಆಗಾಗ ಅಜೀರ್ಣ ಮತ್ತು ಅತಿಸಾರ ರೋಗಗಳು ಬಂದು ಆತನ ದೃಢವಾದ ಶರೀರವು ಈಗ ಬಲಹೀನವಾಗಿತ್ತು. ಆದುದರಿಂದ ಪ್ರೀತಿಪಾತ್ರನಾದ ಸೋದರಳಿಯನ ಆಹ್ವಾನ ಬಂದಾಗ ಕ್ಷುದಿರಾಮನಿಗೆ ಆತನ ಮನೆಗೆ ಹೋಗಬೇಕೆಂಬ ಇಚ್ಛೆಯುಂಟಾದರೂ ಹೋಗಬೇಕೇ ಬೇಡವೇ ಎಂಬ ಯೋಚನೆಯುಂಟಾಯಿತು. ಅಲ್ಲದೆ ತನ್ನ ಬಡಕುಟೀರವನ್ನೂ ಪರಿವಾರ ವರ್ಗವನ್ನೂ ಮುಖ್ಯವಾಗಿ ಗದಾಧರನನ್ನೂ ಕೆಲವು ದಿನಗಳ ಮಟ್ಟಿಗಾದರೂ ಬಿಟ್ಟು ಹೋಗಲಿಕ್ಕೆ ಆತನ ಮನಸ್ಸಿನಲ್ಲಿ ಏತಕ್ಕೋ ಖಂಡಿತ ಬೇಡವೆನ್ನಿಸಿತು. ಆಮೇಲೆ ಆತನಿಗೆ ಮತ್ತೊಂದು ಯೋಚನೆ

ಬಂತು.—ಏಕೆಂದರೆ ಶರೀರವು ಹೀಗೆ ದುರ್ಬಲವಾಗಿ ಹೋಯಿತು. ಈ ವರ್ಷ ಹೋಗದೆ ಇದ್ದರೆ ಮುಂದೆ ಹೋಗುವುದಕ್ಕೆ ಆಗುತ್ತದೆಯೋ ಇಲ್ಲವೋ ಇಲ್ಲವೋ ಯಾರಿಗೆ ಗೊತ್ತು ? ಹೀಗೆ ಯೋಚಿಸಿ ಗದಾಧರನನ್ನೂ ಜೊತೆಗೆ ಕರೆದುಕೊಂಡು ಹೋಗಬೇಕೆಂದು ನಿರ್ಧರಿಸಿದನು. ಉತ್ತರಕ್ಷಣದಲ್ಲಿಯೇ ಗದಾಧರನನ್ನು ಜತೆಗೆ ಕರೆದುಕೊಂಡು ಹೋದರೆ ಚಂದ್ರಾದೇವಿಯ ಮನಸ್ಸಿಗೆ ವಿಶೇಷ ಚಿಂತೆಯಾಗುವುದು ಎಂದು ತೋರಿತು. ಕಡೆಗೆ ಹಿರಿಯಮಗನಾದ ರಾಮಕುಮಾರನನ್ನು ಕರೆದುಕೊಂಡು ಹೋಗಿ ಪೂಜೆಯ ಕೆಲವು ದಿನಗಳನ್ನು ರಾಮಚಾಂದನೊಂದಿಗೆ ಕಳೆದು ಹಿಂದಿರುಗಿ ಬರಬೇಕೆಂದು ಸ್ಥಿರಮಾಡಿದನು. ರಘುವೀರನಿಗೆ ನಮಸ್ಕಾರಮಾಡಿ ಎಲ್ಲರಿಗೂ ಹೋಗಿಬರುವುದಾಗಿ ಹೇಳಿ ಗದಾಧರನ ಮುಖವನ್ನು ಮುದ್ದಿಟ್ಟು ಪೂಜೆಗೆ ಆರಂಭವಾಗುವುದಕ್ಕಿಂತ ಕೆಲವು ದಿನ ಮೊದಲೇ ಸೇಲಾಮಪುರಕ್ಕೆ ಹೋದನು. ರಾಮಚಾಂದನು ಪೂಜಾರ್ಹನಾದ ಸೋದರಮಾವನೂ ಆತನ ಮಗ ರಾಮಕುಮಾರನೂ ಬಂದುದನ್ನು ನೋಡಿ ಬಹಳವಾಗಿ ಆನಂದಪಟ್ಟನು.

ಅಲ್ಲಿಗೆ ಹೋದಮೇಲೆ ಕ್ಷುದಿರಾಮನಿಗೆ ಅತಿಸಾರ ರೋಗವು ಪುನಃ ಕಾಣಿಸಿ ಕೊಂಡಿತು. ಅದಕ್ಕೆ ತಕ್ಕ ಚಿಕಿತ್ಸೆಗೂ ಆರಂಭವಾಯಿತು. ಷಷ್ಠಿ, ಸಪ್ತಮಿ, ಅಷ್ಟಮಿ ದಿನಗಳು ಅತ್ಯಂತ ಆನಂದದಲ್ಲಿ ಕಳೆದು ಹೋದವು ನವಮಿಯದಿನ ಆನಂದಕ್ಕೆ ಭಂಗ ಉಂಟಾಯಿತು ಏಕೆಂದರೆ ಕ್ಷುದಿರಾಮನ ವ್ಯಾಧಿಯು ಪ್ರಬಲಿಸಿತು. ರಾಮಚಾಂದನು ಯೋಗ್ಯರಾದ ವೈದ್ಯರನ್ನು ಕರೆಸಿಕೊಂಡು ಹೇಮಾಂಗಿನಿ ರಾಮಕುಮಾರರೊಡನೆ ಬಹಳ ಜಾಗರೂಕತೆಯಿಂದ ಸೇವೆಮಾಡಲು ಮೊದಲುಮಾಡಿದನು ಆದರೆ ಬಹುಕಾಲದಿಂದ ಕೂಡಿಕೊಂಡು ಬಂದಿದ್ದ ರೋಗವು ಉಪಶಮವಾಗುವ ಲಕ್ಷಣವೊಂದೂ ತೋರಲಿಲ್ಲ. ನವಮಿಯ ಹಗಲೂ ರಾತ್ರಿಯೂ ಹಾಗೂ ಹೀಗೂ ಕಳೆದುವು. ಪವಿತ್ರ ಸಮ್ಮಿಲನದಿನವಾದ ವಿಜಯ ದಶಮಿಯು ಬಂತು. ಕ್ಷುದಿರಾಮನು ಕೇವಲ ದುರ್ಬಲನಾಗಿ ಮಾತಾಡುವುದಕ್ಕೆ ಕೂಡಾ ಶಕ್ತಿಯಿಲ್ಲದ ಸ್ಥಿತಿಗೆ ಬಂದಿದ್ದನು.

**ಕ್ಷುದಿರಾಮನ ವ್ಯಾಧಿ ಮತ್ತು ದೇಹತ್ಯಾಗ.**

ಕಾಲವು ಕಳೆದು ಅಪರಾಹ್ನವಾಗಲು ರಾಮಚಾಂದನು ಪ್ರತಿಮಾವಿಸರ್ಜನಾನಂತರ ಬೇಗ ಮಾವನಬಳಿಗೆ ಬಂದು ನೋಡಿದನು ಅಂತಿಮಕಾಲವು ಸಮೀಪಿಸಿತ್ತು. ವಿಚಾರಮಾಡಲು ಕ್ಷುದಿರಾಮನು ಬಹಳ ಹೊತ್ತಿನಿಂದಲೂ ಮಾತಿಲ್ಲದೆ ಹಾಗೆಯೇ

ಎಚ್ಚರವಿಲ್ಲದವನಂತೆ ಬಿದ್ದಿದ್ದನೆಂದು ಗೊತ್ತಾಯಿತು. ಆಗ ರಾಮಚಾದನು ಕಣ್ಣೀರು ಬಿಡುತ್ತಾ ಆತನನ್ನು ಕೂಗಿ "ಮಾವಾ, ಯಾವಾಗಲೂ ರಘುವೀರ ರಘುವೀರ ಎಂದು ಎನ್ನುತ್ತಿದ್ದೆ. ಈಗೇಕೆ ಹಾಗೆನ್ನದೆ ಇದ್ದಿ" ಎಂದು ಕೇಳಿದನು. "ರಘುವೀರ" ಎಂಬ ನಾಮವನ್ನು ಕೇಳಿ ಹಾಗೆಯೇ ಕ್ಷುದಿರಾಮನಿಗೆ ಚೈತನ್ಯ ಬಂದಂತಾಯಿತು. ಆತನು ಮೆಲ್ಲಮೆಲ್ಲನೆ ಗದ್ಗದ ಸ್ವರದಿಂದ "ಯಾರು? ರಾಮಚಾದ, ಪ್ರತಿಮಾವಿಸರ್ಜನ ಮಾಡಿಬಂದೆಯಾ? ಹಾಗಾದರೆ ನನ್ನನ್ನು ಸ್ವಲ್ಪ ಎಬ್ಬಿಸಿಕೂಡಿಸು," ಎಂದು ಹೇಳಿದನು. ಆಮೇಲೆ ರಾಮಚಾದ ಹೇಮಾಂಗಿನಿ ರಾಮಕುಮಾರ ಈ ಮುವ್ವರೂ ಸೇರಿ ಆತನನ್ನು ಹಿಡಿದುಕೊಂಡು ಬಹಳ ಹುಷಾರಾಗಿ ಹಾಸಿಗೆಯಮೇಲೆ ಕೂಡಿಸಿದ ಕೂಡಲೇ, ಆತನು ಗಂಭೀರ ಸ್ವರದಿಂದ ಮೂರುಸಲ ರಘುವೀರನಾಮೋಚ್ಚಾರಣ ಮಾಡಿ ದೇಹತ್ಯಾಗ ಮಾಡಿದನು. ಬಿಂದು ಸಿಂಧುವಿನೊಡನೆ ಮಿಳಿತವಾಯಿತು.—ರಘುವೀರ ಭಕ್ತನ ಪ್ರತ್ಯೇಕವಾದ ಜೀವನ ಬಿಂದುವು ತನ್ನ ಅನಂತ ಜೀವನದಲ್ಲಿ ಸಮ್ಮಿಳಿತವಾಗಿ ಆತನನ್ನು ಅಮರನನ್ನಾಗಿಯೂ ಪೂರ್ಣ ಶಾಂತಿಯ ಅಧಿಕಾರಿಯನ್ನಾಗಿಯೂ ಮಾಡಿತು. ಅನಂತರ ಗಭೀರವಾದ ರಾತ್ರಿಯಲ್ಲಿ ಉಚ್ಚಸಂಕೀರ್ತನದ ಧ್ವನಿಯಿಂದ ಗ್ರಾಮವು ತುಂಬಿತು, ಕ್ಷುದಿರಾಮನ ದೇಹವು ನದೀತೀರಕ್ಕೆ ಒಯ್ಯಲ್ಪಟ್ಟು ಅಗ್ನಿ ಸಂಸ್ಕಾರವನ್ನು ಹೊಂದಿತು ಮರುದಿನ ಈ ಸುದ್ದಿಯು ಕಾಮಾರಪುಕುರಕ್ಕೆ ಸೇರಲು ಅಲ್ಲಿನ ಆನಂದ ಧಾಮವು ನಿರಾನಂದಪೂರಿತವಾಯಿತು.

ಅನಂತರ ಅಶೌಚವು ಕಳೆದಮೇಲೆ ರಾಮಕುಮಾರನು ಶಾಸ್ತ್ರಾನುಸಾರವಾಗಿ ವೃಷೋತ್ಸರ್ಗ ಬ್ರಾಹ್ಮಣ ಭೋಜನಾದಿಗಳನ್ನು ಮಾಡಿಸಿ ತಂದೆಯ ಅಂತ್ಯೇಷ್ಟಿ ಕ್ರಿಯೆಯನ್ನು ಸಂಪೂರ್ಣಮಾಡಿದನು. ಮಾವನ ಶ್ರಾದ್ಧ ಕರ್ಮಕ್ಕಾಗಿ ರಾಮಚಾದನು ಐನೂರು ರೂಪಾಯಿ ಸಹಾಯಮಾಡಿದನೆಂದು ತಿಳಿದುಬರುತ್ತದೆ.

ಶ್ರೀ

# ಶ್ರೀ ರಾಮಕೃಷ್ಣ ಲೀಲಾಪ್ರಸಂಗ

---

## ಸಪ್ತಮ ಅಧ್ಯಾಯ

### ಗದಾಧರನ ಕೈಶೋರ ಕಾಲ

ಕ್ಷುದಿರಾಮನ ಮರಣದಿಂದ ಆತನ ಪರಿವಾರ ವರ್ಗದಲ್ಲಿ ಉಂಟಾದ ಪರಿವರ್ತನ.

ಕ್ಷುಧಿರಾಮನ ಮರಣಾನಂತರ ಆತನ ಪರಿವಾರದವರ ಜೀವನದಲ್ಲಿ ವಿಶೇಷ ಪರಿವರ್ತನವುಂಟಾಯಿತು. ದೈವ ಯೋಗದಿಂದ ಚಂದ್ರಾದೇವಿಯು ನಲವತ್ತು ನಾಲ್ಕು ವರ್ಷಗಳ ದೀರ್ಘಕಾಲ ಸುಖದುಃಖಗಳಲ್ಲಿ ಆತನನ್ನು ಜೀವನದಲ್ಲಿ ಸಹಚರರೂಪವಾಗಿ ಹೊಂದಿದ್ದಳು. ಆದ ಕಾರಣ ಆತನನ್ನು ಕಳೆದುಕೊಂಡು ಆಕೆಗೆ ಈಗ ಜಗತ್ತೇ ಶೂನ್ಯವಾದಂತೆ ತೋರುತ್ತಿತ್ತೆಂದೂ ಆಕೆಯ ಮನಸ್ಸಿನಲ್ಲಿ ಒಂದು ಚಿರಸ್ಥಾಯಿಯಾದ ಅಭಾವವು ಪ್ರತಿಕ್ಷಣವೂ ಅನುಭವಕ್ಕೆ ಬರುತ್ತಿತ್ತೆಂದೂ ಹೇಳಬೇಕಾದುದಿಲ್ಲ. ಆದುದರಿಂದ ರಘುವೀರನ ಪಾದಪದ್ಮಗಳಲ್ಲಿ ಶರಣುಹೊಂದುವುದು ಬಹುಕಾಲದಿಂದ ಅಭ್ಯಾಸ ವಾಗಿದ್ದ ಆಕೆಯ ಮನಸ್ಸು ಈಗ ಸಂಸಾರವನ್ನು ಬಿಟ್ಟು ಆಕಡೆಗೇ ನಿರಂತರವೂ ಪ್ರವಹಿಸುವುದಕ್ಕೆ ಆರಂಭವಾಯಿತು ಆದರೆ ಮನಸ್ಸಿಗೆ ಬಿಡಬೇಕೆಂಬ ಅಪೇಕ್ಷೆಯಿದ್ದರೂ ಎಂದಿನವರೆಗೆ ಕಾಲ ಪೂರ್ಣವಾಗುವುದಿಲ್ಲವೋ ಅಂದಿನ ವರೆಗೂ ಸಂಸಾರವು ಮನಸ್ಸನ್ನು ಬಿಡುವುದುಂಟೆ? ಏಳುವರ್ಷದ ಮಗ ಗದಾಧರ ನಾಲ್ಕುವರ್ಷದ ಮಗಳು ಸರ್ವಮಂಗಳಾ ಇವರ ಚಿಂತೆಯೊಳಗಿನಿಂದ ಪ್ರವೇಶಮಾಡಿ ಪುನಃ ಸಂಸಾರವು ಆಕೆಯನ್ನು ದಿನಚರಿಯ ಜೀವನದ ಸುಖದುಃಖಗಳಲ್ಲಿ ಮೆಲ್ಲಮೆಲ್ಲಗೆ ಹಿಂದಿರುಗುವಂತೆ ಮಾಡಿತು. ಹೀಗಾಗಿ ರಘುವೀರನ ಸೇವೆಯಲ್ಲಿಯೂ ಚಿಕ್ಕ ಮಕ್ಕಳ ಪಾಲನೆಯಲ್ಲಿಯೂ ನಿಯುಕ್ತಳಾಗಿ ಚಂದ್ರಾದೇವಿಯ ದುಃಖದ ದಿನಗಳು ಹೇಗೆಯೋ ಕಳೆಯಲಾರಂಭವಾಯಿತು

ಮೃತ್ಯುಕಾಲದಲ್ಲಿ ಕಡೆಯಲ್ಲಿ ಪಿತೃವತ್ಸಲನಾದ ರಾಮಕುಮಾರನ ಕುತ್ತಿಗೆ ಯಲ್ಲಿ ಈಗ ಸಂಸಾರದ ಎಲ್ಲಾ ಭಾರವೂ ಬಿದ್ದುದರಿಂದ ಆತನಿಗೆ ವೃಥಾ ಶೋಕ

ದಲ್ಲಿ ಕಾಲಕ್ಷೇಪ ಮಾಡಲು ಅವಕಾಶವಿರಲಿಲ್ಲ. ದುಃಖಿತಳಾದ ತಾಯಿಯೂ ತರುಣ ವಯಸ್ಕರಾದ ತಮ್ಮನೂ ತಂಗಿಯೂ ಹೇಗಾದರೆ ಯಾವ ಅಭಾವವನ್ನೂ ಹೊಂದದೆ ಕಷ್ಟವಿಲ್ಲದಿರುವರೋ, ಹದಿನೆಂಟುವರ್ಷ ವಯಸ್ಸಿನವನಾದ ನಡುವಣ ತಮ್ಮ ರಾಮೇಶ್ವರನು ಹೇಗೆ ಸ್ಮೃತಿಶಾಸ್ತ್ರ ಜ್ಯೋತಿಷಶಾಸ್ತ್ರಗಳ ಪಾಠವನ್ನು ಪೂರೈಸಿ ಸಂಪಾದನೆ ಮಾಡಲು ಶಕ್ತನಾಗಿ ಸಂಸಾರವನ್ನು ಸಾಗಿಸಲು ಸಹಾಯಮಾಡುವವನಾಗುತ್ತಾನೆ, ತಾನು ಹೇಗೆ ಮೊದಲಿಗಿಂತಲೂ ಹೆಚ್ಚಾಗಿ ಸಂಪಾದನೆಮಾಡಿ ಪರಿವಾರದ ಅವಸ್ಥೆಯನ್ನು ಉತ್ತಮಗೊಳಿಸಬಹುದು—ಹೀಗೆ ನೂರಾರು ಯೋಚನೆಗಳಲ್ಲಿಯೂ ಕೆಲಸಗಳಲ್ಲಿಯೂ ಸೇರಿಕೊಂಡು ಆತನ ದಿನಗಳು ಕಳೆಯುತ್ತಿದ್ದುವು ಕೆಲಸ ಕಾರ್ಯಗಳಲ್ಲಿ ಜಾಣೆಯಾದ ಆತನ ಹೆಂಡತಿಯೂ ಚಂದ್ರಾದೇವಿಯು ಅಸಮರ್ಥಳಾದುದನ್ನು ನೋಡಿ ಮನೆಯ ಪೂಗೆಲ್ಲ ಅಡಿಗೆಮಾಡುವುದು ಇತರ ಮನೆಗೆಲಸಗಳನ್ನು ನೋಡಿಕೊಳ್ಳುವುದು ಮುಂತಾದುವುಗಳಲ್ಲಿ ಹೆಚ್ಚು ಭಾರವನ್ನು ವಹಿಸಿದಳು

**ಈ ಘಟನೆಯಿಂದ ಗದಾಧರನ ಮನಸ್ಸಿನ ಅವಸ್ಥೆ.**

ಶೈಶವದಲ್ಲಿ ಮಾತೃವಿಯೋಗವೂ, ಕೈಶೋರದಲ್ಲಿ ಪಿತೃವಿಯೋಗವೂ, ಯೌವನದಲ್ಲಿ ಸ್ತ್ರೀವಿಯೋಗವೂ, ಜೀವನದಲ್ಲಿ ಎಷ್ಟು ಅಭಾವವನ್ನುಂಟುಮಾಡುತ್ತವೆಯೋ ಅಷ್ಟು ಅಭಾವವನ್ನು ಮತ್ತಾವ ಘಟನೆಯೂ ಉಂಟುಮಾಡುವುದಿಲ್ಲವೆಂದು ತಿಳಿದವರು ಹೇಳುತ್ತಾರೆ ತಾಯಿಯ ಆದರ ಪೋಷಣೆಗಳೇ ಶೈಶವದಲ್ಲಿ ಮುಖ್ಯ ಅವಲಂಬನವಾಗಿರುತ್ತವೆ, ಆದುದರಿಂದ ಪಿತೃವಿಯೋಗವಾದರೂ ಶಿಶು ಆ ಅಭಾವವನ್ನು ಆಕಾಲದಲ್ಲಿ ಅನುಭವಿಸುವುದಿಲ್ಲ ಆದರೆ ಬುದ್ಧಿಯ ಸ್ಫುರಣ ದೊಂದಿಗೆ ಕೈಶೋರವು ಪ್ರಾಪ್ತವಾಗಿ ಅದೇ ಶಿಶುವು ಯಾವಾಗ ತಂದೆಯ ಅಮೂಲ್ಯ ಪ್ರೇಮದ ಪರಿಚಯವನ್ನು ದಿನದಿನಕ್ಕೂ ಅನುಭವ ಮಾಡುತ್ತಾ ಹೋಗುತ್ತಾನೆಯೋ, ಪ್ರೇಮಮಯಳಾದ ತಾಯಿಯು ಯಾವ ಅಭಾವಗಳನ್ನು ಪೂರ್ಣಮಾಡಲು ಅಸಮರ್ಥಳಾಗಿರುತ್ತಾಳೋ, ಆ ಅಭಾವಗಳೆಲ್ಲವನ್ನೂ ತಂದೆಯು ದೂರಮಾಡಿ ಅವನ ಹೃದಯವನ್ನು ಆಕರ್ಷಿಸುವುದಕ್ಕೆ ಆರಂಭ ಮಾಡುತ್ತಾನೆಯೋ, ಆ ಸಮಯದಲ್ಲಿ ಪಿತೃವಿಯೋಗವುಂಟಾದರೆ ಅವನ ಜೀವನದಲ್ಲಿ ಉಂಟಾಗುವ ಅಭಾವ ಬೋಧನೆಗೆ ಮೇರೆಯೇ ಇರುವುದಿಲ್ಲ ಪಿತೃವಿಯೋಗದಿಂದ ಗದಾಧರನಿಗೂ ಹಾಗೆಯೇ ಆಯಿತು. ಪ್ರತಿದಿನದ ಅನೇಕ ಸಣ್ಣಸಣ್ಣ ಸಂಗತಿಗಳು ತಂದೆಯ ಅಭಾವವನ್ನು ಅವನ ಜ್ಞಾಪಕಕ್ಕೆ

ತಂದು ಅವನ ಅಂತರಂಗವನ್ನು ವಿಷಾದದ ಗಾಢಕಾಳಿಮೆಯಿಂದ ರಂಜಿತ ಮಾಡಿತು. ಆದರೆ ಆತನ ಹೃದಯವೂ ಬುದ್ಧಿಯೂ ಈ ವಯಸ್ಸಿನಲ್ಲಿಯೇ ಇತರರಿಗಿಂತಲೂ ಹೆಚ್ಚು ಪರಿಪಕ್ವಕ್ಕೆ ಬಂದಿದ್ದುದರಿಂದ ತಾಯಿಯ ಕಡೆಗೆ ಲಕ್ಷ್ಯವಿಟ್ಟು ಆತನು ಅದನ್ನು ಹೊರಗೆ ಯಾವಾಗಲಾಗಲಿ ಪ್ರಕಾಶಪಡಿಸುತ್ತಿರಲಿಲ್ಲ. ಬಾಲಕನು ಪೂರ್ವದಂತೆಯೇ ಸದಾ ಆನಂದದಲ್ಲಿಯೂ ಹಾಸ್ಯ ಕೌತುಕಾದಿಗಳಲ್ಲಿಯೂ ಕಾಲ ಕಳೆಯುತ್ತಿದ್ದಂತೆ ಎಲ್ಲರಿಗೂ ಕಾಣುತ್ತಿತ್ತು. ಭೂತಿರಖಾಲೆಯ ಸ್ಮಶಾನ, ಮಾಣಿಕರಾಜನ ಮಾವಿನತೋಪು ಮುಂತಾದ ಗ್ರಾಮದ ಜನಶೂನ್ಯವಾದ ಸ್ಥಾನಗಳಲ್ಲಿ ಆತನು ಆಗಾಗ ಒಬ್ಬಂಟಿಗನಾಗಿ ತಿರುಗುವುದನ್ನು ನೋಡಿದರೂ ಬಾಲ ಸುಲಭವಾದ ಚಪಲತೆಯಿಂದಲ್ಲದೆ ಬೇರೆ ಯಾವುದೋ ಒಂದು ಕಾರಣದಿಂದ ಅಲ್ಲಿಗೆ ಹೋಗುತ್ತಿದ್ದನೆಂದು ಯಾರಿಗೂ ತೋರಲಿಲ್ಲ. ಆದರೆ ಬಾಲಕನೇನೋ ಅಂದಿನಿಂದ ಚಿಂತಾಶೀಲನೂ ನಿರ್ಜನ ಪ್ರಿಯನೂ ಆಗುವುದಕ್ಕೂ ಜಗತ್ತಿನ ಎಲ್ಲಾ ಜನರ ವಿಚಾರವನ್ನೂ ಯೋಚಿಸುವುದಕ್ಕೆ ತೊಡಗಿ ಅವರ ಆಚರಣಗಳನ್ನು ವಿಮರ್ಶಾಪೂರ್ವಕವಾಗಿ ಗಮನಿಸುವುದಕ್ಕೂ ಮೊದಲುಮಾಡಿದನು

ಚಂದ್ರಾದೇವಿ ಯೊಂದಿಗೆ ಗದಾ ಧರನ ಈ ಕಾಲದ ಆಚರಣೆ

ಸಮಸಮಾನವಾದ ಅಭಾವಬೋಧೆಯೇ ಮನುಷ್ಯರನ್ನು ಜಗತ್ತಿನಲ್ಲಿ ಒಬ್ಬರನ್ನೊಬ್ಬರು ಆಕರ್ಷಿಸುವಂತೆ ಮಾಡುತ್ತದೆ. ಈ ಕಾರಣದಿಂದಲೇ ಬಾಲಕನು ಈಗ ತನ್ನ ತಾಯಿಯ ಕಡೆಗೆ ವಿಶೇಷವಾದ ಒಂದು ಆಕರ್ಷಣವನ್ನು ಅನುಭವ ಮಾಡಿದನೆಂದು ತೋರುತ್ತದೆ. ಆತನು ಹಿಂದೆ ಇದ್ದುದಕ್ಕಿಂತಲೂ ಈಗ ಹೆಚ್ಚು ಕಾಲ ಆಕೆಯ ಹತ್ತಿರ ಇರುತ್ತಿದ್ದನು, ಮತ್ತು ದೇವಸೇವೆಯಲ್ಲಿಯೂ ಮನೆ ಕೆಲಸಗಳಲ್ಲಿಯೂ ಆಕೆಗೆ ಕೈಲಾದಷ್ಟು ಸಹಾಯ ಮಾಡುತ್ತಿದ್ದನು, ಇದರಿಂದ ಆತನಿಗೆ ಆನಂದವಾಗುತ್ತಿತ್ತು. ತಾನು ಹತ್ತಿರ ಇದ್ದರೆ ತಾಯಿಯು ಅನುಭವಿಸುತ್ತಿದ್ದ ಅಭಾವ ಬೋಧೆಯು ಆಕೆಗೆ ಬಹುಮಟ್ಟಿಗೆ ಮರೆತುಹೋಗುತ್ತಿತ್ತೆಂಬುದನ್ನು ತಿಳಿದುಕೊಳ್ಳುವುದಕ್ಕೆ ಬಾಲಕನಿಗೆ ಹೆಚ್ಚು ಕಾಲ ಬೇಕಾಗಲಿಲ್ಲ. ಆದರೆ ತಾಯಿಯ ಹತ್ತಿರ ಬಾಲಕನ ಆಚರಣೆಯು ಈಗ ಸ್ವಲ್ಪ ಭಿನ್ನರೂಪವನ್ನು ತಾಳಿತು. ಕಾರಣವೇನೆಂದರೆ ತಂದೆಯು ಸ್ವರ್ಗಸ್ಥನಾದಮೇಲೆ ಬಾಲಕನು ಯಾವುದು ಬೇಕಾದರೂ ಚಂದ್ರಾದೇವಿಯನ್ನು ಪೂರ್ವದಂತೆ ಹಟಹಿಡಿದು ಎಂದಿಗೂ ನಿರ್ಬಂಧಿಸುತ್ತಿರಲಿಲ್ಲ.

ತಾಯಿಗೆ ತಾನು ಕೇಳಿದುದನ್ನು ಕೊಡಲು ಕೈಲಾಗದದ್ದಿರೆ ಆಕೆಯ ಶೋಕಾಗ್ನಿಯು ಪುನಃ ಉಜ್ವಲಿಸಿ ಆಕೆಗೆ ವಿಶೇಷ ಸಂಕಟವನ್ನುಂಟುಮಾಡುವುದೆಂದು ಬಾಲಕನು ತಿಳಿದುಕೊಂಡಿದ್ದನು ಇದರ ಫಲವೇನೆಂದರೆ ಪಿತೃವಿಯೋಗವಾದ ಮೇಲೆ ತಾಯಿಯನ್ನು ಸರ್ವದಾ ರಕ್ಷಿಸಬೇಕೆಂಬ ಭಾವವು ಆತನ ಹೃದಯದಲ್ಲಿ ಜಾಗರಿತವಾಯಿತು

ಗದಾಧರನ ಈ ಕಾಲದ ನಡತೆ ಮತ್ತು ಸಾಧುಸಂಗ

ಗದಾಧರನು ಪಾಠಶಾಲೆಗೆ ಹೋಗಿ ಪೂರ್ವದಂತೆಯೇ ವಿದ್ಯಾಭ್ಯಾಸ ಮಾಡುತ್ತಿದ್ದನು, ಆದರೆ ಪುರಾಣ ಕಥೆಗಳನ್ನೂ ಯಾತ್ರಾಗಾನವನ್ನೂ ಕೇಳುವುದು, ದೇವದೇವಿಯರ ಮೂರ್ತಿಗಳನ್ನು ಮಾಡುವುದು ಇವೀಗ ಅವನಿಗೆ ಈಗ ಹೆಚ್ಚು ಪ್ರಿಯಕರವಾಗಿದ್ದುವು. ಈ ವಿಷಯಗಳ ಅನುಕೂಲ್ಯದಿಂದ ತಂದೆಯು ಇಲ್ಲವೆಂಬ ಅಭಾವ ಬೋಧೆಯು ಬಹುಮಟ್ಟಿಗೆ ಮರೆಯುವುದೆಂಬುದರಿಂದಲೇ ಆತನು ಅವುಗಳಲ್ಲಿ ಈಗ ವಿಶೇಷ ಅನುರಕ್ತನಾದನೆಂದು ತೋರುತ್ತದೆ ಬಾಲಕನ ಅಸಾಧಾರಣ ಸ್ವಭಾವವು ಈ ಕಾಲದಲ್ಲಿ ಆತನನ್ನು ಮತ್ತೊಂದು ಹೊಸ ವಿಷಯದಲ್ಲಿ ಪ್ರವೃತ್ತನಾಗುವಂತೆ ಮಾಡಿತು ಗ್ರಾಮದ ಆಗ್ನೇಯ ದಿಕ್ಕಿನಲ್ಲಿ ಜಗನ್ನಾಥಕ್ಕೆ ಹೋಗುವ ದಾರಿಯ ಪಕ್ಕದಲ್ಲಿ ಜಮೀನ್ದಾರ ಲಾಹಾಬಾಬು ಯವರು ಯಾತ್ರಿಕರ ಸೌಕರ್ಯಕ್ಕಾಗಿ ಒಂದು ಛತ್ರವನ್ನು ಕಟ್ಟಿಸಿದ್ದರು ಜಗನ್ನಾಥ ದರ್ಶಕ್ಕೆ ಹೋಗುವಾಗಲೂ ಅಲ್ಲಿಂದ ಹಿಂದಿರುಗಿ ಬರುವಾಗಲೂ ಸಾಧುಗಳೂ ವೈರಾಗಿಗಳೂ ಅನೇಕವೇಳೆ ಆ ಛತ್ರದಲ್ಲಿ ಇಳಿದುಕೊಂಡು ಗ್ರಾಮಕ್ಕೆ ಭಿಕ್ಷಕ್ಕೆ ಬರುತ್ತಿದ್ದರು ಗದಾಧರನು ಸಂಸಾರವು ಅನಿತ್ಯವೆಂಬುದನ್ನು ಪೂರ್ವದಲ್ಲಿಯೇ ಕೇಳಿದ್ದನು, ತಂದೆಯ ಮರಣದಿಂದ ಈ ವಿಷಯದ ಪ್ರತ್ಯಕ್ಷಾನುಭವವಾಯಿತು ಸಾಧುಗಳೂ ವೈರಾಗಿಗಳೂ ಅನಿತ್ಯವಾದ ಸಂಸಾರವನ್ನು ಪರಿತ್ಯಾಗಮಾಡಿ ಭಗವಂತನ ದರ್ಶನಾಕಾಂಕ್ಷಿಗಳಾಗಿ ಕಾಲಯಾಪನ ಮಾಡುವರೆಂದೂ, ಸಾಧುಸಂಗವು ಮನುಷ್ಯನನ್ನು ಶಾಂತಿಯನ್ನು ಕೊಡುವುದರ ಮೂಲಕ ಕೃತಾರ್ಥನನ್ನಾಗಿ ಮಾಡುವುದೆಂದೂ ಪುರಾಣದಿಂದ ತಿಳಿದುಕೊಂಡು, ಬಾಲಕನು ಸಾಧುಗಳ ಪರಿಚಯವನ್ನು ಸಂಪಾದಿಸಬೇಕೆಂಬ ಆಶಯದಿಂದ ಆ ಛತ್ರಕ್ಕೆ ಈಗಿನಿಂದಲೂ ಆಗಾಗ ಹೋಗಿ ಬರುತ್ತಿದ್ದನು. ಪ್ರಾತಃಕಾಲ, ಸಾಯಂಕಾಲಗಳಲ್ಲಿ ಅಗ್ನಿಷ್ಟಿಕೆಯಲ್ಲಿನ ಪವಿತ್ರವಾದ ಅಗ್ನಿಯನ್ನು ಪ್ರಜ್ವಲಮಾಡಿ ಅವರು ಯಾವ ಭಾವದಿಂದ ಭಗವಧ್ಯಾನದಲ್ಲಿ

ಮಗ್ನರಾಗುತ್ತಿದ್ದರೋ, ಭಿಕ್ಷೆಯಿಂದ ಸಂಪಾದಿಸಿದ ಸಾಮಾನ್ಯ ಆಹಾರವನ್ನು ತಮ್ಮ ಇಷ್ಟದೇವತೆಗೆ ನೈವೇದ್ಯಮಾಡಿ ಯಾವ ಭಾವದಿಂದ ಅವರು ಸಂತುಷ್ಟ ಚಿತ್ತರಾಗಿ ಪ್ರಸಾದವನ್ನು ಸ್ವೀಕಾರಮಾಡುತ್ತಿದ್ದರೋ, ವ್ಯಾಧಿಯು ಪ್ರಬಲ ವಾಗಿದ್ದ ಕಾಲದಲ್ಲಿ ಯಾವ ಭಾವದಿಂದ ಅವರು ಭಗವದ್ದರ್ಶನ ಚಿತ್ತರಾಗಿದ್ದು ಅದನ್ನೆಲ್ಲ ಕಾತರಪಡದೆ ಸಹಿಸುವುದಕ್ಕೆ ಪ್ರಯತ್ನಪಡುತ್ತಿದ್ದರೋ, ತಮಗೆ ವಿಶೇಷ ಪ್ರಯೋಜನಕರವಾದುದನ್ನು ಪಡೆಯುವುದಕ್ಕಾಗಿಯು ಕೂಡ ಅವರು ಯಾವ ಭಾವದಿಂದ ಇತರನ್ನು ತೊಂದರೆ ಪಡಿಸಲು ಹಿಂಜರಿಯು ತ್ತಿದ್ದರೋ, ಇದೂ ಅಲ್ಲದೆ, ಅವರಂತೆ ವೇಷಭೂಷಾದಿಗಳನ್ನು ಧರಿಸಿದ ಭಂಡ ಜನಗಳು ಯಾವ ಭಾವದಿಂದ ಎಲ್ಲಾ ರೀತಿಗಳಲ್ಲಿಯೂ ಸದಾಚಾರಕ್ಕೆ ಕೇವಲ ವಿರುದ್ಧವಾದ ರೀತಿಯಲ್ಲಿ ನಡೆದು ಸ್ವಾರ್ಥಸುಖಸಾಧನೆಗಾಗಿ ಜೀವಿಸು ತ್ತಿದ್ದರೋ—ಈ ಸಮಸ್ತ ವಿಷಯಗಳನ್ನೂ ಬಾಲಕನು ಈ ಸಮಯದಲ್ಲಿ ಪರೀಕ್ಷಿಸಿ ತಿಳಿದುಕೊಳ್ಳುತ್ತಿದ್ದನು. ಆತನು ನಿಜವಾಗಿಯೂ ಸಾಧುಗಳಾ ಗಿದ್ದವರನ್ನು ಕಂಡರೆ ಅಡಿಗೆ ಮುಂತಾದುದಕ್ಕೆ ಕಟ್ಟಿಗೆಯನ್ನು ತರುವುದು, ಕುಡಿಯುವುದಕ್ಕೆ ನೀರು ತಂದುಕೊಡುವುದು ಮುಂತಾದ ಸಣ್ಣಸಣ್ಣ ಕೆಲಸ ಗಳಲ್ಲಿ ಸಹಾಯಮಾಡಿ ಅವರೊಂದಿಗೆ ಹೆಚ್ಚಾಗಿ ಸೇರಲಾರಂಭಿಸಿದನು. ಅವರೂ ಪ್ರಿಯದರ್ಶನ ಬಾಲಕನ ಮಧುರವಾದ ನಡತೆಯಿಂದ ಪರಿತೃಪ್ತರಾಗಿ ಆತನಿಗೆ ಬಹಳ ಸಂತೋಷದಿಂದ ಭಜನೆಯನ್ನು ಹೇಳಿಕೊಡುವುದು, ಅನೇಕ ವಿಧವಾದ ಸದುಪದೇಶ ಮಾಡುವುದು, ನೈವೇದ್ಯಮಾಡಿದ ಭಿಕ್ಷಾನ್ನದಲ್ಲಿ ಸ್ವಲ್ಪಭಾಗವನ್ನು ಆತನಿಗೂ ಕೊಟ್ಟು ಆತನ ಜೊತೆಗೆ ಊಟಮಾಡುವುದು ಈರೀತಿಯಾಗಿ ಮಾಡುತ್ತಿದ್ದರು. ಮುಖ್ಯವಾಗಿ ಯಾವ ಸಾಧುಗಳು ಛತ್ರದಲ್ಲಿ ಕಾರಣಾಂತರದಿಂದ ಹೆಚ್ಚುಕಾಲ ವಾಸಮಾಡುತ್ತಿದ್ದರೋ ಅಂಥವ ರೊಂದಿಗೇ ಬಾಲಕನು ಈರೀತಿಯಾಗಿ ಸೇರಲು ಸಮರ್ಥನಾಗಿದ್ದನು.

ಹೀಗೆ ಸಾಧುಗಳೊಂದಿಗೆ ಸೇರಿದುದರಿಂದ ಚಂದ್ರಾದೇವಿಗೆ ಉಂಟಾದ ಭಯ, ಆ ಭಯ ನಿವಾರಣ

ಗದಾಧರನಿಗೆ ಎಂಟುವರ್ಷ ವಯಸ್ಸಾಗಿದ್ದಾಗ ಒಬ್ಬ ಸಾಧು ಅತ್ಯಧಿಕವಾದ ಪಥಶ್ರಮ ನಿವಾರಣೆಗಾಗಿಯೋ ಮತ್ತಾವ ಕಾರಣದಿಂದಲೋ ಲಾಹಾಬಾಬೂಯವರ ಛತ್ರದಲ್ಲಿ ಈರೀತಿಯಾಗಿ ಹೆಚ್ಚುಕಾಲ ನಿಂತನು. ಬಾಲಕನು ಅವರೊಂದಿಗೆ ಹಿಂದೆ ಹೇಳಿದ ರೀತಿಯಲ್ಲಿ ಸೇರಿ ಬಹುಬೇಗ ಅವರ ಪ್ರೀತಿಗೆ ಪಾತ್ರನಾದನು. ಬಾಲಕನು ಅವರೊಂದಿಗೆ

ಹೀಗೆ ಸೇರಿದ ವಿಷಯವು ಮೊದಲು ಮೊದಲು ಯಾರಿಗೂ ಗೊತ್ತಾಗಲಿಲ್ಲ, ಆದರೆ ಅವರೊಂದಿಗೆ ಸಂಬಂಧವು ಹೆಚ್ಚಾಗಿ ಬೆಳೆದು ಆತನು ಅವರೊಂದಿಗೆ ಹೆಚ್ಚುಕಾಲವನ್ನು ಕಳೆಯುವುದಕ್ಕೆ ಮೊದಲುಮಾಡಿದ ಮೇಲೆ ಈ ವಿಷಯವು ಎಲ್ಲರಿಗೂ ಗೊತ್ತಾಯಿತು ಕಾರಣವೇನಂದರೆ, ಒಂದೊಂದು ದಿನ ಆತನು ಅವರೊಂದಿಗೆ ಹೊಟ್ಟೆತುಂಬ ಊಟಮಾಡಿ ಮನೆಗೆ ಬಂದಮೇಲೆ ಏನನ್ನೂ ತಿನ್ನುತ್ತಿರಲಿಲ್ಲ, ಚಂದ್ರಾದೇವಿಯು ಕಾರಣವನ್ನು ಕೇಳಲು, ಆಕೆಗೆ ಎಲ್ಲವನ್ನೂ ತಿಳಿಸಿದನು ಚಂದ್ರಾದೇವಿಯು ಮೊದಲು ಮೊದಲು ಇದರಿಂದ ಉದ್ವಿಗ್ನಳಾಗಲಿಲ್ಲ ಬಾಲಕನಲ್ಲಿ ಸಾಧುಗಳಿಗಿದ್ದ ಪ್ರಸನ್ನತೆಯನ್ನು ಆಶೀರ್ವಾದ ಸ್ವರೂಪವಾದುದೆಂದು ಭಾವಿಸಿ ಆಕೆಯು ಬಾಲಕನೊಡನೆ ಅವರಿಗೆ ಬೇಕಾದಷ್ಟು ಆಹಾರ ಪದಾರ್ಥಗಳನ್ನು ಕಳುಹಿಸಿ ಕೊಡಲಾರಂಭಿಸಿದಳು. ಆದರೆ ಕೆಲವು ದಿನಗಳಾದ ಮೇಲೆ ಬಾಲಕನು ಒಂದು ದಿನ ಮೈಗೆಲ್ಲಾ ವಿಭೂತಿಯನ್ನು ಹಚ್ಚಿಕೊಂಡು ಒಂದು ದಿನ ಹಣೆಗೆ ತಿಲಕವನ್ನಿಟ್ಟುಕೊಂಡು, ಅಥವಾ ಒಂದು ದಿನ ತನ್ನ ಉಟ್ಟಬಟ್ಟೆಯನ್ನು ಹರಿದು ಕೌಪೀನ ಬಹಿರ್ವಾಸಗಳನ್ನು ಧರಿಸಿ ಮನೆಗೆ ಬಂದು "ಅಮ್ಮಾ, ನೋಡಮ್ಮ, ಸಾಧುಗಳು ನನಗೆ ಹ್ಯಾಗೆ ಅಲಂಕಾರ ಮಾಡಿದ್ದಾರೆ" ಎಂದು ಆಕೆಯ ಎದುರಿಗೆ ಬಂದು ನಿಲ್ಲುವುದಕ್ಕೆ ಮೊದಲು ಮಾಡಿದನು ಇದನ್ನು ನೋಡಿದಮೇಲೆ ಚಂದ್ರಾದೇವಿಗೆ ಮನಸ್ಸಿನಲ್ಲಿ ಬಹಳ ಚಿಂತೆಗೆ ಅವಕಾಶವಾಯಿತು ಸಾಧುಗಳು ತನ್ನ ಮಗನನ್ನು ಎಂದೋ ಒಂದು ದಿವಸ ಮೋಸಮಾಡಿ ಜೊತೆಗೆ ಕರೆದುಕೊಂಡು ಹೋಗಿಬಿಡುತ್ತಾರೋ ಏನೋ ಎಂದು ಯೋಚನೆ ಹುಟ್ಟಿತು ತನಗೆ ಹೀಗೆ ಭಯವುಂಟಾಗಿರುವುದನ್ನು ಗದಾಧರನಿಗೆ ತಿಳಿಸಿ ಒಂದುದಿನ ಕಣ್ಣೀರು ಸುರಿಸುವುದಕ್ಕೆ ಮೊದಲುಮಾಡಿದಳು ಬಾಲಕನು ಎಷ್ಟೆಷ್ಟು ವಿಧವಾಗಿ ಹೇಳಿದರೂ ಆಕೆಯನ್ನು ಸಮಾಧಾನ ಪಡಿಸಲು ಸಾಧ್ಯವಾಗಲಿಲ್ಲ. ಆಗ ಇನ್ನುಮುಂದೆ ಸಾಧುಗಳ ಹತ್ತಿರಕ್ಕೆ ಎಂದೆಂದಿಗೂ ಹೋಗುವುದಿಲ್ಲ ಎಂಬದಾಗಿ ಆತನು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡು ತಾಯಿಗೆ ಆ ವಿಷಯವನ್ನು ತಿಳಿಸಿ ಆಕೆಯನ್ನು ಸಮಾಧಾನ ಪಡಿಸಿದನು. ಅನಂತರ ತನ್ನ ಸಂಕಲ್ಪವನ್ನು ನೆರವೇರಿಸುವುದಕ್ಕೆ ಪೂರ್ವಭಾವಿಯಾಗಿ ಗದಾಧರನು ಅವರಿಗೆ ಕೊನೆಯಸಾರಿ ಹೇಳಿಬರುವುದಕ್ಕಾಗಿ ಸಾಧುಗಳ ಹತ್ತಿರಕ್ಕೆ ಹೋದನು. ಅವರು ಹಾಗೇಕೆ ಮಾಡುವಿಯೆಂದು ಕೇಳಲು, ಆತನು ತನ್ನ ತಾಯಿಗೆ ಭಯವಾಗಿರುವ ವಿಷಯವನ್ನು ತಿಳಿಸಿದನು. ಅದನ್ನು ಕೇಳಿ ಅವರು

ಬಾಲಕನನ್ನು ಕರೆದುಕೊಂಡು ಚಂದ್ರಾದೇವಿಯ ಬಳಿಗೆ ಬಂದು ಗದಾಧರನನ್ನು ಜತೆಗೆ ಕರೆದುಕೊಂಡು ಹೋಗುವ ಸಂಕಲ್ಪವು ಅವರ ಮನಸ್ಸಿನಲ್ಲಿ ಎಂದೂ ಹುಟ್ಟಿರಲಿಲ್ಲವೆಂದೂ ತಾಯಿತಂದೆಗಳ ಅನುಮತಿಯಿಲ್ಲದೆ ಇಂಥ ಅಲ್ಪವಯಸ್ಸಿನ ಬಾಲಕನನ್ನು ಕರೆದುಕೊಂಡು ಹೋಗುವುದು ಅಪಹರಣ ರೂಪವಾದ, ಸಾಧು ಜನರಿಗೆ ಅಪಮಾನಕರವಾದ ದೊಡ್ಡ ಅಪರಾಧವೆಂದು ತಾವು ತಿಳಿದುಕೊಂಡಿರುವುದಾಗಿಯೂ ಆಕೆಗೆ ಚೆನ್ನಾಗಿ ವಿವರಿಸಿ ತಿಳಿಸಿದರು ಇದರಿಂದ ಚಂದ್ರಾದೇವಿಯ ಮನಸ್ಸಿನಲ್ಲಿ ಪೂರ್ವದಲ್ಲಿದ್ದ ಭಯದ ನೆರಳು ಕೂಡ ಇಲ್ಲದಂತಾಯಿತು ಸಾಧುಗಳ ಇಷ್ಟದಂತೆ ಬಾಲಕನು ಅವರಬಳಿಗೆ ಪೂರ್ವದಂತೆಯೇ ಹೋಗಬಹುದೆಂದು ಆಕೆಯು ಅನುಮತಿಸಿದಳು

ಗದಾಧರನಿಗೆ ಎರಡನೆಯ ಸಲ ಭಾವಸಮಾಧಿಯುಂಟಾದುದು.

ಈ ಕಾಲದ ಮತ್ತೊಂದು ಘಟನೆಯಿಂದಲೂ ಚಂದ್ರಾದೇವಿಯು ಗದಾಧರನ ವಿಷಯವಾಗಿ ವಿಷಮವಾದ ಚಿಂತೆಗೊಳಗಾದಳು ಈ ಘಟನೆಯು ಅಕಸ್ಮಾತ್ತಾಗಿ ಉಂಟಾಯಿತೆಂದು ಎಲ್ಲರೂ ಭಾವಿಸಿದರೂ ಬಾಲಕನ ಭಾವಪ್ರವಣತೆ ಚಿಂತಾಶೀಲತೆಗಳು ಅಭಿವೃದ್ಧಿಯಾಗಿ ಅದನ್ನುಂಟುಮಾಡಿದುವೆಂದು ಊಹಿಸಬಹುದು. ಕಾಮಾರಪುಕುರಕ್ಕೆ ಸುಮಾರು ಒಂದು ಕ್ರೋಶ ಉತ್ತರದಲ್ಲಿರುವ ಆನೂರು ಎಂಬ ಗ್ರಾಮದ ಸುಪ್ರಸಿದ್ಧಿಯನ್ನು ಪಡೆದ ವಿಶಾಲಾಕ್ಷಿ ಎಂಬ ದೇವತೆಯನ್ನು ದರ್ಶನ ಮಾಡುವುದಕ್ಕಾಗಿ ಒಂದುದಿನ ಹೋಗಿ ದಾರಿಯಲ್ಲಿ ಆತನು ಸಂಜ್ಞಾಶೂನ್ಯನಾದನು ಧರ್ಮಲಾಹಾ ಅವರ ಮಗಳಾದ ಪವಿತ್ರ ಸ್ವಭಾವವುಳ್ಳ ಪ್ರಸನ್ನಮಯಿಯು ಆದಿನ ಬಾಲಕನ ಆರೀತಿಯಾದ ಅವಸ್ಥೆಯು ಭಾವಾವೇಶದಿಂದ ಉಂಟಾಯಿತೆಂದು ತಿಳಿದುಕೊಂಡಳು. ಆದರೆ ಚಂದ್ರಾದೇವಿಯು ಆ ಮಾತನ್ನು ನಂಬದೆ ಅದು ವಾಯುರೋಗದಿಂದಲೋ ಅಥವಾ ಬೇರೆ ಯಾವುದೋ ಕಾರಣದಿಂದಲೋ ಉಂಟಾಯಿತೆಂದು ಭಾವಿಸಿ ಚಿಂತೆಯನ್ನು ಹೊಂದಿದಳು. ಬಾಲಕನು ಮಾತ್ರ ಈ ಸಲವೂ ಪೂರ್ವದಂತೆಯೇ ದೇವಿಯ ಚಿಂತೆಯನ್ನು ಮಾಡುತ್ತ ಮಾಡುತ್ತ ಆಕೆಯ ಶ್ರೀಪಾದಪದ್ಮದಲ್ಲಿ ಮನಸ್ಸು ಲೀನವಾಗಿ ತನ್ನ ಆರೀತಿಯಾದ ಅವಸ್ಥೆಯುಂಟಾಯಿತೆಂದು ಹೇಳಿದನು.

ಗದಾಧರನ ಸ್ನೇಹಿತ ನಾದ ಗಯಾವಿಷ್ಣು

ಹೀಗೆ ಎರಡು ವರ್ಷಗಳಿಗಿಂತಲೂ ಹೆಚ್ಚುಕಾಲವು ಕಳೆಯಿತು. ಬಾಲಕನಿಗೆ ಕಾಲಕ್ರಮದಲ್ಲಿ ತಂದೆಯ ಅಭಾವ ವನ್ನು ಮರೆತು ಹೋಗಿ ತನ್ನ ದೈನಂದಿನ ಜೀವನದ ಸುಖ ದುಃಖಗಳಲ್ಲಿ ಮಗ್ನನಾಗುವುದು ಅಭ್ಯಾಸವಾಯಿತು. ಗದಾಧರನ ತಂದೆಯ ಸ್ನೇಹಿತನಾದ ಧರ್ಮದಾಸ ಲಾಹಾ ಅವರ ವಿಷಯವನ್ನು ಇದಕ್ಕೆ ಮೊದಲೇ ತಿಳಿಸಿದ್ದೇವೆ. ಆತನ ಮಗ ಗಯಾವಿಷ್ಣುವಿನೊಡನೆ ಗದಾಧರನಿಗೆ ಈ ಕಾಲದಲ್ಲಿ ಸ್ನೇಹ ಬೆಳೆಯಿತು ಒಟ್ಟಿಗೆ ಓದುವುದರಲ್ಲಿಯೂ ಆಡುವುದರಲ್ಲಿಯೂ ಬಾಲಕ ರಿಬ್ಬರೂ ಪರಸ್ಪರ ಆಸಕ್ತಿಯುಳ್ಳವರಾಗಿ ಕಾಲಕ್ರಮದಲ್ಲಿ ಒಬ್ಬರನ್ನೊಬ್ಬರು "ಸಂಗಾತಿ" ಎಂದು ಕರೆಯಲಾರಂಭಿಸಿದರು ಪ್ರತಿದಿನವೂ ಬಹಳಹೊತ್ತು ಜೊತೆಯಾಗಿ ಕಾಲವನ್ನು ಕಳೆಯುತ್ತಿದ್ದರು. ಹಳ್ಳಿಯ ಹೆಂಗಸರು ಗದಾಧರನನ್ನು ಪೂರ್ವದಂತೆ ಸ್ನೇಹದಿಂದ ತಮ್ಮ ಮನೆಗಳಿಗೆ ಕರದು ತಿನ್ನುವುದಕ್ಕೆ ಕೊಡುವ ಕಾಲದಲ್ಲಿ ಆತನು ಈಗ ತನ್ನ ಸಂಗಾತಿಯನ್ನು ಜೊತೆಗೆ ಕರೆದುಕೊಂಡು ಹೋಗು ವುದನ್ನು ಎಂದಿಗೂ ಮರೆಯುತ್ತಿರಲಿಲ್ಲ. ಬಾಲಕನ ದಾದಿಯಾದ ಕಮ್ಮಾರ ಜಾತಿಯ ಧನಿಯು ರುಚಿಕರವಾದ ಪದಾರ್ಥಗಳನ್ನು ಪ್ರಯತ್ನಪೂರ್ವಕವಾಗಿ ಮಾಡಿ ಆತನಿಗೆ ತಿನ್ನಲಿಕ್ಕ ಕೊಟ್ಟಾಗ, ಆತನು ತನ್ನ ಸಂಗಾತಿಗೆ ಅದರಲ್ಲಿ ಒಂದು ಭಾಗವನ್ನು ಕೊಟ್ಟಹೊರತು ಎಂದಿಗೂ ಅದನ್ನು ತಿನ್ನುತ್ತಿರಲಿಲ್ಲ ಧರ್ಮ ದಾಸನೂ ಗದಾಧರನ ಪೋಷಕರೂ ಇಬ್ಬರು ಹುಡುಗರೂ ಇಷ್ಟು ಸ್ನೇಹವಾಗಿ ರುವುದನ್ನು ನೋಡಿ ಆನಂದವನ್ನು ಹೊಂದಿದರೆಂದು ಹೇಳುವುದು ಅನಾವಶ್ಯಕ

ಗದಾದರನ ಉಪನ ಯನ ಕಾಲದ ವೃತ್ತಾಂತ

ಅದು ಹೇಗಾದರೂ ಇರಲಿ, ಗದಾಧರನಿಗೆ ಒಂಭತ್ತು ವರ್ಷ ತುಂಬುತ್ತಾ ಬಂದುದನ್ನು ನೋಡಿ ರಾಮಕುಮಾ ರನು ಆತನ ಉಪನಯನಕ್ಕೆ ತಕ್ಕ ಏರ್ಪಾಡನ್ನು ಮಾಡಲಾ ರಂಭಿಸಿದನು ಇದಕ್ಕೆ ಮೊದಲೇ ಒಂದಾನೊಂದು ಸಮಯದಲ್ಲಿ ಕಮ್ಮಾರ ಜಾತಿಯವಳಾದ ಧನಿಯು ಉಪನಯನ ಕಾಲದಲ್ಲಿ ಆಕೆಯಿಂದ ಪ್ರಥಮಭಿಕ್ಷೆ ಯನ್ನು ಸ್ವೀಕರಿಸಿ ಆಕೆಯನ್ನು ಮಾತೃಸಂಬೋಧನೆಯಿಂದ ಕೃತಾರ್ಥಳನ್ನಾಗಿ ಮಾಡಬೇಕೆಂದು ಬಾಲಕನನ್ನು ಕೇಳಿಕೊಂಡಿದ್ದಳು. ಬಾಲಕನೂ ಅದನ್ನು ಕೇಳಿ ಆಕೆಯ ಅಕೃತ್ರಿಮವಾದ ಪ್ರೇಮದಿಂದ ಮುಗ್ಧನಾಗಿ ಆಕೆಯ ಕೋರಿಕೆ ಯನ್ನು ನೆರವೇರಿಸುವುದಾಗಿ ಒಪ್ಪಿಕೊಂಡಿದ್ದನು ದರಿದ್ರಳಾದ ಧನಿಯು ಬಾಲಕನ ಮಾತಿನಲ್ಲಿ ವಿಶ್ವಾಸವಿಟ್ಟು, ಅಂದಿನಿಂದ ಹಣ ಮೊದಲಾದವುಗಳನ್ನು

ಸಂಪಾದಿಸಿ ಕೂಡಿಟ್ಟು, ಉಪನಯನ ಕಾಲವನ್ನು ಕುತೂಹಲದಿಂದ ಪರೀಕ್ಷಿಸು ತ್ತಿದ್ದಳು. ಆ ಕಾಲವು ಸಮೀಪಿಸಿದುದನ್ನು ನೋಡಿ ಗದಾಧರನು ಈಗ ತನ್ನ ಅಣ್ಣನಿಗೆ ಈ ವಿಷಯವನ್ನು ತಿಳಿಸಿದನು ಆದರೆ ತಮ್ಮ ಮನೆತನದಲ್ಲಿ ಎಂದೂ ಇಂತಹ ಪದ್ಧತಿಯು ಆಚರಣೆಗೆ ಬಂದಿರಲಿಲ್ಲವಾದುದರಿಂದ ರಾಮಕುಮಾರನು ಅದಕ್ಕೆ ಸಮ್ಮತಿಸಲಿಲ್ಲ ಬಾಲಕನೂ ತಾನು ಒಪ್ಪಿಕೊಂಡಿದ್ದುದನ್ನು ಜ್ಞಾಪಿಸಿ ಕೊಂಡು ಈ ವಿಷಯದಲ್ಲಿ ಒಹಳ ಹಟಹಿಡಿದು ಕುಳಿತನು ಹಾಗೆ ಮಾಡದಿದ್ದರೆ ತನಗೆ ಕೊಟ್ಟ ಮಾತಿಗೆ ತಪ್ಪುವ ಪಾಪ ಬರುವುದೆಂದೂ ಮಿಥ್ಯಾವಾದಿಯಾದವನು ಬ್ರಾಹ್ಮಣೋಚಿತವಾದ ಯಜ್ಞೋಪವೀತ ಧಾರಣೆಗೆ ಎಂದಿಗೂ ಅಧಿಕಾರಿ ಯಾಗಲಾರನೆಂದೂ ಆತನು ಹೇಳಿದನು ಉಪನಯನ ಕಾಲವು ಸಮೀಪಿ ಸಿದ್ದುದರಿಂದ ಅದಕ್ಕೆ ಬೇಕಾದ ಎಲ್ಲಾ ಸಲಕರಣೆಗಳೂ ಸಿದ್ಧವಾಗಿದ್ದವು, ಆದರೆ ಮೇಲೆ ಹೇಳಿದ ಬಾಲಕನ ಹಟದಿಂದ ಕೂಡಿದುದೆಲ್ಲವೂ ವ್ಯರ್ಥವಾಗುವಂತಾ ಯಿತು ಕಾಲಕ್ರಮದಲ್ಲಿ ಈ ಮಾತು ಧರ್ಮದಾಸ ಲಾಹಾರವರ ಕಿವಿಗೆ ಬಿತ್ತು ಆಗ ಅವರಿಬ್ಬರ ವಿವಾದವನ್ನೂ ತೀರಿಸಬೇಕೆಂದು ಪ್ರಯತ್ನಿಸಿ ರಾಮಕುಮಾರನನ್ನು ಕುರಿತು ಅವರ ಮನೆತನದಲ್ಲಿ ಆ ಪದ್ಧತಿಯು ಹಿಂದೆಂದೂ ಇಲ್ಲದೇ ಹೋಗಿದ್ದರೂ, ಇತರ ಕಡೆಗಳಲ್ಲಿ ಅನೇಕ ಸದ್ಬ್ರಾಹ್ಮಣ ಪರಿವಾರಗಳ ಲ್ಲಿರುವುದೆಂದೂ, ಆದಕಾರಣ ಹಾಗೆ ಮಾಡಿದರೆ ಅವರು ಎಂದಿಗೂ ನಿಂದೆಗೆ ಗುರಿಯಾಗುವುದಿಲ್ಲವಾದುದರಿಂದ ಬಾಲಕನ ಸಂತೋಷ ಶಾಂತಿಗಳಿಗಾಗಿ ಹಾಗೆ ಮಾಡುವುದು ದೋಷವಲ್ಲವೆಂದೂ ಹೇಳಿದರು ತಿಳಿದವನೂ ತಂದೆಯ ಸ್ನೇಹಿತನೂ ಆದ ಧರ್ಮದಾಸನ ಮಾತನ್ನು ಕೇಳಿ, ಆಗ ರಾಮಕುಮಾರ ಮೊದಲಾದವರು ಅದಕ್ಕೆ ಯಾವ ಅಡ್ಡಿಯನ್ನೂ ಮಾಡಲಿಲ್ಲ, ಗದಾಧರನು ಸಂತೋಷವಾಗಿ ಯಥಾವಿಧಿಯಾಗಿ ಯಜ್ಞೋಪವೀತವನ್ನು ಧರಿಸಿ ಸಂಧ್ಯಾ ಪೂಜಾದಿ ಬ್ರಾಹ್ಮಣೋಚಿತ ಕರ್ಮಗಳಲ್ಲಿ ಅನುರಕ್ತನಾದನು ಕಮ್ಮಾರ ಜಾತಿಯವಳಾದ ಧನಿಯೂ ಈ ಪ್ರಕಾರ ಆತನ ಸಂಬಂಧವುಳ್ಳವಳಾಗಿ ತನ್ನ ಜೀವನವು ಸಾರ್ಥಕವಾಯಿತೆಂದು ಭಾವಿಸಿದಳು ಆದಾದ ಸ್ವಲ್ಪ ದಿನಗಳಲ್ಲಿಯೇ ಬಾಲಕನಿಗೆ ಒಂಭತ್ತು ವರ್ಷ ತುಂಬಿತು

**ಪಂಡಿತ ಸಭೆಯಲ್ಲಿ ಗದಾಧರನು ಪ್ರಶ್ನೆಗೆ ಸಮಾಧಾನ ಹೇಳಿ ದುದು.**

ಉಪನಯನವಾದ ಕಲಕಾಲದ ಮೇಲೆ ನಡೆದ ಒಂದು ಸಂಗತಿಯಿಂದ ಗದಾಧರನ ಅಸಾಧಾರಣವಾದ ದಿವ್ಯ ಪ್ರತಿಭೆಯನ್ನು ತಿಳಿದು ಹಳ್ಳಿಯವರೆಲ್ಲರೂ ಅತ್ಯಂತ ವಿಸ್ಮಿತ ರಾದರು. ಗ್ರಾಮದ ಜಮೀನ್ದಾರ ಲಾಹಾಬಾಬೂ

ಯವರ ಮನೆಯಲ್ಲಿ ಒಂದಾನೊಂದು ಶ್ರಾದ್ಧ ಸಮಯದಲ್ಲಿ ಒಂದು ದೊಡ್ಡ ಪಂಡಿತಸಭೆ ಸೇರಿತ್ತು. ಪಂಡಿತರು ಧರ್ಮಸಂಬಂಧವಾದ ಯಾವುದೋ ಒಂದು ಜಟಿಲ ಪ್ರಶ್ನೆಯ ಸಂಬಂಧವಾಗಿ ವಾದವಿವಾದಗಳನ್ನು ಮಾಡಿ ಸಮರ್ಪಕವಾದ ಉತ್ತರವನ್ನು ಹೊಂದಲಾರದೇ ಇದ್ದರು. ಬಾಲಕ ಗದಾಧರನು ಆ ಸಮಯದಲ್ಲಿ ಅಲ್ಲಿಗೆ ಹೋಗಿ ಈ ವಿಷಯದಲ್ಲಿ ಯುಕ್ತವಾದ ಉತ್ತರವನ್ನು ಕೊಡಲು, ಪಂಡಿತರು ಅದನ್ನು ಕೇಳಿ ಅವನನ್ನು ಪುನಃ ಪುನಃ ಹೊಗಳಿ ಅವನಿಗೆ ಆಶೀರ್ವಾದ ಮಾಡಿದರು.

**ಗದಾಧರನ ಧರ್ಮ ಪ್ರವೃತ್ತಿಯ ಪರಿಣತಿ ಮತ್ತು ಮೂರನೆಯ ಸಲ ಭಾವಸಮಾಧಿ ಯುಂಟಾದುದು.**

ಅದು ಹಾಗಿರಲಿ, ಉಪನಯನವಾದ ಮೇಲೆ ಗದಾಧರನ ಭಾವಾನುರಕ್ತ ಹೃದಯವು ತನ್ನ ಸ್ವಭಾವಕ್ಕೆ ಅನುಕೂಲ ವಾದ ಮತ್ತೊಂದು ವಿಷಯವನ್ನು ಅವಲಂಭಿಸುವ ಸುಸಂದರ್ಭವನ್ನು ಕಂಡು ಆನಂದವನ್ನು ಹೊಂದಿತು. ತಂದೆಗೆ ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ ರಘುವೀರ ವಿಗ್ರಹವು ಹೇಗೆ ಕಾಮಾರಪುಕುರದ ಮನೆಗೆ ಬಂತೆಂಬುದನ್ನೂ, ಅದಾದಮೇಲೆ ಲಕ್ಷ್ಮೀ ಜಲದ ಸಣ್ಣ ಹೊಲದಲ್ಲಿ ವಿಶೇಷವಾಗಿ ಧಾನ್ಯಬೆಳದು ಸಂಸಾರದ ಅಭಾವವು ದೂರವಾಗಿ ಕರುಣಾಮಯಿಯಾದ ಚಂದ್ರಾದೇವಿಯು ಅತಿಥಿ ಅಭ್ಯಾಗತರಿಗೆ ನಿತ್ಯವೂ ಅನ್ನದಾನಮಾಡಲು ಅನುಕೂಲವಾಯಿತೆಂಬುದನ್ನು ಕೇಳಿ ಬಾಲಕನು ಮೊದಲಿನಿಂದಲೂ ಗೃಹದೇವತೆಯಾದ ರಘುವೀರನಲ್ಲಿ ವಿಶೇಷ ಭಕ್ತಿ ಶ್ರದ್ಧೆಗಳ ನ್ನಿಟ್ಟಿದ್ದನು. ಆ ದೇವರನ್ನು ಮುಟ್ಟಿ ಪೂಜೆಮಾಡುವ ಅಧಿಕಾರವು ಅಂದಿನಿಂದ ಪ್ರಾಪ್ತವಾಗಲು ಬಾಲಕನ ಹೃದಯವು ಹೊಸ ಅನುರಾಗದಿಂದ ಪೂರ್ಣ ವಾಯಿತು. ಸಂಧ್ಯಾವಂದನಾದಿಗಳನ್ನು ಮುಗಿಸಿ ಬಾಲಕನು ಪ್ರತಿದಿನವೂ ಆ ದೇವರ ಪೂಜಾಧ್ಯಾನಗಳಲ್ಲಿ ಬಹುಕಾಲವನ್ನು ಕಳೆಯಲಿಕ್ಕಾರಂಭಿಸಿದನು. ಹೇಗಾದರೆ ಆ ದೇವರು ಪ್ರಸನ್ನನಾಗಿ ತನ್ನ ತಂದೆಯಂತೆ ತನಗೂ ಆಗಾಗ ದರ್ಶನವನ್ನೂ ಆದೇಶವನ್ನೂ ಕೊಟ್ಟು ಕೃತಾರ್ಥನನ್ನಾಗಿ ಮಾಡುವನು ಎಂದು ಚಿಂತಿಸಿ ವಿಶೇಷ ನಿಷ್ಠೆಯಿಂದಲೂ ಭಕ್ತಿಯಿಂದಲೂ ದೇವರ ಸೇವೆಯನ್ನು ಮಾಡಲಾರಂಭಿಸಿದನು. ರಾಮೇಶ್ವರಲಿಂಗವನ್ನು, ಶೀತಲಾದೇವಿಯನ್ನೂ ಹಾಗೆಯೇ ಸೇವಿಸುತ್ತಿದ್ದನು. ಈ ವಿಧವಾದ ಸೇವಾಪೂಜಾದಿಗಳ ಫಲವನ್ನು ಹೊಂದುವುದಕ್ಕೂ ವಿಳಂಬವಾಗಲಿಲ್ಲ. ಬಾಲಕನ ಪವಿತ್ರಹೃದಯವು ಅವು ಗಳಿಂದ ಏಕಾಗ್ರವಾಗಿ ಸ್ವಲ್ಪ ಕಾಲದಲ್ಲಿಯೇ ಅವನನ್ನು ಭಾವಸಮಾಧಿ ಅಥವಾ

ಸವಿಕಲ್ಪ ಸಮಾಧಿಗೆ ಅಧಿಕಾರಿಯನ್ನಾಗಿ ಮಾಡಿತು ಈ ಸಮಾಧಿ ಸಹಾಯದಿಂದ ಆತನ ಜೀವನದಲ್ಲಿ ಅನೇಕ ದಿವ್ಯದರ್ಶನಗಳು ಆಗಿಂದಾಗ ಉಂಟಾಗಲಾರಂಭಿಸಿದವು ಈ ವಿಧವಾದ ಸಮಾಧಿಯು ಮತ್ತು ದರ್ಶನದ ಪ್ರಥಮವಿಕಾಸವು ಆ ವರ್ಷ ಶಿವರಾತ್ರಿಯ ಕಾಲದಲ್ಲಿ ಉಂಟಾಯಿತು ಆದಿನ ಬಾಲಕನು ಯಥಾರೀತಿ ಉಪವಾಸಮಾಡಿ ವಿಶೇಷ ನಿಷ್ಠೆಯಿಂದ ದೇವಾದಿ ದೇವನಾದ ಮಹಾದೇವನ ಪೂಜೆಮಾಡಿದನು. ಆತನ ಗೆಳೆಯನಾದ ಗಯಾವಿಷ್ಣುವೂ ಮತ್ತೊಬ್ಬ ಸ್ನೇಹಿತನೂ ಆದಿನ ಅದೇ ಉದ್ದೇಶದಿಂದ ಉಪವಾಸಮಾಡಿದರು ಮತ್ತು ನೆರೆಹೊರೆಯಲ್ಲಿದ್ದ ಸೀತಾನಾಥ ಪಾಯಿನ್ ಅವರ ಮನೆಯಲ್ಲಿ ಶಿವಮಹಿಮೆಯನ್ನು ಸೂಚಿಸುವ ಯಾತ್ರೆಯನ್ನು ಅಭಿನಯಿಸುವರೆಂಬುದನ್ನು ಕೇಳಿ ರಾತ್ರಿ ಜಾಗರಣ ಮಾಡಬೇಕೆಂದು ನಿಶ್ಚಯಿಸಿದರು ಪ್ರಥಮಯಾಮದ ಪೂಜೆಯನ್ನು ಮುಗಿಸಿ ಗದಾಧರನು ತನ್ಮಯನಾಗಿ ಕುಳಿತಿರುವಾಗ ಅಕಸ್ಮಾತ್ತಾಗಿ ಆತನ ಜೊತೆಗಾರರು ಬಂದು ಪಾಯಿನ್‌ರವರ ಮನೆಯಲ್ಲಿ ಆತನು ಶಿವನ ವೇಷವನ್ನು ಧರಿಸಿ ಒಂದು ಮಾತನ್ನು ಆಡಬೇಕೆಂದು ಆತನಿಗೆ ತಿಳಿಸಿದರು, ಏಕೆಂದರೆ ಯಾತ್ರೆಯನ್ನು ಆಡುವವರಲ್ಲಿ ಶಿವನವೇಷವನ್ನು ಹಾಕತಕ್ಕವನು ರೋಗಪೀಡಿತನಾಗಿದ್ದುದರಿಂದ ಆ ವೇಷವನ್ನು ಹಾಕಲು ಅಸಮರ್ಥನಾಗಿದ್ದನು ಆದರಿಂದ ಪೂಜೆಗೆ ವಿಘ್ನ ಉಂಟಾಗುವುದೆಂದು ಬಾಲಕನು ಒಪ್ಪದೇ ಹೋದರೂ ಅವರು ಬಿಡಲಿಲ್ಲ ಅವರು ಹೀಗೆ ಹೇಳಿದರು—'' ಶಿವನ ವೇಷವನ್ನು ಧರಿಸಿದರೆ ಯಾವಾಗಲೂ ಶಿವನಧ್ಯಾನದಲ್ಲಿಯೇ ಇರಬೇಕಾಗುತ್ತದೆ, ಹಾಗೆ ಮಾಡುವುದು ಪೂಜೆಮಾಡುವುದಕ್ಕಿಂತಲೂ ಯಾವ ವಿಷಯದಲ್ಲಿಯೂ ಕಡಮೆಯಿಲ್ಲ, ಅದೂ ಅಲ್ಲದೆ ಹಾಗೆ ಮಾಡದಿದ್ದರೆ ಎಷ್ಟು ಜನರ ಆನಂದಕ್ಕೆ ಹಾನಿಯಾಗುತ್ತದೆ ಎಂಬುದನ್ನು ಯೋಚಿಸಬೇಕಾದ್ದು ಉಚಿತ ಜನರೆಲ್ಲರೂ ಉಪವಾಸಮಾಡಿದವರೇ, ರಾತ್ರಿ ಈರೀತಿ ಜಾಗರಣೆಮಾಡಿ ವ್ರತವನ್ನು ಪೂರ್ಣಗೊಳಿಸಬೇಕೆಂದು ಮನಸ್ಸು ಮಾಡಿರತಕ್ಕವರು '' ಗದಾಧರನು ಯತ್ನವಿಲ್ಲದೆ ಅದಕ್ಕೆ ಒಪ್ಪಿ ಶಿವನ ವೇಷವನ್ನು ಧರಿಸಿ ರಂಗಸ್ಥಳದಲ್ಲಿ ಬಂದು ನಿಂತನು ಆದರೆ ಜಟಾ ರುದ್ರಾಕ್ಷಿ ವಿಭೂತಿಗಳಿಂದ ಭೂಷಿತನಾಗಿ ಆತನು ಶಿವಧ್ಯಾನದಲ್ಲಿ ಎಷ್ಟು ತನ್ಮಯನಾಗಿ ಹೋದನೆಂದರೆ ಆತನಿಗೆ ಸ್ವಲ್ಪವೂ ಬಾಹ್ಯ ಸಂಜ್ಞೆಯೇ ಇರಲಿಲ್ಲ ಆಮೇಲೆ ಬಹಳ ಹೊತ್ತಾದರೂ ಆತನಿಗೆ ಎಚ್ಚರಿಕೆಯುಂಟಾಗದೇ ಹೋದುದರಿಂದ ಆ ರಾತ್ರಿ ಯಾತ್ರೆಯನ್ನು ನಿಲ್ಲಿಸಿಬಿಡಬೇಕಾಯಿತು

ಗದಾಧರನಿಗೆ ಪುನಃ ಪುನಃ ಭಾವಸಮಾಧಿಯುಂಟಾಗುವಿಕೆ

ಇಲ್ಲಿಂದ ಮುಂದೆ ಗದಾಧರನಿಗೆ ಈರೀತಿಯಾಗಿ ಸಮಾಧಿಯು ಆಗಾಗ ಉಂಟಾಗುತ್ತಿತ್ತು. ಧ್ಯಾನಮಾಡುವಾಗಲೂ ದೇವದೇವಿಯರ ಮಹಿಮಾ ಸೂಚಕವಾದ ಹಾಡುಗಳನ್ನು ಕೇಳುವಾಗಲೂ ಇಂದಿನಿಂದ ತನ್ಮಯನಾಗಿ ಹೋಗುತ್ತಿದ್ದನು, ಆತನ ಮನಸ್ಸು ಸ್ವಲ್ಪಕಾಲ ಅಥವಾ ಬಹಳಕಾಲ ತನ್ನಲ್ಲಿ ತಾನು ಲೀನವಾಗಿ ಬಹಿರ್ವಿಷಯಗಳ ಕಡೆಗೆ ಗಮನವನ್ನೇ ಕೊಡುತ್ತಿರಲಿಲ್ಲ. ಈ ತನ್ಮಯತೆಯು ಅತಿಗಾಢವಾದ ದಿನಗಳಲ್ಲಿ ಬಾಹ್ಯಸಂಜ್ಞೆಯು ಸಂಪೂರ್ಣವಾಗಿ ಲೋಪವಾಗಿ ಆತನು ಜಡವಸ್ತುವಿನಂತೆ ಇರುತ್ತಿದ್ದನು ಆದರೆ ಆ ಸ್ಥಿತಿಯು ಕಳೆದುಹೋದ ಮೇಲೆ ಯಾರಾದರೂ ಕೇಳಿದರೆ, ತಾನು ಯಾವ ದೇವತೆಯ ಧ್ಯಾನದಲ್ಲಿ ಅಥವಾ ಸಂಗೀತ ಶ್ರವಣದಲ್ಲಿ ನಿರತನಾಗಿದ್ದನೋ ಆ ದೇವತೆಯ ಸಂಬಂಧವಾದ ಯಾವುದೋ ಒಂದು ದರ್ಶನವು ತನ್ನ ಮನಸ್ಸಿಗುಂಟಾಗಿ ತನಗೆ ಆನಂದವಾಗಿತ್ತೆಂದು ಹೇಳುತ್ತಿದ್ದನು ಚಂದ್ರಾದೇವಿಯೇ ಮೊದಲಾದ ಪರಿವಾರದವರೆಲ್ಲರೂ ಇದರಿಂದ ಅನೇಕದಿನ ಗಾಬರಿಯಾಗುತ್ತಿದ್ದರು, ಆದರೆ ಇದರಿಂದ ಬಾಲಕನ ಆರೋಗ್ಯಕ್ಕೆ ಸ್ವಲ್ಪವೂ ಹಾನಿಯಾಗದಿದ್ದುದನ್ನು ನೋಡಿಯೂ ಆತನು ಎಲ್ಲ ಕೆಲಸಗಳನ್ನೂ ಮಾಡುತ್ತಾ ಯಾವಾಗಲೂ ಕಾಲ ಕಳೆಯುತ್ತಿದ್ದುದನ್ನು ನೋಡಿಯೂ ಅವರ ಈ ಭಯವು ಕ್ರಮವಾಗಿ ಕಡಮೆಯಾಗುತ್ತಿತ್ತು. ಪುನಃ ಪುನಃ ಈರೀತಿಯಾದ ಸ್ಥಿತಿಯುಂಟಾಗುತ್ತಿದ್ದುದರಿಂದ ಕಾಲಕ್ರಮವಾಗಿ ಬಾಲಕನಿಗೂ ಅದು ಅಭ್ಯಾಸವಾಯಿತು ಮತ್ತು ಸಾಧಾರಣವಾಗಿ ಅದು ಆತನ ಇಚ್ಛಾಧೀನವಾಗಿತ್ತು. ಅದರ ಪ್ರಭಾವದಿಂದ ಆತನಿಗೆ ಸೂಕ್ಷ್ಮ ವಿಷಯಗಳೆಲ್ಲವೂ ಗೊತ್ತಾಗುತ್ತಿದ್ದುವು, ಅಲ್ಲದೆ ದೇವದೇವಿಯರ ವಿಷಯಕವಾದ ಅನೇಕ ತತ್ತ್ವಗಳು ಗೊತ್ತಾಗುತ್ತಿದ್ದುದರಿಂದ ಆ ಸ್ಥಿತಿಯು ಬಂದಾಗ ಆತನಿಗೆ ಆನಂದವಾಗುತ್ತಿತ್ತೇ ಹೊರತು ಎಂದಿಗೂ ಭಯವಾಗುತ್ತಿರಲಿಲ್ಲ. ಅದು ಹೇಗಾದರೂ ಆಗಲಿ, ಬಾಲಕನ ಧರ್ಮಪ್ರವೃತ್ತಿಯು ಅಂದಿನಿಂದ ವಿಶೇಷವಾಗಿ ಅಭಿವೃದ್ಧಿಯಾಯಿತು ಆತನು ಹರಿವಾಸರ ಶಿವಪೂಜೆ ಅಥವಾ ಮನಸಾ ಪೂಜೆ ಅಥವಾ ಧರ್ಮಪೂಜೆ ಮೊದಲಾಗಿ ಗ್ರಾಮದಲ್ಲಿ ಎಲ್ಲೆಲ್ಲಿ ಯಾವ ಯಾವ ಧರ್ಮಾನುಷ್ಠಾನವಾಗುತ್ತಿತ್ತೋ ಆ ಸ್ಥಳಗಳಿಗೆಲ್ಲಾ ಹೋಗಿ ಮನಃಪೂರ್ವಕವಾಗಿ ಅವುಗಳಲ್ಲಿ ಸೇರುತ್ತಿದ್ದನು ಬಾಲಕನ ಮಹದುದಾರವಾದ ಧರ್ಮಸ್ವಭಾವವು ಬೇರೆ ದೇವದೇವಿಯರ ಉಪಾಸಕರಲ್ಲಿ ಆತನಿಗೆ

ದ್ವೇಷವಿಲ್ಲದಂತೆ ಮಾಡಿ ಅವರನ್ನೆಲ್ಲಾ ತನ್ನವರನ್ನಾಗಿ ಭಾವಿಸುವಂತೆ ಮಾಡಿತು. ಆ ಗ್ರಾಮದಲ್ಲಿ ನಡವಳಿಕೆಯಲ್ಲಿದ್ದ ಪದ್ಧತಿಯೂ ಆತನಿಗೆ ಸಹಾಯಕಾರಿಯಾಗಿತ್ತೆಂಬುದರಲ್ಲಿ ಸಂಶಯವಿಲ್ಲ, ಏಕೆಂದರೆ ಆ ಊರಿನ ವಿಷ್ಣು ಉಪಾಸಕರೂ ಶಿವಭಕ್ತರೂ ಧರ್ಮಪೂಜಕರೂ ಹೀಗೆಯೇ ಬೇರೆ ಬೇರೆ ಸಂಪ್ರದಾಯಾನುವರ್ತಿಗಳೂ ಇತರ ಗ್ರಾಮಗಳವರಂತಲ್ಲದೆ ಒಬ್ಬರನ್ನೊಬ್ಬರು ದ್ವೇಷಿಸದೆ ಸ್ನೇಹದಿಂದ ವಾಸಿಸುತ್ತಿದ್ದರು

**ಗದಾಧರನಿಗೆ ವಿದ್ಯಾರ್ಜನೆಯಲ್ಲಿ ಔದಾಸೀನ್ಯವಿದ್ದುದಕ್ಕೆ ಕಾರಣ**

ಈ ರೀತಿಯಾಗಿ ಧರ್ಮಪ್ರವೃತ್ತಿಯಲ್ಲಿ ಪರಿಣತಿಯುಂಟಾದರೂ ಗದಾಧರನಿಗೆ ವಿದ್ಯಾಭ್ಯಾಸದಲ್ಲಿ ಅನುರಾಗವು ಈಗ ಅಭಿವೃದ್ಧಿಯಾಗಲಿಲ್ಲ ಪಂಡಿತ, ಭಟ್ಟಾಚಾರ್ಯ ಮೊದಲಾದ ಬಿರುದುಗಳಿಂದ ಭೂಷಿತರಾದ ಜನರೆಲ್ಲರೂ ಐಹಿಕ ಭೋಗ ಸುಖಾಪೇಕ್ಷಿಗಳೂ ಧನಾಕಾಂಕ್ಷಿಗಳೂ ಆಗಿದ್ದುದನ್ನು ನೋಡಿ ಆ ರೀತಿಯಾಗಿ ವಿದ್ಯಾರ್ಜನೆಮಾಡುವುದಲ್ಲಿ ಆತನಿಗೆ ದಿನದಿನಕ್ಕೂ ಔದಾಸೀನ್ಯವು ಹೆಚ್ಚಿತು ಈಗ ಬಾಲಕನ ಸೂಕ್ಷ್ಮದೃಷ್ಟಿಯು ಎಲ್ಲ ಜನರ ಕಾರ್ಯದ ಉದ್ದೇಶವನ್ನು ಮೊಟ್ಟಮೊದಲೇ ಕಂಡು ಹಿಡಿಯುವುದಕ್ಕೆ ಮುಂದುವರಿಯುತ್ತಿತ್ತು. ಆತನ ತಂದೆಯಾದ ಕ್ಷುದಿರಾಮನ ವೈರಾಗ್ಯ, ಈಶ್ವರಭಕ್ತಿ, ಸತ್ಯ, ಸದಾಚಾರ ಧರ್ಮಪರಾಯಣತೆ ಮೊದಲಾದ ಗುಣಗಳನ್ನು ಆದರ್ಶರೂಪವಾಗಿ ಎದುರಿಗೆ ಇಟ್ಟುಕೊಂಡೇ ಆತನು ಇತರರ ಆಚರಣೆಯ ಬೆಲೆಯನ್ನು ನಿರ್ದೇಶಿಸುವುದರಲ್ಲಿ ಪ್ರವೃತ್ತನಾಗುತ್ತಿದ್ದನು ಈ ರೀತಿಯಾದ ವಿಚಾರದಲ್ಲಿ ಪ್ರವೃತ್ತನಾಗಿ ಬಾಲಕನು ಸಂಸಾರದಲ್ಲಿ ಸಾಮಾನ್ಯವಾಗಿ ಎಲ್ಲ ಜನರೂ ಬೇರೆ ಉದ್ದೇಶ ಉಳ್ಳವರಾಗಿದ್ದುದನ್ನು ಕಂಡು ವಿಸ್ಮಿತನಾದನು ಅದೂ ಅಲ್ಲದೆ ಅನಿತ್ಯ ಸಂಸಾರವನ್ನು ನಿತ್ಯವೆಂದು ಭಾವಿಸಿ ಅವರು ಸರ್ವದಾ ದುಃಖದಲ್ಲಿ ಮಗ್ನರಾಗಿರುವುದನ್ನು ನೋಡಿ ಆತನಿಗೆ ಅತ್ಯಂತ ದುಃಖವಾಯಿತು. ಈ ರೀತಿಯಾಗಿ ಜನರಿರುವುದನ್ನು ನೋಡಿ ತಾನು ಬೇರೆ ರೀತಿಯಾಗಿ ಜೀವನವನ್ನು ನಡೆಸಬೇಕೆಂದು ಆತನ ಮನಸ್ಸಿನಲ್ಲಿ ಸಂಕಲ್ಪ ಉಂಟಾದುದರಲ್ಲಿ ವಿಚಿತ್ರವೇನೂ ಇಲ್ಲ ಮೇಲೆ ಹೇಳಿದುದನ್ನು ಕೇಳಿ ಪಾಠಕರು ಹನ್ನೊಂದು ಹನ್ನೆರಡುವರ್ಷದ ಬಾಲಕನ ಸೂಕ್ಷ್ಮದೃಷ್ಟಿ ವಿಚಾರಶಕ್ತಿಗಳು ಇಷ್ಟರಮಟ್ಟಿಗೆ ವಿಕಾಸವಾಗುವ ಸಂಭವ ಉಂಟೆ ಎಂದು ಕೇಳಬಹುದು ಅದಕ್ಕೆ ಉತ್ತರವಾಗಿ ಹೀಗೆ ಹೇಳಬಹುದು—ಸಾಧಾರಣ ಬಾಲಕರ ವಿಷಯದಲ್ಲಿ ಹೀಗಾಗುವುದು ನಿಜವಲ್ಲ,

ಆದರೆ ಗದಾಧರನು ಆ ಪಂಗಡಕ್ಕೆ ಸೇರಿದವನಲ್ಲ ಆತನು ಅಸಾಧಾರಣವಾದ ಪ್ರತಿಭೆ, ಮೇಧಾ ಮತ್ತು ಮಾನಸಿಕ ಸಂಸ್ಕಾರಗಳನ್ನು ಪಡೆದೇ ಜನ್ಮಗ್ರಹಣ ಮಾಡಿದನು. ಆದಕಾರಣ ಅಲ್ಪವಯಸ್ಸಿನಲ್ಲಿಯೂ ಈರೀತಿಯಾಗುವುದು ಆತನ ಪಕ್ಷದಲ್ಲಿ ವಿಚಿತ್ರವಲ್ಲ ಆದಕಾರಣ ಹೀಗಾಗುವುದು ನಮಗೆ ಹೇಗಾದರೂ ತೋರಲಿ, ನಾವು ವಿಚಾರಮಾಡಿದುದರಲ್ಲಿ ನಮಗೆ ಸಂಗತಿ ಹೇಗೆಂದು ತಿಳಿಯಿತೋ ಅದನ್ನು, ಸತ್ಯಕ್ಕೆ ಕಟ್ಟುಬದ್ಧು, ನಾವು ಇದ್ದುದನ್ನು ಇದ್ದಂತ್ತ ಹೇಳಲೇಬೇಕಾಗಿದೆ

ಗದಾಧರನ ಶಿಕ್ಷೆಯು ಈಗ ಎಷ್ಟು ದೂರ ಮುಂದುವರಿದಿತ್ತು

ಆ ವಿಷಯವು ಹೇಗಾದರೂ ಇರಲಿ, ಪ್ರಚಲಿತ ವಿದ್ಯಾಭ್ಯಾಸದಲ್ಲಿ ಕ್ರಮಕ್ರಮವಾಗಿ ಔದಾಸೀನ್ಯವು ಹೆಚ್ಚಿದರೂ ಗದಾಧರನು ಈಗಲೂ ಎಂದಿನಂತೆ ಪಾಠಶಾಲೆಗೆ ಹೋಗುತ್ತಿದ್ದನು ಮಾತೃಭಾಷೆಯಲ್ಲಿ ಬರೆದು ಅಚ್ಚಾದ ಗ್ರಂಥಗಳನ್ನು ಓದುವುದರಲ್ಲಿಯೂ ಬರೆಯುವುದರಲ್ಲಿಯೂ ವಿಶೇಷ ನೈಪುಣ್ಯವನ್ನು ಪಡೆದನು ಅದರಲ್ಲಿಯೂ ರಾಮಾಯಣ ಮಹಾಭಾರತಾದಿ ಧರ್ಮಗ್ರಂಥಗಳನ್ನು ಆತನು ಅತ್ಯಂತ ಭಕ್ತಿಯಿಂದಲೂ ಮನೋಹರವಾಗಿಯೂ ಓದುತ್ತಿದ್ದುದರಿಂದ ಜನರೆಲ್ಲರೂ ಅದನ್ನು ಕೇಳಿ ಮುಗ್ಧರಾಗುತ್ತಿದ್ದರು ಆದುದರಿಂದ ಆ ಗ್ರಾಮದವರಲ್ಲಿ ಸರಳಚಿತ್ತರೂ ಓದುಬರಹ ಬಾರದವರೂ ಆದ ಜನರು ಆತನ ಬಾಯಿಂದ ಆ ಗ್ರಂಥಗಳನ್ನು ಕೇಳಲು ಅತ್ಯಂತ ಉತ್ಸುಕರಾಗಿರುತ್ತಿದ್ದರು ಬಾಲಕನೂ ಅವರ ಕೋರಿಕೆಯನ್ನು ನೆರವೇರಿಸಿ ಅವರಿಗೆ ತೃಪ್ತಿಯನ್ನುಂಟುಮಾಡುವುದಕ್ಕೆ ಎಂದೂ ಹಿಂಜರಿಯುತ್ತಿರಲಿಲ್ಲ ಸೀತಾನಾಥ ಪಾಯಿನ್, ಮಧುಯುಗೀ ಮುಂತಾದ ಅನೇಕರು ಈ ಉದ್ದೇಶದಿಂದ ಆತನನ್ನು ತಮ್ಮತಮ್ಮ ಮನೆಗಳಿಗೆ ಕರೆದುಕೊಂಡು ಹೋಗುತ್ತಿದ್ದರು, ಗಂಡಸರೂ ಹೆಂಗಸರೂ ಎಲ್ಲರೂ ಒಟ್ಟಿಗೆ ಕುಳಿತು ಆತನ ಬಾಯಿಂದ ಪ್ರಹ್ಲಾದಚರಿತ್ರ ಧ್ರುವೋಪಾಖ್ಯಾನ ಅಥವಾ ರಾಮಾಯಣ ಮಹಾಭಾರತಾದಿ ಗ್ರಂಥಗಳಲ್ಲಿರುವ ಮತ್ತಾವುದಾದರೊಂದು ಉಪಾಖ್ಯಾನವನ್ನು ಬಹುಭಕ್ತಿಯಿಂದ ಕೇಳುತ್ತಿದ್ದರು

ರಾಮಾಯಣ ಮಹಾಭಾರತಾದಿಗಳಲ್ಲದೆ ಕಾಮಾರಪುಕುರ ಮತ್ತು ಅದರ ಸುತ್ತುಮುತ್ತು ಇರುವ ದೇವದೇವಿಯರ ಪ್ರಖ್ಯಾತ ಕಥೆಗಳನ್ನು ಗ್ರಾಮದ ಕವಿಗಳು ಸರಳವಾದ ಪದ್ಯರೂಪವಾಗಿ ಬರೆದಿದ್ದಾರೆ ಈರೀತಿ

ಯಾಗಿ ತಾರಕೇಶ್ವರ ಮಹಾದೇವನು ಪ್ರತ್ಯಕ್ಷವಾದ ಕಥೆ, ಮಹಾಮಾಯೆಯ ನಾಟ್ಯ, ವನವಿಷ್ಣುಪುರದ ಮದನಮೋಹನ ದೇವರ ಉಪಾಖ್ಯಾನ ಮೊದಲಾದ ಅನೇಕ ದೇವದೇವಿಯರ ಅಲೌಕಿಕ ಚರಿತ್ರೆ ಮತ್ತು ಅವರು ಸಾಧುಗಳಾದ ಭಕ್ತರಿಗೆ ಪ್ರತ್ಯಕ್ಷವಾದ ವೃತ್ತಾಂತ ಮೊದಲಾದವುಗಳು ಗದಾಧರನ ಕಿವಿಗೆ ಆಗಾಗ ಬೀಳುತ್ತಿದ್ದವು ಬಾಲಕನಿಗೆ ವಿಶೇಷ ಜ್ಞಾಪಕಶಕ್ತಿ ಇದ್ದುದರಿಂದ ಅವುಗಳನ್ನೆಲ್ಲ ಕೇಳಿ ಜ್ಞಾಪಕದಲ್ಲಿಡುತ್ತಿದ್ದನು, ಮತ್ತು ಇಂತಹ ಉಪಾಖ್ಯಾನಗಳ ಮುದ್ರಿತ ಅಥವಾ ಹಸ್ತಲಿಖಿತ ಗ್ರಂಥಗಳು ದೊರೆತಾಗ ಸ್ವಹಸ್ತದಿಂದ ಅವುಗಳನ್ನು ಬರೆದಿಟ್ಟುಕೊಳ್ಳುತ್ತಲೂ ಇದ್ದನು ಗದಾಧರನ ಸ್ವಹಸ್ತಲಿಖಿತ ರಾಮಕೃಷ್ಣಾಯನ ಪುಸ್ತಕ, ಯೋಗಾದ್ಯಾಗೀತ, ಸುಬಾಹುಪದ್ಯ ಮೊದಲಾದುವುಗಳನ್ನು ನಾವು ಕಾಮಾರಪುಕುರದ ಮನೆಯಲ್ಲಿ ಹುಡುಕುತ್ತಿದ್ದಾಗ ಕಂಡು ಈ ವಿಷಯವನ್ನು ತಿಳಿದುಕೊಂಡೆವು. ಈ ಉಪಾಖ್ಯಾನಗಳನ್ನೆಲ್ಲ ಬಾಲಕನು ಆ ಊರಿನ ಸ್ತ್ರೀಪುರುಷರೆಲ್ಲರ ಎದುರಿಗೂ ಆಕಾಲದಲ್ಲಿ ಅನೇಕಬಾರಿ ಓದುತ್ತಿದ್ದನೆಂಬುದರಲ್ಲಿ ಸಂಶಯವಿಲ್ಲ

ಗಣಿತಶಾಸ್ತ್ರದಲ್ಲಿ ಬಾಲಕನಿಗಿದ್ದ ಉದಾಸೀನತೆಯ ವಿಷಯವನ್ನು ನಾವು ಹಿಂದೆಯೇ ತಿಳಿಸಿದ್ದೇವಷ್ಟೆ ಆದರೆ ಪಾಠಶಾಲೆಗೆ ಹೋಗಿ ಆತನು ಈ ವಿಷಯದಲ್ಲಿಯೂ ಸ್ವಲ್ಪಮಟ್ಟಿಗೆ ಅಭ್ಯಾಸಮಾಡಿದ್ದನು ಗಣಿತದ ಒಂದನೇ ಪುಸ್ತಕದಲ್ಲಿ ಭೂಮಿಯ ಮತ್ತು ಧಾನ್ಯದ ಅಳತೆಯವರೆಗೂ ಕೂಡುವುದನ್ನು ಮೊದಲುಗೊಂಡು ಸಾಮಾನ್ಯವಾದ ಗುಣಾಕಾರ ಭಾಗಾಹಾರದವರೆಗೂ ಈ ವಿಷಯದಲ್ಲಿ ಶಿಕ್ಷಾಲಾಭವಾಗಿತ್ತು ಆದರೆ ಹತ್ತುವರ್ಷ ವಯಸ್ಸಾದಾಗ ಉಪನೀತನಾಗಿ ಧ್ಯಾನಾಸಕ್ತತೆಯಿಂದ ಯಾವಾಗ ಆತನಿಗೆ ಆಗಾಗ ಹಿಂದೆ ಹೇಳಿದಂತೆ ಸಮಾಧಿಸ್ಥಿತಿಯುಂಟಾಗುವುದಕ್ಕೆ ಮೊದಲಾಯಿತೋ ಆಗ ರಾಮಕುಮಾರನೇ ಮೊದಲಾದ ಮನೆಯವರೆಲ್ಲರೂ ಆತನಿಗೆ ವಾಯುರೋಗ ಬಂದಿದೆಯೆಂದು ಭಾವಿಸಿ ಮನಸ್ಸಿಗೆ ಒಂದಾಗ ಪಾಠಶಾಲೆಗೆ ಹೋಗುವಂತೆಯೂ ತನಗೆ ಬೇಕಾದುದನ್ನು ಕಲಿಯುವಂತೆಯೂ ಆತನಿಗೆ ಸ್ವಾತಂತ್ರ್ಯವನ್ನು ಕೊಟ್ಟರು ಹೀಗಿದ್ದುದರಿಂದ ಆತನು ಯಾವುದನ್ನೂ ಕಲಿಯದೇ ಇದ್ದುದನ್ನು ತಿಳಿದುಕೊಂಡರೂ ಉಪಾಧ್ಯಾಯನು ಅದಕ್ಕಾಗಿ ಆತನನ್ನು ಶಿಕ್ಷಿಸುತ್ತಿರಲಿಲ್ಲ ಆದುದರಿಂದ ಗದಾಧರನು ಪಾಠಶಾಲೆಯಲ್ಲಿ ಕಲಿಯುವುದು ಆಗಿನಿಂದ ತೃಪ್ತಿಕರವಾಗಿ ನಡೆಯಿತೆಂದು ಹೇಳಲಾಗುವುದಿಲ್ಲ

*ರಾಮೇಶ್ವರ ಸರ್ವಮಂಗಳೆಯರ ವಿವಾಹ.*

ಹೀಗೆ ಎರಡು ವರ್ಷಗಳಕಾಲ ಕಳೆಯಿತು ಗದಾಧರನಿಗೆ ಹನ್ನೆರಡು ವರ್ಷ ವಯಸ್ಸಾಯಿತು. ಆತನ ಮಧ್ಯಮ ಅಣ್ಣನಾದ ರಾಮೇಶ್ವರನಿಗೆ ಇಪ್ಪತ್ತೆರಡುವರ್ಷ ವಯಸ್ಸಾಗಿತ್ತು, ತಂಗಿಯಾದ ಸರ್ವಮಂಗಳೆಗೆ ಎಂಟುವರ್ಷ ತುಂಬಿ ಒಂಭತ್ತನೆಯ ವರ್ಷ ನಡೆಯುತ್ತಿತ್ತು ರಾಮೇಶ್ವರನಿಗೆ ವಿವಾಹಕ್ಕೆ ತಕ್ಕ ವಯಸ್ಸು ಬಂದದ್ದನ್ನು ನೋಡಿ ರಾಮಕುಮಾರನು ಕಾಮಾರಪುಕುರಕ್ಕೆ ಸಮೀಪದಲ್ಲಿರುವ ಗೌರಹಾಟಿ ಎಂಬ ಗ್ರಾಮದ ರಾಮಸದಯ ವಂಧ್ಯೋಪಾಧ್ಯಾಯನ ತಂಗಿಯನ್ನು ಆತನಿಗೆ ಮದುವೆಮಾಡಬೇಕೆಂದೂ ರಾಮಸದಯನಿಗೆ ತನ್ನ ತಂಗಿಯಾದ ಸರ್ವಮಂಗಳೆಯನ್ನು ಮದುವೆಮಾಡಿ ಕೊಡಬೇಕೆಂದೂ ನಿಶ್ಚಯಿಸಿದನು. ಆದುದರಿಂದ ರಾಮೇಶ್ವರನಿಗಾಗಿ ಕನ್ಯಾಶುಲ್ಕವನ್ನು ಕೊಡುವ ತಂಟೆ ತಪ್ಪಿತು ರಾಮಕುಮಾರನ ಸಾಂಸಾರಿಕ ಜೀವನದಲ್ಲಿ ಮತ್ತೊಂದು ವಿಶೇಷ ಸಂಗತಿ ನಡೆಯಿತು. ಯೌವನಕಾಲವು ಮುಗಿಯುತ್ತ ಬಂದರೂ ಆತನ ಹೆಂಡತಿಯು ಬಸುರಾಗದಿದ್ದುದರಿಂದ ಎಲ್ಲರೂ ಆಕೆಯನ್ನು ಬಹುಕಾಲದಿಂದಲೂ ಬಂಜೆಯೆಂದೆಂದುಕೊಂಡಿದ್ದರು ಆಕೆಯು ಗರ್ಭಿಣಿಯಾದುದನ್ನು ನೋಡಿ ಮನೆಯವರಿಗೆ ಆನಂದವೂ ಭಯವೂ ಉಂಟಾದುವು, ಏಕೆಂದರೆ ತನ್ನ ಹೆಂಡತಿಯು ಬಸುರಾದರೆ ಸಾಯುವಳೆಂದು ರಾಮಕುಮಾರನು ಅನೇಕಕಾಲ ಹಿಂದೆಯೇ ಹೇಳಿದ್ದುದನ್ನು ಅನೇಕರು ಕೇಳಿದ್ದರು

*ಗರ್ಭಿಣಿಯಾದಾಗ ರಾಮಕುಮಾರನ ಹೆಂಡತಿಯ ಸ್ವಭಾವದ ಪರಿವರ್ತನ*

ಆಕೆಯು ಗರ್ಭಿಣಿಯಾದಂದಿನಿಂದ ರಾಮಕುಮಾರನ ಅದೃಷ್ಟವು ಬಹುಮಟ್ಟಿಗೆ ಬದಲಾಯಿತು ಆತನು ಇಷ್ಟು ದಿನಗಳೂ ಅನೇಕ ರೀತಿಯಾಗಿ ಹಣವನ್ನು ಸಂಪಾದಿಸುತ್ತಿದ್ದನು, ಈಗ ಆರೀತಿಮಾಡಿ ಹಣ ಸಂಪಾದಿಸುವುದು ಕಷ್ಟವಾಯಿತು. ಅಂದಿನಿಂದ ಆತನ ದೇಹಸ್ವಾಸ್ಥ್ಯವೂ ಹೋಗಿ ಕೆಲಸಕಾರ್ಯಗಳನ್ನು ಹಿಂದಿನಂತೆ ಮಾಡುವುದು ಅಸಾಧ್ಯವಾಯಿತು ಆತನ ಹೆಂಡತಿಯ ನಡವಳಿಕೆಯೂ ಬದಲಾವಣೆಯನ್ನು ಹೊಂದಿತು ಪೂಜ್ಯನಾದ ಆತನ ತಂದೆಯ ಕಾಲದಿಂದಲೂ ಇದೊಂದು ಪದ್ಧತಿಯು ಬಿದ್ದಿತ್ತು, ಏನೆಂದರೆ— ಉಪನಯನವಿಲ್ಲದ ಬಾಲಕ ಅಥವಾ ಕಾಯಿಲೆಯಾಗಿದ್ದವರು ಹೊರತು ಮತ್ತಾರೂ ಯಾವಾಗಲೂ ರಘುವೀರನ ಪೂಜೆಯಾದ ಹೊರತು ನೀರನ್ನು ಕುಡಿಯುತ್ತಿರಲಿಲ್ಲ. ಆತನ ಹೆಂಡತಿಯು ಈಗ ಆ ನಿಯಮವನ್ನು ಭಂಗ

ಮಾಡಲಾರಂಭಿಸಿದಳು, ಮತ್ತು ಅಮಂಗಳವಾಗಬಹುದೆಂದು ಮನೆಯಲ್ಲಿದ್ದವರು ಆಕೆಗೆ ಬುದ್ಧಿ ಹೇಳುವುದಕ್ಕೆ ಹೋದರೆ, ಆಕೆಯು ಅವರ ಮಾತನ್ನು ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ ಅಲ್ಪವಿಷಯಗಳನ್ನು ನೆಪಮಾಡಿಕೊಂಡು ಮನೆಯವರೊಂದಿಗೆಲ್ಲ ವ್ಯಾಜ್ಯಮಾಡುತ್ತಿದ್ದಳು ಮತ್ತು ಎಲ್ಲರ ಮನಸ್ಸನ್ನೂ ಕೆಡಿಸುತ್ತಿದ್ದಳು ಅತ್ತೆಯಾದ ಚಂದ್ರಾದೇವಿ ಗಂಡ ರಾಮಕುಮಾರ ಇವರಲ್ಲಿಯೂ ಕೂಡ ಆಕೆಯು ಅರೀತಿ ವಿಪರೀತಾಚಾರಣೆಯನ್ನು ನಡೆಸುತ್ತಿದ್ದಳು. ಗರ್ಭಿಣಿಯಾದಾಗ ಸ್ತ್ರೀಯರ ಸ್ವಭಾವವು ಬದಲಾಗುವುದೆಂದು ಭಾವಿಸಿ ಆಕೆಯ ನಡವಳಿಕೆಗೆ ವಿರೋಧವಾಗಿ ಯಾವ ಮಾತನ್ನೂ ಆಡದೇ ಇದ್ದರೂ ಕಾಮಾರಪುಕುರದ ಆ ಧರ್ಮದ ಸಂಸಾರದಲ್ಲಿ ಆಗ ಈರೀತಿಯಾಗಿ ಶಾಂತಿಯು ಹೋಗಿ ಅಶಾಂತಿಗ ಆರಂಭವಾಯಿತು

**ರಾಮಕುಮಾರನ ಸಾಂಸಾರಿಕಸ್ಥಿತಿಯ ಪರಿವರ್ತನ**

ಇದೂ ಅಲ್ಲದೆ ರಾಮಕುಮಾರನ ತಮ್ಮನಾದ ರಾಮೇಶ್ವರನು ವಿದ್ಯಾಭ್ಯಾಸವನ್ನು ಮುಗಿಸಿದ್ದರೂ ವಿಶೇಷ ಸಂಪಾದನೆ ಮಾಡಲು ಶಕ್ತನಾಗಿರಲಿಲ್ಲ ಆದುದರಿಂದ ಪರಿವಾರವರ್ಗದ ಸಂಖ್ಯೆ ಹೆಚ್ಚಿದಂತೆ ಆದಾಯವು ಕಡಿಮೆಯಾಗುತ್ತಾ ಬಂದದ್ದರಿಂದ ಸಂಸಾರದಲ್ಲಿ ಮೊದಲಿನಂತೆ ಉಪಪತ್ತಿ ಇಲ್ಲದಂತಾಯಿತು ಇದರಿಂದ ರಾಮಕುಮಾರನು ಚಿಂತೆಗೀಡಾಗಿ ಎಷ್ಟೆಷ್ಟು ಉಪಾಯಗಳನ್ನು ಆಲೋಚಿಸಿದರೂ ಏನುಮಾಡುವುದಕ್ಕೂ ಆಗಲಿಲ್ಲ. ಯಾರೋ ಅದಕ್ಕೆಲ್ಲಕ್ಕೂ ಅಡ್ಡಿಯಾಗಿ ನಿಂತು ಎಲ್ಲ ಪ್ರಯತ್ನವನ್ನೂ ನಿಷ್ಫಲಮಾಡುವಂತೆ ಕಂಡುಬಂತು ಹೀಗೆ ಚಿಂತೆಯಮೇಲೆ ಚಿಂತೆಯುಂಟಾಗಿ ರಾಮಕುಮಾರನ ಜೀವನವು ನಿರ್ಭರವಾಯಿತು ದಿನ, ಪಕ್ಷ, ಮಾಸಗಳು ಕಳೆದು ಕೊನೆಗೆ ತನ್ನ ಪತ್ನಿಯ ಪ್ರಸವಕಾಲವು ಸಮೀಪಿಸಿದುದನ್ನು ಕಂಡು ಆತನು ತನ್ನ ಹಿಂದಿನ ದರ್ಶನವನ್ನು ಸ್ಮರಿಸಿ ವಿಶೇಷ ವಿಷಣ್ಣನಾದನು

**ರಾಮಕುಮಾರನ ಹೆಂಡತಿಯು ಮಗುವನ್ನು ಹೆತ್ತು ಸ್ವರ್ಗಸ್ಥಳಾದುದು**

ಕೊನೆಗೆ ಪ್ರಸವಕಾಲವು ಬಂತು ರಾಮಕುಮಾರನ ಹೆಂಡತಿಯು ಒಂದು ಪರಮ ಸುಂದರವಾದ ಗಂಡುಮಗುವನ್ನು ಹೆತ್ತು ಅದರ ಮುಖವನ್ನು ನೋಡುತ್ತ ನೋಡುತ್ತ ಸೂತಿಕಾಗೃಹದಲ್ಲಿಯೇ ಸ್ವರ್ಗಾರೋಹಣ ಮಾಡಿದಳು ರಾಮಕುಮಾರನ ದರಿದ್ರಸಂಸಾರದಲ್ಲ ಈ ಘಟನೆಯಿಂದ ಅಂತ್ಯತ ದುಃಖದ ಪರದೆಯು ಪುನಃ ಬಿದ್ದಿತು

ಶ್ರೀ

# ಶ್ರೀ ರಾಮಕೃಷ್ಣ ಲೀಲಾಪ್ರಸಂಗ

## ಎಂಟನೆಯ ಅಧ್ಯಾಯ

### ಯೌವನದ ಆರಂಭ

ರಾಮಕುಮಾರನು ಹೆಂಡತಿಯು ಸ್ವರ್ಗಸ್ಥಳಾದ ಮೇಲೆಯೂ ರಾಮ
ಕಲ್ಕತ್ತೆಯಲ್ಲಿ ಮಠ ಕುಮಾರನ ದುಃಖಪೂರ್ಣವಾದ ದುರ್ದಿನವು ಕೊನೆಗಾಣ
ವನ್ನು ಹಾಕಿದ್ದು. ಲಿಲ್ಲ ದಾನ ದಕ್ಷಿಣೆ ಮುಂತಾದವುಗಳ ವರಮಾನವು ಕಡಮೆಯಾಗಿ ದ್ರವ್ಯಾಭಾವವಾದುದರಿಂದ ಆತನ ಸಾಂಸಾರಿಕ ಸ್ಥಿತಿಯು ದಿನ ದಿನಕ್ಕೂ ಕೀಳಾಗುತ್ತಾ ಬಂತು ಲಕ್ಷ್ಮೀಜಲದ ಭೂಮಿಯಲ್ಲೇನೋ ಗೊತ್ತಾದಷ್ಟು ಧಾನ್ಯವು ಈಗಲೂ ಉತ್ಪತ್ತಿಯಾಗುತ್ತಿತ್ತು, ಆದರೆ ಬಟ್ಟೆ ಮುಂತಾಗಿ ದಿನಚರಿ ಜೀವನಕ್ಕೆ ಅವಶ್ಯವಾದ ಪದಾರ್ಥಗಳ ಅಭಾವವು ದಿನ ದಿನಕ್ಕೂ ಹೆಚ್ಚುತ್ತಾ ಬಂತು ಇದರ ಮೇಲೆ ಮುದುಕಿಯಾದ ತಾಯಿಗಾಗಿಯೂ ತಾಯಿಯಿಲ್ಲದ ಮಗುವಾದ ಅಕ್ಷಯನಿಗಾಗಿಯೂ ಈಗ ಪ್ರತಿನಿತ್ಯವೂ ಹಾಲು ಅವಶ್ಯವಾಗಿತ್ತು. ಆದಕಾರಣ ಸಾಲಮಾಡಿ ಆ ಪದಾರ್ಥಗಳನ್ನು ಕೊಂಡುಕೊಳ್ಳಬೇಕಾಯಿತು. ಸಾಲವು ದಿನದಿನಕ್ಕೂ ಬೆಳೆಯುತ್ತಾ ಹೋಯಿತೇ ಹೊರತು ಕಡಮೆಯಾಗಲಿಲ್ಲ ಎಷ್ಟೆಷ್ಟು ಯೋಚನೆ ಮಾಡಿದರೂ ಏನೇನು ಪ್ರಯತ್ನ ಮಾಡಿದರೂ ರಾಮಕುಮಾರನಿಂದ ಸಾಲ ಬೆಳೆಯುವುದನ್ನು ತಡೆಯುವುದಕ್ಕಾಗಲಿಲ್ಲ ಸ್ನೇಹಿತರು ಹೇಳಿದ್ದರಮೇಲೆ ಬೇರೆ ಸ್ಥಳಕ್ಕೆ ಹೋದರೆ ಹೆಚ್ಚು ಸಂಪಾದನೆಗೆ ಅವಕಾಶವಾಗಬಹುದೆಂದು ತಿಳಿದುಕೊಂಡು ಊರನ್ನು ಬಿಡಬೇಕೆಂದು ಪ್ರಯತ್ನ ಮಾಡಿದನು. ವ್ಯಥೆಯಿಂದ ಕೂಡಿದ ಆತನ ಮನಸ್ಸಿಗೂ ಹಾಗೆ ಮಾಡುವುದು ಇಷ್ಟಕರವಾಗಿತ್ತು. ಸುಮಾರು ಮುವ್ವತ್ತು ವರ್ಷಗಳ ಕಾಲ ಯಾರ ಜೊತೆಗೆ ಸಂಸಾರ ಮಾಡಿದ್ದನೋ ಆ ಪತ್ನಿಯ ಜ್ಞಾಪಕವು

ಮನೆಯಲ್ಲಿ ಎತ್ತ ಕಡೆ ನೋಡಿದರೂ ಉಂಟಾಗುತ್ತಿತ್ತು, ಆ ಮನೆಯಿಂದ ಎಲ್ಲಿಗಾದರೂ ದೂರವಾದ ಸ್ಥಳಕ್ಕೆ ಹೋಗದಿದ್ದರೆ ಮನಸ್ಸಿಗೆ ಶಾಂತಿಯುಂಟಾಗುವ ಸಂಭವವಿರಲಿಲ್ಲ. ಆದಕಾರಣ ಕಲ್ಕತ್ತೆಗೆ ಹೋದರೆ ಒಳ್ಳೇದೆ, ಬರ್ದ್ವಾನಿಗೆ ಹೋದರೆ ಒಳ್ಳೇದೆ, ಎಲ್ಲಿಗೆ ಹೋದರೆ ಹೆಚ್ಚು ಹಣ ಸಂಪಾದನೆಯಾಗುತ್ತದೆ ಎಂಬದಾಗಿ ವಿಚಾರಮಾಡಲಾರಂಭವಾಯಿತು. ಕೊನೆಗೆ ಕಲ್ಕತ್ತೆಗೇ ಹೋಗಬೇಕೆಂದು ನಿಶ್ಚಯವಾಯಿತು. ಏಕೆಂದರೆ ಶಿಹರ್ ಗ್ರಾಮದ ಮಹೇಶಚಂದ್ರ ಚಟ್ಟೋಪಾಧ್ಯಾಯ, ದೇಶರಾದ ರಾಮಧನ ಘೋಷ ಮೊದಲಾದ ಆತನ ಪರಿಚಯಸ್ಥರನೇಕರು ಅಲ್ಲಿಗೆ ಹೋಗಿ ಸಂಪಾದನೆಗೆ ಮಾರ್ಗ ಮಾಡಿಕೊಂಡು ತಮ್ಮ ತಮ್ಮ ಸಂಸಾರಗಳ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಿಕೊಂಡರು ಎಂಬದಾಗಿ ಆತನ ಸ್ನೇಹಿತರು ಹೇಳುವುದಕ್ಕೆ ಮೊದಲುಮಾಡಿದರು. ಅವರೆಲ್ಲರೂ ಆತನಿಗಿಂತಲೂ ವಿದ್ಯೆಯಲ್ಲಿಯೇ ಆಗಲಿ ಬುದ್ಧಿಯಲ್ಲಾಗಲಿ ಚಾರಿತ್ರದಲ್ಲಾಗಲಿ ಬಹುಮಟ್ಟಿಗೆ ಕಡಿಮೆಯಾಗಿದ್ದರೆಂದು ತಿಳಿಸುವುದನ್ನು ಆ ಸ್ನೇಹಿತರು ಮರೆಯಲಿಲ್ಲ. ಆದಕಾರಣ ಪತ್ನೀ ವಿಯೋಗವಾದ ಕೆಲವು ದಿನಗಳಲ್ಲಿಯೇ ಶ್ರೀಯುತ ರಾಮಕುಮಾರನು ರಾಮೇಶ್ವರನ ಮೇಲೆ ಸಂಸಾರದ ಭಾರವನ್ನೆಲ್ಲಾ ಹಾಕಿ ಕಲ್ಕತ್ತೆಗೆ ಹೊರಟುಹೋದನು. ಅಲ್ಲಿ ಝಾಮಾರ ಪುಕೂರ್ ಎಂಬ ಹಳ್ಳಿಯಲ್ಲಿ ಮಠವನ್ನು ಹಾಕಿ ಹುಡುಗರಿಗೆ ಅಧ್ಯಯನ ಮಾಡಿಸುವುದಕ್ಕೆ ಆರಂಭಿಸಿದನು.

**ರಾಮಕುಮಾರನ ಹೆಂಡತಿಯ ವಿಯೋಗದಿಂದ ಸಂಸಾರದಲ್ಲಾದ ಪರಿವರ್ತನ.**

ರಾಮಕುಮಾರನ ಹೆಂಡತಿಯ ಮರಣದಿಂದ ಕಾಮಾರಪುಕೂರದ ಸಾಂಸಾರಿಕ ಜೀವನದಲ್ಲಿ ವ್ಯತ್ಯಾಸಗಳುಂಟಾದವು. ಶ್ರೀಮತಿ ಚಂದ್ರಾದೇವಿಯು ಮನೆಯ ಕೆಲಸ ಕಾರ್ಯಗಳನ್ನೆಲ್ಲಾ ಮಾಡುವ ಭಾರವನ್ನು ಹೊತ್ತುಕೊಳ್ಳಬೇಕಾಯಿತು. ರಾಮಕುಮಾರನ ಮಗ ಅಕ್ಷಯನ ಲಾಲನಪಾಲನೆಯ ಭಾರವೂ ಆಕೆಯ ಕುತ್ತಿಗೆಗೇ ಬಿತ್ತು. ರಾಮೇಶ್ವರನ ಹೆಂಡತಿಯೇ ಈ ಕೆಲಸಗಳಲ್ಲೆಲ್ಲಾ ಆಕಗೆ ತನ್ನ ಕೈಲಾದಷ್ಟು ಸಹಾಯ ಮಾಡುತ್ತಿದ್ದಳು, ಆದರೆ ಆಕೆಯು ಇನ್ನೂ ಬಹಳ ಚಿಕ್ಕ ಹುಡುಗಿಯಾಗಿದ್ದುದರಿಂದ ಆಕೆಯಿಂದ ವಿಶೇಷ ಸಹಾಯವಾಗುವ ಸಂಭವವಿರಲಿಲ್ಲ. ಆದಕಾರಣ ರಘುವೀರನ ಪೂಜೆ, ಅಕ್ಷಯನ ಲಾಲನೆಪಾಲನೆ ಅಡಿಗೆ ಮೊದಲಾದ ಮನೆಯ ಕೆಲಸಗಳು—ಇವೆಲ್ಲವನ್ನೂ ಚಂದ್ರಾದೇವಿಯೇ ಮಾಡಬೇಕಾಗಿ ಬಂತು. ಆಕೆಯು ದಿನವೆಲ್ಲ ಯಾವುದೋ ಒಂದು ಕೆಲಸ

ಮಾಡುತ್ತಲೇ ಇರಬೇಕಾಯಿತು, ಕ್ಷಣವಾದರೂ ವಿರಾಮಕ್ಕೆ ಅವಕಾಶ ವಿರಲಿಲ್ಲ ಐವತ್ತೆಂಟುವರ್ಷ ವಯಸ್ಸಾದಾಗ ಸಂಸಾರದ ಸಮಸ್ತ ಭಾರವನ್ನೂ ಹೀಗೆ ವಹಿಸುವುದು ಸುಲಭಸಾಧ್ಯವಲ್ಲದೇ ಇದ್ದರೂ ರಘುವೀರನ ಇಚ್ಛೆಯೇ ಅರೀತಿಯಾದುದು ಎಂದುಕೊಂಡು ಚಂದ್ರಾದೇವಿಯೂ ಸ್ವಲ್ಪವೂ ಗೊಣಗದೆ ಆ ಭಾರವನ್ನೆಲ್ಲ ಹೊತ್ತುಕೊಂಡಳು.

ರಾಮೇಶ್ವರನ ವಿಷಯ

ಇತ್ತಕಡೆ ಸಂಸಾರ ಆಯವ್ಯಯದ ಭಾರವೆಲ್ಲವೂ ರಾಮೇಶ್ವರನ ಮೇಲೆ ಬಿದ್ದಿದ್ದರಿಂದ ಆತನು ಯಾವ ರೀತಿಯಾಗಿ ಸಂಪಾದನ ಮಾಡಿ ಪರಿವಾರದವರನ್ನು ಸುಖಪಡಿಸಬಹುದೆಂಬ ವಿಷಯವಾದ ಚಿಂತೆಯಲ್ಲಿ ಮಗ್ನನಾದನು. ಆತನು ವಿದ್ಯಾವಂತನಾಗಿದ್ದನಾದರೂ ಯಾವಾಗಲೇ ಆಗಲಿ ವಿಶೇಷ ಸಂಪಾದನೆ ಮಾಡಿದಂತೆ ತಿಳಿದು ಬರುವುದಿಲ್ಲ. ಇದೂ ಅಲ್ಲದೆ ಪರಿವ್ರಾಜಕರಾದ ಸಾಧುಗಳು ಸಿಕ್ಕರೆ ಅವರ ಸಹವಾಸದಲ್ಲಿ ಬಹಳ ಹೊತ್ತನ್ನು ಕಳೆಯುತ್ತಿದ್ದನು, ಅವರಿಗೆ ಏನಾದರೂ ಬೇಕಾಗಿದೆ ಎಂದು ತಿಳಿದುಬಂದರ ತನ್ನ ಯೋಗ್ಯತೆಗೆ ಮೀರಿ ಹಣವನ್ನು ಖರ್ಚುಮಾಡಿ ಅವರಿಗೆ ಬೇಕಾದದ್ದನ್ನು ಒದಗಿಸಲು ಹಿಂಜರಿಯುತ್ತಿರಲಿಲ್ಲ ಹೀಗಿದ್ದುದರಿಂದ ಒಂದುವೇಳೆ ಸಂಪಾದನೆಯು ಹೆಚ್ಚಾಗಿದ್ದರೂ ಅವನಿಂದ ಸಂಸಾರದ ಋಣವು ತೀರುವ ಅಥವಾ ಕಡಮೆಯಾಗುವ ಸಂಭವವಿರಲಿಲ್ಲ. ಆತನು ಸಂಸಾರಿಯಾಗಿದ್ದರೂ ಹಣವನ್ನು ಕೂಡಿಡುವವನಾಗಿರಲಿಲ್ಲ, ಆಗಾಗ ಸಂಪಾದನೆಗೆ ಮೀರಿ ಖರ್ಚುಮಾಡಿ "ರಘುವೀರನು ಹೇಗೋ ನಡೆಸುತ್ತಾನೆ" ಎಂದುಕೊಂಡು ದಿನಗಳನ್ನು ಕಳೆಯುತ್ತಿದ್ದನು.

ಗದಾಧರನ ವಿಷಯವಾಗಿ ರಾಮೇಶ್ವರನ ಚಿಂತೆ

ರಾಮೇಶ್ವರನಿಗೆ ಗದಾಧರನಮೇಲೆ ಮನಃಪೂರ್ವಕವಾದ ಪ್ರೀತಿ ಇತ್ತು. ಆದರೂ ಅವನ ಓದುಬರಹಗಳು ಸರಿಯಾಗಿ ನಡೆಯುತ್ತಿವೆಯೋ ಇಲ್ಲವೇ ಎಂಬ ವಿಷಯದ ಕಡೆಗೆ ಅವನು ಯಾವಾಗಲೂ ಗಮನ ಕೊಡುತ್ತಿರಲಿಲ್ಲ ಹೀಗೆ ಮಾಡುವುದು ಆತನ ಸ್ವಭಾವಕ್ಕೆ ವಿರುದ್ಧವಾಗಿತ್ತು, ಅದೂ ಅಲ್ಲದೆ ಆತನು ಹಣ ಸಂಪಾದನೆಗಾಗಿ ಅನೇಕಸ್ಥಳಗಳಿಗೆ ಹೋಗಿ ಬರಬೇಕಾಗಿತ್ತು. ಆದುದರಿಂದ ಆ ವಿಷಯಕ್ಕೆ ಗಮನ ಕೊಡಲು ಆತನಿಗೆ ಮನಸ್ಸು ಇರಲಿಲ್ಲ, ಅವಕಾಶವೂ ಇರಲಿಲ್ಲ. ಇದೂ ಅಲ್ಲದೆ ಅಷ್ಟು ಅಲ್ಪವಯಸ್ಸಿನಲ್ಲಿಯೇ ಬಾಲಕನಿಗಿದ್ದ ಧರ್ಮ ಪ್ರವೃತ್ತಿಯು ಅದ್ಭುತ

ಪರಿಣತಿಯನ್ನು ನೋಡಿ ಗದಾಧರನ ಸ್ವಭಾವವು ಅವನನ್ನು ಸನ್ಮಾರ್ಗದಲ್ಲಿಯೇ ಹೊರತು ದುರ್ಮಾರ್ಗದಲ್ಲಿ ಎಂದಿಗೂ ಹೋಗಗೊಡುವುದಿಲ್ಲವೆಂಬ ದೃಢವಾದ ನಂಬಿಕೆಯಿತ್ತು. ಹಳ್ಳಿಯ ಸ್ತ್ರೀ ಪುರುಷರೆಲ್ಲರಿಗೂ ಅವನ ಮೇಲಿದ್ದ ಗಾಢ ವಿಶ್ವಾಸವನ್ನೂ ಅವರು ಅವನನ್ನು ಪರಮ ಆತ್ಮೀಯನಂತೆ ಪ್ರೀತಿಸುತ್ತಿದ್ದುದನ್ನು ನೋಡಿ ಅವನ ಆ ನಂಬಿಕೆಯು ಇನ್ನೂ ದೃಢವಾಯಿತು ಏಕೆಂದರೆ ವಿಶೇಷ ಯೋಗ್ಯನೂ ಉದಾರ ಚರಿತ್ರನೂ ಅಲ್ಲದವನು ಸಮಸ್ತರ ಚಿತ್ತಾಕರ್ಷಣ ಮಾಡಿ ಅವರ ಪ್ರಶಂಸೆಯನ್ನು ಎಂದಿಗೂ ಪಡೆಯಲಾರನೆಂದು ಆತನು ತಿಳಿದುಕೊಂಡಿದ್ದನು. ಆದಕಾರಣ ಬಾಲಕನ ಭವಿಷ್ಯದ ವಿಚಾರದಲ್ಲಿ ಉಜ್ವಲವಾದ ಕಲ್ಪನೆಯಿಂದ ಆನಂದವನ್ನು ಹೊಂದಿ ನಿಶ್ಚಿಂತನಾಗಿದ್ದನು ಈ ಕಾರಣದಿಂದ ರಾಮಕುಮಾರನು ಕಲ್ಕತ್ತೆಗೆ ಹೋದಾಗ ಗದಾಧರನು ಹದಿಮೂರು ವರ್ಷ ಪ್ರಾಯದವನಾಗಿ ನೋಡಿಕೊಳ್ಳುವವರಿಲ್ಲದವನಾದನು ಅವನ ಉಚ್ಚ ಸ್ವಭಾವವು ಎತ್ತಕಡೆಗೆ ಎಳೆದುಕೊಂಡು ಹೋದರೆ ಅತ್ತಕಡೆಗೆ ನಿರ್ಬಾಧಕವಾಗಿ ಹೋಗಲಾರಂಭಿಸಿದನು.

ಈ ಕಾಲದಲ್ಲಿ ಗದಾಧರನ ಮನಸ್ಸಿನ ಸ್ಥಿತಿ, ಕೆಲಸ ಕಾರ್ಯಗಳು.

ಗದಾಧರನ ಸೂಕ್ಷ್ಮದೃಷ್ಟಿಯು ಆ ಅಲ್ಪವಯಸ್ಸಿನಲ್ಲಿಯೇ ಪ್ರತಿಯೊಬ್ಬ ಮನುಷ್ಯನ ಮತ್ತು ಪ್ರತಿಯೊಂದು ಕಾರ್ಯದ ಉದ್ದೇಶವನ್ನು ಕಂಡು ಹಿಡಿಯುವುದನ್ನು ಕಲಿಸಿತು ಎಂಬಂಶವನ್ನು ನಾವು ಹಿಂದೆಯೇ ತಿಳಿಸಿದ್ದೇವೆ. ಹಣವನ್ನು ಗಳಿಸಲು ಸಹಾಯವಾಗುತ್ತದೆಂಬುದರಿಂದಲೇ ಜನರು ಪಾಠಶಾಲೆಗೆ ಓದುವುದಕ್ಕೆ ಹೋಗುತ್ತಾರೆಂಬುದನ್ನೂ ಪಂಡಿತರು ಮುಂತಾದ ಬಿರುದುಗಳನ್ನು ಸಂಪಾದಿಸುತ್ತಾರೆಂಬುದನ್ನೂ ತಿಳಿದುಕೊಳ್ಳಲು ವಿಳಂಬವಾಗಲಿಲ್ಲ ಅಲ್ಲದೆ ವಿಶೇಷ ಶ್ರಮಪಟ್ಟು ಹಣವನ್ನು ಸಂಪಾದಿಸಿ ಅದರಿಂದ ಸಾಂಸಾರಿಕ ಸುಖಭೋಗಗಳನ್ನನುಭವಿಸುವ ಜನರು ತನ್ನ ತಂದೆಯಂತೆ ಸತ್ಯನಿಷ್ಠರೂ ಸಚ್ಚರಿತ್ರರೂ ಧರ್ಮವನ್ನು ಸಂಪಾದಿಸಬಲ್ಲವರೂ ಆಗಲಾರದೆಂಬದನ್ನು ಅವನು ಪ್ರತಿದಿನವೂ ನೋಡುತ್ತಿದ್ದನು. ಹಳ್ಳಿಯ ಕೆಲವು ಜನರು ಸ್ವಾರ್ಥಸುಖದಿಂದ ಅಂಧರಾಗಿ ಆಸ್ತಿಗಾಗಿ ಜಗಳವಾಡಿ ಒಬ್ಬರಮೇಲೊಬ್ಬರು ಮೊಕದ್ದಮೆಯನ್ನು ತಂದು ಮನೆಯನ್ನೂ ಭೂಮಿಯನ್ನೂ ಹಗ್ಗದಿಂದ ಅಳೆದು "ಈದಿಕ್ಕಿನದು ನಮ್ಮದು, ಆದಿಕ್ಕಿನದು ಅವನದು" ಎಂದು ಒಂದು ದಿವಸ ಗೊತ್ತುಮಾಡಿಕೊಂಡು ಅದನ್ನು ಇನ್ನೂ ಅನುಭವಿಸಿದರೋ ಇಲ್ಲವೊ ಎಂಬುವಷ್ಟರೊಳಗಾಗಿ ಯಮನ ಪಟ್ಟಣಕ್ಕೆ

ಪ್ರಯಾಣ ಹೋಗುತ್ತಿದ್ದರು ಇಂಥ ದೃಷ್ಟಾಂತಗಳು ಆಗಾಗ ಬಾಲಕನ ಕಣ್ಣಿಗೆ ಬೀಳುತ್ತಿದ್ದವು ಅವುಗಳನ್ನು ನೋಡಿ ಹಣವೂ ಭೋಗಾಪೇಕ್ಷೆಯೂ ಅನೇಕ ಅನರ್ಥಗಳಿಗೆ ಕಾರಣವೆಂಬುದು ಅವನ ಮನಸ್ಸಿಗೆ ಹತ್ತಿತು ಆದಕಾರಣ ಅವನು ಹಣ ಸಂಪಾದನೆಯ ವಿದ್ಯೆಯನ್ನು ಕಲಿಯುವುದರಲ್ಲಿ ದಿನ ದಿನಕ್ಕೂ ಹೆಚ್ಚು ಹೆಚ್ಚು ಔದಾಸೀನ್ಯವನ್ನು ತೋರಿಸಿದುದೂ, ತಂದೆಯಂತೆ ಅಲ್ಪಸ್ವಲ್ಪ ಅನ್ನಬಟ್ಟೆಗಳಿಂದ ತೃಪ್ತನಾಗಿ ಈಶ್ವರನ ಪ್ರೀತಿಯನ್ನು ಸಂಪಾದಿಸುವುದೇ ಮನುಷ್ಯ ಜೀವನ ಸಾರೋದ್ದೇಶವೆಂದು ನಿರ್ಧರಿಸಿದುದೂ ವಿಚಿತ್ರವಲ್ಲ. ಗದಾಧರನು ತನ್ನ ಜೊತೆಯ ಹುಡುಗರೊಂದಿಗೆ ಪ್ರತಿದಿನವೂ ಸ್ವಲ್ಪಹೊತ್ತು ಪಾಠಶಾಲೆಗೆ ಹೋಗುತ್ತಿದ್ದರೂ ರಘುವೀರನ ಪೂಜೆಯಲ್ಲಿಯೂ ತಾಯಿಗೆ ಮನೆಗೆಲಸಗಳಲ್ಲಿ ಸಹಾಯಮಾಡಿ ಆಕೆಯ ಕಷ್ಟವನ್ನು ಕಡಮೆ ಮಾಡುವುದರಲ್ಲಿಯೂ ಹೆಚ್ಚು ಕಾಲವನ್ನು ಕಳೆಯುತ್ತಿದ್ದನು ಆ ಕೆಲಸಗಳನ್ನೆಲ್ಲಾ ಮಾಡಿ ಮುಗಿಸುವದಕ್ಕಾಗಿ ಪ್ರತಿದಿನವೂ ಸುಮಾರು ಮೂರು ಪ್ರಹರವಾಗುವವರೆಗೂ ಮನೆಯಲ್ಲಿಯೇ ಇರಬೇಕಾಗುತ್ತಿತ್ತು

**ಗದಾಧರನು ಹಳ್ಳಿಯ ಹೆಂಗಸರಿಗೆ ಪುಸ್ತಕಗಳನ್ನು ಓದುವುದು, ಹಾಡು ಹೇಳುವುದು ಇತ್ಯಾದಿ**

ಗದಾಧರನು ಹೀಗೆ ಮನೆಯಲ್ಲಿ ಹೆಚ್ಚು ಕಾಲವನ್ನು ಕಳೆಯುತ್ತಿದ್ದುದರಿಂದ ಆವೂರಿನ ಹೆಂಗಸರಿಗೆ ಆತನೊಂದಿಗೆ ಸೇರಲು ವಿಶೇಷ ಅವಕಾಶವು ದೊರೆಯುತ್ತಿತ್ತು ಮನೆಗೆಲಸಗಳನ್ನು ಮುಗಿಸಿಕೊಂಡು ಅವರಲ್ಲಿ ಅನೇಕರು ಸಮಯ ದೊರೆತಾಗ ಚಂದ್ರಾದೇವಿಯ ಹತ್ತಿರಕ್ಕೆ ಬರುತ್ತಿದ್ದರು ಬಾಲಕನು ಅಲ್ಲಿದ್ದುದನ್ನು ಕಂಡು ಆಗಾಗ ಹಾಡುಗಳನ್ನು ಹೇಳೆಂದೂ, ಧರ್ಮೋಪಾಖ್ಯಾನಗಳನ್ನು ಓದು ಎಂದೂ ಬಲವಂತ ಪಡಿಸುತ್ತಿದ್ದರು ಬಾಲಕನೂ ಅವರ ಇಷ್ಟದಂತೆ ಮಾಡಲು ಪ್ರಯತ್ನಿಸುತ್ತಿದ್ದನು ಚಂದ್ರಾದೇವಿಗೆ ಮನೆಗೆಲಸಗಳಲ್ಲಿ ಸಹಾಯ ಮಾಡಬೇಕಾಗಿ ಬಂದು ಅವನಿಗೆ ಅವಕಾಶವಿಲ್ಲದೆ ಹೋಗುವ ಸಂದರ್ಭ ಬಂದಾಗ ಅಲ್ಲಿಗೆ ಬಂದ ಹೆಂಗಸರೆಲ್ಲರೂ ಸೇರಿ ಕೆಲಸವನ್ನು ಮುಗಿಸಿ ಬಾಲಕನಿಂದ ಕೀರ್ತನೆಗಳನ್ನೂ ಪುರಾಣಕಥೆಗಳನ್ನೂ ಹೇಳಿಸುತ್ತಿದ್ದರು. ಹೀಗೆ ಅವರ ಎದುರಿಗೆ ಹಾಡುಗಳನ್ನು ಹೇಳುವುದೂ ಪುರಾಣಗಳನ್ನು ಓದುವುದೂ ಗದಾಧರನ ನಿತ್ಯದ ಕೆಲಸಗಳಲ್ಲಿ ಒಂದಾಗಿತ್ತು ಹೆಂಗಸರಿಗೆ ಇದರಿಂದ ಎಷ್ಟು ಆನಂದವುಂಟಾಗುತ್ತಿತ್ತೆಂದರೆ ಅದನ್ನು ಹೆಚ್ಚು ಕಾಲ ಕೇಳಬೇಕೆಂಬ

ಆಶೆಯಿಂದ ಮನೆಗೆಲಸಗಳನ್ನು ಬೇಗ ಬೇಗ ಮುಗಿಸಿಕೊಂಡು ಚಂದ್ರಾದೇವಿಯ ಹತ್ತಿರಕ್ಕೆ ಬರಲು ಮೊದಲುಮಾಡಿದರು.

ಗದಾಧರನು ಅವರಿಗೆ ಪುರಾಣಗಳನ್ನು ಮಾತ್ರವೇ ಹೇಳುತ್ತಿರಲಿಲ್ಲ. ಇನ್ನೂ ಅನೇಕ ಬಗೆಯಾಗಿ ಅವರಿಗೆ ಆನಂದವನ್ನುಂಟುಮಾಡುತ್ತಿದ್ದನು. ಆಗ ಆವೂರಿನಲ್ಲಿ ಎರಡುಮೂರು ಜಾತ್ರೆಗಳು ಮೊದಲಾದುವುಗಳು ಇದ್ದವು; ಅನೇಕ ದಾಸರು ಆ ಊರಿಗೆ ಬಂದು ಅನೇಕರ ಮನೆಗಳಲ್ಲಿ ಭಾಗವತ ಪುರಾಣ ಹೇಳುತ್ತಲೂ ಹರಿಕಥೆ ಮಾಡುತ್ತಲೂ ಇದ್ದರು. ಬಾಲ್ಯದಿಂದಲೂ ಕೇಳುತ್ತಿದ್ದರಿಂದಲೂ ಅವನಿಗೆ ಸ್ವಭಾವಸಿದ್ಧವಾದ ಪ್ರತಿಭಾ ಬಲದಿಂದಲೂ ಗದಾಧರನು ಆ ಹಾಡುಗಳು, ಕೀರ್ತನೆಗಳು ಮೊದಲಾದುವನ್ನೆಲ್ಲ ಕಲಿತಿದ್ದನು. ತಮ್ಮ ಮನೆಯಲ್ಲಿ ಸೇರಿದ ಹೆಂಗಸರಿಗೆ ಸಂತೋಷವನ್ನುಂಟುಮಾಡುವುದಕ್ಕಾಗಿ ಒಂದು ದಿವಸ ಜಾತ್ರೆಯ ಹಾಡುಗಳನ್ನೂ ಒಂದು ದಿವಸ ಗೌರಾಂಗ ಭಕ್ತರ ಗೀತಾವಳಿಯನ್ನೂ ಒಂದು ದಿವಸ ಕೀರ್ತನೆಗಳನ್ನೂ ಪ್ರಾರಂಭಮಾಡಿ ಹೇಳುತ್ತಿದ್ದನು. ಜಾತ್ರೆಗಳ ಹಾಡುಗಳನ್ನು ಹೇಳುವಾಗ ಬೇರೆಬೇರೆ ಸ್ವರಗಳಿಂದ ಪ್ರತ್ಯೇಕ ಭೂಮಿಕೆಯ ಮಾತುಗಳನೆಲ್ಲ ಹೇಳಿ ಒಬ್ಬನೇ ಕಥೆಯನ್ನೆಲ್ಲ ಅಭಿನಯಿಸುತ್ತಿದ್ದನು ಅದೂ ಅಲ್ಲದೆ ತನ್ನ ತಾಯಿಗಾಗಲಿ ಅಥವಾ ಅಲ್ಲಿ ನೆರೆದಿದ್ದ ಹೆಂಗಸರಲ್ಲಿ ಯಾರಿಗಾಗಲಿ ಮನಸ್ಸಿಗ ಬೇಸರವಾಗಿದ್ದಂತೆ ತಿಳಿದು ಬಂದ ದಿನ ಯಾತ್ರೆಗಳ ಹಾಸ್ಯರಸಯುಕ್ತವಾದ ಹಾಡುಗಳನ್ನು ಹೇಳಿಯೋ ಅಥವಾ ಎಲ್ಲರಿಗೂ ಗೊತ್ತಿರುವ ಹಳ್ಳಿಯವನೊಬ್ಬನ ವಿಚಿತ್ರ ನಡೆವಳಿಕೆ ಹಾವಭಾವಾದಿಗಳನ್ನು ಅತ್ಯಂತ ಸ್ವಾಭಾವಿಕವಾಗಿ ಅನುಕರಣ ಮಾಡಿಯೋ ಅವರಿಗೆ ಆಶ್ಚರ್ಯವನ್ನುಂಟುಮಾಡಿ ನಗಿಸುತ್ತಿದ್ದನು

**ಹಳ್ಳಿಯ ಹೆಂಗಸರಿಗೆ ಗದಾಧರನಲ್ಲಿದ್ದ ಭಕ್ತಿ ವಿಶ್ವಾಸಗಳು**

ಗದಾಧರನು ಹೀಗೆ ಅವರ ಹೃದಯದಲ್ಲಿ ಕ್ರಮವಾಗಿ ತನ್ನ ಅಪೂರ್ವ ಪ್ರಭಾವವನ್ನು ವಿಸ್ತಾರಮಾಡಿದನು. ಬಾಲಕನ ಜನ್ಮಗ್ರಹಣ ಕಾಲದಲ್ಲಿ ಅವನ ತಾಯಿತಂದೆಗಳಿಗೆ ಬಿದ್ದಿದ್ದ ಸ್ವಪ್ನಗಳು ಅವರಿಗೆ ಕಾಣಿಸಿದ ದಿವ್ಯದರ್ಶನಗಳು ಮೊದಲಾದುವುಗಳ ವಿಷಯವನ್ನು ಅವರು ಅದಕ್ಕ ಮೊದಲೇ ಕೇಳಿದ್ದರು ಅದೂ ಅಲ್ಲದೆ ದೇವದೇವಿಯರ ಭಾವಾವೇಶದಿಂದ ಅವನಿಗೆ ಉಂಟಾಗುತ್ತಿದ್ದ ಅಪೂರ್ವ ಅವಸ್ಥಾಂತರಗಳನ್ನು ತಮ್ಮ ಕಣ್ಣಿಂದಲೇ ನೋಡಿದ್ದರು ಆದಕಾರಣ ಅವನ ಉಜ್ವಲವಾದ

ದೇವಭಕ್ತಿ, ತನ್ಮಯತೆಯಿಂದ ಕೂಡಿದ ಪುರಾಣ ಪಠನ, ಮಧುರ ಸ್ವರಯುಕ್ತವಾದ ಗಾನ, ಸ್ತ್ರೀಯರಲ್ಲಿ ಕಂಡುಬರುವ ಸರಳವೂ ಉದಾರವೂ ಆದ ಅವನ ನಡತೆ— ಇವುಗಳು ಅವರ ಕೋಮಲವಾದ ಹೃದಯಗಳಲ್ಲಿ ಭಕ್ತಿವಿಶ್ವಾಸಗಳನ್ನುಂಟುಮಾಡಿದುದರಲ್ಲಿ ವಿಚಿತ್ರವೇನೂ ಇಲ್ಲ. ಧರ್ಮದಾಸ ಲಾಹಾ ಅವರ ಪುತ್ರಿಯಾದ ಪ್ರಸನ್ನಮಯೀ ಮುಂತಾದ ವಯಸ್ಕರಾದ ಸ್ತ್ರೀಯರು ಬಾಲಕನಲ್ಲಿ ಬಾಲಗೋಪಾಲನ ದಿವ್ಯಪ್ರಕಾಶವಿರುವುದೆಂಬುದನ್ನು ಅನುಭವಮಾಡಿ ಅವನನ್ನು ಮಗನಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದರೆಂದೂ ಚಿಕ್ಕವರಾದವರು ಅವನನ್ನು ಶ್ರೀಕೃಷ್ಣನ ಅಂಶಸಂಭೂತನೆಂದು ಭಾವಿಸಿ ಅವನೊಂದಿಗೆ ಸಖ್ಯಭಾವದಿಂದ ನಡೆದುಕೊಳ್ಳುತ್ತಿದ್ದರೆಂದೂ ತಿಳಿದುಬರುತ್ತದೆ. ಹೆಂಗಸರಲ್ಲಿ ಅನೇಕರು ವೈಷ್ಣವ ವಂಶಗಳಲ್ಲಿ ಹುಟ್ಟಿದವರಾಗಿದ್ದುದರಿಂದಲೂ ಸರಳ ವಿಶ್ವಾಸವೇ ಅವರ ಧರ್ಮಜೀವನದ ಪ್ರಧಾನ ಅಂಗವಾಗಿದ್ದುದರಿಂದಲೂ ಅವರು ಸಕಲಗುಣಸಂಪನ್ನ ಪ್ರಿಯದರ್ಶನನೂ ಆದ ಬಾಲಕನನ್ನು ದೇವತೆಯೆಂದು ನಂಬಿದುದರಲ್ಲಿ ವಿಚಿತ್ರವೇನೂ ಇಲ್ಲ. ಈ ರೀತಿಯಾದ ವಿಶ್ವಾಸವಿದ್ದುದರಿಂದ ಅವರು ಗದಾಧರನೊಂದಿಗೆ ನಿಸ್ಸಂಕೋಚವಾಗಿ ತಮ್ಮ ತಮ್ಮ ಮನಸ್ಸಿನಲ್ಲಿದ್ದ ವಿಷಯಗಳನ್ನು ಹೇಳುತ್ತಿದ್ದರು, ಅನೇಕ ವಿಷಯಗಳಲ್ಲಿ ಅವನ ಪರಾಮರ್ಶದಂತೆ ಆಚರಿಸಲು ಪ್ರಯತ್ನಿಸುತ್ತಿದ್ದರು. ಗದಾಧರನೂ ಅವರೊಂದಿಗೆ ಎಷ್ಟು ಸ್ವಾಭಾವಿಕ ಸೇರುತ್ತಿದ್ದನೆಂದರೆ ಅವರ ಮಧ್ಯೆ ಅವನೂ ಒಬ್ಬ ಹೆಂಗಸನ್ನುವಂತೆ ತೋರುತ್ತಿತ್ತು.

**ಗದಾಧರನು ಹೆಂಗಸಿನಂತೆ ವೇಷವನ್ನು ಧರಿಸಿದುದು**

ಗದಾಧರನು ಆಗಾಗ ಹೆಂಗಸರ ವೇಷಭೂಷಗಳನ್ನು ಧರಿಸಿ ಅವರ ಎದುರಿಗೆ ಹೆಂಗಸರ ಕೆಲವು ವಿಶೇಷ ಭಾವಗಳನ್ನು ಅಭಿನಯಮಾಡಿ ತೋರಿಸುತ್ತಿದ್ದನು. ಅವನು ರಾಧೆಯ ಅಥವಾ ಆಕೆಯ ಮುಖ್ಯಸಖಿಯರ ಕಥೆಯನ್ನು ಹೇಳುವಾಗ ಅವರು ಹೆಂಗಸಿನ ಉಡಿಗೆ ತೊಡಿಗೆಗಳಿಂದ ಅಲಂಕೃತನಾಗುವಂತೆ ಅವನನ್ನು ಬಲವಂತಪಡಿಸುತ್ತಿದ್ದರು. ಬಾಲಕನೂ ಅದಕ್ಕೆ ಸಮ್ಮತಿಸುತ್ತಿದ್ದನು. ಅಂತಹ ಸ್ವಾಭಾವಿಕವಾದ ಹೆಂಗಸಿಗೆ ಒಪ್ಪತಕ್ಕವಾಗಿರುತ್ತಿದ್ದವು. ಅವನನ್ನು ನೋಡಿ ಹೆಂಗಸರು ಹೆಂಗಸಿನಂತೆ ವೇಷ ಹಾಕಿದರೆ ಅವನನ್ನು ಗಂಡುಸೆಂದು ಕಂಡುಹಿಡಿಯುವುದು ಅಸಾಧ್ಯವೆಂದು ಹೇಳುತ್ತಿದ್ದರು. ಇದರಿಂದ ಬಾಲಕನು ಸ್ತ್ರೀಯರ ಪ್ರತಿಯೊಂದು ಕೆಲಸವನ್ನೂ ಎಷ್ಟು ವಿಮರ್ಶಾಪೂರ್ವಕವಾಗಿ ಇದಕ್ಕೆ ಮೊದಲೇ ನೋಡಿದ್ದನೆಂಬುದು ಗೊತ್ತಾಗುತ್ತದೆ. ತಮಾಷೆ ಮಾಡುವುದರಲ್ಲಿ ಇಷ್ಟವುಳ್ಳ ಬಾಲಕನು

ಈ ಸಮಯದಲ್ಲಿ ಆಗಾಗ ಹೆಂಗಸಿನಂತೆ ಉಡಿಗೆ ತೊಡಿಗೆಗಳನ್ನು ಹಾಕಿಕೊಂಡು ಕಂಕುಳಲ್ಲಿ ಕೊಡವನ್ನಿಟ್ಟುಕೊಂಡು ಗಂಡಸರ ಎದುರಿಗೆ ಹಾಲದಾರಪುಷ್ಕರಣಿಗೆ ನೀರು ತರುವುದಕ್ಕೆ ಹೋಗುತ್ತಿದ್ದನು ಯಾರೂ ಅವನ ಈ ವೇಷವನ್ನು ಕಂಡು ಹಿಡಿಯುತ್ತಿರಲಿಲ್ಲ

**ಸೀತಾನಾಥ ಪಾಯಿನ್‌ರವರ ಪರಿವಾರದವರೊಂದಿಗೆ ಗಧಾಧರನಿಗಿದ್ದ ಸ್ನೇಹ**

ಆ ಗ್ರಾಮದಲ್ಲಿ ವಾಸಮಾಡುತ್ತಿದ್ದ ಐಶ್ವರ್ಯವಂತನಾದ ಸೀತಾನಾಥಪಾಯಿನ್ ಅವರ ವಿಷಯವನ್ನು ನಾವು ಹಿಂದೆಯೇ ತಿಳಿಸಿದ್ದೇವೆ ಸೀತಾನಾಥನಿಗೆ ಏಳುಮಂದಿ ಗಂಡುಮಕ್ಕಳೂ ಎಂಟುಮಂದಿ ಹೆಣ್ಣುಮಕ್ಕಳೂ ಇದ್ದರು ಹೆಣ್ಣುಮಕ್ಕಳು ಮದುವೆಯಾದ ಮೇಲೂ ಸೀತಾನಾಥನ ಮನೆಯಲ್ಲಿಯೇ ವಾಸಮಾಡುತ್ತಿದ್ದರು. ಸೀತಾನಾಥನ ಮನೆಯಲ್ಲಿ ಜನಗಳು ವಿಶೇಷವಾಗಿದ್ದುದರಿಂದ ಹತ್ತು ಅರೆಯುವ ಕಲ್ಲಿನ ಮೇಲೆ ಅಡಿಗೆಗ ಬೇಕಾದ ಮಸಾಲೆಯನ್ನು ಅರೆಯುತ್ತಿದ್ದರಂತೆ ಅದೂ ಅಲ್ಲದೆ ಸೀತಾನಾಥನ ದೂರ ಸಂಬಂಧಿಗಳಲ್ಲಿ ಅನೇಕರು ಅವನ ಮನೆಯ ಪಾರ್ಶ್ವದಲ್ಲಿಯೇ ಮನೆ ಕಟ್ಟಿಕೊಂಡು ವಾಸಮಾಡುತ್ತಿದ್ದರು ಆದುದರಿಂದ ಕಾಮಾರ ಪುಕುರದ ಆಭಾಗವು ವಣಿಕ ಪಲ್ಲಿ ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿತ್ತು ಅದು ಕ್ಷುದಿರಾಮನ ಮನೆಗೆ ಹತ್ತಿರವಾಗಿದ್ದುದರಿಂದ ಅಲ್ಲಿಯ ಅನೇಕ ಹೆಂಗಸರು ಅವಕಾಶ ಸಿಕ್ಕಿದಾಗ ಚಂದ್ರಾದೇವಿಯ ಮನೆಗೆ ಹೋಗುತ್ತಿದ್ದರು ಅದರಲ್ಲಿಯೂ ಸೀತಾನಾಥನ ಹೆಂಡತಿ ಮಕ್ಕಳು ವಿಶೇಷವಾಗಿ ಹೋಗಿಬರುತ್ತಿದ್ದರು ಆದಕಾರಣ ಅವರಿಗೆ ಗದಾಧರನೊಂದಿಗೆ ಬಹಳ ಸ್ನೇಹವಿತ್ತು ಅವರು ಬಾಲಕನನ್ನು ಅನೇಕವೇಳೆ ತಮ್ಮ ಮನೆಗೆ ಕರದುಕೊಂಡು ಹೋಗುತ್ತಿದ್ದರು, ಅಲ್ಲದೆ ಹೆಂಗಸಿನ ವೇಷವನ್ನು ಹಾಕಿ ಅಭಿನಯಾದಿಗಳನ್ನು ಮಾಡುವಂತೆ ಬಲವಂತ ಪಡಿಸುತ್ತಿದ್ದರು ತಮ್ಮ ಮನೆಯ ಯಜಮಾನರು ನಿಷೇಧಿಸಿದ್ದುದರಿಂದ ಅವರಲ್ಲಿ ಅನೇಕರು ಮನೆಯನ್ನು ಬಿಟ್ಟು ಹೊರಗ ಹೋಗುವಂತಿರಲಿಲ್ಲ ಆದುದರಿಂದಲೇ ಗದಾಧರನ ಪುರಾಣ ಪಠನ ಸಂಗೀತಾದಿಗಳನ್ನು ಕೇಳುವ ಅದೃಷ್ಟವು ತಮಗೆ ಇಲ್ಲವೆಂದೇ ಅವರು ಬಾಲಕನನ್ನು ಹೀಗೆ ತಮ್ಮ ಮನೆಗೆ ಕರೆಸಿಕೊಳ್ಳುತ್ತಿದ್ದರೆಂದು ತೋರುತ್ತದೆ ಹೀಗೆ ಚಂದ್ರಾದೇವಿಯ ಮನೆಗೆ ಹೋಗದೆ ವಣಿಕಪಲ್ಲಿಯ ಹೆಂಗಸರಲ್ಲಿ ಅನೇಕರೂ ಗದಾಧರನಲ್ಲಿ ಭಕ್ತಿಯುಳ್ಳವರಾಗಿದ್ದರು ಅವನು ಸೀತಾನಾಥನ ಮನೆಗೆ ಬಂದನೆಂಬುದನ್ನು ಕೇಳಿದಕೂಡಲೆ ಅಲ್ಲಿಗೆ ಹೋಗಿ 'ಪುರಾಣ ಕಥೆಯನ್ನು

ಕೇಳಿಯೂ ಅಭಿನಯಾದಿಗಳನ್ನು ನೋಡಿಯೂ ಸಂತೋಷಪಡುತ್ತಿದ್ದರು ಮನೆಯ ಯಜಮಾನನಾದ ಸೀತಾನಾಥನು ಗದಾಧರನನ್ನು ವಿಶೇಷವಾಗಿ ಪ್ರೀತಿಸುತ್ತಿದ್ದನು ; ವಣಿಕಪಲ್ಲಿಯ ಇತರ ಗೃಹಸ್ಥರೂ ಅವನ ಸದ್ಗುಣಗಳನ್ನು ಅರಿತವರಾಗಿದ್ದರು ಆದುದರಿಂದ ತಮ್ಮ ಮನೆಯ ಹೆಂಗಸರು ಅವನ ಹತ್ತಿರ ಹೀಗೆ ಸಂಗೀತಕೀರ್ತನೆ ಮೊದಲಾದವುಗಳನ್ನು ಕೇಳುವುದಕ್ಕಾಗಿ ಹೋಗುತ್ತಾರೆಂದು ತಿಳಿದಿದ್ದರೂ ಅವರು ಅದಕ್ಕೆ ಅಡ್ಡಿಮಾಡುತ್ತಿರಲಿಲ್ಲ

ವಣಿಕಪಲ್ಲಿಯ ದುರ್ಗಾದಾಸ ಪಾಯಿನ್ ಎಂಬ ಒಬ್ಬ ಗೃಹಸ್ಥನು ಮಾತ್ರ ಈ ನಡವಳಿಕೆಯನ್ನು ಒಪ್ಪುತ್ತಿರಲಿಲ್ಲ ತನಗೆ ಗದಾಧರನಲ್ಲಿ ಶ್ರದ್ಧಾಭಕ್ತಿಗಳಿದ್ದರೂ ಅಂತಃಪುರದ ಕಟ್ಟುನಿಟ್ಟಾದ ಪದ್ಧತಿಯನ್ನು ಮಾತ್ರ ಯಾರಿಗೋಸ್ಕರವೇ ಆಗಲಿ ಸಡಿಲಮಾಡಲು ಒಪ್ಪುತ್ತಿರಲಿಲ್ಲ ತನ್ನ ಅಂತಃಪುರದ ವಿಷಯವನ್ನು ಯಾರಿಗೂ ತಿಳಿಯಲು ಸಾಧ್ಯವಿರಲಿಲ್ಲವೆಂದೂ ತನ್ನ ಮನೆಯ ಹೆಂಗಸರನ್ನು ಯಾರೂ ಯಾವಾಗಲೂ ನೋಡಿರಲಿಲ್ಲವೆಂದೂ ಆತನು ಸೀತಾನಾಥನೇ ಮೊದಲಾದ ತನ್ನ ಸಂಬಂಧಿಗಳೆದುರಿಗೆ ಜಂಭ ಕೊಚ್ಚಿಕೊಳ್ಳುತ್ತಿದ್ದನು. ಸೀತಾನಾಥ ಮೊದಲಾದವರು ತನ್ನಂತೆ ಕಟ್ಟುನಿಟ್ಟಾದ ನಿಯಮದಲ್ಲಿ ಪಕ್ಷಪಾತವಿಲ್ಲದವರೆಂದು ಆತನು ಅವರನ್ನು ಹೀನರೆಂದು ಭಾವಿಸಿದ್ದನು

ಒಂದು ದಿನ ದುರ್ಗಾದಾಸನು ತನ್ನ ಬಂಧುವೊಬ್ಬನೊಡನೆ ಹೀಗೆ ಜಂಭ ಕೊಚ್ಚಿಕೊಳ್ಳುತ್ತಿದ್ದನು. ಆ ಸಮಯದಲ್ಲಿ ಗದಾಧರನು ಅಲ್ಲಿಗೆ ಹೋದನು ದುರ್ಗಾದಾಸನ ಮಾತನ್ನು ಕೇಳಿ "ಕಟ್ಟುನಿಟ್ಟಿನಲ್ಲಿಡುವ ಪದ್ಧತಿಯಿಂದ ಹೆಂಗಸರನ್ನು ರಕ್ಷಿಸಿಕೊಳ್ಳುವುದು ಯಾರಿಗೆ ಸಾಧ್ಯ, ಸರಿಯಾದ ಶಿಕ್ಷಣ ದೈವ ಭಕ್ತಿಗಳಿಂದಲೇ ಅವರನ್ನು ಸುಶಿಕ್ಷಿತರನ್ನಾಗಿ ಮಾಡಬೇಕು ಮನಸ್ಸು ಮಾಡಿದರೆ ನಾನು ನಿನ್ನ ಅಂತಃ ಪುರದ ಸ್ತ್ರೀಯರನ್ನೆಲ್ಲಾ ನೋಡಿ ಎಲ್ಲ ವಿಷಯಗಳನ್ನೂ ತಿಳಿದುಕೊಳ್ಳಬಲ್ಲೆ" ಎಂದು ಹೇಳಿದನು ದುರ್ಗಾದಾಸನು ಜಂಭದಿಂದ "ಹೇಗೆ ತಿಳಿದುಕೊಳ್ಳುತ್ತೀಯೋ ತಿಳಿದುಕೋ ನೋಡೋಣ" ಎಂದನು ಗದಾಧರನು "ಒಳ್ಳೇದು, ನೋಡೋಣ" ಎಂದು ಹೇಳಿ ಆ ದಿನ ಹೊರಟುಹೋದನು ಕೆಲವು ದಿನಗಳಾದಮೇಲೆ ಒಂದು ದಿನ ಸಾಯಂಕಾಲದಲ್ಲಿ ಯಾರಿಗೂ ತಿಳಿಸದೆ ಬಾಲಕನು ಒಂದು ದಪ್ಪವಾದ ಮತ್ತು ಮಾಸಿದ ಸೀರೆಯನ್ನುಟ್ಟುಕೊಂಡು, ಬೆಳ್ಳಿಬಳೆ ಮೊದಲಾದುವನ್ನು ಇಟ್ಟುಕೊಂಡು, ಒಬ್ಬ ಒಡ ಸೇಯ್ಗೆ ಹೆಂಗಸಿನಂತೆ

ವೇಷ ಹಾಕಿಕೊಂಡು, ಒಂದು ಕುಕ್ಕೆಯನ್ನೂ ಬಗಲಲ್ಲಿಟ್ಟುಕೊಂಡು, ಮುಖದ ಮೇಲೆ ಮುಸುಕು ಹಾಕಿಕೊಂಡು, ಸಂಜೆಯ ಹೊತ್ತಿನಲ್ಲಿ ಸಂತೆಯ ಕಡೆಯಿಂದ ದುರ್ಗಾದಾಸನ ಮನೆ ಮುಂಭಾಗದಲ್ಲಿ ಬಂದು ನಿಂತನು ದುರ್ಗಾದಾಸನು ಸ್ನೇಹಿತರೊಡನೆ ಹಜಾರದಲ್ಲಿ ಕುಳಿತಿದ್ದನು ಹೆಂಗಸಿನ ವೇಷದಲ್ಲಿದ್ದ ಗದಾಧರನು ಅವನನ್ನು ಕುರಿತು ತಾನು ನೇಯ್ಗೆಯವಳೆಂದೂ, ಗ್ರಾಮಾಂತರದಿಂದ ಸಂತೆಗೆ ದಾರವನ್ನು ಮಾರಲಿಕ್ಕೆ ಬಂದಿದ್ದುದಾಗಿಯೂ, ಜೊತೆಯವರು ಹೊರಟು ಹೋದುದರಿಂದ ಕಷ್ಟಕ್ಕೆ ಸಿಕ್ಕಿರುವುದಾಗಿಯೂ ಹೇಳಿ ಆ ರಾತ್ರಿಯ ಮಟ್ಟಿಗೆ ಅವರ ಮನೆಯಲ್ಲಿಟ್ಟುಕೊಂಡಿರಬೇಕೆಂದು ಪ್ರಾರ್ಥಿಸಿದನು ಅದನ್ನು ಕೇಳಿ ದುರ್ಗಾದಾಸನು ಅವಳು ಯಾವೂರಿನವಳು ಇತ್ಯಾದಿ ಕೆಲವು ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ತಕ್ಕ ಉತ್ತರವನ್ನು ಪಡೆದು "ಒಳ್ಳೇದು, ಒಳಗೆ ಹೋಗಿ ಹೆಂಗಸರಿಂದ ಇಲ್ಲಿರುವುದಕ್ಕೆ ಒಪ್ಪಿಗೆಯನ್ನು ತೆಗೆದುಕೊ" ಎಂದು ಹೇಳಿದನು. ಆಗ ಗದಾಧರನು ಅವನಿಗೆ ಪ್ರಣಾಮಮಾಡಿ ತನ್ನ ಕೃತಜ್ಞತೆಯನ್ನು ಸೂಚಿಸಿ ಒಳಕ್ಕೆ ಹೋದನು ಹೆಂಗಸರಿಗೆ ಹಿಂದಿನ ಹಾಗೆಯೇ ತಾನಾರೆಂಬುದನ್ನು ತಿಳಿಸಿ ಬಗೆಬಗೆಯ ಮಾತುಕಥೆಗಳಿಂದ ಅವರನ್ನು ಮೆಚ್ಚಿಸಿದನು ಆ ವ್ಯಕ್ತಿಯ ಅಲ್ಪ ವಯಸ್ಸನ್ನೂ ಮೃದು ಮಧುರವಾದ ಮಾತುಗಳನ್ನೂ ಕೇಳಿ ದುರ್ಗಾದಾಸನ ಅಂತಃಪುರಸ್ತ್ರೀಯರು ಪ್ರಸನ್ನರಾಗಿ ಅಲ್ಲಿರಬಹುದೆಂದು ಹೇಳಿ ಮಲಗುವುದಕ್ಕೆ ಸ್ಥಳವನ್ನು ತೋರಿಸಿ, ತಿನ್ನುವುದಕ್ಕಾಗಿ ಪುರಿ ಮೊದಲಾದುವನ್ನು ಕೊಟ್ಟರು. ಗದಾಧರನು ಆಗ ಅವರು ಗೊತ್ತುಮಾಡಿದ ಸ್ಥಳದಲ್ಲಿ ಕುಳಿತು, ಅವರು ಕೊಟ್ಟುದ್ದನ್ನು ತಿನ್ನುತ್ತಾ, ಒಳಮನೆಯ ಎಲ್ಲ ಪ್ರದೇಶಗಳನ್ನೂ ಪ್ರತಿಯೊಬ್ಬ ಸ್ತ್ರೀಯನ್ನೂ ಸೂಕ್ಷ್ಮದೃಷ್ಟಿಯಿಂದ ನೋಡುತ್ತಾ ಅವರು ಒಬ್ಬರೊಡನೊಬ್ಬರು ಮಾತಾಡುತ್ತಿದ್ದುದನ್ನು ಆಲಿಸುತ್ತಿದ್ದನು. ಅವರು ಮಾತನಾಡುತ್ತಿದ್ದಾಗ ತಾನೂ ಮಧ್ಯೆ ಒಂದೊಂದು ಸಲ ಮಾತಾಡುವುದನ್ನೂ ಅವರನ್ನು ಕೆಲವು ಪ್ರಶ್ನೆಗಳನ್ನು ಕೇಳುವುದನ್ನೂ ಮರೆಯಲಿಲ್ಲ ಹೀಗೆ ಸುಮಾರು ಒಂದು ಪ್ರಹರ ರಾತ್ರಿ ಕಳೆಯಿತು ಇತ್ತಕಡೆ ರಾತ್ರಿ ಇಷ್ಟು ಹೊತ್ತಾದರೂ ಅವನು ಮನೆಗೆ ಬಾರದ್ದನ್ನು ನೋಡಿ ಚಂದ್ರಾದೇವಿಯು ಅವನನ್ನು ಹುಡುಕಿಕೊಂಡು ಬರುವುದಕ್ಕಾಗಿ ರಾಮೇಶ್ವರನನ್ನು ಕಳುಹಿಸಿದಳು ಅವನು ಬಹುಶಃ ವಣಿಕಪಲ್ಲಿಗೆ ಹೋಗಿ ಅಲ್ಲಿರಬಹುದೆಂದು ಊಹಿಸಿ ಅಲ್ಲಿಗೆ ಹೋಗಿ ಹುಡುಕುವಂತೆ ಹೇಳಿದಳು. ರಾಮೇಶ್ವರನು ಸೀತಾನಾಥನ ಮನೆಗೆ ಹೋಗಿ ವಿಚಾರಿಸಲು ಅಲ್ಲಿಗೆ ಹೋಗಿರಲಿಲ್ಲವೆಂದು

ಗೊತ್ತಾಯಿತು. ಆ ಮೇಲೆ ದುರ್ಗಾದಾಸನ ಮನೆಯ ಹತ್ತಿರ ನಿಂತುಕೊಂಡು ಅವನ ಹೆಸರು ಹಿಡಿದು ಗಟ್ಟಿಯಾಗಿ ಕೂಗಿದನು. ಆತನ ಸ್ವರವನ್ನು ಕೇಳಿ ಗದಾಧರನು ರಾತ್ರಿ ಬಹಳ ಹೊತ್ತಾಯಿತೆಂದು ತಿಳಿದು ದುರ್ಗಾದಾಸನ ಅಂತಃಪುರದಿಂದಲೇ "ಅಣ್ಣಾ, ಇಗೋ ಬಂದೆ" ಎಂದು ಉತ್ತರಕೊಟ್ಟು ಬೇಗ ಬೇಗ ಅವನ ಹತ್ತಿರಕ್ಕೆ ಹೋದನು. ಆಗ ದುರ್ಗಾದಾಸನಿಗೆ ಎಲ್ಲ ವಿಷಯವೂ ಗೊತ್ತಾಯಿತು. ಬಾಲಕನು ತನ್ನನ್ನೂ ತನ್ನ ಮನೆಯವರನ್ನೂ ಮೋಸಮಾಡಿ ಬಿಟ್ಟನಲ್ಲಾ ಎಂದುಕೊಂಡು ಮೊದಲು ಸ್ವಲ್ಪ ಅಪ್ರತಿಭನಾಗಿ ಸಿಟ್ಟಾದನು, ಆದರೆ ಉತ್ತರಕ್ಷಣದಲ್ಲಿಯೇ ಅವನ ಬಡನೇಯ್ಗೆಯವಳ ವೇಷವೂ ಚಾಲಚಲನದ ಅನುಕರಣವೂ ಎಷ್ಟು ಸ್ವಾಭಾವಿಕವಾಗಿತ್ತೆಂದು ಜ್ಞಾಪಿಸಿಕೊಂಡು ನಗಲಾರಂಭಿಸಿದನು. ಸೀತಾನಾಥನೇ ಮೊದಲಾದವರಿಗೆ ಮರುದಿನ ಈ ವಿಷಯವು ಗೊತ್ತಾಗಲು, ಗದಾಧರನಿಂದ ದುರ್ಗಾದಾಸನ ಗರ್ವವು ಖರ್ವವಾಯಿತೆಂದು ಆನಂದಿಸಿದರು. ಅಂದಿನಿಂದ ಸೀತಾನಾಥನ ಮನೆಗೆ ಬಾಲಕನು ಹೋದಾಗಲೆಲ್ಲ ದುರ್ಗಾದಾಸನ ಮನೆಯ ಹೆಂಗಸರೂ ಅಲ್ಲಿಗೆ ಹೋಗಲು ಮೊದಲುಮಾಡಿದರು

**ವಣಿಕಪಲ್ಲಿಯ ಹೆಂಗಸರಿಗೆ ಗದಾಧರನಲ್ಲಿದ್ದ ಭಕ್ತಿ ವಿಶ್ವಾಸಗಳು**

ಸೀತಾನಾಥನ ಪರಿವಾರದವರಿಗೂ ವಣಿಕಪಲ್ಲಿಯ ಇತರ ಹೆಂಗಸರಿಗೂ ಕಾಲಕ್ರಮದಲ್ಲಿ ಗದಾಧರನ ಮೇಲೆ ವಿಶೇಷ ಅನುರಕ್ತಿಯುಂಟಾಯಿತು. ಬಾಲಕನು ಅವರ ಹತ್ತಿರಕ್ಕೆ ಕೆಲವು ದಿನಗಳು ಹೋಗದಿದ್ದರೆ ಹೇಳಿಕಳುಹಿಸಿ ಅವನನ್ನು ಕರೆಸಿಕೊಳ್ಳುತ್ತಿದ್ದರು ಸೀತಾನಾಥನ ಮನೆಯಲ್ಲಿ ಪುರಾಣಗಳನ್ನು ಓದುವಾಗಲೂ ಕೀರ್ತನಗಳನ್ನು ಹೇಳುವಾಗಲೂ ಗದಾಧರನಿಗೆ ಆಗಾಗ ಭಾವಾವೇಶವುಂಟಾಗುತ್ತಿತ್ತು ಅದನ್ನು ನೋಡಿ ಸ್ತ್ರೀಯರಿಗ ಅವನ ಮೇಲಿದ್ದ ಭಕ್ತಿಯೂ ವಿಶೇಷವಾಗಿ ಹೆಚ್ಚಿತು. ಅವನಿಗೆ ಹಾಗೆ ಭಾವಸಮಾಧಿಯುಂಟಾದ ಕಾಲದಲ್ಲಿ ಅವರಲ್ಲಿ ಅನೇಕರು ಬಾಲಕನನ್ನು ಚೈತನ್ಯನೆಂದು ಅಥವಾ ಶ್ರೀಕೃಷ್ಣನ ಜೀವಂತ ಮೂರ್ತಿಯೆಂದು ಭಾವಿಸಿ ಪೂಜಿಸುತ್ತಿದ್ದರೆಂದೂ ಅಭಿನಯ ಮಾಡತಕ್ಕ ಕಾಲದಲ್ಲಿ ಉಪಯೋಗವಾಗಲೆಂದು ಅವರು ಒಂದು ಚಿನ್ನದ ಕೊಳಲನ್ನೂ ಸ್ತ್ರೀಪುರುಷೋಚಿತವಾದ ವಸ್ತ್ರಗಳನ್ನೂ ಸಿದ್ಧಪಡಿಸಿದ್ದರೆಂದೂ ತಿಳಿದುಬರುತ್ತದೆ.

ಗದಾಧರನ ಧರ್ಮನಿರತವಾದ ಪವಿತ್ರ ಸ್ವಭಾವ, ತೀಕ್ಷ್ಣಬುದ್ಧಿ, ಪ್ರತ್ಯುತ್ಪನ್ನಮತಿ, ಪ್ರೇಮ ಸರಳತೆ, ಸಹಜಗುಣಗಳಿಂದ ಕೂಡಿದ ನಡತೆ—ಇವುಗಳ

ಈ ಕಾಲದಲ್ಲಿ ಹಳ್ಳಿಯ ಸ್ತ್ರೀಯರ ಮೇಲೆ ಎಷ್ಟರ ಮಟ್ಟಿನ ಪ್ರಭಾವವನ್ನು ವಿಸ್ತರಿಸಿದ್ದುವೆಂಬುದನ್ನು ವಿವರವಾಗಿ ನಾವು ಅವರಲ್ಲಿ ಕೆಲಕೆಲವರ ಬಾಯಿಯಿಂದಲೇ ಆಗಾಗ ಕೇಳಿರುವೆವು. ಸನ್ ೧೨೯೯ನೇ ಸಾಲಿನ ವೈಶಾಖದ ಪ್ರಾರಂಭದಲ್ಲಿ ಸ್ವಾಮಿ ರಾಮಕೃಷ್ಣಾನಂದ ಮುಂತಾಗಿ ನಮ್ಮಲ್ಲಿ ಕೆಲವರು ಕಾಮಾರಪುಕುರವನ್ನು ನೋಡಿಕೊಂಡು ಬರುವುದಕ್ಕೆ ಹೋದಾಗ ಸೀತಾನಾಥನ ಮಗಳಾದ ಶ್ರೀಮತಿ ರುಕ್ಮಿಣಿಯನ್ನು ನೋಡಿದ್ದೆವು. ಆಕೆಗೆ ಆಗ ಸುಮಾರು ೬೦ ವರ್ಷ ವಯಸ್ಸಾಗಿತ್ತು. ಪೂರ್ವೋಕ್ತವಾದ ಗದಾಧರನ ಪ್ರಭಾವದ ಸಂಬಂಧವಾಗಿ ಆಕೆಯು ನಮಗೆ ಹೇಳಿದುದನ್ನು ಇಲ್ಲಿ ಬರೆದರೆ ಪಾಠಕರಿಗೆ ಈ ವಿಷಯವು ಸ್ಪಷ್ಟವಾಗಿ ಗೊತ್ತಾಗುತ್ತದೆ. ಶ್ರೀಮತಿ ರುಕ್ಮಿಣೀದೇವಿಯು ಹೀಗೆ ಹೇಳಿದಳು —

ಗದಾಧರನ ವಿಷಯವಾಗಿ ಶ್ರೀಮತೀ ರುಕ್ಮಿಣೀದೇವಿಯ ಹೇಳಿಕೆ

"ನಮ್ಮ ಮನೆಯು ಇಲ್ಲಿಂದ ಸ್ವಲ್ಪ ಉತ್ತರದಿಕ್ಕಿಗೆ ಇತ್ತು. ಈಗ ನಮ್ಮ ಮನೆ ಭಗ್ನಾವಸ್ಥೆಯಲ್ಲಿದೆ. ಒಂದು ರೀತಿಯಲ್ಲಿ ನೋಡಿದರೆ ಪರಿವಾರ ವರ್ಗವೂ ಇಲ್ಲ. ಆದರೆ ನಮ್ಮ ವಯಸ್ಸು ಹದಿನೇಳು-ಹದಿನೆಂಟು ಆಗಿದ್ದಾಗ ನಮ್ಮ ಮನೆಯನ್ನು ನೋಡಿದ್ದರೆ ಐಶ್ವರ್ಯವಂತರ ಮನೆಯಂತೆ ಕಾಣುತ್ತಿತ್ತು. ನಮ್ಮ ತಂದೆಯ ಹೆಸರು ಸೀತಾನಾಥ ಪಾಯಿನ್. ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳನ್ನೂ ಸೇರಿಸಿಕೊಂಡು ನಾವು ಹದಿನೇಳು ಹದಿನೆಂಟು ಜನ ಅಕ್ಕತಂಗಿಯರಿದ್ದೆವು. ವಯಸ್ಸಿನಲ್ಲಿ ಒಬ್ಬರೊಬ್ಬರಿಗೆ ಮೂರು ನಾಲ್ಕು ವರ್ಷ ಹೆಚ್ಚುಕಡಮೆಯಿದ್ದರೂ ಆಗ ನಾವೆಲ್ಲರೂ ಯೌವನಸ್ಥರಾಗಿದ್ದೆವು. ಗದಾಧರನು ಬಾಲ್ಯದಿಂದಲೂ ನಮ್ಮೊಡನೆ ಆಟಪಾಟಗಳಲ್ಲಿ ಸೇರುತ್ತಿದ್ದನು. ಆದಕಾರಣ ನಮ್ಮೊಂದಿಗೆ ಆತನಿಗೆ ಬಹಳ ಸ್ನೇಹವಿತ್ತು. ನಾವು ಯೌವನಸ್ಥರಾದಮೇಲೂ ಆತನು ನಮ್ಮ ಮನೆಗೆ ಬರುತ್ತಿದ್ದನು. ಹೀಗೆ ಆತನು ದೊಡ್ಡವನಾದಮೇಲೂ ನಮ್ಮ ಮನೆಗೆ ಬಂದು ಹೋಗುತ್ತಿದ್ದನು. ನಮ್ಮ ತಂದೆಗೆ ಆತನ ಮೇಲೆ ಬಹಳ ಪ್ರೀತಿಯಿತ್ತು. ಆತನನ್ನು ತನ್ನ ಆಪ್ತನಂತೆ ಕಾಣುತ್ತಿದ್ದುದೂ ಅಲ್ಲದೆ ಆತನಲ್ಲಿ ಭಕ್ತಿಶ್ರದ್ಧೆಗಳನ್ನಿಟ್ಟಿದ್ದನು. ಗ್ರಾಮದ ಕೆಲಕೆಲವರು ನಮ್ಮ ತಂದೆಯನ್ನು ಕುರಿತು "ನಿನ್ನ ಮನೆಯಲ್ಲಿ ಅಷ್ಟೊಂದು ಜನ ದೊಡ್ಡವರಾದ ಹುಡುಗಿಯರಿದ್ದಾರೆ, ಗದಾಧರನೂ ಈಗ ದೊಡ್ಡವನಾಗಿದ್ದಾನೆ. ಅವನನ್ನು ಈಗಲೂ ಇಷ್ಟು ವಿಶೇಷವಾಗಿ-

ಮನೆಯೊಳಗೆ ಏಕೆ ಹೋಗಗೊಡುತ್ತಿ '' ಎಂದು ಕೇಳುತ್ತಿದ್ದರು. ಆಗ ನಮ್ಮ ತಂದೆಯು '' ನೀವೇನೂ ಯೋಚಿಸಬೇಕಾದ್ದಿಲ್ಲ. ನನಗೆ ಗದಾಧರನ ವಿಷಯ ಚೆನ್ನಾಗಿ ಗೊತ್ತಿದೆ'' ಎಂದು ಉತ್ತರ ಕೊಡುತ್ತಿದ್ದನು. ಅವರು ಹೆಚ್ಚಿಗೆ ಹೇಳಲು ಸಾಹಸ ಪಡುತ್ತಿರಲಿಲ್ಲ. ಗದಾಧರನು ಒಳಮನೆಗೆ ಬಂದು ಎಷ್ಟು ಪುರಾಣ ಕಥೆಗಳನ್ನು ಹೇಳುತ್ತಿದ್ದ, ಎಷ್ಟು ತಮಾಷೆಯನ್ನು ಮಾಡುತ್ತಿದ್ದ! ನಾವು ಸಾಧಾರಣವಾಗಿ ಪ್ರತಿ ದಿನವೂ ಅದನ್ನೆಲ್ಲ ಕೇಳುತ್ತ ಕೇಳುತ್ತ ಆನಂದದಿಂದ ಮನೆಗೆಲಸಗಳನ್ನು ಮಾಡುತ್ತಿದ್ದೆವು ಆತನು ನಮ್ಮ ಸಮೀಪದಲ್ಲಿದ್ದಾಗ ನಾವು ಎಷ್ಟು ಆನಂದದಿಂದ ಕಾಲ ಕಳೆಯುತ್ತಿದ್ದೆವೆಂಬುದನ್ನು ಹೇಳಲು ಒಂದು ಬಾಯಿ ಸಾಲದು ಆತನು ನಮ್ಮ ಮನೆಗೆ ಬಾರದೆ ಇದ್ದ ದಿವಸ ಆತನಿಗೆ ಏನಾದರೂ ಅಸ್ವಸ್ಥತೆಯುಂಟಾಗಿರಬಹುದೆಂದು ನಮಗೆ ಕಳವಳವುಂಟಾಗುತ್ತಿತ್ತು. ಆ ದಿವಸ ನಮ್ಮಲ್ಲಿ ಯಾರಾದರೂ ಒಬ್ಬರು ನೀರು ತರುವುದಕ್ಕೆ ಹೋದಾಗಲೋ ಮತ್ತಾವ ಕೆಲಸಕ್ಕಾಗಿ ಹೋದಾಗಲೋ ಚಂದ್ರಾದೇವಿಯನ್ನು ಕಂಡು ಆತನ ಸುದ್ದಿಯನ್ನು ತರುವವರೆಗೂ ನಮಗೆ ಯಾರಿಗೂ ಮನಸ್ಸಿಗೆ ಸಮಾಧಾನವಾಗುತ್ತಿರಲಿಲ್ಲ ಆತನ ಪ್ರತಿಯೊಂದು ಮಾತೂ ನಮಗೆ ಅಮೃತ ಸದೃಶವಾಗಿರುತ್ತಿತ್ತು ಆದಕಾರಣ ಆತನು ನಮ್ಮ ಮನೆಗೆ ಬಾರದಿದ್ದ ದಿವಸ ಆತನ ವಿಷಯವಾಗಿ ಮಾತನಾಡುತ್ತ ಹೊತ್ತು ಕಳೆಯುತ್ತಿದ್ದೆವು ''

**ಹಳ್ಳಿಯ ಗಂಡಸರಿಗೆ ಗದಾಧರನ ಮೇಲೆ ಇದ್ದ ಅನುರಾಗ**

ಗದಾಧರನು ಹೆಂಗಸರೊಡನೆ ಮಾತ್ರ ಸೇರುತ್ತಿರಲಿಲ್ಲ. ಅವನ ಸರ್ವತೋಮುಖವಾದ ಕಲ್ಪನಾಶಕ್ತಿಯೂ ಸರ್ವರೊಂದಿಗೆ ಪ್ರೇಮಪೂರ್ಣವಾದ ಆತನ ಆಚರಣೆಯೂ ಅವನನ್ನು ಆಬಾಲವೃದ್ಧವನಿತೆಯರೊಡನೆಯೂ ಮಿಳಿತವಾಗುವಂತೆ ಮಾಡುತ್ತಿದ್ದವು. ಪ್ರತಿದಿನವೂ ಸಾಯಂಕಾಲದಲ್ಲಿ ಗ್ರಾಮದ ಯುವಕರೂ ಮುದುಕರೂ ಸೇರಿ ಯಾವ ಸ್ಥಳಗಳಲ್ಲಿ ಪುರಾಣ ಪಠನ ಸಂಗೀತ ಸಂಕೀರ್ತನಗಳಿಂದ ಆನಂದಪಡುತ್ತಿದ್ದರೋ ಆ ಸ್ಥಳಗಳಿಗೆಲ್ಲಕ್ಕೂ ಗದಾಧರನು ಹೋಗಿಬರುತ್ತಿದ್ದನು ಆತನು ಯಾವ ಸ್ಥಳಕ್ಕೆ ಹೋಗುತ್ತಿದ್ದನೋ ಆ ಸ್ಥಳದಲ್ಲಿ ಆದಿನ ಆನಂದವು ಪ್ರವಾಹವಾಗಿ ಹರಿಯುತ್ತಿತ್ತು, ಏಕೆಂದರೆ ಅವನಷ್ಟು ಚೆನ್ನಾಗಿ ಓದುವವರೂ ಧರ್ಮತತ್ತ್ವಗಳಿಗೆ ಭಕ್ತಿಪೂರ್ವಕವಾಗಿ ಅವನಷ್ಟು ಚೆನ್ನಾಗಿ ವ್ಯಾಖ್ಯಾನಮಾಡತಕ್ಕವರೂ ಮತ್ತಾರೂ ಇರಲಿಲ್ಲ. ಸಂಕೀರ್ತನ ಕಾಲದಲ್ಲಿ

ಅವನಂತೆ ಭಾವಾವೇಶವನ್ನು ಹೊಂದುತ್ತಿದ್ದವರೂ, ಅವನಂತೆ ಹೊಸ ಹೊಸ ಭಾವಪೂರ್ಣವಾದ ಭಾಗಗಳನ್ನು ಹಾಡಿಗೆ ಸೇರಿಸತಕ್ಕ ಶಕ್ತಿಯುಳ್ಳವರೂ, ಅವನಂತೆ ಮಧುರವಾದ ಕಂಠವುಳ್ಳವರೂ, ಮನೋಹರವಾಗಿ ನೃತ್ಯಮಾಡತಕ್ಕವರೂ ಯಾರೂ ಇರಲಿಲ್ಲ ಅದೂ ಅಲ್ಲದೆ ಅವನಂತೆ ನಕಲಿ ಮಾಡತಕ್ಕವರೂ ಅವನಂತೆ ಸ್ತ್ರೀಪುರುಷರ ಎಲ್ಲ ವಿಧವಾದ ಆಚರಣಗಳನ್ನೂ ನಟಿಸತಕ್ಕವರೂ, ಅವನಂತೆ ಹೊಸ ಹೊಸ ಕಥೆಗಳನ್ನೂ ಹಾಡುಗಳನ್ನೂ ತಕ್ಕ ಸ್ಥಳಗಳಲ್ಲಿ ಸರಿಯಾಗಿ ಸೇರಿಸಿ ಎಲ್ಲರಿಗೂ ಮನೋರಂಜನೆಯನ್ನುಂಟು ಮಾಡತಕ್ಕವರೂ ಮತ್ತಾರೂ ಇರಲಿಲ್ಲ. ಆದಕಾರಣ ಯುವಕರೂ ವೃದ್ಧರೂ ಎಲ್ಲರೂ ಅವನಲ್ಲಿ ವಿಶೇಷ ಅನುರಾಗವುಳ್ಳವರಾಗಿದ್ದರು ಪ್ರತಿದಿನವೂ ಸಾಯಂಕಾಲ ಅವನ ಬರುವಿಕೆಯನ್ನೇ ನಿರೀಕ್ಷಿಸುತ್ತಿದ್ದರು. ಬಾಲಕನೂ ಒಂದೊಂದು ದಿವಸ ಒಂದೊಂದು ಸ್ಥಳಕ್ಕೆ ಹೋಗಿ ಅವರ ಜೊತೆಗೆ ಸೇರಿಕೊಂಡು ಅವರ ಆನಂದವನ್ನು ಹೆಚ್ಚಿಸುತ್ತಿದ್ದನು

ಅದೂ ಅಲ್ಲದೆ ಅವನು ಆ ಅಲ್ಪವಯಸ್ಸಿನಲ್ಲಿಯೇ ವಯಸ್ಸಾದವನಂತೆ ಬುದ್ಧಿವಂತನಾಗಿದ್ದುದರಿಂದ ಅವರಲ್ಲಿ ಅನೇಕರು ತಮ್ಮ ಸಾಂಸಾರಿಕ ವಿಷಯಗಳಲ್ಲಿ ಅವನ ಪರಾಮರ್ಶವನ್ನು ತೆಗೆದುಕೊಳ್ಳುತ್ತಿದ್ದರು. ಧಾರ್ಮಿಕ ಪ್ರವೃತ್ತಿಯುಳ್ಳ ಜನಗಳು ಅವನ ಪವಿತ್ರವಾದ ಸ್ವಭಾವದಿಂದ ಆಕರ್ಷಿತರಾಗಿ ಭಗವನ್ನಾಮ ಸಂಕೀರ್ತನಾದಿಗಳಲ್ಲಿ ಅವನಿಗೆ ಉಂಟಾಗುತ್ತಿದ್ದ ಭಾವಸಮಾಧಿಯನ್ನು ನೋಡಿ ಅವನ ಪರಾಮರ್ಶವನ್ನು ಸ್ವೀಕರಿಸಿ ತಮ್ಮ ತಮ್ಮ ಮಾರ್ಗಗಳಲ್ಲಿ ಮುಂದುವರಿಯುತ್ತಿದ್ದರು * ಭಂಡರಿಗೂ ಧೂರ್ತರಿಗೂ ಅವನನ್ನು ಕಂಡರೆ ಆಗುತ್ತಿರಲಿಲ್ಲ. ಏಕೆಂದರೆ ಗದಾಧರನು ತನ್ನ ತೀಕ್ಷ್ಣ ಬುದ್ಧಿಯಿಂದ ಅವರ ಮೋಸದ ಆವರಣವನ್ನು ಭೇದಿಸಿ ಅವರ ಗುಟ್ಟಾದ ಉದ್ದೇಶಗಳನ್ನೆಲ್ಲಾ ಬೈಲಿಗೆ ಹಾಕುತ್ತಿದ್ದನು. ಅಷ್ಟೇ ಅಲ್ಲ, ಸತ್ಯನಿಷ್ಠನೂ ಸ್ಪಷ್ಟವಾದಿಯೂ ಆದ ಬಾಲಕನು ಅನೇಕವೇಳೆ ಅದನ್ನು ಎಲ್ಲರ ಎದುರಿಗೂ ಹೇಳಿ ಅಂಥವರಿಗೆ ಅಪಮಾನವನ್ನುಂಟು ಮಾಡುತ್ತಿದ್ದನು ಅದೂ ಅಲ್ಲದೆ ಹಾಸ್ಯಪ್ರಿಯನಾದ ಗದಾಧರನು ಅನೇಕ ವೇಳೆ ಇತರರ ಎದುರಿಗೆ ಅವರ ಕಪಟಾಚರಣಗಳನ್ನು ಅನುಕರಣ ಮಾಡುತ್ತಾ

---

* ಶ್ರೀನಿವಾಸ ಶಾಂಖಾರಿ ಮೊದಲಾದ ಕೆಲವು ಮಂದಿ ಯುವಕರು ಗದಾಧರನಲ್ಲಿ ಆ ಕಾಲದಲ್ಲಿಯೇ ದೇವತಾಜ್ಞಾನದಿಂದ ಭಕ್ತಿಯುಳ್ಳವರಾಗಿದ್ದರೆಂದು ತಿಳಿಯಬರುತ್ತದೆ.

ತಿರುಗಾಡುತ್ತಿದ್ದನು. ಇದರಿಂದ ಅವರಿಗೆ ಒಳಗೆ ಕೋಪವಿದ್ದರೂ ಎಲ್ಲರಿಗೂ ಬೇಕಾದವನಾಗಿದ್ದ ಮತ್ತೂ ನಿರ್ಭೀಕನಾದ ಹುಡುಗನಿಗೆ ಏನುಮಾಡಲೂ ಆಗುತ್ತಿರಲಿಲ್ಲ. ಆದಕಾರಣ ಅನೇಕವೇಳೆ ಅವರು ಅವನಿಗೆ ಶರಣಾಗತರಾಗಿ ಅವನಿಂದ ತೊಂದರೆಯಾಗದಂತೆ ಮಾಡಿಕೊಳ್ಳುತ್ತಿದ್ದರು. ಶರಣಾಗತರಿಗೆ ಬಾಲಕನು ಯಾವಾಗಲೂ ಕರುಣೆಯನ್ನು ತೋರಿಸುತ್ತಿದ್ದನು.

**ಗದಾಧರನಿಗೆ ಅರ್ಥಕರೀ ವಿದ್ಯೆಯಲ್ಲಿ ಔದಾಸೀನ್ಯವುಂಟಾಗಲು ಕಾರಣ**

ಈಗಲೂ ಗದಾಧರನು ಪ್ರತಿನಿತ್ಯವೂ ಸ್ವಲ್ಪ ಹೊತ್ತು ಪಾಠಶಾಲೆಗೆ ಹೋಗುತ್ತಿದ್ದನೆಂದೂ, ಜೊತೆಗಾರರ ಮೇಲೆ ಅವನಿಗಿದ್ದ ಪ್ರೇಮವೇ ಹಾಗೆ ಮಾಡುವುದಕ್ಕೆ ಕಾರಣವಾಗಿತ್ತೆಂದೂ ನಾವು ಹಿಂದೆಯೇ ತಿಳಿಸಿದ್ದೇವೆ. ವಾಸ್ತವಿಕವಾಗಿ ಹದಿನಾಲ್ಕು ವರ್ಷ ವಯಸ್ಸು ಪ್ರಾಪ್ತವಾಗುತ್ತಲೇ ಬಾಲಕ ಭಕ್ತಿಭಾವುಕತೆಗಳು ಅಭಿವೃದ್ಧಿಯಾಗಿ ಪಾಠಶಾಲೆಯ ಅರ್ಥಕರೀ ವಿದ್ಯೆಯು ತನಗೆ ಸಂಪೂರ್ಣ ನಿಷ್ಪ್ರಯೋಜಕವಾದುದೆಂದು ಅವನಿಗೆ ಗೊತ್ತಾಯಿತು. ತನ್ನ ಜೀವನದ ಉದ್ದೇಶವು ಬೇರೆಯೆಂಬುದೂ ಧರ್ಮ ಸಾಕ್ಷಾತ್ಕಾರಕ್ಕಾಗಿ ತನ್ನ ಸಮಸ್ತ ಶಕ್ತಿಯನ್ನೂ ಉಪಯೋಗಿಸುವುದು ಆವಶ್ಯಕವೆಂದೂ ಅವನಿಗೆ ಅಂದಿನಿಂದಲೂ ಬೋಧೆಯಾಗಲಾರಂಭಿಸಿತು. ಈ ವಿಷಯದ ಅಸ್ಪಷ್ಟ ಛಾಯೆಯು ಅವನ ಮನಸ್ಸಿನಲ್ಲಿ ಅನೇಕವೇಳೆ ಉಂಟಾಗುತ್ತಿತ್ತು, ಆದರೆ ಅದು ಈಗಲೂ ಪೂರ್ಣವಾಗದೇ ಇದ್ದುದರಿಂದ ಅವನು ಅದನ್ನು ಸರ್ವದಾ ತಿಳಿದುಕೊಳ್ಳಲಾರದವನಾಗಿದ್ದನು. ಆದರೆ ತನ್ನ ಜೀವನವನ್ನು ಮುಂದೆ ಹೇಗೆ ನಡೆಸಬೇಕೆಂಬ ಯೋಚನೆಯು ಅವನ ಮನಸ್ಸಿನಲ್ಲಿ ಹುಟ್ಟಿದಾಗಲೆಲ್ಲ ಅವನ ವಿಚಾರಶೀಲವಾದ ಬುದ್ಧಿಯು ಆಗಲೂ ಈಶ್ವರನಲ್ಲಿ ಏಕಾಂತನಿರ್ಭರತೆಯ ಕಡೆಗೆ ಇಂಗಿತದಿಂದ ತೋರಿಸಿ ಅವನ ಕಲ್ಪನಾಪಟದಲ್ಲಿ ಗೈರಿಕವಸ್ತ್ರ, ಪವಿತ್ರ ಅಗ್ನಿ, ಭಿಕ್ಷಾಲಬ್ಧಭೋಜನ, ನಿಸ್ಸಂಗ ವಿಚಾರಣೆಗಳ ಚಿತ್ರವನ್ನು ಉಜ್ಜ್ವಲವಾದ ಬಣ್ಣದಿಂದ ಅಂಕಿತ ಮಾಡುತ್ತಿತ್ತು. ಆದರೆ ಅವನ ಪ್ರೇಮಪೂರ್ಣವಾದ ಹೃದಯವು ಉತ್ತರಕ್ಷಣದಲ್ಲಿಯೇ ಅವನ ತಾಯಿಯ ಮತ್ತೂ ಅಣ್ಣಂದಿರ ಸಾಂಸಾರಿಕ ಸ್ಥಿತಿಯ ವಿಷಯವನ್ನು ಜ್ಞಾಪಕಕ್ಕೆ ತಂದು ಆ ಮಾರ್ಗವನ್ನು ಅನುಸರಿಸಬೇಕೆಂಬ ಅವನ ಅಭಿಲಾಷೆಯನ್ನು ಬಿಡುವಂತೆ ಮಾಡುತ್ತಿತ್ತು, ಮತ್ತು ತನ್ನ ತಂದೆಯಂತೆ ನಿರ್ಭರಶೀಲನಾಗಿ ಸಂಸಾರದಲ್ಲಿದ್ದುಕೊಂಡು ಅವರಿಗೆ ತನ್ನ

ಕೈಲಾದ ಮಟ್ಟಿಗೆ ಸಹಾಯ ಮಾಡುವಂತೆ ಪ್ರೇರಿಸುತ್ತಿತ್ತು. ಹೀಗೆ ಬುದ್ಧಿಯೂ ಹೃದಯವೂ ಬೇರೆಬೇರೆ ಮಾರ್ಗವನ್ನು ತೋರಿಸುತ್ತಿದ್ದುದರಿಂದ ಅವನು "ರಘುವೀರನು ಮಾಡಿದಂತಾಗಲಿ" ಎಂದುಕೊಂಡು ದೇವರು ಯಾವ ದಾರಿಯನ್ನು ತೋರಿಸುವನೋ ಎಂದು ನಿರೀಕ್ಷಿಸುತ್ತಾ ಇದ್ದನು. ಬಾಲಕನ ಪ್ರೇಮಪೂರ್ಣವಾದ ಹೃದಯವು ಮೊದಲಿನಿಂದಲೂ ಸಂಪೂರ್ಣವಾಗಿ ಈಶ್ವರನನ್ನೇ ಅವಲಂಬಿಸಿತ್ತು. ಆದಕಾರಣ ದೇವರೇ ಸಮಯ ಬಂದಾಗ ಆ ಪ್ರಶ್ನೆಗೆ ತಕ್ಕ ಸಮಾಧಾನವನ್ನು ತೋರಿಸುವನೆಂದು ನಂಬಿ ಅನೇಕವೇಳೆ ತನ್ನ ಮನಸ್ಸಿನಲ್ಲಿ ಶಾಂತಿಯನ್ನು ಹೊಂದುತ್ತಿದ್ದನು. ಹೀಗೆ ಬುದ್ಧಿ ಹೃದಯಗಳ ದ್ವಂದ್ವ ಯುದ್ಧದಲ್ಲಿ ಅವನ ವಿಶುದ್ಧಹೃದಯವೇ ಕೊನೆಗೆ ಜಯವನ್ನು ಹೊಂದಿತು, ಅದರ ಪ್ರೇರಣೆಯಿಂದಲೇ ಅವನು ಆಗ ಸಮಸ್ತ ಕಾರ್ಯಗಳನ್ನು ನೆರವೇರಿಸುತ್ತಿದ್ದನು.

**ಗದಾಧರನ ಹೃದಯದ ಪ್ರೇರಣೆ**

ಅಸಾಧಾರಣವಾದ ಸಹಾನುಭೂತಿಯಿಂದ ಕೂಡಿದ ಗದಾಧರನ ವಿಶುದ್ಧ ಬುದ್ಧಿಯು ಅವನಿಗೆ ಈ ಕಾಲದಿಂದಲೂ ಮತ್ತೊಂದು ವಿಷಯವನ್ನು ಆಗಾಗ ತಿಳಿಸುತ್ತಿತ್ತು. ಪುರಾಣಪಾಠ ಸಂಕೀರ್ತನೆ ಮೊದಲಾದುವುಗಳ ಸಹಾಯದಿಂದ ಗದಾಧರನಿಗೆ ಗ್ರಾಮದ ಸ್ತ್ರೀಪುರುಷರೊಡನೆ ಘನಿಷ್ಠ ಸಂಬಂಧವುಂಟಾಗಿ ಅವನು ಅವರೆಲ್ಲರೂ ತನ್ನವರೆಂದು ಭಾವಿಸುತ್ತಿದ್ದನು. ಅವರ ಸುಖದುಃಖಗಳನ್ನು ತನ್ನವೆಂದೇ ಭಾವಿಸುತ್ತಿದ್ದನು. ಅವನ ವಿಚಾರಶೀಲವಾದ ಬುದ್ಧಿಯು ಈ ಕಾಲದಲ್ಲಿ ಯಾವಾಗ ಸಂಸಾರವನ್ನು ಪರಿತ್ಯಾಗಮಾಡಬೇಕೆಂದು ಅವನಿಗೆ ಬೋಧಿಸುತ್ತಿತ್ತೋ ಆಗಲೇ ಅವನ ಹೃದಯವು ಅವನಿಗೆ ಆ ಸ್ತ್ರೀ ಪುರುಷರ ಸರಳವೂ ಪ್ರೇಮಪೂರ್ಣವೂ ಆದ ಆಚರಣವನ್ನೂ ಅವನಲ್ಲಿ ಅವರಿಗಿದ್ದ ಅಪಾರವಾದ ವಿಶ್ವಾಸವನ್ನೂ ಅವನ ಜ್ಞಾಪಕಕ್ಕೆ ತಂದು ಅವನು ತನ್ನ ಜೀವನವನ್ನು ಇತರರಿಗೆ ಆದರ್ಶಸ್ವರೂಪವಾಗುವಂತೆ ಮಾಡಿ ಅವರೊಡನೆ ತನಗಿದ್ದ ಆಗಿನ ಸಂಬಂಧವು ಗಂಭೀರ ಪಾರಮಾರ್ಥಿಕ ಸಂಬಂಧವಾಗಿ ಪರಿಣಮಿಸಿ ಅವಿನಶ್ವರವಾಗುವಂತೆ ತಾನು ಮಾಡಿಕೊಳ್ಳಬೇಕೆಂದು ಬೋಧಿಸುತ್ತಿತ್ತು. ಬಾಲಕನ ಸ್ವಾರ್ಥಗಂಧ ಶೂನ್ಯವಾದ ಹೃದಯವು ಅವನಿಗೆ ಈ ವಿಷಯದ ಸ್ಪಷ್ಟವಾದ ಸ್ವರೂಪವನ್ನು ತೋರಿಸಿ "ತನಗಾಗಿ ಸಂಸಾರವನ್ನು ತ್ಯಜಿಸುವುದೂ ಕೂಡ ಸ್ವಾರ್ಥಪರತೆಯೇ? ಯಾವುದರಿಂದ ಇವರೆಲ್ಲರೂ ಉಪಕೃತರಾಗುತ್ತಾರೆಯೋ ಅಂಥದನ್ನು ಮಾಡು" ಎಂದು ಹೇಳಿತು.

ಗದಾಧರನು ಪಾಠ ಶಾಲೆಯನ್ನು ಬಿಟ್ಟು ಜೊತೆಗಾರರೊಡನೆ ಅಭಿನಯಕ್ಕೆ ಪ್ರಾರಂಭಿಸಿದುದು

ಮೊದಲು ಗ್ರಾಮದ ಪಾಠಶಾಲೆಯಲ್ಲಿಯೂ ಆಮೇಲೆ ಕಲ್ಕತ್ತದ ವಿದ್ಯಾಲಯದಲ್ಲಿಯೂ ವಿದ್ಯಾಭ್ಯಾಸದ ಸಂಬಂಧವಾಗಿ ಗದಾಧರನ ಹೃದಯವೂ ಬುದ್ಧಿಯೂ ಒಂದೇ ಮಾತನ್ನು ಸ್ಪಷ್ಟವಾಗಿ ತಿಳಿಸಿದವು, ಆದರೆ ಪಾಠಶಾಲೆಯನ್ನು ಬಿಟ್ಟರೆ ಜೊತೆಗಾರರ ಸಹವಾಸವು ಬಹುಮಟ್ಟಿಗೆ ತಪ್ಪಿ ಹೋಗುವುದೆಂದು ಅವನು ಈಗಲೂ ಹಾಗೆ ಮಾಡಲಾರದವನಾಗಿದ್ದನು. ಗಯಾವಿಷ್ಣು ಮೊದಲಾದ ಅವನ ಜೊತೆಗಾರರೆಲ್ಲರೂ ಅವನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದರು ಅವನ ಅಸಾಧಾರಣವಾದ ಬುದ್ಧಿಯೂ ಅಸೀಮವಾದ ಸಾಹಸವೂ ಅವನನ್ನು ಆ ವಯಸ್ಸಿನಲ್ಲಿಯೂ ಮುಂದಾಳನ್ನಾಗಿ ಮಾಡಿದವು ಈ ಕಾಲದ ಒಂದು ಘಟನೆಯಿಂದ ಬಾಲಕನು ಅರ್ಥಕರೀ ವಿದ್ಯಾಭ್ಯಾಸವನ್ನು ಬಿಟ್ಟುಬಿಡಲು ಅನುಕೂಲವಾಯಿತು ಗದಾಧರನ ಅಭಿನಯಶಕ್ತಿಯನ್ನು ನೋಡಿ ಅವನ ಜೊತಗಾರನೊಬ್ಬನು ಒಂದು ಆಟವನ್ನು ಕಟ್ಟಬೇಕೆಂದೂ ಹುಡುಗರಿಗೆಲ್ಲರಿಗೂ ಅಭಿನಯವನ್ನು ಕಲಿಸತಕ್ಕ ಭಾರವನ್ನು ಗದಾಧರನೇ ವಹಿಸಬೇಕೆಂದೂ ಬಲಾತ್ಕರಿಸಲಾರಂಭಿಸಿದನು. ಗದಾಧರನೂ ಅದಕ್ಕ ಒಪ್ಪಿದನು. ಆದರೆ ಮನೆಯಲ್ಲಿ ಯಜಮಾನರಿಗೆ ಗೊತ್ತಾದರೆ ಹಾಗೆ ಮಾಡಲು ಪ್ರತಿಬಂಧಕವುಂಟಾಗುವುದೆಂಬ ಭಯದಿಂದ ಆಟವನ್ನು ಎಲ್ಲಿ ಅಭ್ಯಾಸ ಮಾಡಬೇಕೆಂದು ಹುಡುಗರು ಚಿಂತಿಸಲಾರಂಭಿಸಿದರು. ಬುದ್ಧಿಶಾಲಿಯಾದ ಗದಾಧರನು ಮಾಣಿಕರಾಜನ ಮಾವಿನ ತೋಪೇ ಯೋಗ್ಯ ಸ್ಥಳವೆಂದು ಹೇಳಿದನು ಅನಂತರ ಎಲ್ಲರೂ ಸೇರಿ ಪಾಠಶಾಲೆಯಿಂದ ತಪ್ಪಿಸಿಕೊಂಡು ಬಂದು ಪ್ರತಿನಿತ್ಯವೂ ಗೊತ್ತಾದ ಕಾಲದಲ್ಲ ಆ ಸ್ಥಳದಲ್ಲಿ ಸೇರಬೇಕಂದು ನಿಶ್ಚಯವಮಾಡಿದರು

ಈ ಸಂಕಲ್ಪವು ಶೀಘ್ರವಾಗಿಯೇ ಕಾರ್ಯದಲ್ಲಿ ಪರಿಣಮಿಸಿತು ಗದಾಧರನ ಶಿಕ್ಷೆಯಿಂದ ಬಾಲಕರು ಸ್ವಲ್ಪ ಕಾಲದಲ್ಲಿಯೇ ತಮ್ಮ ತಮ್ಮ ಮಾತುಗಳನ್ನೂ ಹಾಡುಗಳನ್ನೂ ಗಟ್ಟಿಮಾಡಿದರು ಶ್ರೀರಾಮ ಶ್ರೀಕೃಷ್ಣರ ಕಥಗಳ ಆಟದ ಅಭಿನಯದಿಂದ ಮಾವಿನತೋಪಿನಲ್ಲೆಲ್ಲಾ ಗದ್ದಲವು ವ್ಯಾಪಿಸಿತು. ಈ ಆಟಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿಯೂ ಗದಾಧರನು ತನ್ನ ಕಲ್ಪನಾ ಬಲದಿಂದಲೇ ಎಲ್ಲವನ್ನೂ ಸಾಧ್ಯಮಾಡಿದನು. ಆ ಆಟಗಳಲ್ಲಿ ಮುಖ್ಯ ಭಾಗ

ಗಳನ್ನೆಲ್ಲಾ ತಾನೇ ವಹಿಸಿದನು. ಆಟವು ತಕ್ಕಮಟ್ಟಿಗೆ ನಡೆದದ್ದರಿಂದ ಬಾಲಕರಿಗೆಲ್ಲಾ ಪರಮಾನಂದವಾಯಿತು ಮಾವಿನ ತೋಪಿನಲ್ಲಿ ಅಭಿನಯಿಸುವಾಗಲೂ ಗದಾಧರನಿಗೆ ಆಗಾಗ ಭಾವಸಮಾಧಿಯುಂಟಾಗುತ್ತಿತ್ತೆಂದು ಹೇಳುತ್ತಾರೆ

**ಗದಾಧರನ ಚಿತ್ರ ವಿದ್ಯೆ ಮತ್ತು ಮೂರ್ತಿ ನಿರ್ಮಾಣ**

ಸಂಕೀರ್ತನ ನಾಟಕಾಭಿನಯಗಳಲ್ಲಿ ಗದಾಧರನು ಹೆಚ್ಚು ಕಾಲವನ್ನು ಕಳೆಯುತ್ತಿದ್ದುದರಿಂದ ಚಿತ್ರ ವಿದ್ಯೆಯಲ್ಲಿ ಅವನು ಆಗ ಹೆಚ್ಚು ಮುಂದುವರಿದಂತೆ ತೋರುವುದಿಲ್ಲ ಗೌರಹಾಟಿ ಗ್ರಾಮದಲ್ಲಿ ಅವನ ತಂಗಿ ಸರ್ವ ಮಂಗಳೆಯನ್ನು ನೋಡುವುದಕ್ಕಾಗಿ ಗದಾಧರನು ಒಂದು ದಿನ ಹೋದನು ಮನೆಯೊಳಗೆ ಹೋದಕೂಡಲೆ ತನ್ನ ತಂಗಿಯು ಪ್ರಸನ್ನ ಮುಖವುಳ್ಳವಳಾಗಿ ಪತಿ ಶುಶ್ರೂಷೆ ಮಾಡುತ್ತಿದ್ದುದನ್ನು ನೋಡಿದನು ಅದನ್ನು ನೋಡಿ ಸ್ವಲ್ಪ ದಿನಗಳಾದ ಮೇಲೆ ಅವನ ತಂಗಿಯು ಮತ್ತು ಭಾವನ ಆ ಭಾವದ ಒಂದು ಚಿತ್ರವನ್ನು ಬರೆದನು ಮನೆಯವರೆಲ್ಲರೂ ಆ ಚಿತ್ರದಲ್ಲಿ ಸರ್ವಮಂಗಳೆಯ ಮತ್ತು ಆಕೆಯ ಗಂಡನ ಹೋಲಿಕೆಯು ಬಹಳ ಚನ್ನಾಗಿದ್ದುದನ್ನು ನೋಡಿ ಆಶ್ಚರ್ಯಪಟ್ಟರೆಂದು ಹೇಳುತ್ತಾರ

ದೇವ ದೇವಿಯರ ಮೂರ್ತಿಗಳನ್ನು ಮಾಡುವುದರಲ್ಲಿ ಗದಾಧರನು ಬಹಳ ಚತುರನಾದನು ಧರ್ಮಾಸಕ್ತವಾದ ಅವನ ಸ್ವಭಾವವು, ಅವನು ಆ ವಿಗ್ರಹಗಳನ್ನೆಲ್ಲ ಮಾಡಿ ಜೊತೆಗಾರರೊಂದಿಗೆ ಯಥಾ ವಿಧಿಯಾಗಿ ಪೂಜೆ ಮಾಡುವಂತೆ ಅನೇಕವೇಳೆ ಅವನನ್ನು ಪ್ರೇರಿಸುತ್ತಿತ್ತು

ಪಾಠಶಾಲೆಯನ್ನು ಬಿಟ್ಟಮೇಲೆ ಗದಾಧರನು ತನ್ನ ಮನಸ್ಸಿಗ ಬಂದಂತೆ ಹಿಂದೆ ಹೇಳಿದ ಕೆಲಸಗಳನ್ನು ಮಾಡುವುದರಲ್ಲಿಯೂ ಚಂದ್ರಾದೇವಿಗ ಮನೆಗೆಲಸಗಳಲ್ಲಿ ಸಹಾಯ ಮಾಡುವುದರಲ್ಲಿಯೂ ಕಾಲವನ್ನು ಕಳೆಯುತ್ತಿದ್ದನು ತಾಯಿಯಿಲ್ಲದ ಮಗುವಾದ ಅಕ್ಷಯನೂ ಅವನ ಪ್ರೇಮಕ್ಕೆ ಪಾತ್ರನಾಗಿ ಅವನಿಗೆ ಕಾಲ ಕಳೆಯಲು ಕಾರಣನಾಗಿದ್ದನು ಚಂದ್ರಾದೇವಿಗೆ ಮನೆಗೆಲಸಗಳಿಗೆ ಅವಕಾಶ ಕೊಡುವುದಕ್ಕಾಗಿ ಅವನನ್ನು ತೊಡೆಯಮೇಲೆ ಮಲಗಿಸಿಕೊಳ್ಳುವುದೂ ಅವನನ್ನು ಅನೇಕ ವಿಧವಾದ ಆಟಗಳಿಂದ ಸಮಾಧಾನಯಿಸುವುದೂ ಈಗ ಅವನ ನಿತ್ಯಕಾರ್ಯಗಳಲ್ಲಿ ಒಂದಾಗಿ ಪರಿಣಮಿಸಿತು ಹೀಗ ಮೂರು ವರ್ಷಗಳಿಗಿಂತಲೂ ಹೆಚ್ಚುಕಾಲ ಕಳೆದು ಹೋಗಿ ಗದಾಧರನಿಗೆ ಹದಿನೇಳು

ವರ್ಷ ವಯಸ್ಸಾಯಿತು. ಈ ಮೂರು ವರ್ಷಗಳು ಕಷ್ಟಪಟ್ಟಿದ್ದರ ಫಲವಾಗಿ ರಾಮಕುಮಾರನ ಕಲ್ಕತ್ತೆಯ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿ ಆತನ ಸಂಪಾದನೆಯೂ ಹೆಚ್ಚಾಯಿತು.

**ಗದಾಧರನ ವಿಷಯವಾಗಿ ರಾಮಕುಮಾರನ ಯೋಚನೆ, ಅವನನ್ನು ಕಲ್ಕತ್ತೆಗೆ ಕರೆದುಕೊಂಡು ಹೋಗುವುದು**

ಕಲ್ಕತ್ತೆಯಲ್ಲಿಯೇ ಬಹುಕಾಲ ವಾಸವಾಗಿರುತ್ತಿದ್ದರೂ ರಾಮಕುಮಾರನು ವರ್ಷಾಂತ್ಯದಲ್ಲಿ ಒಂದು ವಾರದ ಮಟ್ಟಿಗೆ ಕಾಮಾರಪುಕುರಕ್ಕೆ ಬಂದು ತಾಯಿಯ ತಮ್ಮಂದಿರ ಸ್ಥಿತಿಗತಿಗಳನ್ನು ವಿಚಾರಿಸುತ್ತಿದ್ದನು ಆ ಸಂದರ್ಭದಲ್ಲಿ ಗದಾಧರನು ವಿದ್ಯಾಭ್ಯಾಸದಲ್ಲಿ ಉದಾಸೀನನಾಗಿರುವುದನ್ನು ನೋಡಿ ಈಗ ಅವನಿಗೆ ಚಿಂತೆಯಾಯಿತು. ತಾಯಿಯೊಡನೆಯೂ ರಾಮೇಶ್ವರನೊಡನೆಯೂ ಆಲೋಚಿಸಿ ಅವನನ್ನು ಕಲ್ಕತ್ತೆಯಲ್ಲಿ ತನ್ನ ಹತ್ತಿರವೇ ಇಟ್ಟುಕೊಳ್ಳುವುದು ಯುಕ್ತವೆಂದು ಹೇಳಿದನು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ ಹಾಗೆ ಪಾಠಶಾಲೆಗೆ ಸಂಬಂಧಿಸಿದ ಕೆಲಸಗಳೂ ಹೆಚ್ಚಾದವು. ಈ ವಿಷಯದಲ್ಲಿ ಸಹಾಯ ಮಾಡುವುದಕ್ಕೆ ರಾಮಕುಮಾರನಿಗೆ ಯಾರಾದರೂ ಒಬ್ಬರು ಆವಶ್ಯಕವಾಗಿ ಬೇಕಾಗಿತ್ತು. ಆದುದರಿಂದ ಗದಾಧರನು ಕಲ್ಕತ್ತೆಗೆ ಹೋಗಿ ರಾಮಕುಮಾರನಿಗೆ ಆ ವಿಷಯದಲ್ಲಿ ಆದಷ್ಟು ಸಹಾಯ ಮಾಡಬೇಕೆಂದೂ, ಇತರ ವಿದ್ಯಾರ್ಥಿಗಳಂತೆ ಅವನ ಹತ್ತಿರವೇ ಗದಾಧರನೂ ವಿದ್ಯೆಯನ್ನು ಕಲಿಯಬೇಕೆಂದೂ ತೀರ್ಮಾನವಾಯಿತು. ಈ ವಿಷಯವನ್ನು ಗದಾಧರನಿಗೆ ಹೇಳಲು ತಂದೆಗೆ ಸಮಾನನಾದ ಅಣ್ಣನಿಗೆ ಸಹಾಯ ಮಾಡಬಹುದೆಂಬುದನ್ನು ತಿಳಿದು ಅವನು ಕಲ್ಕತ್ತೆಗೆ ಹೋಗುವುದಕ್ಕೆ ಸ್ವಲ್ಪವೂ ಹಿಂದೆಗೆಯಲಿಲ್ಲ. ಅನಂತರ ಶುಭದಿನ ಶುಭ ಮುಹೂರ್ತದಲ್ಲಿ ರಾಮಕುಮಾರ ಗದಾಧರರು ರಘುವೀರನಿಗೆ ನಮಸ್ಕಾರ ಮಾಡಿ ಚಂದ್ರಾದೇವಿಯ ಪಾದ ಧೂಳಿಯನ್ನು ಶಿರಸ್ಸಿನಲ್ಲಿ ಧರಿಸಿ ಕಲ್ಕತ್ತೆಗೆ ಪ್ರಯಾಣ ಮಾಡಿದರು. ಕಾಮಾರಪುಕುರದ ಆನಂದದ ಸಂತೆಯು ಸ್ವಲ್ಪಕಾಲದ ಮಟ್ಟಿಗೆ ನಿಂತು ಹೋಯಿತು. ಚಂದ್ರಾದೇವಿಯೂ ಗದಾಧರನಲ್ಲಿ ಅನುರಕ್ತರಾದ ಜನರೂ ಅವನ ಮಧುಮಯ ಸ್ಮೃತಿಯಿಂದಲೂ ಭವಿಷ್ಯತ್ಕಾಲದ ಉನ್ನತಿಯನ್ನು ಆಲೋಚಿಸುವುದರಿಂದಲೂ ಹೇಗೋ ಕಾಲಕಳೆಯಲಾರಂಭಿಸಿದರು. ಕಲ್ಕತ್ತೆಗೆ ಹೋದಮೇಲೆ ಗದಾಧರನು ಮಾಡಿದ ಅಲೌಕಿಕ ಕಾರ್ಯಗಳ ವಿವರವನ್ನು

ಪಾಠಕರು ಶ್ರೀ ರಾಮಕೃಷ್ಣ ಲೀಲಾಪ್ರಸಂಗದ “ಸಾಧಕಭಾವ” ಎಂಬ ಗ್ರಂಥದಲ್ಲಿ ಓದಬಹುದು.

ಶ್ರೀ ರಾಮಕೃಷ್ಣ ಲೀಲಾಪ್ರಸಂಗದಲ್ಲಿ ಪೂರ್ವಕಥೆ ಮತ್ತು ಬಾಲ್ಯ ಜೀವನ ಎಂಬ ಪರ್ವವು ಸಂಪೂರ್ಣವಾಯಿತು

— ಮಂಗಳಂ —